KARNATAKA STATE ARCHIVES

KARNATAKA STATE ARCHIVES

KARNATAKA STATE ARCHIVES

KARNATAKA STATE ARCHIVES

KARNATAKA STATE ARCHIVES

MICROFILM

ROLL NO

124

MICROFILM

ROLL NO

124

CONTD. FROM MICROFILM ROLL 99A

PRIVATE COLLECTIONS OF

SRI T. B. KESHAV RAO

BELLARY

ARS 90 APP 82

CONTD. FROM MICROFILM ROLL 99A

PRIVATE COLLECTIONS OF

SRI T. B. KESHAV RAO

BELLARY

ARS 90 APP 82

CONTD. FROM MICROFILM ROLL 99A

PRIVATE COLLECTIONS OF

SRI T. B. KESHAV RAO

BELLARY

ARS 90 APP 82

CONTENTS

ಪ್ರಾರಂಭ ನವಭಾರತ 1-7-1946

ಸಂಪುಟ-4 "ನವಭಾರತ"

1946 - 24-8-1946

(214 Pgs) To 30-12-1946

ಸಂಪುಟ-5 I "ನವಭಾರತ"

(306 Pgs) 6-1-1947 to 30-6-1947

ಸಂಪುಟ-5 II "ನವಭಾರತ"

(ಫೆಬ್ರವರಿ) 3-7-1947 ರಿಂದ [redacted]

ಸಂಪುಟ-6 I "ನವಭಾರತ"

ಫೆಬ್ರವರಿ 5-1-1948 ರಿಂದ [redacted]

"ಕೃಷ್ಣ 48 Volumes missing"

ಸಂಪುಟ-6 II "ನವಭಾ[redacted]

15-8-48

CONTI[redacted] IN

CONTENTS

ಪ್ರಥಮ ಸಂಪುಟ ದಿನಾಂಕ 1-7-1946

ಸಂಪುಟ-4 "ನವಭಾರತ"

1946 - 24-8-1946

To

(214 Pgs) 30-12-1946

ಸಂಪುಟ-5 I "ನವಭಾರತ"

(304 Pgs) 6-1-1947 to 30-6-

సంపుట-5 II "సభాకార్య"

(క్రీ.శ.1948) 3-7-1947 నుండి 29-12-47

[redacted]

సంపుట-6 I "సభాకార్య"

క్రీ.శ.1948 5-1-1948 నుండి 28-6-[redacted]

"July 48 Volumes missing"

సంపుట-6 II "సభా[redacted]

15-8-48

[redacted] IN CONTD

ಮೊದಲಿಲ್ಲದಂತಾಗಿದೆ. ಮದ್ರಾಸ್ ಪ್ರಾಂತ್ಯದಲ್ಲಿ ಶೇಕಡ 6 ಮುಸಲ್ಮಾನರು 94 ಹಿಂದೂಗಳೂ ಇದ್ದಾರೆ. ಆದರೆ ಅನರಿಗೆ 30 ಸ್ಥಾನಗಳನ್ನು ಅಸೆಂಬ್ಲಿಯಲ್ಲಿ ಕೊಡಲಾಗಿದೆ. ಬಂಗಾಳ ಮಂಜಾಬಗಳಲ್ಲಿ ಸರಸು ಅನ್ಯಾಯವಾಗಿದೆ.

ಬಿದರಿಕೆಗಳಿಗೆ ನಾವು ಸೊಪ್ಪು ಹಾಕುವದಿಲ್ಲ:—

ತಮಗೆ ಪಾಕಿಸ್ತಾನ ಕೊಡದಿದ್ದರೆ ಮುಸಲ್ಮಾನರು ದಂಗೆ ಎಬ್ಬಿಸುವರಂತೆ ಇದಕ್ಕೆ ಹಿಂದೂ ಮಹಾಸಭೆಯು ಸಿದ್ಧವಿದೆ. ನಾವು ಹೋರಾಟಕ್ಕೆ ಸಿದ್ಧರಿದ್ದೇವೆ. ಸೋದರರಂತೆ ಬಂದರೆ ಸೋದರತ್ವ ಶತೃಗಳಂತೆ ಬಂದರೆ ಶತೃತ್ವ ಈ ನೈಧಾ ಬೆದರಿಕೆಗಳಿಗೆ ನಾವು ಸೊಪ್ಪು ಹಾಕುವದಿಲ್ಲ.

ಬ್ರಿಟಿಷರ ನೀತಿ:—

ಇದು ಯಾವಾಗಲೂ ಮುಸಲ್ಮಾನರಿಗೆ ಅನುಕೂಲವಿದೆ. ನಾವು ಮುಸಲ್ಮಾನರಿಗೆ ಕೊಟ್ಟ ಸೌಲಭ್ಯಗಳನ್ನು ಸ್ಥಿರವಡಿಸಿ ನಮ್ಮ ಸ್ವರಾಜ್ಯ ಬೇಡಿಕೆಯನ್ನು ಬ್ರಿಟಿಷರು ಹಿಂದೂಡಿಬಿಟ್ಟರು. ಬ್ರಿಟಿಷರು ಭೇದನೀತಿಯ ನೂರಾಲಾಭ ಪಡೆಯುತ್ತಿರುವರು. ಈ ದಿನ ಜಿನ್ನಾರವರು ಬ್ರಿಟಿಷರಿಗೆ ಎದುರಾದರ ಮತ್ತೊಬ್ಬ ಅನುಕೂಲಸ್ಥರನ್ನು ಅವರು ಸೃಷ್ಟಿ ಮಾಡುವರು.

ಮುಸಲ್ಮಾನರಿಗೆ ಎರಡು ಮಾತು:—

ನಾನು ಮುಸಲ್ಮಾನರಿಗೆ ಹೇಳುವುದಿಷ್ಟೇ - ಅವರು ಸ್ನೇಹ - ಸೌಹಾರ್ದಗಳಿಂದಿದ್ದರೆ - ಏಕರಾಷ್ಟ್ರ ತತ್ವವನ್ನೊಪ್ಪಿದರೆ - ಎಲ್ಲರಿಗೂ ಕ್ಷೇಮ. ಇಲ್ಲವಾದರೆ ಹಿಂಸಾಮಯ ಹೋರಾಟಕ್ಕೆ ನಾವು ಸದಾಸಿದ್ಧರಿದ್ದೇವೆಂದು ಒತ್ತಿಹೇಳುತ್ತೇವೆ.

ರಾಜಾಜಿಯವರ ಪ್ರಚಾರ ಖಾತೆ ಕನಾದ್ದು :—

ರಾಜಾಜಿಯವರು ಬ್ರಾಹ್ಮಣರಾಗಿ ಅಬ್ರಾಹ್ಮಣ ಕಾರ್ಯವನ್ನು ಮಾಡುತ್ತಿರುವರು. ಇದು ನೀಚ ಕ್ಷುಲ್ಲಕನಾದುದು ಇತರ ಪ್ರಚಾರಕ್ಕೆ ಮೋನಹೋಗಬೇಡಿರಿ.

ಶ್ರೀ ಪಿ. ವರದರಾಜುಲುನಾಯುಡು ರವರ ಭಾಷಣ:—

ಮೂಂಜೆ ಸುಹಾಶಯರು ಎಲ್ಲವನ್ನು ಹೇಳಿರುತ್ತಾರೆ. ಹಿಂದೂ ಮುಸಲ್ಮಾನ ಭೇದವು ಸಂಸ್ಕೃತಿ ಯಾ ಧರ್ಮಕ್ಕೆ ಸಂಬಂಧಪಟ್ಟದ್ದಲ್ಲ. ರಾಜಕೀಯಕ್ಕೆ ಸಂಬಂಧಪಟ್ಟಿದೆ. ಮುಸಲ್ಮಾನರು ವರರಾಷ್ಟ್ರವಾದರೆ ಅವರೆಲ್ಲಿ ಹೋಗಬೇಕು? ಅರಬಿಸ್ತಾನ, ತುರ್ಕಿಸ್ತಾನ, ಸಿರಿಯಾ, ಇರಾಕ, ಆಫ್ಘಾನಿಸ್ತಾನ ಇವುಗಳೆಲ್ಲಾ ಮುಸ್ಲಿಂ ರಾಷ್ಟ್ರಗಳಾದರೂ ಒಬ್ಬರಿಗೊಬ್ಬರು ಸೇರುವದಿಲ್ಲ ತಮ್ಮ ಪ್ರತ್ಯೇಕತೆಯನ್ನಿಟ್ಟುಕೊಂಡಿರುವರು. ಕೊನೆಗೆ ಉತ್ತರ ಹಿಂದೂಸ್ತಾನದವರಿಗೂ ದಕ್ಷಿಣ ಹಿಂದೂಸ್ತಾನದವರಿಗೂ ಭೇದವುಂಟು. ಹೀಗಿರಬೇಕಾದರೆ ಇದುಒಂದು ಯಚ್ಚರವಿಧಾನ. ಅಲ್ಲದೆ ಚಿಕ್ಕರಾಷ್ಟ್ರಗಳು ಒಂದೊಂದೇ ಶತೃಗಳ ವಶವಾದವು. ಭಿನ್ನತೆಯಲ್ಲಿ ಅಪಾಯ ಜಾಸ್ತಿ ಇದೆ.

ನಾವು ಬಲಗೊಳ್ಳಬೇಕು:—

ನಮ್ಮ ನಿರ್ಬಲತೆಯನ್ನು ನೋಡಿ ಮುಸಲ್ಮಾನರಿಗೆ ಇಷ್ಟು ಧೈರ್ಯಬಂದಿದೆ. ನಾವು ಬಲಗೊಳ್ಳಬೇಕು. ಆಗ ನಮ್ಮಲ್ಲಿ ಅದರ ಹುಟ್ಟುವದು. ಬಲವಂತರಿಗೂ ನಿರ್ಬಲವಂತರಿಗೂ ಎಲ್ಲಿಯಸಂಬಂಧ? ನಮಾನರಾಗಬೇಕು. ಈಕಾರಣ ಎಲ್ಲರೂ ಶಸ್ತ್ರಾಭ್ಯಾಸ ಮಾಡಬೇಕು.

ಗಾಂಧಿಯವರ ಅಹಿಂಸೆ ಉಪಯೋಗವಿಲ್ಲ:—

ಗಾಂಧಿಯವರ ಅಹಿಂಸಾ ಪ್ರಯೋಗದಿಂದ ದೇಶದಲ್ಲಿ ಇಂಧಾ ವಾತಾವರಣ ವುಂಟಾಗಿದೆ. ಅವರೇನೋ ನಮಗೆ ಜೈಲಿನ ಭಯವನ್ನು ತಪ್ಪಿಸಿದರು. ಅದಕ್ಕೆ ನಾವು ಕೃತಜ್ಞರಾಗಿರೋಣ. ಅವರು ಪ್ರಸಂಚದಲ್ಲೇ ಶ್ರೇಷ್ಠಪುರುಷರು. ಅವರನ್ನಾದರಿಸೋಣ. ಆದರೆ ಅವರ ಅಹಿಂಸಾತತ್ವವು ನಮಗೆ ಬೇಡ.

ಸೈನಿಕರಾಗಿರಿ:—

ಎಲ್ಲರೂ ಸೈನ್ಯದಲ್ಲಿ ಸೇರಿ ಯೋಧರಾಗಬೇಕು. ಯೋಧರ ಬೇಡಿಕೆಯನ್ನು ಬ್ರಿಟಿಷರು ಅಲಕ್ಷಿಸಲಾರರು. ಸ್ವರಾಜ್ಯಸಾಧನೆಯು ಹೋರಾಟದಿಂದ ಸಾಧ್ಯ ವೇಹೊರತು ಮಂತ್ರಗಳಿಂದಾಗುವದಿಲ್ಲ. (ನಂದನಾರ್ಪಣೆಯ ನಂತರ ಸಭೆಯು ಮುಗಿಯಿತು)

ಶ್ರೀ ನಂದಕೋಯಿಲಾರ.

ಅಖಿಲಭಾರತ ಕಾಂಗ್ರೆಸ್ ಸಮಿತಿ ಇನ್‌ಸ್ಪೆಕ್ಟರರಾದ ಶ್ರೀನಂದಕೋಯಿಲಾರರವರು ಕರ್ನಾಟಕ ಪ್ರಾಂತೀಕ ಕಾಂಗ್ರೆಸ್‌ನ ಶ್ರೀ ದಾಮೋದರಯನವೊಂದಿಗೆ ಬಳ್ಳಾರಿಗೆ ಆಗಮಿಸಿ ಕಾಂಗ್ರೆಸ್ ವಾಟಿಭವನದಲ್ಲಿ ನೆರೆದ ಕಾಂಗ್ರೆಸ್ ಕಾರ್ಯಕರ್ತರಿಗೆ ಸ್ವಾವಲಂಬನೆ ಸ್ವಸಂರಕ್ಷಣೆಯನ್ನು ಕುರಿತು ಕಾಂಗ್ರೆಸ್ ಸೂತ್ರಗಳನ್ನು ಹೇಳಿದರು.

ಕಾಂಗ್ರೆಸ್ ಚುನಾವಣೆಗಳಾಗಬೇಕು:

ವಾರ್ಧಾದಲ್ಲಿ ಕೂಡಿದ ಕಾಂಗ್ರೆಸ್ ವರ್ಕಿಂಗಸಮಿತಿಯು ದೇಶದಲ್ಲಿನ ಕಾಂಗ್ರೆಸ ಸಮಿತಿಗಳ ವುನರ್ಘಟನೆ ಮಾಡುವ ದೃಷ್ಟಿಯಿಂದ ಚುನಾವಣೆಗಳು ನಡೆಯಬೇಕೆಂದು ತೀರ್ಮಾನಿಸಿದೆ. ಕಾಂಗ್ರೆಸ ಸದಸ್ಯರನ್ನು ಮಾಡುವ ಅವಧಿಯು ಅಗಸ್ಟು 31 ಕ್ಕೆ ಮುಂದುವರಿಸಲಾಗಿದೆ. ಅಕ್ಟೋಬರ್ ಕೊನೆಯೊಳಗಾಗಿ ಪ್ರತಿನಿಧಿಗಳ ಚುನಾವಣೆಯೂ ಮುಗಿಯಬೇಕು.

ಬಳ್ಳಾರಿ ಪೇಟೆ ಧಾರಣೆ.

18—7—42 ಶುಕ್ರವಾರ

ಭಂಗಾರ ತೊಲೆ 1 ಕ್ಕೆ	ರೂ. 50-8-0
ಸಾವರಿನ	38-0-0
ಬೆಳ್ಳಿ 100 ತೊಲ	ರೂ 81-0-0
ಅರಳೆ ಮುಂಗಾರಿ 12ಮಣಕ್ಕೆ	70-0 0
ಅರಳೆ ಫಾರಂ	120-0-0
ಅಕ್ಕಿ 1 ರೂ. ಗೆ 4 ರಿಂದ 5 ಸೇರು	
ಬೇಳೆ ,,	4 ,,
ಸೋಧಿ ,, 3	3½ ,,
ಜೋಳ ,,	11 ,,
ಸವಸೆ ,,	15 ,,
ಸಜ್ಜಿ ,,	10 ,,
ನೆಲಗಡಲೆ	1-10-0
ಸಕ್ಕರೆ ವೀಸ	0-9-0
ಬೆಲ್ಲ 20 ರಿಂದ 25	
ಚಿಲ್ಲಿ ಎಸ್ಟೇ	4-13-0

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦ ೪— ೦
ಕನ್ನಡ ದಕೋಪನಿಷತ್ತುಗಳು	೧—೯—೦
ಶಿವಾನುಭವ ಬೋಧೆ	೦ ೪—೦
ಸುಮತ ಶತಕ	೦—೧—೬

ಅಂಚೆ ಕೆಚ್ಚ ಬೇರೆ. ಪುಸ್ತಕ ಸ್ಟಾಪಾರಿಗಳಿಗೂ ಹೆಚ್ಚು ಪುಸ್ತಕ ಕೊಳ್ಳುವರಿಗೂ ಧಾರಾಳವಾದ ಕಮೀಶನ್

ಕಾಲವ ಸುಬ್ಬಣ್ಣ, ಮರ್ಚೆಂಟು, ಬಳ್ಳಾರಿ.

Visit Royal Cafe

Near ROYAL PICTURE PALACE

ROYAL is ROYAL.

ಈಜಿಪ್ಟಿನ ವಫಾದ ಪಾರ್ಟಿಯಲ್ಲಿ ಮತಭೇದ ಪ್ರತ್ಯೇನ್ನವಾಗಿದೆಯೆಂದು ಯುದ್ಧದಲ್ಲಿ ಸಹಾಯ ಮಾಡಬೇಕೆಂಬುನ, ಮಾಡಬಾರದೆಂಬುವ ಎರಡು ಪಕ್ಷಗಳು ಉತ್ಪನ್ನವಾಗಿವೆಯೆಂದೂ ಗೊತ್ತಾಗಿದೆ.

3 4 7 x 8 Pages printed at Krishna Press Bangalore Road Bellary Published by T L Keshava Rao Bellary

[2ನೇ ಪುಟದಿಂದ]

ನಿಂದಲೆ ಮಕ್ಕಳು ಮತ್ತು ಲಾಲನೆ ಪಾಲನೆ ಪಡೆದವರು ತಮ್ಮ ತಂದೆತಾಯಿಗಳಮೇಲೆ ಮತ್ತು ಪಾಲಕರಮೇಲೆ ಈ ನೈತಿಕ ಒತ್ತಾಯವನ್ನು ಮಾಡಬಹುದು. ಬಗೆಬಗೆಯಿಂದ ನೋವಿಂದ ಮೇಲೆ ಬಿನ್ನಹವನ್ನು ಮಾಡಿಕೊಳ್ಳಬೇಕು. ಹೆಚ್ಚು ಭಕ್ತಿಯಿಂದ ಸೇವೆ ಸಲ್ಲಿಸಬೇಕು. ತನಗೆ ಬೇಕಾದ ರುಚಿಕಟ್ಟಿದ ಪಕ್ವಾನ್ನಗಳನ್ನು ಇಲ್ಲವೆ ಒಪ್ಪತ್ತು ಭೋಜನವನ್ನು ಬಿಟ್ಟುಗೊಟ್ಟು ತಮ್ಮ ಪಾಪಸಿಕ ವ್ಯಥೆಯ ಪ್ರಾತ್ಯಕ್ಷಿಕೆಯನ್ನು ತೋರಿಸಬೇಕು ಒಬ್ಬಾರೆ ಹೇಳಬೇಕಾದರೆ ಪೂರ್ಣ ಉಪವೇಷಣವೊಂದನ್ನು ಬಿಟ್ಟು ಉಳಿದೆಲ್ಲ ಮಾರ್ಗಗಳನ್ನು ಅನುಸರಿಸಬೇಕು. ಇವೆಲ್ಲ ನಿಷ್ಫಲವಾದರೆಮಾತ್ರ ಈ ಉಪಾಯವನ್ನು ಕೈಕೊಳ್ಳತಕ್ಕದ್ದೆಂಬುದು ನುತ್ತೊಂದು ಕರಾರ. ಒಂದು ಬಗೆಯ ಅಸಹಕಾರ ಘೋರಣವನ್ನು ಅನುಸರಿಸಬೇಕು.

ಈ ಮುಷ್ಟಿ ಚಟದಿಂದ ಗಂಡನನ್ನು ಮುಕ್ತಮಾಡುವದಕ್ಕಾಗಿ ಒಬ್ಬ ಭಗಿನಿಯು ಅವನೊಡನೆ ಅಸಹಕಾರ ಹೂಡಿ ಹಲವು ವರ್ಷಗಳ ವರೆಗೆ ಕಷ್ಟನಷ್ಟಗಳನ್ನು ಒಳ್ಳೆ ತಾಳ್ಮೆಯಿಂದ ಅನುಭವಿಸಿದ್ದು ನನಗೆ ಗೊತ್ತಿದೆ. ಹೆಂಡತಿಯು ಈಬಗೆಯ ಕಷ್ಟದಿಂದ ಗಂಡನು ಆ ಚಟವನ್ನು ಪೂರ್ಣವಾಗಿ ಬಿಟ್ಟನು; ಉಳಿದ ಎಲ್ಲ ಸೌಮ್ಯ ಸ್ವರೂಪದ ಉಪಾಯಗಳು ಕೈಕೊಳ್ಳಲ್ಪಟ್ಟರೂ ತಂದೆ ತಾಯಿಗಳು ಇಲ್ಲವೆ ಪಾಲಕರು ಅಥವಾ ಉಳಿದ ಆಪ್ತೇಷ್ಟರು ತಮ್ಮ ಚಟಗಳನ್ನು ಬಿಡದಿದ್ದರೆ ಉಪೋಷಣೆಯನ್ನು ಕೈಕೊಳ್ಳವದು ನ್ಯಾಯ್ಯವಾದುದು ಇದರಲ್ಲಿ ಸಿಟ್ಟು ರೋಷವಿರತಕ್ಕದ್ದಲ್ಲ; ಅತ್ಯಂತಿಕ ಪ್ರೇಮವಿರತಕ್ಕದ್ದು. ತಮ್ಮ ಈ ದುಶ್ಚಟಗಳಿಂದ ಆಪ್ತೇಷ್ಟರಿಗೆ ಅತ್ಯಂತ ದುಃಖವಾಗುವದೆಂದೂ ತಮ್ಮನ್ನು ಅವರನ್ನು ಇಷ್ಟುದೂರವಿಡುವ ಈ ಅಸಹ್ಯ ಸಂಗತಿಯನ್ನು ಹೋಗಲಾಡಿಸುವವರೆಗೆ ಊಟ ಮಾಡುವದು ಇಲ್ಲವೆ ನೀರು ಕುಡಿಯುವದುಕೂಡ ಅವರಿಗೆ ಅಸಹ್ಯವೆನಿಸುವ ದೆಂಬ ಭಾವನೆ ಅವರಲ್ಲುಂಟಾಗುವಂತೆ ಮಾಡಬೇಕು. ಆತುರತೆ ಮತ್ತು ಪ್ರೇಮವು ಹೆಚ್ಚು ಇದ್ದಿಷ್ಟು ಬೇಗನೆ ಫಲವು ಸಿಕ್ಕುವದು. ಈ ಬಗೆಯ ಸತ್ಯಾಗ್ರಹವನ್ನು ಮಕ್ಕಳು ತಂದೆತಾಯಿಗಳ ವಿರುದ್ಧ ವಿಫಲೇಯಶಸ್ವಿಯಾಗಿ ಆಚರಿಸಿದೆ ತಂದೆತಾಯಿಗಳು ಕೂಡ ಮಕ್ಕಳ ವಿರುದ್ಧ ಆಚರಿಸಿರುವರು. ಗಂಡಂದಿರು ಹೆಂಡದಿರ ವಿರುದ್ಧ ಮತ್ತು ಹೆಂಡಂದಿರು ಗಂಡಂದಿರ ವಿರುದ್ಧ ಕೂಡ ಇದನ್ನು ಆಚರಿಸಿ ಯಶಸ್ವಿಯಾಗಿರುವರು. ಈ ಎಲ್ಲ ಪಾತು ನನಗೆ ಗೊತ್ತಿದೆಂದು ನಾನು ಸುದ್ದಿಗಾರರಿಗೆ ಹೇಳಬಯಸುತ್ತೇನೆ ಇದು ಅತ್ಯಂತ ವಿರುದ್ಧವಾದ ಶಸ್ತ್ರವಾಗಿರುವದರಿಂದ ಪ್ರೇಮಪೂರಿತರಾದವರು, ಅನ್ಯ ಮಾರ್ಗ ತೋರದವರೆಲ್ಲ ಇದನ್ನು ಉಪಯೋಗಿಸಬಹುದು. ಸೇನೆಯ ಅತ್ಯುಚ್ಚ ನೆಟ್ಟಲು ಇದಾಗಿರುವದು

ಸಾರ್ವಜನಿಕವಾಗಿ ಪ್ರತಿಜ್ಞೆ ತೆಗೆದು ಕೊಳ್ಳಬೇಕೆಂದು ಒತ್ತಾಯಪಡಿಸುವಲ್ಲಿ ಈ ತರುಣರು ನ್ಯಾಯ್ಯ ಮಾರ್ಗವನ್ನೆ ಅನುಸರಿಸಿದರು. ದುಶ್ಚಟವನ್ನು ದೂರಮಾಡಿಕೊಳ್ಳುವದು ನಾಚಿಕೆಗೇಡು ಅದನ್ನು ಒಪ್ಪಿಕೊಂಡು ಅದರಿಂದ ನಾಶೀಗ ಮುಕ್ತನಾಗಿರುವೆನೆಂದು ಘಂಟಾಘೋಷವಾಗಿ ಹೇಳುವದರಲ್ಲಿ ಯಾವದೇ ಬಗೆಯ ನಾಚಿಕೆ ಇರುವದಿಲ್ಲ. ಈ ರೀತಿಯಿಂದ ಸಾರ್ವಜನಿಕವಾಗಿ ಪ್ರತಿಜ್ಞೆ ತೆಗೆದುಕೊಳ್ಳುವದರಿಂದ ನೈತಿಕ ಶಕ್ತಿಯು ಬೆಳೆಯುವದು. ವಚನವನ್ನು ಮುರಿಯಲೆಳಸುವಾಗೆಲ್ಲ ಈ ನೈತಿಕ ಶಕ್ತಿಯು ಅವನ ರಕ್ಷಣೆ ಮಾಡಲು ಸಾಕಷ್ಟು ಸಹಾಯ ಮಾಡುವದು.

ಲಿಬರಲ್ ಸಭೆ.

ನ್ಯಾಷನಲ್ ಲಿಬರಲ್ ಫೆಡರೇಷನ್ನಿನ ವಾರ್ಷಿಕ ಸಭೆಯು ಪುಣೆಯ ಸರ್ವೆಂಟ್ಸ್ ಆಫ್ ಇಂಡಿಯ ಸೊಸೈಟಿಯ ಭವನದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸರ್ ಬಿಜಯಪ್ರಸಾದಸಿಂಗ್ ರಾಯರವರು ವಹಿಸಿದ್ದರು. ಹಲವು ಮುಖ್ಯ ನಿರ್ಣಯಗಳು ಸಭೆಯಲ್ಲಿ ಅಂಗೀಕೃತವಾದವು.

ಸರ್ ಚಿಮ್ಮನ್‌ಲಾಲ್ ಸೆಟಲ್‌ವಾಡ್ ಪಂಡಿತ್ ಹೃದಯನಾಥ ಕುಂಜ್ರು. ಸರ್ ನಿಖಿಲ್ ಚಂದಾವರ್ಕಾರ್, ಸರ್ ಆರ್ ಪಿ ಪರಾಂಜಪೆ, ಶ್ರೀ ಕೋದಂಡರಾವ್ ನೊಡಲಾದ ಸದಸ್ಯರು ವಂಯಮಾಡಿಸಿದ್ದರು.

ಭಾರತದ ಸಮಸ್ಯೆಯನ್ನು ಹೋಗಲಾಡಿಸಲು ಮುಖಂಡರೊಡನೆ ಮಾತುಕತೆಗಳನ್ನು ಪುನ: ಆರಂಭಿಸಬೇಕೆಂದು ಬ್ರಿಟಿಷು ಸರಕಾರಕ್ಕೆ ಒತ್ತಾಯಪಡಿಸುವ ನಿರ್ಣಯವಾಯಿತು. ವೈಸ್ರಾಯರ ಮಂತ್ರಿಮಂಡಲದ ವಿಸ್ತಾರಣ ವಿಚಾರದಲ್ಲಿ ಸಭೆಯ ಅಸಮಾಧಾನವನ್ನು ವ್ಯಕ್ತಪಡಿಸಲಾಯಿತು ಭಾರತದಲ್ಲಿ ನಿಜವಾದ ರಾಷ್ಟ್ರೀಯ ಸರಕಾರವು ಸ್ಥಾಪಿತವಾಗಬೇಕೆಂದೂ ರಕ್ಷಣೆಯ ಜವಾಬ್ದಾರಿಯನ್ನು ಭಾರತೀಯ ಮಂತ್ರಿಗಳು ಹೊರಬೇಕೆಂದೂ ಒತ್ತಾಯಪಡಿಸುವ ನಿರ್ಣಯವಾಯಿತು. ಭಾರತದ ಐಕಮತವನ್ನು ಕಾಪಾಡಿಕೊಂಡು ಬರಬೇಕೆಂದು ಪ್ರಾರ್ಥಿಸುವದು ನಿರ್ಣಯವಾಯಿತು.

ಓರಿಯಂಟಲ್

ಸಂಪೂರ್ಣ ರಕ್ಷಣೆ, ಪೂರ್ಣ ಭರವಸೆ

ಈ 18 ವರ್ಷಗಳ ಜೀವನದಲ್ಲಿ ಓರಿಯಂಟಲ್ ಕಂಪನಿಯು ತನ್ನ ಲಕ್ಷಾಂತರ ವಿಮಾದಾರರಿಗೆ **ಶಾಂತ ಮತ್ತು ಯುದ್ಧಕಾಲಗಳೆಲ್ಲೂ** ಸಹ ಮಾದರಿ ವಿಮಾಕಾರ್ಯದ ಶ್ರೇಷ್ಠ ತತ್ವಗಳ ಅನುಕರಣೆಯಿಂದ ಮೇಲ್ಮಾಣಿಸಿದುದನ್ನು ಕೊಟ್ಟಿದೆ. ಅವರಿಗೊದಗಿಸಿದ ಸೌಲಭ್ಯಗಳನ್ನು ನಿಮಗೂ **ಓರಿಯಂಟಲ್** ಒದಗಿಸಲು ಸಿದ್ಧವಿದೆ.

ಇಲ್ಲಿಯವರೆಗೆ ಸಲ್ಲಿಸಿರುವ ಹಕ್ಕುಗಳ ಹಣ ರು 26ಕೋ ಮೀರಿ
ಜಾರಿಯಲ್ಲಿರುವ ವಿಮಾಪತ್ರಗಳ ಮೊತ್ತ ರು 85½ ಕೋಟಿ
ವಾರ್ಷಿಕ ಆದಾಯ 1941ರಲ್ಲಿ ಸುಮಾರು ರು ೨ ಕೋಟಿ
ನಿಧಿಯ ವ್ಯವ್ಯ ರು 30 ಕೋಟಿ

ಗವರ್ನಮೆಂಟು ಸೆಕ್ಯೂರಿಟಿಲೈಫ್ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್,
ಸ್ಥಾಪನೆ ೧೮೭೪. ಮುಖ್ಯ ಕಛೇರಿ ಬೊಂಬಾಯಿ

ಶಾಖೆ:-
ಓರಿಯಂಟಲ್ ಬಿಲ್ಡಿಂಗ್ಸ್ ಆರ್ಮೀನಿಯನ್ ಬೀದಿ, ಜಿ.ಟಿ. ಮದ್ರಾಸು.
ಇನ್ಸ್‌ಪೆಕ್ಟರವರ ಆಫೀಸು:- **೩೧೨ ರಾಪರ್ಟಸ್ ಗೇಟ್ ಬ್ರಾಸಪೇಟ ಬಳ್ಳಾರಿ**

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ: 1897.

45 ನೇ ವಾರ್ಷಿಕ ವರದಿಯ ಕೆಲವು ಮುಖ್ಯ ಅಂಶಗಳು

ಒಟ್ಟು ಆದಾಯ	ರೂ.	85,61,000 ಮೀರಿದೆ
ಚಾಲ್ತಿಯಲ್ಲಿರುವ ವಿಮಾ ಪಾಲಿಸಿಗಳು	ರೂ.	14,84,44,000 ,,
ಆಸ್ತಿ	ರೂ.	5,80,86,000 ,,
ಕಂಪೆನಿ ಪ್ರಾರಂಭವಾದ ಲಾಗಾಯ್ತು ಪಾವತಿ ಮಾಡಿರುವ ಕ್ಲೈಂಗಳು	ರೂ.	7,48,66,000 ,,

ವಿಜ್ಞಾಪನೆಗಳಿಗೆ ದರಖಾಸ್ತುಗಳನ್ನು ಕಳುಹಿಸುವುದು.

ಮುಖ್ಯ ಕಛೇರಿ:
ಎಂಪೈರ್ ಆಫ್ ಇಂಡಿಯಾಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬೆಂಗಳೂರು ಬ್ರಾಂಚ್:
ಡಿಸ್ಟ್ರಿಕ್ಟ್‌ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.



ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತವೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮೂಡಿದ ಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ವೆಸ್ಟ್ ಎಂಡ್ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಾದು ಪರೀಕ್ಷಿಸಿರಿ

ಹಿಂದಿ - ಹಿಂದೂಸ್ತಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು,
- ಮಾತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ?

ಪ ಗಾವರೆ ಕೂಡಲ ಕೆಗಿನವರಪ್ಪಿ
ನಿಮಗೆಗಳನ್ನು ತೀರಿಯಿರಿ
ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು
ಮೆ ಪರೀಕ್ಷೆಯ ಪಾಠ ಪುಸ್ತಕಗಳು ಕವೆ ಕಾರ್ಯವಿರಿ
ನಸ್ಮೆನೆ ದೊರೆಯುವುದಿಲ್ಲವೆ ನಿಮಗ ಎಲ್ಲಾ ವಿವರವಾದ
ಮಾಹಿತಿಯೂ, ಶ್ರಮವಿಲ್ಲದೆ ಹೇಳಲಾಗುವುದು.

ಟಿ. ಬಿ. ಕೇಶವರಾವ್,
ಕ್ರಿಸ್ಟ್ ಮಾಚಾರಿ ಕಾಂಪೌಂಡು, ಬಳ್ಳಾರಿ

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription

Annual

Local 2—0—0
Moffusil 3—0—0

6 Months

Local 1—4—0
Moffusil 2—0—0

ಚಂದಾ ವಿವರ
ವರ್ಷಕ್ಕೆ
ಬಳ್ಳಾರಿಯವರಿಗೆ 2.0.0
ಹೊರಗಿನವರಿಗೆ 3.0.0
೬ ತಿಂಗಳಿಗೆ
ಬಳ್ಳಾರಿಯವರಿಗೆ 1.4.0
ಹೊರಗಿನವರಿಗೆ 2 0 0

Nava Bharat, Bellary.

REG. No. M. 3937.

Sri

Printed at Vittal Press, Car Street Edited & Published by I. B Keshava Rao, Bellary

Reg. No. M. 3937

ವಂದೇ ಮಾತರಂ'

ನವಭಾರತ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯ ವರಾನ್ನಿಬೋಧತ.

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—

ಸಂಚಿಕೆ ೪೨ ಬಳ್ಳಾರಿ ಜೂಲೈ ೧೯ ನೇ ಭಾನುವಾರ ೧೯೪೨. ಟಿ. ಬಿ. ಕೇಶವರಾವ್

ಜರ್ಮನಿಯು ಸಬ್ಮರೀನುಗಳನ್ನು ವೇಗವಾಗಿ ನಿರ್ಮಿಸುತ್ತಿದೆ. ಮಿತ್ರಪಕ್ಷದ ಹಡಗುಗಳ ನಾಶ.

ಸಮುದ್ರ ಸಂಚಾರದಲ್ಲಿ ಯುದ್ಧದ ಮತ್ತು ಇತರ ವರ್ತಕ ಹಡಗುಗಳು ಶತ್ರುಗಳ ದಾಳಿಯಿಂದ ನಾಶವಾಗುವುದನ್ನು ತಪ್ಪಿಸಲು ಉಪಾಯಗಳನ್ನು ಕೈಕೊಳ್ಳಬೇಕೆಂದು ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಚರ್ಚೆಯೊಂದು ಪ್ರಾರಂಭವಾಗಿದೆ. ಸರ್ ಸ್ಟಾಫರ್ಡ್ ಕ್ರಿಪ್ಸ್‌ರವರು ಇದಕ್ಕೆ ಉತ್ತರ ಕೊಡುತ್ತಾ ಈ ವಿಷಯವನ್ನು ಗುಪ್ತವಾಗಿ ಚರ್ಚಿಸಲಾಗುವುದೆಂದರು. ಶತ್ರುವಿಗೆ ಅನುಕೂಲವಾದ ಸಮಾಚಾರವು ತಿಳಿಯುವುದರಿಂದ ಹೀಗೆ ಮಾಡಬೇಕಾಯಿತೆಂದರು. ಮತ್ತು ನಷ್ಟ ಅಧಿಕವಾಗಿದ್ದರೂ ಇದನ್ನು ತುಂಬಲು ಸಾಕಾದಷ್ಟು ಸಹಾಯ ಸಾಮಗ್ರಿಗಳಿವೆಯೆಂದರು.

ದಿನಕ್ಕೆರಡು ಹಡಗುಗಳು ನಾಶವಾಗುತ್ತಿವೆ.

ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆ ಹೀಗೆ ಬರೆದಿದೆ "ಅಟ್ಲಾಂಟಿಕ್ ಕ್ಯಾರಿಬಿನ್ ಮತ್ತು ಗಲ್ಫ್ ಸಮುದ್ರಗಳಲ್ಲಿ ೧೯೪೨ನೆಯ ಇಸ್ವಿ ಜನವರಿ ೧೫ರಿಂದ ಜುಲೈ ೧೦ವರೆಗಿನ ೬ ತಿಂಗಳಲ್ಲಿ ೩೫೦ ಹಡಗುಗಳು ಮುಳುಗಿವೆ. ಅಂದರೆ ಸರಾಸರಿ ದಿನಕ್ಕೆರಡು ಹಡಗುಗಳು ಮುಳುಗಿದಂತಾಯಿತ. ಇದು ಒಹಳ ಅಪಾಯಕರವಾದ ಪರಿಸ್ಥಿತಿ ಕಟ್ಟು ವುದಕ್ಕಿಂತ ಮುಳುಗುವುದು ಹೆಚ್ಚಾಗಿದೆ.

ಎಲ ಅಲಮೀನದ ಹತ್ತಿರ.

ಯುದ್ಧವು ಮತ್ತೆ ಆರಂಭವಾಗಿದೆ. ಯಾರು ಪ್ರಾರಂಭಿಸಿದರಂಬುದುಗೊತ್ತಿಲ್ಲ. ಜರ್ಮನ ಸೇನಾಧಿಪತಿ ರೂಮೆಲನಿಗೆ ಮತ್ತೆ ಸಾಮಗ್ರಿಗಳ ಪೂರ್ಯಕೆಯಾದಂತೆ ತಿಳಿದು ಬಂದಿದೆ ಕಳೆದವಾರದ ಮೋರಾಟದಲ್ಲಿ ಮಿತ್ರಸೈನ್ಯದವರು ಎರಡು ಸಾವಿರ ಜರ್ಮನರನ್ನು ಕೈನೆರೆಹಿಡಿದಿರುವದಾಗಿ ಪ್ರಕಟವಾಗಿದೆ.

ಚೈನಾದವರು ಸಾಂಚಾಂಗನ್ನು ವಶಪಡಿಸಿ ಕೊಂಡರು.

ಕಿಯಾಂಗ್‌ಸಿ ಪ್ರಾಂತ್ಯದ ಬಹು ಮುಖ್ಯವಾದ ಸಾಂಚಾಂಗ್ ಎಂಬ ಪಟ್ಟಣವನ್ನು ಚೈನಾದವರು ಪುನಃ ತಮ್ಮವರ ಪಡಿಸಿಕೊಂಡಿರುವರು. 2000 ಜನರನ್ನು ಕಳೆದುಕೊಂಡನಂತರ ಜಪಾನಿನ 30000 ಸೈನಿಕರು ಓಡಿಹೋದರು.

ಯುದ್ಧವು ಈ ವರ್ಷದಲ್ಲಿ ಅಥವಾ ಮುಂದಿನ ವರುಷದೊಳಗೆ ಮುಗಿಯುವುದು. .

ದಿ ಹೌಸ್ ಆಫ್ ರೆಪ್ರಸೆಂಟೇಟಿವ್ಸ್ ಮಿಲಿಟರಿ ಎಫೇರ್ಸ್ ಕಮಿಟಿಯ ಸೈನಿಡೆಂಟರಾದ ಮಿಸ್ಟರ್ ಮೇ ಯವರು ಈ ಯುದ್ಧವು ಬಹಳ ಪಟ್ಟಿಗೆ 1942 ನೇ ವರುಷಯದನಳಗೆ ಯಾ ಮುಂಬರುವ 1943ನೇ ಸಾಲಿನದಲ್ಲಿ ಖಂಡಿತವಾಗಿ ಮುಗಿಯುವುದೆಂದ ಹೇಳಿರುವರು.

ಬರ್ಮಾ ಯುದ್ಧದ ಸಾಠ.

ಬರ್ಮಾದೇಶವ ಬಿಂದಿನ ಗವರ್ನರಾಗಿದ್ದ ಸರ್ ರೆಜಿನಾಲ್ಡ್ ಡಾರ್ಮ್ಯಾನ್‌ರವರು ಲಂಡನ್ನಿಗೆ ಹೋಗಿ ಬ್ರಿಟಿಷ್ ಮಂತ್ರಿವರ್ಗವನ್ನು ವರಾಕೊಟ್ಟಿರುತ್ತಾರೆ. ಆಗವರು ಯನ್ನು ಪ್ರಸ್ತುತ ಪರಿಸ್ಥಿತಿಯಲ್ಲಿ ಪ್ರಕಟಿಸ ಲಾಗುವುದಿಲ್ಲವೆಂದು ಭಾರತ ಮಂತ್ರಿಗಳಾದ ಅಮೆರಿಯವರು ಹೇಳಿದರು. ಟಾಯಿಮ್ಸ್ ಪತ್ರಿಕೆಯು ಈ ವಿಷಯವಾಗಿ ಬರೆಯುತ್ತಾ ಸಾಮಾನ್ಯ ಜನತೆಗೊಕೂಡಾ ದೇಶರಕ್ಷಣೆಯ ಕಾರ್ಯದಲ್ಲಿ ಶಿಕ್ಷಣವನ್ನು ಕೊಡದಿದ್ದ ಫಲವೇ ಬರ್ಮಾದ ನೋಲಿಗೆ ಕಾರಣವಾಯಿತೆಂದೂ ಶತ್ರು ಬರುವನೆಂದು ನಾಶ ಮಾಡುವ ಕಾರ್ಯದಿಂದ ಪರಿಸ್ಥಿತಿಯು ಮತ್ತಷ್ಟು ಕೆಟ್ಟಿತೆಂದೂ ಹೇಳಿದೆ. ಮಿಲಿಟರಿ ದೃಷ್ಟಿಯಿಂದ ಬರ್ಮಾವು ಬಹು ಮುಖ್ಯವಾದುದೆಂದೂ ಅದನ್ನು ಪುನಃ ಆಕ್ರಮಣ ಮಾಡಬೇಕೆಂದೂ ಅಭಿವ್ಯಾಯಪಟ್ಟಿದೆ.

ಹಾಂಗ್ ಕಾಂಗ್‌ದಲ್ಲಿ ಮಿತ್ರ ಪಕ್ಷದ ಕೈದಿಗಳು.

ಮಿತ್ರ ಪಕ್ಷದ ಕೈದಿಗಳ ಆರೋಗ್ಯದ ಕುರಿತು ಜಪಾನು ಸರಕಾರವು ತಟಸ್ಥ ರಾಷ್ಟ್ರಗಳಿಗೆ ಈ ರೀತಿ ಹೇಳಿರುತ್ತದೆ. "ಹಿಂದೂ ಸ್ಥಾನದ ಕೈದಿಗಳಲ್ಲಿ ಕೆಲವರಿಗೆ ರಕ್ತ ಭೇದಿಯ ರೋಗವು ಕಂಡುಕೊಂಡಿತು. ಆದರೆ ಅದನ್ನು ಈಗ ನಿವಾರಿಸಲಾಗಿದೆ. ಮತ್ತು ಸುಮಾರು 1,150 ಸ್ಥಾಯದೊಂದಿದ ಕೈದಿಗಳು ಕೂಡಾ ಸ್ವೆದ್ಯೋಪಾ ಸಹಾಯದಿಂದ ಗುಣವೊಂದುತ್ತಿರುವರು. ನಮ್ಮ ಸೈನಿಕರಲ್ಲಿ ಮತ್ತು ಜೈನದ ನಾಗರೀಕರಲ್ಲಿಯೂ, "ಕಾಲರಾ" ರೋಗವು ಹುಟ್ಟಿಕೊಂಡಿತ್ತು. ಆನರೆ ಆರೋಗವು ಯುದ್ಧ ಕೈದಿಗಳಿಗೆ ಸೋಂಕಿಲಿಲ್ಲ."

ಸ್ಟಾಲಿನಗ್ರೇಡ - ರಷ್ಯವ ಎಂಬ ರಷ್ಯಾದ ಎರಡು ಮುಖ್ಯಪಟ್ಟಣಗಳು ಗಂಡಾಂತರ ಪರಿಸ್ಥಿತಿಯಲ್ಲಿನೆಯೆಂದು ಹೇಳಲಾಗಿದೆ.

ಭಾರತದಲ್ಲಿ ಮೋಟಾರು ನಿರ್ಮಾಣ

—ಜ್ಞ—

"ಅಮೆರಿಕಾದಿಂದ ಮೋಟಾರು ಭಾಗಗಳನ್ನು ತರಿಸಿ, ಅವುಗಳನ್ನು ಕೂಡಿಸಿ ಮಾರುವುದೇ ಕಂಪನಿಯ ಉದ್ದೇಶವಾಗಿತ್ತು. ಈ ಕಾರಣ ಸರಕಾರದವರು ಪ್ರೋತ್ಸಾಹಕೊಡದೆ ಇದ್ದದ್ದು ನ್ಯಾಯವಾಗಿದೆ."

ಭಾರತವ ವ್ಯಾಪಾರ ಖಾತೆಯ ಮಂತ್ರಿಗಳಾದ, ಸರ್. ಎ ರಾಮಸ್ವಾಮಿ ಮೊದಲಿಯಾರರವರು ಮದ್ರಾಸಿನಲ್ಲಿ 13ನೇ ತಾ. ದಿನ ಭಾಷಣ ಕೊಡುತ್ತಾ ಹಿಂದುಸ್ತಾನದಲ್ಲಿ ಮೋಟಾರು ಕಾರ್ಖಾನೆಯನ್ನು ಪ್ರಾರಂಭಿಸುವವರ ಉದ್ದೇಶಗಳನ್ನು ವಿವರಿಸಿದರು.

"ಈ ವಿಷಯದಲ್ಲಿ ಸರಕಾರಕ್ಕೆ ಯಾವ ವಿಧವಾದ ಸೂಚನೆಗಳು ಬಂದಿಸೆ ಎಂಬುದು ಯಾರಿಗೂಗೊತ್ತಿಲ್ಲ. ವೃತ್ತಪತ್ರಗಳಲ್ಲೇನೋ ಬೇಕಾದಷ್ಟು ಟೀಕೆಗಳಾಗಿವೆ. ನಾನು ಅಧಿಕಾರ ಸೂತ್ರವನ್ನು ವಹಿಸಿದ ಮೇಲೆ ಇದನ್ನೆಲ್ಲಾ ಅರಿತುಕೊಂಡಿದೆನು. ಇಲ್ಲಿಯ ಒಂದು ಕಂಪನಿಯವರು ಅಮೆರಿಕಾದ ಕ್ರೈಸ್ಲರ್ ಕಾರ್ಪೊರೇಷನ್ ಕಂಪನಿಯೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದ್ದರು. ಇದರ ಪ್ರಕಾರ ಅವರು ಹಿಂದುಸ್ತಾನಕ್ಕೆ ಮೊದಲನೆ ವರ್ಷ 1000 ಎರಡನೆ ವರುಷ 3500 ಮೂರನೆ ವರುಷ 4000 ಹೀಗೆ ಎಂಟುವರುಷಗಳ ವರೆಗೂ ಕಳುಹಿಸಬೇಕಿತ್ತು. ಮೊದಲನೆ ವರುಷ ಅಮೆರಿಕಾದಲ್ಲಿ ಮಾಡಿದ ಕೂಡಿಸಿದ ಕಾರುಗಳನ್ನೇ ಇಲ್ಲಿಗೆ ತಂದು ಮಾರಬೇಕಾಯ್ತು. ಎರಡನೇ ವರುಷ ಅವರ ಭಾಗಗಳನ್ನು ತಂದು ಕೂಡಿಸಬೇಕಿತ್ತು. ಬರಬರುತ್ತಾ ಭಾಗಗಳನ್ನು ಇಲ್ಲಿ ತಯಾರಿಸಿ ಎಂಟು ವರುಷಗಳ ಕೊನೆಯಲ್ಲಿ ಸೇಕಡಾ 50 ಭಾಗಗಳನ್ನು ಇಲ್ಲಿಯೇ ತಯಾರಿಸುವ ಯೋಜನೆಯಾಗಿತ್ತು. ವರುಷ ವರುಷಕ್ಕೂ ಯಾವ ಭಾಗಗಳನ್ನು ಇಲ್ಲಿ ತಯಾರಿಸಬೇಕು ಅದರ ಕಾರ್ಯಕ್ರಮವನ್ನೇನು ಎಂಬುದು ಸರಕಾರಕ್ಕೆ ವಿವರವಾಗಿ ತಿಳಿಯುವಂತೆ ಸಂಸ್ಥೆಯವರು ಹೇಳಲಿಲ್ಲ."

ಹತ್ತು ವರುಷಗಳವರೆಗೆ ಸರಕಾರವನ್ನು ಮೂರು ಕೋಟಿ ರೂಪಾಯಿಗಳನ್ನು ಅತ್ತಾಸ್ತಿ ಆಗಿಕೊಟ್ಟು ಶೇರುದಾರರ ಹಣವನ್ನು ಬಡ್ಡಿಯ ಗ್ಯಾರಂಟೀ ಕೊಡಬೇಕಿದ್ದಿತು. ತಮ್ಮ ಮತ್ತು ಕ್ರೈಸ್ಲರ್ ಕಂಪನಿಯೊಂದಿಗೆ ಆದ ಒಪ್ಪಂದವನ್ನು ಸ್ವೀಕರಿಸಬೇಕೆಂದೂ ಇದನ್ನೆಲ್ಲಾ ಶೇರುದಾರರಿಗೆ ತಿಳಿಸಬೇಕೆಂದೂ, ನಂತರ ಸರಕಾರವನ್ನು ಸಹಾಯಬೇಡಬೇಕೆಂದೂ ನಾನು ಸಲಹೆ ಕೊಟ್ಟಿನು. ಇಂತಹ ಸಂದರ್ಭದಲ್ಲಿ ಸರಕಾರದವರು ಪ್ರೋತ್ಸಾಹ ಕೊಡಬೇಕಾಗಿತ್ತೇ ನೀವೇ ಹೇಳಿರಿ. ಸಾರ್ವಜನಿಕರಿಗೂ, ಶೇರುಗಳನ್ನು ಕೊಳ್ಳಬೇಕೆಂದು ಇರುವವರಿಗೂ, ಒಪ್ಪಂದದ ಮರ್ಮವನ್ನು ತಿಳಿಸದೆ ಸರಕಾರವನ್ನು ಬಲೆಗೆ ಹಾಕಿಕೊಳ್ಳಬೇಕೆಂಬ ಈ ಯುಕ್ತಿಗೆ ನಾನೇನೋ ವಿರುದ್ಧವಿದ್ದೇನೆ. ಆಸ್ಟಿನ್ ಕಾರ್ಪೊರೇಷನ್ ಮತ್ತು ಕ್ರೈಸ್ಲರ್ ಕಂಪನಿಯವರು ಪರಸ್ಪರದಲ್ಲಿ ಹೊಡೆದಾಡುವಂತಹ ಸನ್ನಿವೇಶವು ಪ್ರಾಪ್ತವಾಗುತ್ತಿದ್ದಿತು. ಇದರ ಸ್ಥಾಪಕರು ತಮ್ಮ ಯೋಜನೆಯನ್ನು ಪ್ರಕಟಿಸಬೇಕೆಂದು ನಾನು ಕೌನ್ಸಿಲ್ ಆಫ್ ಸ್ಟೇಟ್ ಸಭೆಯಲ್ಲಿ ಸೂಚನೆ ಇತ್ತೆನು. ಅನೇಕವರ್ಷಗಳವರೆಗೂ ಅಮೆರಿಕಾದ ಕಂಪೆನಿಗೆ ಗುಲಾಮರಾಗಿರಬೇಕಾದ ಈ ಪರಿಸ್ಥಿತಿಗೆ ಸರಕಾರವು ಒಪ್ಪಲಿಲ್ಲ.

"ಇವಾದನೇಲೆ ಸಂಸ್ಥಾಪಕರು ಮತ್ತೆ ಕೆಲವು ಸೂಚನೆಗಳನ್ನು ತಂದರು. ಅದೇನೆಂದರೆ ಲಿಬಿಯಾ, ಮಧ್ಯಸ್ಥಾರ್ಜ, ಇರಾಕ್, ಇರಾನ್ ಮತ್ತಿತರ ಪ್ರದೇಶಗಳಲ್ಲಿ ಉತ್ಪಾದನೆಯಾಗುತ್ತಿರುವ ಕಾರುಗಳನ್ನು ಆವು ಹಿಂದುಸ್ತಾನದಲ್ಲೇ ತಯಾರಾಗಲಿ ಅಥವಾ ಆಸೆರಿಕದಲ್ಲಾಗಲೀ ಕೊಳ್ಳಬೇಕೆಂದು ಸಲಹೆಸಲಾಯಿತು. ಫೋರ್ಡ್ ಮತ್ತು ಶವರ್ಲೆಟ್ ಕಂಪನಿಯವರಿಂದಲೇ 60000 ಕಾರುಗಳನ್ನು ಕೊಳ್ಳುವುದಾದರೆ ಕ್ರೈಸ್ಲರ್ ಕಂಪೆನಿಯವರಿಗೂ ಸಹಾ ಆ ಸೌಕರ್ಯವನ್ನು ಏತಕ್ಕೆ ಒದಗಿಸಬಾರದೆಂದೂ ಕೇಳಲಾಯಿತು. ನಾನು ಇದರ ವಿವರಗಳ ಗೋಜಿಗೆ ಹೋಗುವುದಿಲ್ಲ. ನೈನಿಕಾಧಿಕಾರಿಗಳು ಈ ವಿಷಯದಲ್ಲಿ ಅನುಭವ ಉಳ್ಳವರು, ಒಂದು ವಿಧದ ಕಾರುಗಳನ್ನು ನಡೆಸಿ ಯಂತ್ರಗಳ ಅನುಭವನನ್ನು ಪಡೆದಿರುವ ಶಿಕ್ಷಕರನ್ನು ಒಂದೇಸಲ ಬದಲುಮಾಡುವುದು ಅವರ ಇಚ್ಛೆಇದ್ದಿಲ್ಲ. ಯುದ್ಧದ ಮಧ್ಯಕಾಲದಲ್ಲಿ ಕಾರುಗಳ ಜಾತಿಯನ್ನು ಒಂದೇಸಲ ಬದಲು ಮಾಡುವುದು ಯುದ್ಧ ಪ್ರಯತ್ನವರಿಗೆ ಇಷ್ಟವಿದ್ದಿಲ್ಲ. ಕಾಮನ್ಸ್ ಮೆಂಬರರು ಯುದ್ಧಶಾಖೆಯವರೊಂದಿಗೆ ಹೋರಾಡಿ ಕಾರುಗಳನ್ನು ಬದಲುಮಾಡಲು ಅನುಮತಿಯನ್ನು ಪಡೆಯಬೇಕೆಂದು ಹೇಳಲಾಯಿತು ನನಗೆ ಇಷ್ಟು ಧೈರ್ಯವಿದ್ದಿಲ್ಲ.

"ಯುದ್ಧಕಾಲಕ್ಕೇ ನೋ ಇದು ಮೋಟಾರು ಭಾಗಗಳನ್ನು ಕೂಡಿಸಿ ತಯಾರಿಸುವ ಕಾರ್ಖಾನೆಯಾಗಿರುತ್ತದೆ (Assembling plant) ಹಿಂದುಸ್ತಾನದಲ್ಲಿ ಇಂತಹ ಎಷ್ಟೋ ಕಾರ್ಖಾನೆಗಳು ಇವೆ. ಮದ್ರಾಸಿನಲ್ಲಿಯೂ ಕೂಡಾ ಇಂತಹ ಕಾರ್ಖಾನೆಗಳಿವೆ ಬೆಂಗಳೂರಿನಲ್ಲಿ ಇಂತಹ ಮತ್ತೊಂದು ಕಾರ್ಖಾನೆಗೆ ಸರಕಾರದ ಸಹಾಯ ಕೊಡುವುದು ನನಗೆ ಬೇಡವಾಗಿದೆ. ಭಾರತ ಸರಕಾರವು ಇರುವ ಸರಿಮಿತಿಯಲ್ಲಿ ದೇಶೀಯ ಉದ್ಯೋಗಗಳಿಗೆ ಪ್ರೋತ್ಸಾಹ ಕೊಡಲು ಸಿದ್ಧವಿದೆ ಎಂಬುದನ್ನು ನಾನು ಇಲ್ಲಿ ಹೇಳಬಯಸುತ್ತೇನೆ.

ಡಾನ ನದಿಯಲ್ಲಿ ರಕ್ತ ಪ್ರವಾಹ.

ವೊರೊನೆಜ ಪಟ್ಟಣದ ಸಮೀಪದಲ್ಲಿ ಭೀಕರ ಪಾವ ಕಾಳಗ ನಡೆಯುತ್ತಲಿದೆ. ಡಾನನದಿಯಲ್ಲಿ ರಕ್ತವು ಹರಿಯುತ್ತಲಿದೆಯೆಂದು ಒಂದು ಸುದ್ದಿ. ಎಲ್ಲೆಲ್ಲಿ ನೋಡಿದರೂ ಮುರಿದುಬಿದ್ದ ಟ್ಯಾಂಕುಗಳೂ – ಹೆಣವ ರಾಸಿಗಳೂ ಕಂಡುಬರುತ್ತಲಿವೆ. ಜರ್ಮನರು ನಷ್ಟವನ್ನು ಲೆಕ್ಕಿಸದೆ ಮುಂದ ನುಗ್ಗುತ್ತಿರುವರು 200 ಮೈಲಿಗಳ ಅಗಲ ಪ್ರದೇಶದಲ್ಲಿ ರಣರಂಗವಾಗುತ್ತಲಿದೆ

ರಷ್ಯನರು ಬಾಲ್ಟಿಕ್ ಸಮುದ್ರದಲ್ಲಿ 46 ಸಾವಿರ ಟನ್ನಿನಷ್ಟು ಹಡಗುಗಳನ್ನು ಮುಳುಗಿಸಿದರೆಂದು ಸೊತ್ತಾಗಿದೆ.

Visit Royal Cafe
Near Royal Picture Palace
ROYAL is ROYAL



ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿಯಾದ ಕ್ರೋಕ್ಸ್ ಕನ್ನಡಿಗಳು ಸಂಯಾದ ಬೆಲೆಗೆ ದೊರೆಯುತ್ತವೆ ಬಡವರಿಗೂ ಶ್ರೀಮಂತರಿಗೂ ಅನುಕೂಲಿಸುವ ಆಧುನಿಕಟ್ಟು (ಫ್ರೇಂ) ಸಮ್ಮುಖದಲ್ಲಿವೆ ಒಂದುಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು

ಹೆಚ್. ಎಸ್. ಅಂಡ್ ಸನ್ಸ್ ಬಳ್ಳಾರಿ

ಬಳ್ಳಾರಿಯಲ್ಲಿ ಮದ್ರಾಸ್ ಗವರ್ನರರು.

ಬಳ್ಳಾರಿ ತಾ॥ 15:- ಈದಿನ ಮದ್ರಾಸಿನ ಗವರ್ನರ್ ಸಾಹೇಬರಾದ **ಸರ್ ಆರ್ಥರ್ ಹೋಪರು** ಬೆಂಗಳೂರಿಂದ ವಿಮಾನ ಮೂಲಕವಾಗಿ 11 ಘಂಟೆಗೆ ಇಲ್ಲಿಗೆ ಆಗಮಿಸಿದರು. ಸಂಜೆ 4-30 ಕ್ಕೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಯಾದ ಮೇಲೆ ರಾಯಲ್ ಸಿಕ್ಚರ್ ಪ್ಯಾಲೆಸ್‌ಗೆ ಹೋದರು. ಆಲ್ಲಿ ಅವರು ತಮ್ಮ ಭಾಷಣದಲ್ಲಿ ಪ್ರಕೃತದ ಯುದ್ಧ ಪರಿಸ್ಥಿತಿಯನ್ನು ವಿವರಿಸುತ್ತಾ ಜನತೆಯು ಐಕ್ಯಮತ್ಯದಿಂದಿರಬೇಕೆಂದು ಹೇಳಿದರಲ್ಲದೆ ಮಿತ್ರಪಕ್ಷದವರಿಗೆನೇ ಜಯವು ಖಂಡಿತವೆಂದು ಅಭಿಪ್ರಾಯಪಟ್ಟರು. ನಂತರ ಶ್ರೀ ವೈ. ಮಹಾಬಲೇಶ್ವರಪ್ಪನವರಿಗೆ "ರಾವ್ ಬಹದ್ದೂರ್" ಬಿರುದನ್ನೂ ಇತ್ತರು. ಶ್ರೀ ರಾಘವಾಚಾರ್ಯ, ಶ್ರೀ ಎ. ನಾರಾಯಣ ಭಟ್ ಇವರು ಕೂಡಾ ಮಾತಾಡಿದರು. ಗವರ್ನರರ ಭಾಷಣವಾದ ಬಳಿಕ ಅದರ ಸಾರಾಂಶವನ್ನು ತೆಲುಗಿನಲ್ಲಿ ಶ್ರೀ ರಂಗ ಬ್ರಹ್ಮರು ತಿಳಿಸಿದರು

ಗವರ್ನರರು ತಾ॥ 16 ರಲ್ಲಿ ಇಲ್ಲಿಂದ ವಿಮಾನ ಮೂಲಕವಾಗಿ 11 ಘಂಟೆಗೆ ಕಡಪಾಕ್ಕೆ ಹೋದರು.

ಬಳ್ಳಾರಿ ಜಿಲ್ಲೆಯಲ್ಲಿ ಕ್ಷಾಮ ಪರಿಸ್ಥಿತಿ.

(11—7—42)

ಆದವಾನಿ ತಾಲೂಕಿನ ಎಮ್ಮಿಗನೂರು. ವಣಲಪಲ್ಲಿ; ಯಮ್ಮಿಗನೂರು ವೈವಂದಿನ್ನೆ ನಂದವರಂ-ನಾಗಲದಿನ್ನೆ, ಮಿಗ್ಗಿ - ಮಂಚಾಲ ಈ 4 ಕೇಂದ್ರಗಳಲ್ಲಿ 16723 ಜನರು ಕೆಲಸದಲ್ಲಿರುವರು. 1675 ಜನರು ದೈನ್ಯ ಸಹಾಯ ಪಡೆಯುತ್ತಿರುವರು. 2457 ಜನರಿಗೆ ಉಚಿತಾಹಾರ ಕೊಡಲಾಯಿತು. ಆಲೂರು ತಾಲೂಕು ಹೆಬ್ಬಟ ನತ್ತುಮುರವಣಿ ರಸ್ತೆಯ ಕಾರ್ಯದಲ್ಲಿ 3868 ಜನರು ಕೆಲಸದಲ್ಲಿದ್ದರು. 557 ಜನರು ಸಹಾಯ ಹೊಂದಿದರು. ಸಿರುಗುಪ್ಪೆ ತಾ ರಾವಿಹಾಳು ವತ್ತುಮುರವಣಿ ಕಾರ್ಯದಲ್ಲಿ 2556 ಜನರು ಕೆಲಸದಲ್ಲಿದ್ದು 595 ಜನ ಸಹಾಯ ಹೊಂದಿದರು. ಆದವಾನಿ ರಾಯದುರ್ಗ ಭಾಗಗಳಲ್ಲಿ ಸುಮಾರು 6 ಸಾವಿರ ಜನ ನೆಯ್ಕಾರರಿಗೆ ಸಹಾಯ ಕೊಡಲಾಗಿದೆ.

ಭಾರತದಲ್ಲಿ ಮೋಟಾರು ಕಾರ್ಖಾನೆ.

ಶ್ರೀರಾಮಸ್ವಾಮಿ ಮೊದಲಿಯಾರ್‌ರವರಿಗೆ ಸರ್ ವಿಶ್ವೇಶ್ವರಯ್ಯನವರ ಉತ್ತರ.

ಹಿಂದೂಸ್ತಾನ ಸರಕಾರದ ಕಾಮರ್ಸ ಮೆಂಬರರು ಹೇಳಿರುವುದು. ತಪ್ಪು. ಕಾರ್ಖಾನೆಯು ಪ್ರಾರಂಭವಾದ 7 ತಿಂಗಳು ಮಾತ್ರ ಅದು ಮೋಟಾರು ಭಾಗಗಳ ಜೋಡಣೆ ಕೆಲಸ ಮಾಡಬೇಕಿತ್ತು. 3 ವರ್ಷಗಳೊಳಗಾಗಿ ಶೇಕಡ 60 ಭಾಗ ಭಾರತದಲ್ಲೇ ತಯಾರಾಗಬೇಕೆಂಬುದು ನಿಶ್ಚಯವಾಗಿದ್ದಿತು. ಇದನ್ನೆಲ್ಲಾ 7 ನೆಯ ಜನವರಿ 1941 ರಲ್ಲಿ ಇಂಡಿಯಾ ಸರಕಾರಕ್ಕೆ ಬರೆದ ಪತ್ರದಲ್ಲಿ ಅಡಕವಾಗಿದೆ. ಕ್ರೈಸ್ಲರ್ ಕಂಪನಿ ಎಂಜಿನಿಯರ್‌ರವರಿಂದ ಯಾವ ಯಾವ ಭಾಗಗಳು ಯಾವ ವರ್ಷ ಹಿಂದೂದೇಶದಲ್ಲಿ ತಯಾರಾಗತಕ್ಕವೆಂಬ ವಿವರಗಳನ್ನು ಕೊಡಲಾಗಿದೆ. ನಾನು 27 ನೆ ಆಗಸ್ಟ 1941 ರಲ್ಲಿ ಬರೆದ ಪತ್ರದಲ್ಲಿ ಅದು ಜೋಡಣೆಯ ಕೆಲಸದ ಕಾರ್ಖಾನೆಯಲ್ಲವೆಂದು ಸ್ಪಷ್ಟವಾಗಿ ಸೂಚಿಸಿರುತ್ತೇನೆ. ನಮ್ಮ ವಿರೋಧಿಗಳು ಇಂಥಾ ಸುದ್ದಿಯನ್ನು ಹುಟ್ಟಿಸಿರುವರು. 1939 ನೆಯ ಮೇ ತಿಂಗಳಲ್ಲಿ ಯುದ್ಧವಾರಂಭವಾಗುವ ಮುಂಚೆಯೇ ಪೂರ್ಣವಾದ ಮೋಟಾರುಗಳನ್ನು ತಯಾರಿಸುವ ಕಾರ್ಖಾನೆಯನ್ನು ಸ್ಥಾಪಿಸಲಿರುವ ಅಂಶವನ್ನು ಸ್ಥಾವಕರು ಭಾರತ ಸರಕಾರಕ್ಕೆ ತಿಳಿಸಿದ್ದರು. ನಾವು ಕೇಂದ್ರ ಸರಕಾರವನ್ನು 3 ಕೋಟಿ ರೂ. ಗಳು ಕೊಡಿರೆಂದು ಕೇಳಿಲ್ಲ. ಜೊಂಬಾಯಿ ಸರಕಾರವು ಶೇ 3½ ಬಡ್ಡಿ ಬರುವ ಭರವಸೆಯನ್ನು 10 ವರ್ಷಗಳ ವರೆಗೆ 1¼ ಕೋಟಿ ರೂ. ನೊತ್ತವಮೇಲೆ ಕೊಟ್ಟವರು. ಕೇಂದ್ರ ಸರಕಾರದವರ ಜೋಡಣೆಯಿಂದ ಇದು ಕೆಟ್ಟುಹೋಯಿತು. ನಮ್ಮ ವಿವರ ಪಟ್ಟಿಯನ್ನು (Prospectus) ಪ್ರಸಿದ್ಧಿಸಲು ಸರಕಾರವು ನಮಗೆ ಯಾವಾಗಲೂ ಸೂಚಿಸಿಲ್ಲ-ಸ್ಥಾಪಕರಿಂದ 30 ಲಕ್ಷ ಸಂಸ್ಥಾನಗಳಿಂದ 45 ಲಕ್ಷ ಬ್ರಿಟಿಷ್ ಇಂಡಿಯಾ ಜನತೆಯಿಂದ 60 ಲಕ್ಷ ರೂ. ಏಪರ್ಚುಗಿದ್ದಿತು ಇಂಡಿಯಾ ಸರಕಾರದವರೂ ಮಿಲಿಟರಿಯವರೂ ನಾವು ತಯಾರಿಸಿದ ಕಾರುಗಳನ್ನು ಕೊಳ್ಳಬೇಕೆಂಬ ಸೌಲಭ್ಯ ಕೇಳಿದ್ದೆವು. ಅವಕ್ಕೆ ಅವರು ಒಪ್ಪಲಿಲ್ಲ.

ಕಲ್ಕತ್ತೆಯ ಶ್ರೀವಂತರೊಬ್ಬರು ಸರಕಾರದ ಸಹಾಯವಿಲ್ಲದೆಯೇ ಈ ಕೆಲಸ ಪ್ರಾರಂಭಿಸಲು ಅಪ್ಪಣೆಕೇಳಿದ್ದರು. ಅವರಿಗೂ ಕೂಡ ಇಂಡಿಯಾ ಸರಕಾರವು ಸಹಾಯಮಾಡಲಿಲ್ಲ. **ಒಟ್ಟಿನಲ್ಲಿ ಈ ಉದ್ಯೋಗಕ್ಕೆ ಸಹಾಯಮಾಡುವುದು ಸರಕಾರಕ್ಕೆ ಬೇಡವಾಗಿದೆ. ಇದ್ದಿದ್ದರೆ ಒಂದೊಂದು ಕಾಲಕ್ಕೆ ಒಂದೊಂದು ಹೇಳಿಕೆಯನ್ನು ಅವರು ಕೊಡುತ್ತಿರಲಿಲ್ಲ.** ನಮ್ಮ ಯೋಜನೆಯನ್ನೇನೋ ಅವರು ಅಲ್ಲಗಳೆದಿದ್ದಾರೆ. ಎಂಥಾ ಯೋಜನೆಯಾದರೆ ಅವರು ಸಹಾಯಮಾಡುತ್ತಿದ್ದರೆಂಬುಂಶವನ್ನು ಇಂದಿಗೂ ಹೇಳಿಲ್ಲ.

—ಘ—

ಕಾಂಗ್ರೆಸ್ ವರ್ಕಿಂಗ್‌ಸಮಿತಿ ನಿರ್ಣಯ

"ಕಾಂಗ್ರೆಸ್ ಪ್ರಾರ್ಥನೆಯು ನಿರಾಕರಿಸಲ್ಪಟ್ಟರೆ ಗಾಂಧೀಜಿಯವರ ಅಧೀನದಲ್ಲಿ ಸಾಮೂಹಿಕ ಚಳವಳಿ ಆರಂಭವಾಗುವುದು"

ಭಾರತದ ರಾಜಕೀಯ ಪರಿಸ್ಥಿತಿಯನ್ನು ವಿಮರ್ಶೆಮಾಡಿ, ಕಾಂಗ್ರೆಸ್ ವರ್ಕಿಂಗ್ ಸಮಿತಿಯು ಒಂದು ದೀರ್ಘನಿರ್ಣಯವನ್ನು ಸಿದ್ಧಗೊಳಿಸಿ ಅದನ್ನು ಅನುಮೋದಿಸಿ ಈದಿನ ಸಾಯಂಕಾಲ ಪ್ರಕಟಿಸಿದೆ. ಆ ನಿರ್ಣಯದಲ್ಲಿ 1700 ಪದಗಳಿವೆ. ಬಹಳ ದೀರ್ಘವಾದ ನಿರ್ಣಯವದು. ಬ್ರಿಟಿಷರು ಭಾರತದಲ್ಲಿ ತಮ್ಮ ಪ್ರಭುತ್ವವನ್ನು ಕೊನೆಗಾಣಿಸಿ ಭಾರತವನ್ನು ಬಿಟ್ಟು ಹೊರಡಬೇಕೆಂಬುದೇ ಆ ನಿರ್ಣಯದಲ್ಲಿ ಮುಖ್ಯವಾಗಿರುವ ವಿಷಯ. ಅಲ್ಲದೆ ಸಾಧ್ಯವಾದಷ್ಟು ಮಟ್ಟಿಗೆ ಮಿತ್ರರಾಷ್ಟ್ರಗಳಿಗೆ ಕಿರುಕುಳ ಕೊಡುವ ನೀತಿಯನ್ನು ತಪ್ಪಿಸಬೇಕೆಂಬುದೇ ಕಾಂಗ್ರೆಸ್ಸಿನ ಉದ್ದಿಶ್ಯವೆಂಬುದನ್ನು ಸಹ ಒತ್ತಿ ಹೇಳಲಾಗಿದೆ.

ಬಳ್ಳಾರಿ ಪೇಟೆ ಧಾರಣೆ

17-7-42 ಶುಕ್ರವಾರ

ಭಂಗಾರ ತೊಲ 1ಕ್ಕೆ		50-12-0
ಸಾವನ್		39-0-0
ಬೆಳ್ಳಿ 100 ತೊಲ ರೂ.		84-0-0
ಅರಳೆ ಮುಂಗಾರಿ 12 ಮಣಕ್ಕೆ		75-0-0
ಅರಳೆ ಫಾರಂ ...		125-0-0
ಅಕ್ಕಿ 1 ರೂ ಗೆ	4 ರಿಂದ 5	ಸೇರು
ಬೇಳೆ ,,	4	,,
ಗೋಧಿ ,,	3½	,,
ಜೋಳ ,,	11	,,
ನವಣೆ ,,	15½	,,
ಸಜ್ಜೆ ,,	9	,,
ನೆಲಗಡಲೆ		1-9-0
ಸಕ್ಕರೆ ವೀಸ		0-9-0
ಬೆಲ್ಲ		20 ರೂ.
ಚಿಮ್ಮಿ ಎಣ್ಣೆ		4-12-0

ಮುಸಲ್ಮಾನ ಪತ್ರಲೇಖಕರಿಗೆ

(ಮಹಾತ್ಮರ ಲೇಖನ - ಹರಿಜನ ಪತ್ರಿಕೆಯಿಂದ)

"ಮೊದಲು ಮುಸಲ್ಮಾನರೊಡನೆ ಒಪ್ಪಂದ ಮಾಡಿಕೊಳ್ಳದೆ ಸ್ವಾತಂತ್ರ್ಯವ ಸಲುವಾಗಿ ಸಾಮೂಹಿಕ ಚಳವಳಿಯನ್ನು ಹೂಡುವ ವಿಚಾರ ನೀವು ಹೇಗೆ ಮಾಡುವಿರಿ?" ಎಂಬದಾಗಿ ಅನೇಕ ಮುಸಲ್ಮಾನ ಪತ್ರಲೇಖಕರು ನನಗೆ ಬರೆದಿರುವರು ನನ್ನ ಈ ಪತ್ರ ಲೇಖಕರಂತೆಯೆ ನಾನೂ ಒಂದು ಕಾಲಕ್ಕೆ ತಿಳಿಯುತ್ತಿದ್ದೆ. ಆದರೆ ಈಗ ಮುಸಲ್ಮಾನರ ಮನಸ್ಸನ್ನು ಒಲಿಸಿಕೊಳ್ಳಲಾರೆನೆಂದು ನನಗನಿಸುತ್ತದೆ. ಮುಸ್ಲಿಮ್ ಲೀಗವು ನನ್ನ ಮಾರ್ಗದಲ್ಲಿ ಅಡ್ಡಬಂದಿದೆ. ಲೀಗಿನ ಪತ್ರಿಕೆಗಳನ್ನೋದಲು ನಾನು ಪ್ರಯತ್ನಿಸುತಿರುವೆನು. ಲೀಗಿನ ಮನಸ್ಸಿನಲ್ಲೇನಿದೆಂಬುದು ಅವರಿಂದ ನನಗೆ ನೋಡಲಿಕ್ಕೆ ಸಿಕ್ಕುವದು. ಅವರ ಅಭಿಪ್ರಾಯದಂತೆ ನಾನು ಸಂಪೂರ್ಣವಾಗಿ ಅವಿಶ್ವಾಸಿಕನು. ಖಿಲಾಫತ ಚಳವಳಿಯ ಕಾಲಕ್ಕೆ ನಾನು ಮಾಡಿದ ಪ್ರಯತ್ನಗಳಲ್ಲಿ ಕೂಡ ದುರುದ್ದೇಶವಿದ್ದಿತೆಂದು ಅವರ ಮತ, ಇದೂ ಒಂದು ಕಾಲವಾಗುವುದು ನನಗೆ ಸ್ಪಷ್ಟವಾಗಿ ಗೊತ್ತಿದೆ ಮುಸಲ್ಮಾನರ ಯಾವುದೊಂದು ಕಾರ್ಯಕ್ಕೆ ಇಲ್ಲವೆ ಯಾವನೊಬ್ಬ ಮುಸಲ್ಮಾನನಿಗೆ ನಾನು ಯಾವತ್ತೂ ಒಳಿತು ಅಪಾಯವನ್ನು ಮಾಡಿದ್ದು ನನಗೆ ಗೊತ್ತಿಲ್ಲ. ಇಂದಿಗೂ ನನಗೆ ಅನೇಕ ಮುಸಲ್ಮಾನ ಗೆಳೆಯರಿದ್ದು ದಕ್ಕಾಗಿ ನಾನು ಪರಮಾತ್ಮನಿಗೆ ಆಭಾರಿಯಾಗಿರುವೆನು.

ಈ ಅವಿಶ್ವಾಸದಿಂದ ಹೇಗೆ ಪಾರಾಗಬೇಕೆಂಬುದು ನನಗೆ ತಿಳಿಯದಾಗಿದೆ. 'ಪಾಕಿಸ್ತಾನವನ್ನು ಕೊಡಿರಿ' ಎಂದು ನನ್ನ ಟೀಕಾಕಾರರು ಕೇಳುತ್ತಾರೆ 'ನಾನು ಕೊಡುವದರಿಂದ ಅದು ಸಿಕ್ಕವ್ದು' ಎಂಬುದು ನನ್ನ ಉತ್ತರ ಬೇಡಿಕೆಯು ನ್ಯಾಯ್ಯವಾಗಿದಂಜ ಒಗ್ಗೆ ನನಗೆ ಮನವರಿಕೆಯಾದರೆ, ಲೀಗಿನ ಜೊತೆಯಲ್ಲಿಯೆ ನಾನೂ ಅದಕ್ಕಾಗಿ ಕಾರ್ಯ ಮಾಡುವೆನು. ಆದರೆ ನನಗೆ ಹಾಗೆನಿಸುವದಿಲ್ಲ. ಹಾಗೆ ಯಾರಾದರೂ ನನಗೆ ಮನವರಿಕೆ ಮಾಡಿಕೊಡಬೇಕೆಂದು 'ನಾನು ಕೇಳುವೆ ಅದರಲ್ಲಿ ಅಡಕವಾದ ಕೊಡುವು ಮುಂತಾದವುಗಳನ್ನು ನನಗೆ ಈ ವರೆಗೆ ಯಾರೂ ಹೇಳಿರುವದಿಲ್ಲ ವಾರ್ತಾ ಪತ್ರಿಕೆಗಳಲ್ಲಿ ವ್ಯಸನಿಸಿದ ವಿನೋದಕ ಪತ್ರಿಕೆಗಳಲ್ಲಿ ಸ್ವಾಸ್ಥ್ಯಪೂರ್ಣ ಆ ಕೊಡುಕುಗಳು ಕಲ್ಪನೆಗೆ ಕೂಡ ಅತ್ಯಂತ ಕಠಿಣವಾಗಿರುವವು. ಆದರೆ ನಿರುತ್ಸಾಹಕ್ಕೆ ವರಿಂದ ಆ ತೊಡಕುಗಳನ್ನು ನಾನು ತಿಳಿದುಕೊಳ್ಳಲಾರೆನು. ತಮಗೇನು ಬೇಕು ಮತ್ತು ಅವರ ಅರ್ಧನೇನೆಂಬುದನ್ನು ಅದಕ್ಕಾಗಿ ನಂಬಿಕೆಯ ವಾತ್ಸಲ್ಯವಹಿಸಿ ದುಡಿಯುತ್ತಿರುವವರೆ ಹೇಳಬಲ್ಲರು ಈ ರೀತಿ ವಿವರಣೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಉಳಿದವರ ಮನಸ್ಸನ್ನು ಒಲಿಸುವದು ಪುಕಿಸ್ತಾನವಾದಿಗೆ ಬೇಕಾಗಿದೆಯಲ್ಲದೆ ಒತ್ತಾಯ ಪಡಿಸುವದು ಬೇಡ! ವಿರುದ್ಧ ಪಕ್ಷದವರ ಮನಸ್ಸೊಲಿಸಲು ಸ್ನೇಹಿತರಂತೆ ಎಂದ ದೊಡ್ಡ ಪ್ರಯತ್ನ ಮಾಡಲಾಗಿದೆಯೋ! ಆ ರೀತಿ ಮಹಾಂತರ ಮೊದಲು ಕಾಂಗ್ರೆಸ್ಸು ಒಪ್ಪುತ್ತದೆಂಬುದು ನನಗೆ ಗೊತ್ತಿದೆ, ನನ್ನ ಮಾತಂತೂ ಬಿಟ್ಟುಬಿಡಿರಿ.

ಆದರೆ ಈ ಮಧ್ಯಂತರ ಕಾಲದಲ್ಲಿ ನಾನೇನು ಮಾಡಬೇಕು? ಬ್ರಿಟಿಷ್ ದಾಸ್ಯದಿಂದ ಮುಕ್ತವಾಗಬೇಕಾಗಿದ್ದರೆ ಈ ಯುದ್ಧ ಕಾಲದಲ್ಲಿಯೆ ಹಿಂದುಸ್ತಾನವು ಒಳ್ಳೆ ಸರಣಾಸುಕಾರಕವಾದ ವಾತ್ರವನ್ನು ವಹಿಸಬೇಕಾಗಿದೆಂಬುದಾಗಿ ನನಗನಿಸುತ್ತದೆ ಕಳೆದ ಮೂರು ಸಾರಿ ಸತ್ಯಗಳಿಂದ ತನ್ನು ಸ್ವೇಚ್ಛಾವಿಹಾರಭೂಮಿಯಾಗಿರುವ ಈ ಹಿಂದುಸ್ತಾನವನ್ನು ಬಿಟ್ಟುಗೊಡಲು ಬ್ರಿಟಿಶರು ಸಿದ್ಧರಿಲ್ಲೆಂಬ ಮಾತನ್ನು ಬಿಟ್ಟರೆ ಬೇರೆ ಯಾವದೂ ಇದಕ್ಕೆ ಅಡ್ಡಿಯನ್ನುಂಟು ಮಾಡಲಾರದೆಂಬ ಬಗ್ಗೆ ನನಗೆ ಮನವರಿಕೆಯಾಗಿದೆ. ಬ್ರಿಟನ್‌ವು ಹಿಂದುಸ್ತಾನವನ್ನು ಬಿಟ್ಟುಗೊಟ್ಟರೆ ಅದು ಯುದ್ಧವನ್ನು ಬಿಟ್ಟುಗೊಡಬೇಕಾಗುವದೆಂಬುದಾಗಿ ಸಾಮ್ರಾಜ್ಯಶಾಹಿಯು ಹೇಳುವನು. ಹೀಗಿರಲು ಇಷ್ಟಲ್ಲಿಯವ್ಯನೇತರ ಸಲುವಾಗಿ ಗ್ರೇಟ್ ಬ್ರಿಟನ್ ಮತ್ತು ಜರ್ಮನಿ ಇವೇ ಮುಂತಾದೋಧರು. ಈ ಎರಡೂ ರಾಷ್ಟ್ರಗಳಿಗೂ ಹಿಂದುಸ್ತಾನವೇ ಸ್ವರ್ಗೆಯ ಗುಪ್ತ ವಿಷಯವಾಗಿದ್ದಿತೆ? ಇವೆಲ್ಲ ಕೇವಲ ತರ್ಕವೆಂಬುದು ನನಗೆ ಗೊತ್ತಿದೆ ಸತ್ಯವು ಈಗಲೆ ಗೊತ್ತಾಗುವುದು, ಸುವಿಚಾರಿಗಳಾದ ಹಿಂದೀಯರು ತಮ್ಮ ವೇತನವನ್ನು ಹಾಗೆಯೇ ಕಳೆಯುವರು. ಇನ್ನು ಮುಂದೆ ಹಿಂದುಸ್ತಾನವನ್ನು ತಮ್ಮ ಸೂತ್ತನ್ನಾಗಿ ಮಾಡಿಕೊಳ್ಳುವಲ್ಲಿಂದು ಬ್ರಿಟಿಶ್ ಸರಕಾರದವರು ನನ್ನವರಿಕೆ ಮಾಡಿಕೊಟ್ಟರೆ ನಮ್ಮಲ್ಲಿ ಎಷ್ಟೊರೂ ಆಗದಿವ್ವರೂ ಬಹು ಸಂಖ್ಯಾಕ ಜನರು ಬೇಕಾದಂಥ ಸ್ವಾರ್ಥತ್ಯಾಗ ಮಾಡುವಷ್ಟರಮಟ್ಟಿಗೆ ಸಿದ್ಧರಾಗುವರೆಂದು ನನಗನಿಸುತ್ತದೆ. ಇಂಥ ಜನರು ಸಿಕ್ಕುವರೆಂದು ನನಗೆ ವಿಶ್ವಾಸವಿದೆ.

ಓರಿಯಂಟಲ್

ಸಂಪೂರ್ಣ ರಕ್ಷಣೆ, ಪೂರ್ಣ ಭರವಸೆ

ಈ 18 ವರ್ಷಗಳ ಜೀವನದಲ್ಲಿ ಓರಿಯಂಟಲ್ ಕಂಪನಿಯು ತನ್ನ ಲಕ್ಷಾಂತರ ನಿಮಾದಾರರಿಗೆ ಶಾಂತಿ ಮತ್ತು ಯುದ್ಧಕಾಲಗಳೆಲ್ಲಾ ಸಹ ಮಾದರಿ ನಿಮಾಕಾರ್ಯಪ್ರೇಷ್ಠ ತತ್ವಗಳ ಅನುಕರಣೆಯಿಂದ ಸೇವ್ಯಾಣಿಸಿದುದನ್ನು ಕೊಟ್ಟಿದೆ. ಅವರಿಗೊದಗಿಸಿದ ಸೌಲಭ್ಯಗಳನ್ನು ನಿಮಗೂ ಓರಿಯಂಟಲ್ ಒದಗಿಸಲು ಸಿದ್ಧವಿದೆ.

ಇಪ್ಪತ್ತೆಯರಿವಿಗ ಸಲ್ಲಿಸಿರುವ ಹಕ್ಕುಗಳ ಹಣ ರೂ 26ಕೋ ನಿ.೦ ಜಾನಿಯಲ್ಲಿರುವ ನಿಮಾಪತ್ರಗಳ ಮೊತ್ತ ರು ೫೨೫ ಕೋಟಿ ವಾರ್ಷಿಕ ಆದಾಯ 1941ರಲ್ಲಿ ಸುಮಾರು ರು ೨ ಕೋಟಿ ನಿಧಿಯ ದ್ರವ್ಯ ರು 30 ಕೋಟಿ

ಗವರ್ನಮೆಂಟು ಸೆಕ್ಯೂರಿಟಿಲೈಫ್ ಅಶ್ಯೂರೆನ್ಸ್ ಕಂಪನಿ ,ಲಿಮಿಟೆಡ್
ಸ್ಥಾಪನೆ ೧೮೭೪. ಮುಖ್ಯ ಕಛೇರಿ ಬೊಂಬಾಯಿ.

ಶಾಖೆ:-
ಓರಿಯಂಟಲ್ ಬಿಲ್ಡಿಂಗ್ಸ್ ಆರ್ಮೀನಿಯನ್ ಬೀದಿ, ಜಿ.ಟಿ ಮದ್ರಾಸು
ಇನ್ಸ್‌ಪೆಕ್ಟರರ ಆಫೀಸು - ೩೧೨ ರೂಪರ್ಟಿಸ್ ಗೇಟ್ ಬ್ರಾಸಪೇಟೆ ಬಳ್ಳಾರಿ

ಸೈನಿಕರ ವಿಶ್ವಾಸವು ಹಿಂಸೆಯಲ್ಲಿರಲಿ ಬಿಡಲಿ ಅವರು ತಮ್ಮ ಉದ್ದೇಶಕ್ಕನುಸಾರವಾಗಿ ಕೃತಿ ಮಾಡುವದವಶ್ಯವಿದ್ದಂತೆ, ಈ ಭಾರತೀಯರ ವಿಶ್ವಾಸ ಅಹಿಂಸೆಯಲ್ಲಿರಲಿ ಬಿಡಲಿ ಇವರು ಅಹಿಂಸಾತ್ಮಕವಾಗಿಯೆ ಕಾರ್ಯ ಮಾಡಬೇಕಾಗುವದು. ಇಡೀ ಹಿಂದುಸ್ತಾನದ ಹಿತದ ದೃಷ್ಟಿಯಿಂದ ಈ ಹೋರಾಟವನ್ನು ಹೂಡಿದ್ದಾಗಿದೆ. ತೀರ ದರಿದ್ರ ಬಡನಸಿಗಿಂತ ಹೆಚ್ಚಿನದೇನೂ ಈ ಯೋಧರಿಗೆ ಸಿಕ್ಕದು ಅಧಿಕಾರವನ್ನು ಆಕ್ರಮಿಸುವದ ಕ್ಕಾಗಿ ಅವರೇನು ಹೋರಾಡುವದಿಲ್ಲ. ಆದರೇ ಎನ್ನೇ ಹಾನಿಯಾದರೂ ಚಿಂತೆ ಯಿಲ್ಲ. ಈ ವರೇಣ್ಯ ಸ್ವಾತಂತ್ರ್ಯವನ್ನು ಕೊನೆಗೊಳಿಸಬೇಕೆಂದು ಅವರು ನೋಡುತ್ತಿರುವರು

ಆ ಬಗೆಯ ಪರಿಸ್ಥಿತಿಯು ಬಂದರೆ ನುಂಸೇನಾಗುವುದೆಂಬುದು ಸರ್ವಶಕ್ತ ಬ್ರಿಟಿಷ್ ಪ್ರಭುತ್ವವು ನಿಸ್ಸತ್ವವಾದ ಬಳಿಕ ನಾವು ಯಾವ ರೀತಿ ಕೆಲಸ ಮಾಡುವೆವೆಂಬ ವನ್ನವಲಂಬಿಸಿದೆ ನಾವು ನಮ್ಮನಮ್ಮೊಳಗೆ ಬಡಿದಾಡಿಬಹುದು. ಇಲ್ಲವೆ ನಾವು ಎಲ್ಲವನ್ನೂ ಸರಿಪಡಿಸಿಕೊಂಡು ಜನತೆಯ ವರವಾಗಿ ಸ್ವಯಸ್ಥಿತ ಆಡಳಿತೆಯನ್ನೂ ನಡೆಸಬಹುದು. ಪ್ರಜಾಪ್ರಭುತ್ವ ಘಟನೆಯು ಚರಿಯಲ್ಲಿ ಬರಬಹುದು. ಇಲ್ಲವೆ ರುಸ್ಸ್ಯೆರಾಧಿರಾಜ್ಯಸದೃಶ ಅಧವಾ ಅಲ್ಪ ಜನಾಧಿಪತ್ಯವೂ ಜಾರಿಯಲ್ಲಿ ಬರಬಹುದು. ಬ್ರಿಟಿಷ್ ಸರಕಾರದೊಡನೆ ಒಪ್ಪಂದ ಮಾಡಿಕೊಳ್ಳುವ ಕಲ್ಪನೆ ಇವರಲ್ಲಿಲ್ಲ. ಮುಖ್ಯ ಮುಖ್ಯ ಪಕ್ಷಗಳಲ್ಲಿ ಒಡಂಬಡಿಕೆಯಾದಾಗಲೇ ಇದು ಸಾಧ್ಯವಾಗಬಹುದು. ಈ ಒಡಂಬಡಿಕೆಗೆ ಪೂರ್ವಭಾವಿಯಾಗಿ ಕಾಂಗ್ರೆಸ್ ಮತ್ತು ಲೀಗಗಳಲ್ಲಿ ಒಡಂಬಡಿಕೆಯಾಗಬೇಕು ಆದರೆ ನನಗೆ ತಿಳಿದಮಟ್ಟಿಗೆ ಅದೀಗ ಸಾಧ್ಯತೋರುವದಿಲ್ಲ

ಆದುದರಿಂದ ಬ್ರಿಟಿಷ್ ಸರಕಾರದೊಡನೆ ಒಪ್ಪಂದ ಮಾಡಿಕೊಳ್ಳುವ ಒಂದೇ ಒಂದು ಮಾರ್ಗವೆಂದರೆ ಅವರ ಆಳಿಕೆಯು ಕೊನೆಗೊಳ್ಳುವದು. ಹಿಂದುಸ್ತಾನವನ್ನು ಅವರ ಪಾಡಿಗೇ ಬಿಟ್ಟುಗೊಡುವದು ಹೀಗೆ ಬ್ರಿಟಿಷರು ಹೋಗುವರೆಂದು ಭಾವಿಸಿದರೆ, ಬ್ರಿಟಿಷ್ ಇಲ್ಲವೆ ಬೇರೆ ಯಾವ ಸರಕಾರವೂ ಇಲ್ಲಿ ಉಳಿಯುವದಿಲ್ಲ ಘಟನೆಯೂ ಉಳಿಯುವದಿಲ್ಲ. ಆದುದರಿಂದ ಸುವ್ಯವಸ್ಥಿತ ಸರಕಾರವೂ ಇಲ್ಲ ಸೈನಿಕ ದೃಷ್ಟಿಯಿಂದ ಅತ್ಯಂತ ರಕ್ತ ಸಂಪನ್ನವಾದ ವಕ್ಷವು ತನ್ನ ಆಳಿಕೆಯನ್ನು ಪ್ರಾರಂಭಿಸಬಹುದು ಮತ್ತು ಜನತೆಯು ಒಗ್ಗಿದಕೆ ಹಿಂದುಸ್ತಾನದೇಲೆ ತನ್ನ ಪ್ರಭುತ್ವವನ್ನೂ ಪ್ರಸ್ಥಾಪಿಸಬಹುದು. ಮುಸಲ್ಮಾನರು ಪಾಕಿಸ್ತಾನವನ್ನು ಸಾರಬಹುದು ಮತ್ತು ಯಾರೂ ಅವರಿಗೆ ಪ್ರತಿಕಾರ ಮಾಡಲಾರರು. ಹಿಂದುಗಳೂ ಹಾಗೆಯೆ ಸೂಡಬಹುದು. ಶೀಖರೂ ತಾವು ಪ್ಯಾಂಜಾಬ ಪ್ರದೇಶಗಳಲ್ಲಿ ತಮ್ಮ ಆಳಿಕೆಯನ್ನು ಪ್ರಾರಂಭಿಸಬಹುದು. ಮೊಂಡಾಗಬಹುದಾದ ಘಟನೆಗಳಿಗೆ ಕೊನೆ ಮೊದಲಿಲ್ಲ. ಇದೆಲ್ಲ ಕೇವಲನಿರುದ್ಯೋಗಿಯತರ್ಕ ಇದರ ಜೊತೆಗೆ ಇನ್ನೂ ಒಂದನ್ನು ಜೋಡಿಸುವಾ.

ಕಾಂಗ್ರೆಸ ಮತ್ತು ಲೀಗಗಳು ದೇಶದಲ್ಲಿ ಒಳ್ಳೆ ಸುಸಂಘಟಿತ ಪಕ್ಷಗಳಿದ್ದುದರಿಂದ ಅವು ಒಪ್ಪಂದಕ್ಕೆ ಬರಬಹುದು, ಎಲ್ಲರಿಗೂ ಮಾನ್ಯವಾಗುವಂಥ ತಾತ್ಕಾಲಿಕ ಸರಕಾರವನ್ನು ಸ್ಥಾಪಿಸಬಹುದು. ನಂತರ ಯೋಗ್ಯರೀತಿಯಿಂದ ಆರಿಸಲ್ಪಟ್ಟ ಘಟನಾಮಂಡಳವೂ ಸ್ಥಾಪಿಸಲ್ಪಡಬಹುದು.

ಬ್ರಿಟಿಷ್ ಅಧಿಕಾರವನ್ನು ಬದಲು ಮಾಡಬೇಕೆಂಬ ಒಂದೇ ಉದ್ದೇಶವು ಈ ಚಳವಳಿಯ ದಿರವನು. ಆ ಸುಖದಾಯಕವಾದ ಸಂಗತಿಯು ಕಾರ್ಯಕಾರಿಯಾದರೆ ಮತ್ತು ಅವರನಂತರ ಒಂದು ಶಾಶ್ವತವಾದ ಸರಕಾರವು ಸ್ಥಾಪಿತವಾದರೆ ಯುದ್ಧದ ಇತ್ಯರ್ಧವನ್ನು ಅದು ನಿಶ್ಚಯಪೂರ್ವಕವಾಗಿ ಮಾಡಬಲ್ಲದು ಮತ್ತು ಅದನ್ನು ಅಹಿಂಸಾತ್ಮಕವಾಗಿ ಮಾಡಬಲ್ಲದೆಂದು ನಾನು ಆಶಿಸುತ್ತೇನೆ ಈ ಯುದ್ಧದಲ್ಲಿ ಯಾರೂ ಹಿಂದುಸ್ತಾನವು ಇದರ ಹೊರ್ತು ಬೇರೆ ಯಾವ ರೀತಿಯನ್ನೂ ಪ್ರವರ್ತಿಸಲಾರದು ಪಾಕಿಸ್ತಾನದಲ್ಲಿ ಪ್ರತಿಷ್ಠಾಪಿತವಿದ್ದರೂ ಹಿಂದುಸ್ತಾನವು ಸ್ವತಂತ್ರವಾಗಬೇಕೆಂದು ಹೇಳುವ ಮುಸಲ್ಮಾನರು ಇಂಥ ಹೋರಾಟದಲ್ಲಿ ಸಕ್ರಿಯರಾಗುವರು. ಇವರೆ ತಪ್ಪಿದರು ಪ್ರವಾಗಿ ಬ್ರಿಟಿಶರ ಸಹಾಯದಿಂದ ಮುಸ್ಲಿಂ ಬ್ರಿಟಿಶರ ನೇತೃತ್ವದಲ್ಲಿಯೆ ಪಾಕಿಸ್ತಾನವು ಸಿಕ್ಕುವುದೆಂದು ಇವರಿಗೆ ವಿಶ್ವಾಸವಿದ್ದರೆ ಇದೊಂದು ಮಾತ್ರ ಚಿಂತೆ ನನಗೆ ಅವರಲ್ಲಿ ಸ್ಥಾನವಿಲ್ಲ

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ:— ಬಳ್ಳಾರಿ.

ಒಟ್ಟು ವ್ಯವಹಾರದ ಮೊತ್ತ.

31—10—40.	31—5—42.
ರು. 1,14,774-0-0	ರು. 2,41,525-0-0

ನಮ್ಮಲ್ಲಿ ಸರ್ವ ವಿಧವಾದ ಬ್ಯಾಂಕಿಂಗ್ ವ್ಯವಹಾರವು ನಡೆಯುತ್ತದೆ. ಹಿಂದೂದೇಶದ ಯಾವ ಭಾಗದಲ್ಲಾದರೂ ನಿಮಗೆ ವ್ಯಾಪಾರೀ ಸೌಕರ್ಯವನ್ನೊದಗಿಸಿಕೊಡುತ್ತೇವೆ. ಭಂಗಾರ ಮತ್ತು ಇತರ ಉಪಯುಕ್ತ ವಸ್ತುಗಳ ಮೇಲೆ ಅಲ್ಪದರದ ವಡ್ಡಿಯಿಂದ ಸಾಲವು ದೊರೆಯುತ್ತದೆ. ಸಮಕ್ಷಮ ಬಂದು ಎಲ್ಲಾ ತಿಳಿದುಕೊಳ್ಳಿರಿ.

ಶಾಖೆ ಗಳು:—

1 ತಿಮ್ಮನಚರ್ಲ 2 ಕೊಟ್ಟೂರು 3 ಉರವಕೊಂಡ 4 ಪತ್ತಿಕೊಂಡ

ಹೆಚ್. ಶೀತಾರಾಮರೆಡ್ಡಿ, ಬಿ ಎ ಬಿ ಎಲ್ (ಎಂ ಎಲ್. ಎ.)
ನೈನಿಕ್ಯರುಗಳಜೋರ್ಮ ಅಧ್ಯಕ್ಷರು

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ

ಸ್ವೀನಿನಲ್ಲಿ ರಾಜರು

ಸ್ವೀನಿನಲ್ಲಿ ದಿವಂಗತ ಅಲ್ಫಾನ್ಸೋ ಮೊರೆಗ್ಲ ಎನೆಯ ಮಕ್ಕಳನ್ನು ಏಂಪಾಸನಕ್ಕೇರಿಸಲಾಯಿತೆಂದು ಹೇಳಲಾಗಿದೆ.

ಈಜಿಪ್ತಿನ ಎಲ್‌ಅಲಮೀನ ಸ್ಮರಣೆಯ ಉತ್ಸವಭಾಗದಲ್ಲಿ ಮಿತ್ರರು ಸ್ವಾನಭವ್ಯತೆಮಾಡಿಕೊಳ್ಳುತ್ತಿರುವನೆಂದು ವ್ಯಕ್ತವಾಗಿದೆ.

ವೃದ್ಧ ಶ್ರೀಮಂತನ ಸಂತಾನ ಚಾಪಲ್ಯ.

(ಒಂದು ಸಣ್ಣ ಕಥೆ)

ಕೆ. ರಾಮಾಚಾರ್ಯ—ಎಮ್ಮಿಗನೂರು

ಮಾಚರ್ಲ ರಾಯಚೂರು ಜಿಲ್ಲೆಯಲ್ಲಿ ಒಂದು ಗ್ರಾಮ ಇಲ್ಲಿಯ ವಿಠೋಬರಾಯ ದೇಶಮುಖರು ಒಳ್ಳೆಯ ಶ್ರೀಮಂತರು. ಎಲ್ಲಾ ತರದ ಅನುಕೂಲತೆಗಳು ಅವರಿಗಿದ್ದವು. ಆದರೆ, ಪಾಪ, ಒಂದು ಚಿಂತೆಯು ಅವರನ್ನು ಬಹುವಾಗಿ ಪೀಡಿಸುತಿತ್ತು. ರಾಯರಿಗೆ ಸಂತಾನವಿದ್ದಿಲ್ಲ. ವಯಸ್ಸೇನೋ 60ರ ಗಡಿಯಲ್ಲಿತ್ತು. ಆದರೂ ಇನ್ನೂ ಸಂತಾನಕ್ಕಾಗಿ ಬಹಳ ಹಲುಬುತಿದ್ದರು. ಕೃಷ್ಣವರ್ಣ, ಬೊಜ್ಜು ಬೆಳೆದ ದೇಹ, ಬಲ ಕಾಲು ಸ್ವಲ್ಪ ಕುಂಟು, ಕಣ್ಣುಗಳ ದೃಷ್ಟಿ ಸ್ವಲ್ಪ ಕಡಿಮೆ ಇವುಗಳನ್ನು ಬಿಟ್ಟರೆ ರಾಯರು ಸರ್ವಾಂಗ ಸುಂದರರು.

ಗುರುಭೀಮಾಚಾರ್ಯರು ವರ್ಷಂಪ್ರತಿ ದೇಶಾವರಕ್ಕಾಗಿ ರಾಯರಲ್ಲಿ ಬರುವ ಸಂಪ್ರದಾಯ. ಈ ವರುಷವೂ ಬಂದರು ಮತ್ತು ರಾಯರಿಂದ ಪುರಸ್ಕಾರವನ್ನೂ ಹೊಂದಿದರು ಮಾತಿಗೆ ಮಾತು ಬೆಳೆದು ಆಚಾರ್ಯರು ರಾಯರೊಡನೆ ನೀನೇಕೆ ಮದುವೆ ಮಾಡಿಕೊಳ್ಳಬಾರದು? ಎಂದು ಕೇಳಿಯೇಬಿಟ್ಟರು. ಮೊದಲೇ ರಾಯರಿಗೆ ಅದೇಹುಚ್ಚು. ಸಂದರ್ಭ ಒದಗಲು ಇನ್ನು ಕೇಳಬೇಕೆ ? ಆಚಾರ್ಯರಲ್ಲಿ ತನುಗೆ ಹೇಗಾದರೂ ಒಂದು ಲಗ್ನ ಮಾಡಿಸಬೇಕೆಂದೂ, ಖರ್ಚು ಎಷ್ಟಾದರೂ ಚಿಂತಿಲ್ಲವೆಂದೂ ವಿನಂತಿಸಿಕೊಂಡರು ಆಚಾರ್ಯರು ಎಂದರು 'ಸ್ವಾಮಿ ನಾ ರೂಪಾಯಿಗಳೆಲ್ಲದೆ ಇಂತಹ ಕೆಲಸವಾಗಲಾರದು. ಕನಿಷ್ಠ ಎಂದರೆ ಒಂದು ಸಾವಿರ ವಾದರೂ ಬೇಕು.'' ರಾಯರು ಒಡನೆಯೇ ಸಾವಿರ ರೂಪಾಯಿಗಳನ್ನೂ, ಆಚಾರ್ಯರಿಗೆ ಬಹುಮಾನವಾಗಿ 200ರೂಪಾಯಿಗಳನ್ನು ಮತ್ತು ಖರ್ಚಿಗೆಂದು 100 ಕೊಟ್ಟು ಕಳುಹಿಸಿದರು. ತನಗೆ ಮದುವೆಯಾಗುವುದೆಂದೂ, ಸಂತಾನ ಪ್ರಾಪ್ತವಾಗುವುದೆಂದೂ ರಾಯರು ಮನಸ್ಸಿನಲ್ಲಿ ಹಿರಿಹಿರಿ ಹಿಗ್ಗಿದರು.

ಮಾಧವರಾಯರು ಬೆಂಗಳೂರು ಬಳೇಪೇಟೆಯಲ್ಲಿ ಒಬ್ಬ ಗೃಹಸ್ಥರು ಕಮಿಷನ್ ಏಜಂಟರು, ಸರಾಸರಿ ತಿಂಗಳಿಗೆ ೫೫ ರೂಪಾಯಿ ವರಮಾನ. ಹಿರಿಯಾರು, ಹಿರಿಯಾಳ್ಳು ಮತ್ತು ಹತ್ತುವರುಷ ವ್ಯಾಯುವ ಮೂವರು ಹೆಣ್ಣುಮಕ್ಕಳಿದ್ದಾರೆ. ಇವರ ಹಿರಿಮಗಳು ಸರೋಜ. ಸರ್ವಾಂಗಸುಂದರಳು. ತ್ರಿಭುವನ ಮೋಹಿನಿ. ತಕ್ಕನುಟ್ಟಿಗೆ ಓದುಬರಹ ಬಲ್ಲವಳು. ಆಚಾರ್ರು ಅಲ್ಲಿಳಿದರು. ಜೊತೆಯಲ್ಲಿ ಸುಮಾರು ಇಪ್ಪತ್ತು ವರುಷದ ವಯಸ್ಸಿನ ದೃಢಗಾತ್ರ, ಸುಂದರಾಂಗನಾದ ಯುವಕನೊಬ್ಬನನ್ನೂ ಕರೆತಂದಿದ್ದರು. ಹೇಳಿದರು. ''ಮಾಧವರಾಯರೇ ನೀವು ಕೊಟ್ಟ ನಿನ್ನ ಮಗಳ ಜಾತಕಕ್ಕೂ, ಈ ಯುವಕನ ಜಾತಕಕ್ಕೂ ಗುಣಿಸಿನೋಡಿದರೆ ಇಪ್ಪತ್ತೆಂಟು ಗುಣಗಳು ಬರುತ್ತವೆ. S. S. L. C. ಪಾಸಾಗಿದ್ದಾನೆ. ರೈಲ್ವೇ ಡಿಪಾರ್ಟಮೆಂಟಿನಲ್ಲಿ ನಾಲ್ಕತ್ತು ರೂಪಾಯಿ ಸಂಬಳವಿರುವುದಲ್ಲದೆ ಆಸ್ಥಿಯು ಕೂಡಾ ಇರುವುದು. ಬಹು ಒಳ್ಳೆಯ ಜೋಡು.' ವರನನ್ನು ನೋಡಿ ಮನೆಯವರೆಲ್ಲಾ ಮೆಚ್ಚಿದರು. ಆಚಾರ್ಯರು, ವಿಠೋಬರಾಯರಲ್ಲಿಂದ ತಂದ ಒಡವೆ ವಸ್ತುಗಳನ್ನು ಮುಂದಿಟ್ಟು 'ಈ ಆಭರಣಗಳು ನಿಶ್ಚಿತಾರ್ಥದವು. ಇಗೋಕ್ಕಿ, ಜನಳಿಗಾಗಿ 300 ರೂಪಾಯಿ, ಮತ್ತು ಇತರ ಖರ್ಚಿಗಾಗಿ 50 ರೂ. ಶ್ರಾವಣ ಬಹುಳ ಹತ್ತು ಒಳ್ಳೆಯದು ಮುಹೂರ್ತನಿದೆ. ಮುಂತ್ರಾಲಯದಲ್ಲಿ ಮದುವೆಯ ಏರ್ಪಾಡು ಮಾಡೋಣ. ನೀವು ಸದಿಗೆಯಲ್ಲಿ ಅಲ್ಲಿರಬೇಕು ಎಂದರು. ಮತ್ತು ಇನ್ನಿತರ ಮಾತುಕತೆಗಳಿಂದ ಮೇಲೆ ಆಚಾರ್ಯರು ಹೊರಟರು. ಹೋಗುತ್ತಾ ದಾರಿಯಲ್ಲಿ ಹಿಂದೆ ಬಂದಿದ್ದ ರಾಮುಗೆ ಇಪ್ಪತ್ತು ರೂಪಾಯಿ ಕೊಟ್ಟು ಕಳುಹಿಸಿ, ಸೀಪ ಮಾಚರ್ಲಕ್ಕಾಗಿ ಪ್ರಯಾಣ ಬೆಳೆಸಿದರು.

ಶ್ರಾವಣ ಬಹುಳ ತುಂಗಭದ್ರಾ L. F. ಛತ್ರದಲ್ಲಿ ಮಾಧವರಾಯರ ಕುಟುಂಬ ಬಂದಿಳಿದಿದೆ. ಅದೇ ದಿನ ವರರತ್ನ ವಿಠೋಬರಾಯರು ತನ್ನ ಇಷ್ಟ ಮಿತ್ರ ಪರಿವಾರ ಸಮೇತ ಬೀರೊಂದು ಛತ್ರದಲ್ಲಿ ತಂಗಿದರು. ಆಚಾರ್ಯರಂತೂ ಇದ್ದೇ ಇದ್ದರು. ಪುರೋಹಿತರು ಕೂಡಾ ಅವರೇ L. F. ಛತ್ರದ ಬಳಿ ಒಕ್ಕಲಿಗಿತ್ತಿ ಭೀಮಕ್ಕನು ಏನನ್ನೋ ಗೊಣಗುಟ್ಟುತ್ತಾ ಕಸ ಗುಡಿಸುತಿದ್ದಳು. ಸರೋಜ ಅಲ್ಲೇ ನಿಂತಿದ್ದಳು. ಭೀಮಕ್ಕನನ್ನು ಕೇಳಿದಳು 'ಏನೇ ಗೊಣಗುಟ್ಟುತಿದ್ದಿಯಲ್ಲಾ'.

'ಅಮ್ಮಾ, ನಿನುಗೆಲ್ಲೂ ಪರಸಿಗಲಿಲ್ಲೆ? ಬಂಗಾರದಂತಹ ನೀವು ಇಂಥಾ ಗಂಡನನ್ನು ಕಟ್ಟಿಕೊಳ್ಳುವುದೇ?' ಎಂದು ಉತ್ತರ ಕೊಟ್ಟಳ್ಳಳ್ಳಿಪೆ ಸ್ಟೇಷನಿನಿಂದ ಊರುಗೋಲಿನ ಸಹಾಯದಿಂದ ತುಂಬಾ ಪ್ರಯಾಸ ಪಟ್ಟು ಬರುವ ವಿಠೋಬರಾಯರನ್ನು ತೋರಿಸಿದಳು. ಸರೋಜಳು ತನ್ನ ಭಾವಿ ಪತಿಯನ್ನು ನೋಡಿದಳು. ನಡುಗಿದಳು. ನುತ್ತು ಅಲ್ಲೇ ನೆಲದಮೇಲೆ ಕುಸಿದು ಬಿಕ್ಕಳಿಕೆ ತುಬಿಟ್ಟಳು. ಎಷ್ಟೋ ಹೊತ್ತು ಏನನ್ನೋ ಯೋಚಿಸಿದಳು. ನಂತರ, ಸರಸರನೆ ತನ್ನ ತಂದೆಯ ಬಳಿಗೆ ಹೋಗಿ ತನು ಗಾದ ಮೋಸದ ಸಂಗತಿಯನ್ನೆಲ್ಲಾ ತಿಳಿಸಿದಳು. ಪಾಪ, ಏನು ಮಾಡಿಯೋರು? ಪರಸ್ಥಳ, ಯಾರ ಗುರುತೂ ಇಲ್ಲ. ಕೆಲಸ ಪಾಕಿ ಭೀಮಕ್ಕನಿಗೂ ಬಹಳ ವ್ಯಸನನೆನಿಸಿತು. ಅವಳು ಮುಂದಾಗಿ ಬಂದು ಎಲ್ಲವನ್ನು ತಾನುಮಾಡುವೆ. ನೀವು ಹೆದರ ಬೇಡಿರಿ ಎಂದು ಹೇಳಿದಳಲ್ಲದೆ ಪಿಸುಮಾತಿನಲ್ಲಿ ಏನೇನೋ ಹೇಳಿದಳು.

ರಾತ್ರಿ ಏಳು ಘಂಟೆಯ ಸಮಯ. ಛತ್ರದ ಬಳಿ ಜನರು ಗುಂಪು ಗುಂಪಾಗಿ ನೆರೆದಿದ್ದಾರೆ. ರೋಧನ ಧ್ವನಿಯು ಜೋರಾಗಿ ಕೇಳಿಬರುತ್ತಿದೆ. ಕೇಳಿದವರಿಗೆಲ್ಲಾ ಭೀಮಕ್ಕನು ಅಳುತಳುತ್ತಾ ಹೇಳುತ್ತಿದ್ದಳು ''ಅಯ್ಯೋ ತಮ್ಮ, ಎಷ್ಟು ಜೇದವೆಂದರೂ ನದಿಗಿಳಿದಳು ನನ್ನ ಸರೋಜಮ್ಮ ಕಾಲು ಜಾರಿ ಒಳಸೆಳವಿಗೆ ಬಿದ್ದಳು. ಪ್ರವಾಹವು ಅವಳನ್ನು ಸೆಳಕೊಂಡು ಹೋಯಿತು. ನಾನು ಎಷ್ಟೋ ಕೂಗಿದೆ. ಆದರೆ ಅಲ್ಲಿ ಕೇಳುವರಾರು! ಅಯ್ಯೋ! ಇನ್ನು ಏನುಗತಿ!! ಎಂತಹ ಪಾಡು-ಗಿ!''

ಸಮಾಚಾರವು ಮದುವೆಯ ಹುಚ್ಚಿನಲ್ಲಿ ಉಬ್ಬಿರುವ ಮನುಮುಗ ವಿಠೋಬರಾಯರಿಗೆ ಆಚಾರ್ಯರ ಮುಖಾಂತರ ಮುಟ್ಟಿತು. ರಾಯರು ಒಂದೇ ಸಾರಿ ಆಕಾಶದಿಂದ ಪಾತಾಳಕ್ಕೆ ಬಿದ್ದರು. ನಂತರ ಇನ್ನು ಇಲ್ಲಿ ಇರುವುದು ತರವಲ್ಲವೆಂತ ಎಣಿಸಿ ಬಂಡಿ ಕಟ್ಟಿಸಿಕೊಂಡು ರಾಯರು ಹೊರಟೇ ಬಿಟ್ಟರು.

ಹೈದರಾಬಾದ ರೇಲ್ವೆ ಸ್ಟೇಷನಿನಲ್ಲಿ ಸರೋಜಳ ಚಿಕ್ಕಪ್ಪನಾದ—ಆಂಬಾಜಿಯು ಆಕೆಗಾಗಿ ಕಾಯುತಿದ್ದನು. ಸಮಯಕ್ಕೆ ಸರಿಯಾಗಿ ಗಾಡಿಯೂ ಬಂದಿತು. ಸರೋಜಳೂ ಇಳಿದಳು. ನಂತರ ಆತನೊಡನೆ ನಡೆದ ಎಲ್ಲಾ ಸಮಾಚಾರವನ್ನು ಹೇಳಿದಳು. ಚಿಕ್ಕಪ್ಪನು ಅವಳನ್ನು ತನ್ನ ಮನೆಗೆ ಕರಕೊಂಡು ಹೋದನು.

ಇಂದು ಸರೋಜಳ ಮದುವೆ. ಆದರೆ ವಿಠೋಬರಾಯರೊಂದಿಗಲ್ಲ. ಹೈದರಾಬಾದಿನಲ್ಲಿ ವಕೀಲಿ ವೃತ್ತಿ ಕೈಕೊಂಡಿರುವ, ತರುಣ ಪದ್ಮನಾಭರಾಯ, ಬಿ. ಎ ಎಲ್. ಎಲ್. ಬಿ. ಇವರೊಂದಿಗೆ ಸರೋಜಳ ಆನಂದಕ್ಕೆ ಪಾರವೇ ಇಲ್ಲಾ. ಅಂತೂ ಪರಮಾತ್ಮನ ಕೃಪೆಯಿಂದ ಯೋಗ್ಯವರನನ್ನು ಪಡೆದಳು.

ಜಿಲ್ಲಾ ಬೋರ್ಡು ಶಾಲೆಗಳ ಪ್ರಾಥಮಿಕೋಪಾಧ್ಯಾಯರ ಸಂಘ.

—

'ನವಭಾರತ' ಸಂಪಾದಕರು, ಡಿ ಇ ಒ ಮತ್ತು ಇತರ ಅಧಿಕಾರಿಗಳನ್ನು ಕಂಡು ಸದರಿ ಸಂಘದ ಮುಂಜೂರಾತಿಯ ವಿಷಯ ಚರ್ಚಿಸಿರುವರು - ಈ ಕೆಳಗಿನ ಅಂಶಗಳು ತಿಳಿಯಬಂದಿವೆ.

ಪ್ರ ಶ್ನೆ:- ಮುಂಜೂರಾತಿಯನ್ನು ಕೊಡಲು ಏಕೆ ನಿರಾಕರಿಸಿದಿರಿ ?

ಉ.- ಸರಕಾರದ ಆರ್ಡರಿನಲ್ಲಿ ತಾಲೂಕು ಯೂನಿಯರ್ಗಳನ್ನು ಮಾತ್ರ ಮಾಡಿಕೊಳ್ಳಬೇಕೆಂದಿದೆ ಜಿಲ್ಲಾ ಸಂಘಗಳಿಗೆ ಸ್ವಾಸನವಿಲ್ಲ. ನಾವು ಸರಕಾರದ ಆಜ್ಞೆಗಳನ್ನು 'ಚಾ-ಚೂ' ತಪ್ಪದಂತೆ ಪಾಲಿಸಲು ಬದ್ಧರು ನಾಳೆ ಸರಕಾರದವರು ಮುಂಜೂರಾತಿಯನ್ನು ಕೊಡಲು ಒಪ್ಪಿದರೆ ನಮ್ಮ ಮೇನೂ ಆಪ್ಪೇವಣೆ ಇಲ್ಲ ಜಿಲ್ಲೆಯಲ್ಲಿ ನುಕ್ಕೊಂದು ಸಂಘವಿವೆ ಅವರ ಸಂಬಂಧವನ್ನಿಟ್ಟುಕೊಳ್ಳಬಹುದು.

ಪ್ರ.- ಮುಂಗೊರಿನಲ್ಲಿ ಪ್ರಾಥಮಿಕೋಪಾಧ್ಯಾಯರಿಗಾಗಿಯೇ ಒಂದು ಸಂಘವಿದೆಯಲ್ಲ. ಹಾಗೆಯೇ ಇಲ್ಲಿಯ ಉಪಾಧ್ಯಾಯರಾದರೂ ಏತಕ್ಕೆ ಸಂಘವನ್ನಿಟ್ಟು ಕೊಳ್ಳಬಾರದು?

ಮುಂಗೊರಿನ ಸಂಘವು ಪ್ರಾಥಮಿಕ - ಸಾಧ್ಯಮಿಕ ಭಾಗಗಳನ್ನೊಳಗೊಂಡಿರಬೇಕು. ಆದರೆ ಪ್ರಾಥಮಿಕ ಭಾಗವು ಪ್ರತ್ಯೇಕವಾಗಿ ಕೆಲಸಮಾಡುತ್ತಿರಬಹುದು. ಇನ್ಸ್ಪೆಕ್ಟರನು ತಪ್ಪಣೆ ಇತ್ತರ - ಹಾಗೆ ಮಾಡಬಹುದು. ಡೈರೆಕ್ಟರವರಿಗೆ ಬರೆದ ಅರ್ಜಿಯು ನಮ್ಮ ಮೂಲಕ ಬಂದರೆ ನಾವು ಮೇಲಕ್ಕೆ ಕಳುಹಿಸಬಹುದು ನಮ್ಮ ಅಭಿಪ್ರಾಯದಲ್ಲಿ ಜಿಲ್ಲೆಯಲ್ಲಿ ಮುನಿಸಿಪಾಲಿಟಿ ಸಂಯುಕ್ತಾಜಿತಿಬೋರ್ಡು ಏಡೆಡ್ ಮತ್ತು ಜಿಲ್ಲಾಬೋರ್ಡಿಗೆ ಸೇರಿದ ಪ್ರಾಥಮಿಕ ಶಾಲೆಗಳವರು ಸಂಘವನ್ನು ನಿರ್ವಹಿಸುವುದು ಉಚಿತವಾಗಿದೆ.

ಜೆ. ಬೋ. ಪ್ರಾಥಮಿಕೋಪಾಧ್ಯಾಯರಿಗೆ ಸಲಹೆಗಳು

ಪ್ರಾಥಮಿಕ ನಿಸ್ಪಾಭ್ಯಾಸಕ್ಕೆ ಸಂಬಂಧಿಸಿದ ಜಿಲ್ಲೆಯಲ್ಲಿನ ಎಲ್ಲಾ ಶಾಲೆಗಳ ಉಪಾಧ್ಯಾಯರೂ ಒಂದು ಸಂಘವನ್ನೇರ್ಪಡಿಸಿಕೊಳ್ಳುವುದು ಸಾಧ್ಯವಾದರೂ ಅದು ಕಾರ್ಯರೂಪಕ್ಕೆ ಬರುವುದಿಲ್ಲ. ಒಂದೇ ಪಟ್ಟಣಗಳಲ್ಲಿನ ನಿನಿನ ಮ್ಯಾನೇಜ್ಮೆಂಟಿನವರು ವಿವಿಧರೀತಿಯಲ್ಲಿ ಶಾಲೆಗಳನ್ನು ನಡೆಸುತ್ತಿರುವರು. ಮುಂಜಾಯಿತಿಬೋರ್ಡು – ಏಡೆಡ್ - ಮುನಿಸಿಪಾಲಿಟಿಗಳವರ ಉಪಾಧ್ಯಾಯರ ಹಕ್ಕುಗಳು ಒಂದಕ್ಕೊಂದಕ್ಕೆ ಸಂಬಂಧವೇ ಇಲ್ಲ - ಅವರವರ ಆರ್ಥಿಕ ಸ್ಥಿತಿಯನ್ನವಲಂಬಿಸಿ - ಸ್ಕೇಲುಗಳು ಏರ್ಪಟ್ಟಿವೆ - ಈ ಕಾರಣ ಪರಸ್ಪರ ಹಕ್ಕುಗಳಿಗೆ ಬಹಳ ಭೇದವುಂಟು - ಅಲ್ಲದೆ ಜಿಲ್ಲಾಬೋರ್ಡಿನಲ್ಲಿರುವ ಉಪಾಧ್ಯಾಯರೇ ಒಂದುಕಡೆ ಸೇರುವಂತಿಲ್ಲ. 72 ಸಂಘಗಳಿಗೆ 4 ವಾರ ಆಹ್ವಾನಗಳನ್ನು ಕಳುಹಿಸಿದರೆ 10 ಸಂಘಗಳ ಪ್ರತಿನಿಧಿಗಳು ಬಂದರು. ಆದರೂ ಒಂದೊಂದು ಮ್ಯಾನೇಜುಮೆಂಟಿಗೆ ಸೇರಿದ ಉಪಾಧ್ಯಾಯರು ಪ್ರತ್ಯೇಕರೀತಿಯಿಂದ ಸಂಘಟನೆಮಾಡಿಕೊಳ್ಳುವುದು ಅಗತ್ಯವಾಗಿದೆ.

ಡೈರೆಕ್ಟರವರು ಆಕ್ಷೇಪಣೀಯವಾದ ಅಂಶಗಳಿದ್ದರೆ ಮುಂಜೂರಾತಿಯನ್ನು ಕೊಡುವುದಿಲ್ಲ. ಇದರಲ್ಲಿ ರಾಜಕೀಯವೇನಿದೆ? 'ನಾವು ನಮ್ಮ ಹಿತ - ಪುರೋಭಿವೃದ್ಧಿಗಾಗಿ ಸಂಘವನ್ನೇರ್ಪಡಿಸಿಕೊಂಡಿರುತ್ತೇವೆ. ನಮ್ಮ ಕಾರ್ಯಪ್ರಣಾಲಿ - ನಿಯಮನಿಬಂಧನೆಗಳಿವು. (Programme of work & constitution) ದಯವಿಟ್ಟು ಮುಂಜೂರಾತಿಯನ್ನು ಕೊಡಿರಿ' ಎಂದು ಡೈರೆಕ್ಟರವರಿಗೆ ಮ್ಯಾನೇಜುಮೆಂಟಿನ ಮುಖ್ಯರಾದ ಜಿಲ್ಲಾ ಬೋರ್ಡು ಅಧ್ಯಕ್ಷರ ಮೂಲಕ ಕಳುಹಿಸಿದರೆ, **ಡೈರೆಕ್ಟರವರು ತಿರಸ್ಕರಿಸಲು ಕಾರಣವೇಇಲ್ಲ.** ಮುಂಜೂರಾತಿಯನ್ನು ಕೊಡುವುದರಿಂದ ಅವರಿಗೇನು ನಷ್ಟವಾಗುತ್ತೆ ?

ಈ ಕಾರಣ ನಿಯುಕ್ತರಾದ ಕಾರ್ಯದರ್ಶಿಗಳು, ಒಂದು ಸಭೆಯನ್ನು ತೀಕ್ಷ್ರವಾಗಿ ಬಳ್ಳಾರಿಯಲ್ಲಿ ಕರೆಸು, ಸಂಘದ ನಿಯಮ, ನಿಬಂಧನೆಗಳನ್ನ ಪಾಡಿ. ಡೈರೆಕ್ಟರವರಿಗೆ ರವಾನಿಸಬೇಕು ಮುಂಜೂರಾತಿಯು ಬರುವಪರೆಗೂಕೂಡದೆ, ಕಾರ್ಯಮುಗ್ನರಾಗಬೇಕು. ಸಾಧ್ಯವಾದರೆ ಡೈರೆಕ್ಟರವರನ್ನು ನೋಡಲು ತಡ್ಡಿಇಲ್ಲ ಡಿನಿಜನಲ್ ಇನ್ಸ್ಪೆಕ್ಟರ ಕಾರ್ಯಾಲಯ ಅನಂತಪುರದಲ್ಲಿದೆ ಅವರು ಒಳ್ಳೆಯವರು ಸಹಾಯ ಮಾಡುವುದರಲ್ಲಿ ಸಂಶಯವೇಇಲ್ಲ ಈ ಕಾರಣ ಮುಂದುನರಿಯಿರಿ. ಸೋಮಾರಿಗಳಾಗಿ ಕೂಡದೆಬೇಡಿರಿ.

ಮಸ್ಕಾ ಮಟ್ರೂಹ (ಲೆಬ್ಯಾ) ಬಾದ ನನ್ನ ಬ್ರಿಟಿಷ ನಾವಿಕಾದಳವುಂದು ಬಾಳಿ ನೂಡಿ ಬಹಳ ನಷ್ಟಕ್ಕೆ ಗುರಿಮಾಡಿತ.

ಬಳ್ಳಾರಿ

ವಿದ್ಯಾರಣ್ಯರ ದಿನ:- ಮುಲ್ಲಸಜ್ಜನ ವ್ಯಾಯಾಮಶಾಲೆಯವರು ವಿದ್ಯಾರಣ್ಯದಿನವನ್ನು 17ನೆಯ ತಾ. ವಿಜೃಂಭಣೆಯಿಂದ ನೆರವೇರಿಸಿದರು. ಅಧ್ಯಕ್ಷರಾಗಿದ್ದ ಶ್ರೀ ವಿ. ಸುಬ್ಬರಾಯನ್ರವರೂ-ಉಪನ್ಯಾಸಕರಾದ ಶ್ರೀ ವೆಂಕಪ್ಪಶಾಸ್ತ್ರಿಯವರೂ, ವಿದ್ಯಾರಣ್ಯರ ಸಂದೇತದ ಪ್ರಾಮುಖ್ಯತೆಯನ್ನರುಹಿದರು. ಕೆ. ಯಸ್. ಮೂರ್ತಿಯವರ ನಾಟ್ಯವೂ, ಕನ್ನಡ, ತೆಲುಗು ನಾಟಕಗಳ ಪ್ರದರ್ಶನವೂ ಮನೋರಂಜಕವಾಗಿದ್ದವು.

ಬಳ್ಳಾರಿ ಜಿಲ್ಲೆಯ ಆರೋಗ್ಯ

[11-7-42ಕ್ಕೆ ಮುಗಿಯುವ ವಾರ]

ಪ್ಲೇಗು:- ಕೂಡ್ಲಿಗಿ ತಾಲೂಕಿನ ಎರಡು ಹಳ್ಳಿಗಳಲ್ಲಿ 26 ಜನರಿಗೆ ತಗಲಿ 12 ಜನರು ಸತ್ತಿರುವರು.

ಕಾಲರಾ:- ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಕಾಲರಾ ಜಾಡ್ಯವು ಹಬ್ಬಿದೆ. ಜಿಲ್ಲೆಯ 75 ಹಳ್ಳಿಗಳಲ್ಲಿ 311 ಜನರಿಗೆ ಕಾಲರಾ ತಗಲಿ 210 ಜನರು ಸತ್ತಿರುವರು. ಬಳ್ಳಾರಿ ನಗರದೆಲ್ಲೂ ಕೂಡ ಕಾಲರಾ ಸೋಂಕು ಇದೆ

ಯೂರೋಪಿನಲ್ಲಿ ನುತ್ತೊಂದು ಕಡೆಯುದ್ಧರಂಗವನ್ನೇರ್ಪಡಿಸಬೇಕೆಂದು ರಷ್ಯನರು ಒತ್ತಾಯಪಡಿಸುತ್ತಲಿರುವರು. ರಷ್ಯನರೇ ಒಂದು ಕಡೆ ಮಾಡಿಕೊಳ್ಳಲಿರುವರು ಈ ಯೋಜನೆಯೆಲ್ಲಾ ಗುಸ್ತವಾಗಿವೆ

ಹಿಂದೂಸ್ಥಾನದಸೈನಕ್ಕೆ ಭರ್ತಿ

ಹಿಂದೂಸ್ಥಾನದ ಸೈನ್ಯದ ಎಲ್ಲಾ ಶಾಖೆಗಳಿಗೆ ಕಳೆದ ಮೇ ತಿಂಗಳಲ್ಲಿ 70000 ಜನರು ಸೈನಿಕರಾಗಿ ಸೇರಿದರು. ಕಳೆದ ಡಿಸಂಬರ ತಿಂಗಳಲ್ಲಿ 60,000 ಜನರು ಸೇರಿರುವರು. ಸೇರಿದವರಲ್ಲಿ ಹೆಚ್ಚಿನ ಜನರು ಮದ್ರಾಸು ಪ್ರಾಂತ್ಯದಿಂದ ಬಂದವರಾಗಿರುವರು.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೪—೦
ಕನ್ನಡ ಪಕೋಪನಿಷತ್ತುಗಳು	೦—೯—೦
ವಿವಾಹಾಭಿನ ಬೋಧೆ	೦—೪—೦
ಸುಮತಿ ಶತಕ	೦—೧—೦

ಅಂಚೆ ವಚ್ಚೆ ಬೇರೆ ಪುಸ್ತಕ ವ್ಯಾಪಾರಿಗಳಿಗೂ ಪೆಚ್ಚು ಪುಸ್ತಕ ಕೊಳ್ಳುವರಿಗೂ ಧಾರಾಳವಾದ ಕಮೀಶನ್

ಕಾಲವ ಸುಬ್ಬಣ್ಣ, ಮರ್ಚೆಂಟು, ಬಳ್ಳಾರಿ.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ: 1897.

45 ನೇ ವಾರ್ಷಿಕ ವರದಿಯ ಕೆಲವು ಮುಖ್ಯ ಅಂಶಗಳು

ಒಟ್ಟು ಆದಾಯ	ರೂ.	85,61,000 ವಿಸಾರಿದೆ
ಚಾಲ್ತಿಯಲ್ಲಿರುವ ವಿಮಾ ಪಾಲಿಸಿಗಳು	ರೂ.	14,84,44,000 ,,
ಆಸ್ತಿ	ರೂ.	5,80,86,000 ,,

ಕಂಪೆನಿ ಪ್ರಾರಂಭವಾದ ಲಾಗಾಯ್ತು ಪಾವತಿ ಮಾಡಿರುವ ಕ್ಲೈಂಗಳು ರೂ. 7,48,66,000 ,,

ನಿಜಸ್ಥಿತಿಗಳಿಗೆ ದರಖಾಸ್ತುಗಳನ್ನು ಕಳುಹಿಸುವುದು.

ಮುಖ್ಯ ಕಛೇರಿ:
ಎಂಪೈರ್ ಆಫ್ ಇಂಡಿಯಾಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬೆಂಗಳೂರು ಬ್ರಾಂಚ್:
ಡಿಸ್ಪೆಕ್ಟ್ಸ್‌ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರಿಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ವೆನ್ಕ ಎಂಬ ನಾಮಾಂಕಿತ ಹೊನ್ನ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಾಮ ಪರೀಕ್ಷಿಸಿರಿ

ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು,
- ಮಾತಾಡುವುದನ್ನು ಕಲಿಯಲು,
- ನಿನಗೆ ಸಹಾಯವು ಬೇಕೋ?

ಹಾಗಾದರೆ ಕೂಡಲೇ ಕಳಗಿನವರನ್ನು ವಿವರಗಳನ್ನು ತಿಳಿಯಿರಿ

ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು. ಪರೀಕ್ಷೆಯ ಪಾಠ ಪುಸ್ತಕಗಳು ಕಛೇರಿಯಲ್ಲಿ ವಸ್ತುಶಃ ದೊರೆಯುತ್ತವೆ. ಇನ್ನೂ ಹೆಚ್ಚಿನ ವಿವರವಾದ ಮಾಹಿತಿಯೂ, ಸೂಚನೆಗಾಗಿ ಹೇಳಿಕಳುಹಿಸಬಹುದು

ಟಿ. ಬಿ. ಕೇಶವರಾವ್,
ಕ್ರೈಸ್ತ ಮಿಷನರಿ ಕಾಂಪೌಂಡು, ಬಳ್ಳಾರಿ

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

TheRates of Subscription	ಚಂದಾ ವಿವರ
Annual	ವರ್ಷಕ್ಕೆ
Local 2—0—0	ಬಳ್ಳಾರಿಯವರಿಗೆ 2-0-0
Moffusil 3—0—0	ಹೊರಗಿನವರಿಗೆ 3-0-0
6 Months	೬ ತಿಂಗಳಿಗೆ
Local 1—1—0	ಬಳ್ಳಾರಿಯವರಿಗೆ 1-4 0
Moffusil 2—0—0	ಹೊರಗಿನವರಿಗೆ 2-0-0

Nava Bharat, Bellary.

REG. No. M. 3937.

Sri _____

Printed at Vittal Press, Car Street Edited & published by T. B Keshava Rao, Bellary

Reg M. No 3937 ವಂದೇ ಮಾತರಂ

ನವಜೀವನ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯ ವರಾನ್ನಿಬೋಧತ.

ಪುಟ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—
ಸಂಪುಟ ೪೩ ಬಳ್ಳಾರಿ ಜೂಲೈ ೩೭ ನೇ ಭಾನುವಾರ ೧೯೨೩. ಟಿ. ಬಿ. ಕೇಶವರಾವ್

ಹರಿಜನ ಪತ್ರಿಕೆಯಲ್ಲಿ
ಮಹಾತ್ಮ ಗಾಂಧಿಯವರ ಲೇಖನಗಳು.

ಕಾಯಿಲೆಯಾದರೆ? ಚಳವಳಿಯವ್ವಾರು ನಡೆಸುವರು?

ನಾನು ಕಾಯಿಲೆಯಿಂದ ಹಾಸಿಗೆ ಹಿಡಿದರೆ ನುಂದೆ ಹೂಡಬಹುದಾದ ಅಹಿಂಸಾತ್ಮಕ ಹೋರಾಟವನ್ನು ನಡೆಸಲು ನಾನು ಹೇಗೆ ಅಸಿಸುವೆನೆಂಬದಾಗಿ ಬಿ. ಬಿ ಸಿಯವರು ಕೇಳುತ್ತಿರುವರೆಂದು ಒಬ್ಬನು ನನಗೆ ಹೇಳುತ್ತಾನೆ ಒಳ್ಳೇದು ಹಾಗೆ ನಾನು ಕಾಯಿಲೆ ಬೀಳುವೆನೆಂದು ಡಾಕ್ಟರೇನು ಹೇಳುವುದಿಲ್ಲ ನನಗೆ ಶಯನ ಬಹಳವಾಗಿದ್ದು ದರಿಂದ ಉಪ್ರಾಂತಿ ತೆಗೆದುಕೊಳ್ಳಿರೆಂದೂ ತಂಡಾದಸ್ಥ ಕ್ಕೆಗಾಗಿ ದಿನಗಳವರೆಗಾದರೂ ಹೊಗಿರೆಂದೂ ಅವರು ನನಗೆ ಸಲಹೆ ಕೊಡುತ್ತಿರುವರು ವಿಶ್ರಾಂತಿ ತೆಗೆದು ಕೊಳ್ಳಲು ನಾನು ಹೋರಾಡುತ್ತಿರುವೆನು. ಅವರ ಕೆಲಸ ಹೂತ್ತು ಕರ್ತವ್ಯ, ಅನುರಾಗವು ಜಾಸ್ತಿ ಸ್ಯಾಮೋಹವು ಅವನ್ನೆ ಅಡ್ಡಿ ಸೂತ್ತುವೆ ಅವರ ಕಾರಣವು ಅಬಾಧಿತವಾಗಿದ್ದರೆ ಅಹಿಂಸಾತ್ಮಕ ಹೋರಾಟದಲ್ಲಿ ವೈಕ್ತಿಕ ಕಾಯಿ ಲೆಯು ಅಡ್ಡಿಯಿಲ್ಲವೆಂಬುದು ವಸ್ತುಸ್ಥಿತಿಯಾಗಿದೆ. ಅಹಿಂಸಾತ್ಮಕ ಹೋರಾಟದಲ್ಲಿ ನರ ಸಾಮರ್ಥ್ಯಸಿಂದಲ ಪ್ರೇರಣೆಯು ಬರುವುದೆಂಬುದು ನಿಶ್ಚಿತವಾದುದು ಅದರೆ ಸತ್ಯಶೋಧನೆಯಲ್ಲಿ ತೊಡಗಿಸಿ, ನಾನು ಅಹಿಂಸಾತ್ಮಕ ಮನುಷ್ಯನಲ್ಲಿ ಶರೀರಿಕ ಕಾಯಿಲೆ ಶ್ರಮಕೂಡ ಒಮು ಬಗೆಯ ಕುಂದೆಂದು ತಿಳಿಯುತ್ತೀನೆ ದೇಹಸ್ವಾಸ್ಥ್ಯವಿದ್ದರೆ ಚಿತ್ತಸ್ವಾಸ್ಥ್ಯವೆಂಬದನ್ನು ಸತ್ಯ ಅಹಿಂಸೆಯಲ್ಲಿ ಶ್ರದ್ಧೆಯುಳ್ಳವರೊಪ್ಪುವರು. ಆದರೆ ಅದು ಪೂರ್ಣ ಮನುಷ್ಯನ ಮಾತು. ನಾನು ಸವಿಪೂರ್ಣನಿರುವದಿಲ್ಲ ಆ ಬಗ್ಗೆ ಪ್ರಯತ್ನಿಸುತ್ತಿರುವೆನು

ಹರಿಜನ ಪತ್ರಿಕೆಯನ್ನು ಸರ್ಕಾರದವರು ನಿಲ್ಲಿಸುವುದಾದರೆ-

ಹರಿಜನವು ಹತ್ತಿಕ್ಕಲ್ಪಟ್ಟರೆ ನಾನೇನು ಮಾಡುವೆನೆಂಬದಾಗಿ ಅನೇಕರು ಒಳ್ಳೆ ವಿನಂತನೆಗೊಳಗಾಗಿ ಪ್ರಶ್ನೆ ಕೇಳುತ್ತಿರುವರು. ಈ ಒಗ್ಗೆ ಹುಕುಮುಗಳೂ ಹೊರ ಟಿವೆಯೆಂದು ಸುದ್ದಿ ಹಬ್ಬಿದೆ. ಹರಿಜನವು ಹತ್ತಿಕ್ಕಲ್ಪಟ್ಟರೆ ಯಾವುದೇ ರೀತಿ ಕ್ಷೋಭಿಗೊಳ್ಳಬೇಡಿರೆಂದು ನಾನು ಈ ಪ್ರಶ್ನೆ ಮಾಡಿದವರಿಗೆ ಕೇಳಿಕೊಳ್ಳುತ್ತೀನೆ. ಆ ಬಗೆಯ ಹುಕುಮು ಮುಟ್ಟಿದ ಕೂಡಲೆ ಪತ್ರಿಕೆಯನ್ನು ನಿಲ್ಲಿಸಿಬಿಡಿರೆಂಬ ಸೂಚನೆ ನಾನು ವ್ಯಾನೇಜರರಿಗೆ ಕೊಟ್ಟಿರುವೆ ಹುಕುಮು ಮುರಿದು ಹರಿಜನನ್ನು ಹೊರಡಿಸಲಿಕ್ಕೆ ಆಮೇಲು ಈ ಜಗಳವಳಿಯ ಅಂದವಲ್ಲ ಹರಿಜನವು ಹತ್ತಿಕ್ಕಲ್ಪಡಬಹುದು, ಆದರೆ ನಾನು ಜೀವಂತವಿರುವವರೆಗೆ ಅದರ ಬೆಂಬೇರ ಮಾತ್ರ ಹತ್ತಿಕ್ಕಲ್ಪಡಲಾರದು, ಬೇಹಪ್ಪ ಪುರಣ ಬೆಂಬಿಡರೂ ಅವರ ಚ್ಛತನ್ಯವನ್ನು ಎಲ್ಲಿಯೆಯಲ್ಲಿಯ ಭಾಷೆಯಲ್ಲಿಯೂ ಜನರಿಸಿಸ್ಸಾಗಲ್ಲಿ ಜನರ ಮುಖಾಂತರ ಅನ್ನ ಮಾತಾಡಿಯತ್ತನೆದು. ದೇಶದಲ್ಲಿಯ ಲಕ್ಷಾವಧಿ ಹಿಂದು-ಮುಸಲ್ಮಾನರ ಸಂಯುಕ್ತ ಚೈತನ್ಯವು ನನ್ನಲ್ಲಿದೆಂದು ನಾನು ಹೇಳಿಕೊಳ್ಳುವೆನು. ಈ ಬಗ್ಗೆ ವೀರ ಸಾವರಕರ ಮತ್ತು ಕ್ವಾಯೆದೆ ಆಜಮು ಜಿನ್ನಾರವರ ಕ್ಷಮಾಪಣೆ ಕೇಳಿಕೊಳ್ಳುತ್ತೇನೆ. ಇಲ್ಲದೆ ಹಿಂದುಸ್ತಾನದ ಮಕ್ಕಳೆಂದು ಹೇಳಿಕೊಳ್ಳುವ ಹಿಂದುಗಳಲ್ಲದ ಉಳಿದವರ ರೈತಸಿನಿಧಿಯೆಂದೂ ನಾನು ಹೇಳಿಕೊಳ್ಳುವೆ. ಈ ದೇಶದಲ್ಲಿರುವ ಪ್ರತಿಯೊಬ್ಬ ಮಾನವನ ಸ್ವಾತಂತ್ರ್ಯಕ್ಕಾಗಿಯೇ ನಾನು ಜೀವಿಸಿದ್ದು ಅದಕ್ಕಾಗಿಯೇ ಮರಣಹೊಂದುವ ಶಕ್ತಿಯು ನನ್ನಲ್ಲಿದೆಂದು ನಾನು ಆಶಿಸುತ್ತೀನೆ.

ಇಂದು ಹರಿಜನವೆಂದರೇನೆಂಬುದನ್ನು ನೋಡುವಾ. ಅದು ಇಂಗ್ಲಿಶ್ ಹಿಂದಿ, ಉರ್ದು (ಎರಡು ಕಡೆ) ತಮಿಳ, ತೆಲಗು (ಎರಡು ಕಡೆ) ಗುರಿಯಾ ಮರಾಠಿ, ಗುಜರಾಥಿ, ಕನ್ನಡ (೨ ಕಡೆಗೆ) ಭಾಷೆಗಳಲ್ಲಿ ಪ್ರಸಿದ್ಧವಾಗಲಿರುವದು. ಅದಕ್ಕೆ ಆನ ವ್ಯಕ ಕಾಯನೆಯ ಅಶ್ವಜೆ ಸಿಕ್ಕಸದಷ್ಟು ಉಳಿದಿದೆ. ಆಸಾಮು, ಕೇರಳ ಮತ್ತು ಸಿಂಧಗಳಿಂದ ಲರ್ಜಗಳು ಬಂದಿವೆ. ಬಂದವನ್ನು ಬಿಟ್ಟರೆ ಉಳಿದವುಗಳಿಗಿ ಬೇರೆ ಯಾವದೆ ವಾರ ಪತ್ರಿಕಗಳಿಗಿಂತ ಹೆಚ್ಚು ಚಂದಾದಾರರಿರುವರು ಇಂಥ ಪತ್ರಿಕೆಯನ್ನು ಹತ್ತಿಕ್ಕುವವೆಂದರೆ ಅನೇಕ ಸಣ್ಣ ಕೆಲಸವಲ್ಲೆಂದು ನಾನು ಸೂಚಿಸಬಯಸುತ್ತೇನೆ ಹೀಗೆ ಮಾಡಿದರೆ ಜನತೆಗಿಂತ ಸರ್ಕಾರಕ್ಕೇ ಹೆಚ್ಚು ಶಾಸಿಯಾಗಬಹುದು ಲೋಕಪ್ರಿಯ ಪತ್ರಿಕೆಯನ್ನು ಹತ್ತಿಕ್ಕುವದರಿಂದ ಬಹಳ ಅಸಂತೋಷವು ಹಬ್ಬುವದು

ಹರಿಜನವು ವೃತ್ತಪತ್ರಿಕೆಯಲ್ಲ ಪುತ ಪತ್ರಿಕೆಯೆಂಬವನ್ನು ಎಲ್ಲರೂ ತಿಳಿದುಕೊಳ್ಳತಕ್ಕದ್ದು. ಜನರು ಮೋಜಿಗಾಗಿ ಕೊಂಡು ಅದನ್ನು ಓದುವದಿಲ್ಲ. ಆದರೆ ತಮ್ಮ ದೈನಿಕ ವರ್ತನೆಯಲ್ಲಿ ಸಲಹೆ ಸೂಚನೆ ಪಡೆಯಲು ಮತ್ತು ಅದನ್ನು ಸಿಯಮಿತ ಗೊಳಿಸಲು ಅವರು ಹರಿಜನವನ್ನೋದುತ್ತಿರುವರು. ಪ್ರತಿವಾರ ಅದರಲ್ಲಿ ಬರುವ ಅಹಿಂಸಾತ್ಮಕ ಪಾಠಗಳನ್ನು ಅವರು

ಪಡೆಯುತ್ತಿರುವರು. ಈ ರೀತಿ ಸಾಪ್ತಾಹಿಕ ಆಹಾರವು ಜನತೆಗೆ ಸಿಕ್ಕದಂತೆ ಮಾಡುವದರಿಂದ ಅಧಿಕಾರಿಗಳಿಗೆ ಲಾಭವಾಗದು.

ಮತ್ತು ಹರಿಜನವು ಬ್ರಿಟಿಶ ವಿರೋಧಕ ಪತ್ರಿಕೆಯಲ್ಲ. ಅದು ಸರ್ವರೀತಿಯಿಂದ ಬ್ರಿಟಿಶರಿಗೆ ಅನುಕೂಲ ಪತ್ರಿಕೆಯಾಗಿದೆ. ಬ್ರಿಟಿಶ ಜನರಿಗೆ ಒಳಿತಾಗಬೇಕೆಂದು ಅದು ಬಯಸುತ್ತದೆ. ತನ್ನ ಅಭಿಪ್ರಾಯದಂತೆ, ಅವರಲ್ಲಿ ತಪ್ಪುನಿರೆಂಬುವನ್ನು ಒಳ್ಳೆ ಸ್ನೇಹ ಭಾವದಿಂದ ಅವರಿಗೆ ತೋರಿಸಿಕೊಡುತ್ತದೆ.

ಆಂಗ್ಲೊ - ಇಂಡಿಯ್ ಪತ್ರಿಕೆಗಳು ಸರ್ಕಾರಕ್ಕೆ ಪ್ರಿಯವಾದ ಪತ್ರಿಕೆಗಳೆಂಬುದು ನನಗೆ ಗೊತ್ತಿದೆ. ಪುರಾಣಾವಸ್ಥೆಯಲ್ಲಿದ್ದ ಸಾಮ್ರಾಜ್ಯತ್ವವನ್ನು ಅವು ಪ್ರತಿಪಾದಿಸುತ್ತಿವೆ. ಬ್ರಿಟನವು ವಿಜಯಹೊಂದಲಿ ಇಲ್ಲವೆ ಪರಾಜಯ ಹೊಂದಲಿ ಆದರೆ ಸಾಮ್ರಾಜ್ಯತ್ವವು ಮಾತ್ರ ನಷ್ಟವಾಗಿಯೇ ತೀರುವದು. ಬ್ರಿಟಿಶರಿಗೆ ಹಿಂದಿನ ಕಾಲದಲ್ಲಿ ಅದೆಷ್ಟೇ ಉಪಯುಕ್ತವಾಗಿದ್ದರೂ ಸದ್ಯಕ್ಕೆ ನಿಶ್ಚಿತವಾಗಿ ಅದು ಉಪಯುಕ್ತವಾಗಿರುವದಿಲ್ಲ. ಆ ದೃಷ್ಟಿಯಿಂದ ವಿಚಾರ ಮಾಡಿದರೆ ಆಂಗ್ಲೊ ಇಂಡಿಯ್ ಪತ್ರಿಕೆಗಳು ಬ್ರಿಟಿಶ್ ವಿರೋಧ ಪತ್ರಿಕೆಗಳು, ಹರಿಜನವು ಬ್ರಿಟಿಶ್‌ರಿಗೆ ಅನುಕೂಲವಾದ ಪತ್ರಿಕೆಯು ಆ ಪತ್ರಿಕೆಗಳು ವಸ್ತುಸ್ಥಿತಿಯನ್ನು ಒಚ್ಚಿಟ್ಟು ಬ್ರಿಟನನ್ನು ನಾಶಗೊಳಿಸುತ್ತಿರುವ ಸಾಮ್ರಾಜ್ಯತ್ವವನ್ನು ಆಧಾರವಾಗಿಟ್ಟುಕೊಂಡು ಪ್ರತಿ ದಿನ ದ್ವೇಷಭಾವನೆಯನ್ನು ಹಬ್ಬಿಸುತ್ತಿರುವವು. ಆ ನಾರದ ಪಗತಿಯನ್ನು ತಡೆಯುವದಕ್ಕಾಗಿಯೇ ಆಶಕ್ತನಿದ್ದರೂ ನಾನು ನನ್ನ ಪರ್ವಸ್ವನನ್ನು ಈ ಚಳವಳಿಯಲ್ಲಿ ಅರ್ಪಿಸಿರುವೆನು. ಪರಕೀಯ ಮಾನ್ಯತೆಯಿಂದ ಹಿಂದುಸ್ತಾನನ್ನು ಮುಕ್ತ ಮಾಡುವದು ಈ ಚಳವಳಿಯ ಉದ್ದೇಶವಿಷ್ಟೇ ಆಗಿರಲಿ ಅವರ ಪರವಾಗಿ ಯುದ್ಧ ಪ್ರಯತ್ನಕ್ಕೆ ಪ್ರಚಂಡ ಸಹಾಯ ಮಾಡುತ್ತದೂ ಇದರ ಉದ್ದೇಶವಾಗಿರುವದು. ಅವರು ಹರಿಜನವನ್ನು ಪತ್ತಿಕ್ಕುವಾಗ ತಾವು ಯಾವುದನ್ನು ಹತ್ತಿಕ್ಕಲು ಮುಂದಾಗಿರುವರೆಂಬುದನ್ನು ಅವರು ತಿಳಿದುಕೊಳ್ಳತಕ್ಕದ್ದು.

ಹೊರಗಿನಿಂದ ಯಾವದೇ ಬಗೆಯ ಒತ್ತಾಯವಿಲ್ಲದೆ, ನಾನು ಮುದ್ರಿತವಾಗುವ ವಿಷಯವಲ್ಲಿ ಅತ್ಯಂತ ನಿಯಂತ್ರಣ ಹಾಕಿಕೊಂಡಿರುವೆನೆಂಬುದನ್ನು ನಾನು ಹೇಳಬಯಸುತ್ತೇನೆ 'ಶತ್ರುವಿಗೆ' ಯಾವದೇ ಬಗೆಯ ಸೈನಿಕ ಸ್ಥಳಗಳು ಇಲ್ಲವೆ ಯೂ ಹರಜನೆಯ ಬಗ್ಗೆ ಸ್ವಲ್ಪವೂ ಸಂಗತಿ ಗೊತ್ತಾಗುವ ವಿಷಯವನ್ನು ಬುದ್ಧಿಪೂರ್ವಕ ನಾನೆಂದೂ ಪ್ರಸಿದ್ಧಿಸಿಲ್ಲ. ಎಲ್ಲ ಬಗೆಯ ಅತಿಶಯೋಕ್ತಿಯನ್ನು ಮತ್ತು ಉದ್ವೇಗಜನಕ ಸಂಗತಿಗಳನ್ನು ಬಿಟ್ಟುಬಿಡಲು ಅವಶ್ಯ ಕಾಳಜಿ ತೆಗೆದುಕೊಳ್ಳಲಾಗುತ್ತಿದೆ. ವಿಶೇಷಣ, ಕ್ರಿಯಾ ವಿಶೇಷಣಗಳನ್ನು ಸಯೋಗಿಸುವಾಗ ಬಹಳ ತೂಕಮಾಡಿ ಉಪಯೋಗಿಸಲಾಗುವದು ಅಲ್ಲದೆ ತಪ್ಪುಗಳನ್ನೊಪ್ಪಿ ಅವನ್ನು ಸರಿಪಡಿಸಲಿಕ್ಕೂ ನಾನು ಯಾವಾಗಲೂ ಸಿದ್ಧನಿರುವೆನೆಂಬುದೂ ಅವರಿಗೆ ಗೊತ್ತಿದೆ.

ನಮ್ಮ ಸಹಾಯವಿಲ್ಲದೆ ಜರ್ಮನರನ್ನು ಸೋಲಿಸಲಾರಿರಿ.

ಸದ್ಯದಲ್ಲಿ ನರ್ಧಾಕ್ಕೆ ಹಿಂದೆಂದೂ ಬಾರದಷ್ಟು ಹಿಂದೀ ಮತ್ತು ಪರದೇಶಿ ಪತ್ರಿಕಾ ಸುದ್ದಿಗಾರರು ಬರುತ್ತಿರುವರು. ನರ್ಕಿಂಗ ಕಮೀಟಿಯವರು ನಿರ್ಧರಿಸಬೇಕಾದ ಒಳ್ಳೆ ಮಹತ್ವದ ಸಮಸ್ಯೆಗಳನ್ನು ನೋಡಿದರೆ ಅದು ಸ್ವಾಭಾವಿಕವೂ ಇರುವದು ಆದರೆ ಆರೋಗ್ಯ ಚೆನ್ನಾಗಿಲ್ಲವಾದ ಗಾಂಧಿಜಿಯವರಿಗೆ ಇದರಿಂದ ಒಳ್ಳೆ ತೊಂದರೆಯಾಗುವದು. ಅಲ್ಲವೆ ಅವರ ಕಾರ್ಯಕ್ರಮವನ್ನೆಲ್ಲ ನೊದಲೆ ಗೊತ್ತುಮಾಡಿಸಿದ್ದಾಗ್ದುದರಿಂದ ಸುತ್ತಮುತ್ತ ಜರಿನ ನರ್ಕಿಂಗಕಮೀಟಿಯ ಸಭೆ ನುಗಿಯುವವರೆಗೆ ನಿಲ್ಲಿರಿ ಆಗ ನಿಮಗೆಲ್ಲರಿಗೂ ಗಾಂಧೀಜಿಯವರು ಒಂದೇ ನಂದರ್ಶನ ಕೊಡಬಲ್ಲರೆಂದು ನಾನು ಹೇಳಿದೆನು. ಆದರೆ ಆ ಪತ್ರಿಕಾ ಪತಿನಿಧಿಗಳಲ್ಲಿ ಜೇಲಿ ಎಕ್ಸಪ್ರೆಸ (ಲಂಡನ್) ಪತ್ರಿಕೆಯ ಸುದ್ದಿಗಾರ ಮಿಸ್ಟರ್ ಯಂಗ್ ಮೊದಲು ಬಂದಿದ್ದನು ಕೊನೆಯವರೆಗೆ ನಿಲ್ಲಲು ಇಚ್ಛೆ ವಿಲ್ಲದ್ದರಿಂದ ಒಂದೆರಡು ನಿಮಿಷಗಳಾದರ ನಾತೆಂದು ಅವನು ಹೇಳಿದನು ಗಾಂಧೀಜಿಯವರು ಬಿನ್ನಪಕೆಳ್ಳಿದರು. ಬ್ರಿಟಿಷರು ನಿವೃತ್ತರಾಗಬೇಕೆಂಬ ಬೇಡಿಕೆಯು ಹೆಚ್ಚು ಬೆಳೆಯುತ್ತಿದ್ದು ಅದು ನಿರಾಕರಣದರೆ ಒಂದು ಒಗೆಯ ಚಳವಳಿ ಸುರುವಾಗ ಬಹುದೆಂದು ಅವನು ಮನಸ್ಸಿನಲ್ಲಿ ವಿಚಾರ ಮಾಡಿದ್ದನು. ಆದುದರಿಂದ ಅವನು ಕೆಳಗಿನಂತೆ ಕೇಳಿದನು.

"ನಿಮ್ಮೀ ಚಳವಳಿಯಿಂದ ಜಪಾನಿಯರನ್ನು ಈ ದೇಶದಿಂದ ಹೊರಗೆ ಹಾಕುವದು ಹಚ್ಚು ಕಠಿನವಾಗುವದೊ ಇಲ್ಲವೆ ಸುಲಭವಾಗುವದೋ ? ಹೇಳಬಲ್ಲಿರಾ "

"ನಮ್ಮ ಚಳವಳಿಯಿಂದ ಜಪಾನಿಯರಿಗೆ ಇಲ್ಲಿ ಬರಲು ಹೆಚ್ಚು ಕಠಿನವಾಗುವದು. ಆದರೆ ಬ್ರಿಟನ್ ಮತ್ತ ಮಿತ್ರಪಕ್ಷದವರಿಂದ ಸಹಾಯ ಸಿಕ್ಕದಿದ್ದರೆ ಮಾತ್ರ ಏನಾಗುವದೆಂದು ನಾನು ಹೇಳಲಾರೆ" ಎಂದು ಗಾಂಧಿಜಿಯವರೆಂದರು.

"ಆದರೆ ಯುದ್ಧವನ್ನು ಇಡಿಯಾಗಿ ನೋಡಿರಿ. ಮಿತ್ರಪಕ್ಷದವರು ವಿಜಯಿಗಳಾಗಬೇಕೆಂದು ನಿಮ್ಮ ಇಚ್ಛೆ ಇರುವದೆಂದು ನೀವು ಹೇಳಿರುವಿರಿ. ನಿಮ್ಮ ಈ ಹೊಸ ಚಳವಳಿಯಿಂದ ಮಿತ್ರರಾಷ್ಟ್ರದವರಿಗೆ ಆ ವಿಜಯಕ್ಕ ಸಹಾಯವಾಗಬಲ್ಲದೋ?" ಎಂದರು ಯಂಗರು. "ಅಹುದು ನನ್ನ ಬೇಡಿಕೆಯು ಮಾನ್ಯವಾದರೆ" ಎಂದರು ಗಾಂಧಿಜಿಯವರು.

"ನಿಮ್ಮ ಬೇಡಿಕೆಯೊಂದರೇನು ಬ್ರಿಟಿಷರು ಅಹಿಂಸಾತ್ಮಕ ಹೋರಾಟ ಮಾಡಬೇಕೆಂಬುದೊ "ಅಲ್ಲ, ಅದಲ್ಲ, ನನ್ನ ಬೇಡಿಕೆಯೆಂದರೆ ಹಿಂದುಸ್ತಾನದಲ್ಲಿ ಬ್ರಿಟಿಷರ ಆಧಿಪತ್ಯ ಕೊನೆಗೊಳ್ಳಬೇಕೆಂಬುದು. ಈ ಮಾತು ಒಪ್ಪಿದ್ದಾದರೆ ಮಿತ್ರಪಕ್ಷದವರಿಗೆ ವಿಜಯವನ್ನು ಖಂಡಿತ ತಂದಂತರ ಹಿಂದುಸ್ತಾನವು ಸ್ವತಂತ್ರ ರಾಷ್ಟ್ರವಾಗುವದು. ಈಗ ಮಾತ್ರ ಅದು ಕೇವಲ ದಾಸರಾಷ್ಟ್ರವಾಗಿರುವದು ನನ್ನ ಚಳವಳಿಗೆ ಸಹಾನುಭೂತಿಪರ ಉತ್ತರ ಮೊರೆತರೆ ಅದರ ಪರಿಣಾಮದಿಂದ ಮಿತ್ರರ ವಿಜಯವು ನಿಶ್ಚಿತ. ಆದರೆ ಬ್ರಿಟಿಷ್‌ರು ಆ ಒಗ್ಗೆ ತಪ್ಪು ತಿಳಿದುಕೊಂಡು ಅವರ್ನು ಪತ್ತಿಕ್ಕಬೇಕೆಂಬ ಘೋರಣವನ್ನು ಸ್ವೀಕರಿಸಿದರ ಅದರ ಪರಿಣಾಮಕ್ಕೆ ಅವರೇ ಹೊಣೆಗಾರರಾಗುವರಲ್ಲದೆ ನಾನಲ್ಲ" ಮಿ. ಯಂಗರಿಗೆ ಇದರಿಂದ ಸಮಾಧಾನವಾಗಲಿಲ್ಲ. ಯಾವನೇ ಚಳವಳಿಯು ಶಾಂತರೀತಿಯಿಂದ ನಡೆಯಬಲ್ಲದೆಂಬುದಾಗಿ ಅವರಿಗೆ ನಿಸಲಿಲ್ಲ. "ಗಾಂಧಿಜಿಯವರೆ ನೀವು ಸ್ವತಃ ಲಂಡನವರೆಲ್ಲಿದ್ದಿರಿ ಬ್ರಿಟಿಶ್ ಜನರು ಸಹಿಸಿದ ಬಾಂಬು ದಾಳಿಯ ಬಗ್ಗೆ ನಿಮಗೆ ಏನಾದರೂ ತಿಳಿಯಬೇಕಾಗಿಲ್ಲವೆ" ಎಂದು ಯಂಗರು ಕೇಳಿದರು 'ಓಹೊ ಅಹುದು" ಎಂದರು ಗಾಂಧಿಜಿಯವರು ನಾನು ಲಂಡನದಲ್ಲಿರುವಾಗ ಅದನ್ನು ಪ್ರತಿಯೊಂದು ಸಂದಿಗೊಂದಿಯೂ ನನಗೆ ಗೊತ್ತಿದೆ. ಅನೇಕ ವರ್ಷಗಳ ಹಿಂದೆ ನಾನು ಲಂಡನಲ್ಲಿ ಮೂರು ವರ್ಷ ಇದ್ದೆನಲ್ಲವೆ ಆ್ಯಲ್ಬರ್ಟ್, ಕೆಂಬ್ರಿಜ ಮತ್ತು ಮ್ಯಾಂಚೆಸ್ಟರಗಳನ್ನೂ ನಾನು ನೋಡಿರುವೆನು. ಆದರ ಲಂಡನದ ಬಗ್ಗೆಯೆ ನನಗೆ ವಿಶೇಷ ಎನಿಸುತ್ತದೆ ಇನರ್ ಟೆಂಪಲ್ ಲಾಯಬ್ರರಿಯಲ್ಲಿ ನಾನು ಓದುತ್ತಿದ್ದೆನು ಮತ್ತು ಆ ಟೆಂಪಲ್ ಚರ್ಚ್‌ದಲ್ಲಿ ಡಾಕ್ಟರರು ಉಪದೇಶ ಮಾಡುತ್ತಿರುವಾಗ ಅನೇಕ ಸಲ ಎದ್ದು ನಿಲ್ಲುತ್ತಿದ್ದೆನು. ನನ್ನ ಅಂತಃಕರಣವೆಲ್ಲ ಅಲ್ಲಿನ

7ನೇ ಪುಟವನ್ನು ನೋಡಿರಿ

ಬಳ್ಳಾರಿ ಜಿಲ್ಲೆಯಲ್ಲಿ ಕ್ಷಾಮ ಪರಿಸ್ಥಿತಿ.

(18-7-42ನೆ ಮುಗಿಯುವ ವಾರ)

ಆದನ ನಿ ತಾಲೂಕು	ಕೆಲಸಗಾರರು	ಸಹಾಯಹೊಂದಿದ	ಆಹಾರಕೊಟ್ಟ
1 ಯಮ್ಮಿಗನೂರು ಸೂಲಪಲ್ಲಿ	4258	139	
2 ನಂದವರಂ-ನಾಗಲದಿನ್ನೆ	4621	677	
3 ಯಮ್ಮಿಗನೂರು-ಜೈವಂದಿನ್ನೆ	4041	7 3	1920
4 ಮಗ್ರಿ-ಸುಂಚಾಲ	3434	77	344
ಆಲೂರು ತಾಲೂಕು			
1 ಪೆದ್ದಹಂ-ಹೊಳಲಗುಂದಿ	3976	668	11
ಸಿರುಗುಪ್ಪ ತಾಲೂಕು			
1 ಚಿಕ್ಕಹಾಳು ಪಕ್ಕಿರವಾಳ	2974	513	8

ಒಟ್ಟಿಗೆ ಜಿಲ್ಲೆಯ 6 ಕೇಂದ್ರಗಳಲ್ಲಿ 28451 ಜನ ಸಹಾಯಹೊಂದಿದ್ದಾರು. ರಾಯದುರ್ಗ ಆಪತ್ಸಾಹಾಯಕ ಕೇಂದ್ರದಲ್ಲಿ 5081 ನೇಯ್ಗಾರರಿಗೆ ಸಹಾಯಮಾಡಲಾಗಿದೆ.

ಬಳ್ಳಾರಿ ಜಿಲ್ಲೆಯ ಆರೋಗ್ಯ

(20—7—42)

ಜಿಲ್ಲೆಯ 69 ಹಳ್ಳಿಗಳಲ್ಲಿ 547 ಜನರಿಗೆ ಕಾಲರಾ ತಗಲಿ 237ಜನರು ಸತ್ತಿರುವರು 2ನೈಲಿಬೇನೆಯಿಂದಲೂ, 6 ಜನರು ಕಾಲರಾದಿಂದಲೂ ಸತ್ತಿರುವರು ರಾಯದುರ್ಗ ಕೂಡ್ಲಿಗಿ ತಾಲೂಕುಗಳಲ್ಲಿ ಕಾಲರಾದ ಜೊತೆಗೆ ಸ್ಲೇಗು ಕೂಡ ಇದೆ. ತಕ್ಕನಿವಾರಣೋಪಾಯಗಳನ್ನು ತೆಗೆದು ಕೊಳ್ಳುತ್ತಿರುವರು.

ಹೊಳಲಗುಂದಿ:—

ತಾ 18-7-42ನೇ ಶನಿವಾರ ಬೋರ್ಡಾಫಾಯರ್ ಎಲಿಮೆಂಟರಿ ಸಾರಶಾಲೆಯಲ್ಲಿ ಉಪಾಧ್ಯಾಯರ ಸಂಳದ ಸಮಾವೇಶವು ಆಲೂರು ರೇಂಜಿನ ಡಿಸ್ಟ್ರಿಟ್ ಇನ್ಸ್‌ಪೆಕ್ಟರಾದ ಶ್ರೀ ಶಾಂತವೀರಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿತು. ಸಭೆಗೆ 24 ಮಂದಿ ಉಪಾಧ್ಯಾಯರು ಮಾಜರಾಗಿದ್ದರು ಶ್ರೀ ಪಂಕೋಬರಾಯರು ಇನೇ ತರಗತಿಗೆ ಸಂಬಂಧಾಕಾರದ ವಿಷಯವಾಗಿ ನೂತನಸನ್ನತಿಯಲ್ಲಿ ಬೋಧಿಸಿದರು ಇನ್ಸ್‌ಪೆಕ್ಟರವರು ಮಿಟಿಂಗ್‌ನಲ್ಲಿ ಯುಕ್ತವಾದ ವಿಷಯ ಹೇಳುತ್ತ ಒರ್ಮನರ ಪ್ರಜಾತಂತ್ರವನ್ನು ದುರಿಸುವಂಬಗೆ ಮಾತ್ರ ಯುದ್ಧದ ವಿಷಯವಾಗಿ ಪ್ರತಿಜ್ಞೆ ಯನ್ನೂ ಉಪಾಧ್ಯಾಯರಿಗೆ ಹೇಳಿದರು.

ಬಳ್ಳಾರಿಯಲ್ಲಿ ಕಾಲರಾ

ಮುನಿಸಿಪಾಲಿಟಿಗೆ ಒಂದಿರುವ ವರದಿಗಳ ಪ್ರಕಾರ ಜುಲೈ 1ನೆಯ ತಾ ನಿಂದ 23ರವರೆವಿಗೆ 398 ಜನರಿಗೆ ಕಾಲರಾ ಕಾಣಲಿ 126 ಜನರು ಸತ್ತಿರುವರು 1 .7 42 ನೆಯ ತಾ ನಿಂದ ಇದು ಅಧಿಕವಾಗಿ ನಗರದ ಎಲ್ಲಾ ಭಾಗಗಳಲ್ಲೂ ಹಬ್ಬುತ್ತಲಿದೆ 11ನೆಯ ತಾ. ನಿಂದ 23ರವರೆವಿಗೆ 337 ಜನರಿಗೆ ತಗಲಿ 108 ಜನರು ಸತ್ತಿರುವರು 23ನೆಯ ತಾ. 23 ಜನರಿಗೆ ತಗಲಿ 20 ಜನರು ಸತ್ತಿದ್ದಾರೆ.

ನಿವಾರಣೋಪಾಯಗಳು

ಹಗರಿ ಪಾಟರ ವರ್ಕಸದಲ್ಲಿ ನೀರನ್ನು ಶುದ್ಧಗೊಳಿಸಲಾಗುತ್ತಿದೆ. ಹೊಂಡದಲ್ಲಿ ನೀರನ್ನು ಒದಗಿಸಲು ಮನುಷ್ಯರನ್ನು ನಿಯಮಿಸಲಾಗಿದೆ. ಸಾರ್ವಜನಿಕ ಬಾವಿಗಳನ್ನು ಶುದ್ಧಗೊಳಿಸಲಾಗಿದೆ ಆಸ್ಪತ್ರೆಯಲ್ಲಿ ಕಾಲರಾ ರೋಗಿಗಳಿಗಾಗಿ ಹೆಚ್ಚಿನ ಕೆಡ್‌ಗಳನ್ನು ಮಾಡಿ ಇಬ್ಬರು ಸರ್ಜಿಸಿಸ್ಟೆಂಟ್ ಸರ್ಜನರನ್ನು ನಿಯಮಿಸಲಾಗಿದೆ. 4ಜನಸ್ಯಾನಿಟರಿ ಇನ್ಸ್‌ಪೆಕ್ಟರಲ್ಲಿ 3ಜನ ಕಾಲರಾ ಇನ್ಸ್‌ಪೆಕ್ಟರನ್ನೂ, ಇತರ ಸೇವಕರನ್ನು ಸ್ವಚ್ಛತೆಗಾಗಿ ನಿಯಮಿಸಿದ್ದಾರು ಇನಾಕ್ಯುಲೇಷನ್ ಕಾರ್ಯವು ಎಲ್ಲಾ ಕಡೆಗೆ ನಡೆದಿದ್ದು ಜನಿಯರಿಗೆ 21,493 ಜನರಿಗೆ ಇನಾಕ್ಯುಲೇಷನ್ ಮಾಡಲಾಗಿದೆ 15 ದಿನಗಳವರಿಗೆ ಶಾಲೆ ಸಂಸ್ಥೆ ಹೋಟಲುಗಳನ್ನೆರ ಮುಚ್ಚಿರುತ್ತಾರೆ.

ರಜಾ ಸೂಚನೆ.

—卐—

ತಾ-೪-೪೨ ನವಭಾರತವು ಹೊರಡುವುದಿಲ್ಲ. ೯-೮-೪೨ ಭಾನುವಾರ ಹೊರಡುವುದು.

ವ್ಯವಸ್ಥಾಪಕ

"ತಿಮ್ಮಣ್ಣಿನವರ" ಶಾಶ್ವತ ನಿಧಿ.

"ತಿಂಮಣ್ಣ" ನವರ ಶಾಶ್ವತ ನಿಧಿಯ ಕಾರ್ಯಕಾರಿ ಮಂಡಳಿಯ ಸಭೆಯು ತಾ|| 26-7-42ನೇ ಆದಿತ್ಯವಾರ ಸಾಯಂಕಾಲ 5 ಗಂಟೆಗೆ ಶ್ರೀಯುತ ಕನಕಾಪುರದ ಗುರು ರಾಜರಾಯರ ಮನೆಯಲ್ಲಿ ನೆರವಿರುವದು. ನಿಧಿಯ ಸರ್ವ ಕಾರ್ಯಕರ್ತರು ಬಿಡದೆ ಹಿಗಳು ಹಾಗು ಅಭಿಮಾನಿಗಳು ತಪ್ಪದೆ ಬಂದು ಕಾರ್ಯಕಲಾಪಗಳನ್ನು ಪರಿಶೀಲಿಸಬೇಕಾಗಿ ಬೇಡಿಕೆ.

ತಮ್ಮ

(Sd) ಆರ್. ಎಸ್. ಮೂಲಿಮನಿ

(Sd) ಆರ್. ಬಿ. ಸೆನ

ಕಾರ್ಯದರ್ಶಿಗಳು.

ಜಪಾನರ ಕೈಯ್ಯಲ್ಲಿ ಬ್ರಿಟಿಷ ಕೈದಿಗಳ ಭಜೀತಿ

ನಾವ್ ಆಫೀಸಿನ ನೆಕ್ಸ್‌ಟರಿಗಳಾದ ಪಂಕಾನ ಸ್ಟೀಂಫೀಸರವರು 22ನೆಯ ತಾ ಪಾರ್ಲಿಮೆಂಟಿನಲ್ಲಿ ಒಂದು ಹೇಳಿಕೆ ಕೊಟ್ಟರು ಹಾಂಕಾಂಗವಶವಾನಂತರ ಬ್ರಿಟಿಷ ರನ್ನೆಲೆ ಅತ್ಯಾಚಾರ ನಡೆಸಲಾಯಿತು. ಜಪಾನ ಅಧೀನಸ್ಥಪ್ರದೇಶಗಳಲ್ಲಿ ಮೊದಲಿನಕೆಲಸಿಂಗಳು ಔಷಧೋಪಚಾರಗಳೂ ಕೂಡ ಇಲ್ಲದೆ ಬ್ರಿಟಿಷ್ ಕೈದಿಗಳು ಅವರ್ಣನೀಯ ಕಷ್ಟಗಳನ್ನು ಸಹಿಸಿದರು. ರಕ್ತ ಭೇದಿಯಾರಂಭವಾಗಿತ್ತು. ಅವರಿಗೆ ಅನ್ನ ಸೋಯಾಬೀನ್ ಆಗಾಗ್ಯೆಸ್ವಲ್ಪಮಾಂಸ ಕೊಡುತ್ತಿದ್ದರು. ಈಗ ಸ್ವಲ್ಪ ಸುಧಾರಿಸಿರಬಹುದಾಗಿದೆ. ಸಿಂಗಪುರದಲ್ಲಿ ಹಾಂಗ್‌ಕಾಂಗ್‌ಗಿಂತ ಉತ್ತಮ ಪರಿಸ್ಥಿತಿ ಇದೆ

Visit Royal Cafe
Near Royal Picture Palace
ROYAL is ROYAL

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಒಳ್ಳಾನಕ್ಕೂ, ದೂರವಸ್ತುಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದಂದೆಲ್ಲ ಮಾರುತ್ತೇವೆ ಗ್ಯಾರಂಟಿಯಾವ ಕ್ರಾಕ್ಸ್ ಕನ್ನಡಿಗಳು ನಿಯಮಾವಳಿ ಬೆಲೆಗೆ ಮಾರಲ್ಪಡುತ್ತವೆ ಬಡವರಿಗೂ. ಶ್ರೀಮಂತರಿಗೂ ಅನುಕೂಲಿಸುವ ವಿಧವಿಧಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ ಒಮ್ಮೆಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು

ಹೆಚ್. ಎಸ್. ಅಂಡ್ ಸನ್ಸ್ ಬಳ್ಳಾರಿ

ಮರಳಿನ ಚೀಲಗಳು ಮತ್ತು ಇಟ್ಟಿಗೆ ಗೋಡೆಗಳು

ನಿಮ್ಮ ಪ್ರಾಣಸಂರಕ್ಷಣೆ ಮಾಡಬಹುದು.

ಅವು ನಿಮ್ಮನ್ನು ರಕ್ಷಿಸದಿದ್ದರೆ

ನೀವು ನಮ್ಮಲ್ಲಿ ಜೀವವಿಮೆ ಮಾಡಿಸಿದರೆ ನಾವು ನಿಮ್ಮ ಬಂಧುಗಳನ್ನು ರಕ್ಷಿಸುವೆವು.

ಯುದ್ಧಕಾಲದ ಆಪಾಯವನ್ನು ವೈಸ್ಚಿಯಲ್ಲಿಟ್ಟೂ ಸಹ ಪ್ರತ್ಯೇಕ ತಲ್ಲುವಿಲ್ಲದೆ ನಾಗರೀಕರ ಜೀವವಿಮೆಯನ್ನು ಭದ್ರಗೊಳಿಸಲಾಗಿದೆ.

ಇಲ್ಲಿಯವರಿಗೆ ಸಲ್ಲಿಸಿರುವ ಹಕ್ಕುಗಳ ಹಣ ರು 26,00,00,000
ಜಾರಿಯಲ್ಲಿರುವ ವಿಮಾಪತ್ರಗಳ ಮೊತ್ತ ರು 85,50,00,000
ವಾರ್ಷಿಕ ಆದಾಯ 1941ರಲ್ಲಿ ಸುಮಾರು ರು 5,00,00,000
ನಿಧಿಯ ದ್ರವ್ಯ ಸುಮಾರು ರು 30,00,00,000

ಓರಿಯಂಟಲ್

ಗವರ್ನಮೆಂಟು ಸೆಕ್ಯೂರಿಟಿಲೈಫ್ ಅಶ್ಯೂರೆನ್ಸ್ ಕಂಪನಿ, ಲಿಮಿಟೆಡ್.

ಸ್ಥಾಪನೆ ೧೮೭೪. ಮುಖ್ಯ ಕಛೇರಿ ಬೊಂಬಾಯಿ

ಶಾಖೆ:-

ಓರಿಯಂಟಲ್ ಬಿಲ್ಡಿಂಗ್ಸ್ ಆರ್ಮೀನಿಯನ್ ಬೀದಿ, ಜಿ. ಟಿ. ಮದ್ರಾಸು.

ಇನ್ಸ್ಪೆಕ್ಟರವರ ಆಫೀಸು- **೩೦೨ ರೂಪರ್ಟಸ್ ಗೇಟ್ ಬ್ರಾಸಪೇಟೆ ಬಳ್ಳಾರಿ.**

"ಓರಿಯಂಟಲ್" [1941]

67ನೇ ವಾರ್ಷಿಕ ವರದಿ:— ಕಳೆದ ವರುಷ 816¼ ಲಕ್ಷ ರೂ ಮೊತ್ತದ 37067 ಪಾಲಿಸಿಗಳು ಜನತೆಗೆ ಕೊಡಲ್ಪಟ್ಟವು ಇದು ಕಳೆದ ವರುಷಕ್ಕಿಂತಲೂ ಹೆಚ್ಚಾಗಿದೆ. ಜಪಾನಿಯರು ಪ್ರಬಲ ದ್ವೀಪದ ಮೇಲೆ ದಾಳಿ ನಡಿಸಿದಾಗ ಮತ್ತು ಬರ್ಮಾವನ್ನು ಆಕ್ರಮಿಸುವರೆಂಬ ಭಯವು ಹೆಚ್ಚಿದಾಗ ಅನಿಶ್ಚಿತ ಪರಿಸ್ಥಿತಿಯಲ್ಲಿಯೂ ಕೂಡಾ ಕಂಪೆನಿಯ ಕಾರ್ಯವು ಯಥಾಸ್ಥಿಯಾಗಿ ನಡೆದದ್ದು ಕಂಪೆನಿಯಲ್ಲಿ ಜರಗಿಟ್ಟಿರುವ ವಿಶ್ವಾಸವನ್ನು ವ್ಯಕ್ತ ಪಡಿಸುತ್ತದೆ. ಆವರೇಜ್ ಪಾಲಿಸಿಯ ಮೊತ್ತವು ಕಳೆದ ವರುಷ 2094 ರೂ ಇದ್ದು ಈ ವರುಷ 2202 ರೂ ಆಗಿದೆ. ಪ್ರೀನಿಯಮ್ಸ್ ಆದಾಯವಾದರೂ ಹಿಂದಿನ ವರುಷಕ್ಕಿಂತ ಹನ್ನೊಂದು ಲಕ್ಷ ಹೆಚ್ಚಿಗೆ ಅಂದರೆ 1941 ರಲ್ಲಿ 384 ಲಕ್ಷ ವಾಗಿದೆ ಎಲ್ಲಾ ವಿಧಗಳಲ್ಲಿಯೂ ಕಂಪೆನಿಯು ಪ್ರಗತಿದಾಯಕವಾಗಿ ಮುಂದೆನರಿಯುತ್ತಿದೆ. ಪಾಲಿಸಿಯ ಅವಧಿಯು ಮುಗಿದು ಸಂದಾಯವಾಗ ಬೇಕಾದ ಹಣದ ಪರಿಮಾಣವು ಹೆಚ್ಚುತ್ತಿದೆ. ಸಾವಿನಿಂದ ಉದ್ಭವಿತವಾದ ಹಕ್ಕಿನ ಹಣವು ಹಿಂದಿನ ವರುಷಕ್ಕಿಂತಲೂ 6 ಲಕ್ಷ ಹೆಚ್ಚಿದೆ. ಇದು ಏನೂ ದೊಡ್ಡದಲ್ಲ ಖರ್ಚಿನ ಭಾಗದಲ್ಲಿ 1940 ರಲ್ಲಿ ಶೇಕಡಾ 20.6 ಇದ್ದದ್ದು 1941ರಲ್ಲಿ 19.6ಆಗಿದೆ ಅಧಿಕವಾಗಿ ಹೆಚ್ಚಬೇಕಿರುವ ಕಾರ್ಯನಿಸ್ತಾರದ ಕಾರಣ ಖರ್ಚು ಕಡಿಮೆಯಾಗುವುದು ಸ್ವಾಭಾವಿಕವಾಗಿದೆ ಕಂಪೆನಿಯ ಆಸ್ತಿ ಹಾಸ್ತಿಗಳು 29½ ಕೋಟಿ ರೂಪಾಯಿಗಳಾಗಿವೆ.

ಹಿಂದುಸ್ಥಾನದಲ್ಲಿ ಒಳ್ಳೆಯ ಆರ್ಥಿಕ ಭದ್ರತೆಯುಳ್ಳ ಜೀವ ವಿಮಾ ಕಂಪೆನಿಯು ಇದು ಒಂದೇ ಎಂದು ಧಾರಾಳವಾಗಿ ಹೇಳಬಹುದು. ಜನರು ಹೆಚ್ಚು ಪ್ರೋತ್ಸಾಹ ಕೊಡುವರೆಂದು ಆತಿಸುತ್ತೇವೆ

South Indians for R. I. N.

ದಕ್ಷಿಣ ಭಾರತೀಯರು ನಾವಿಕಾ ದಳವಲ್ಲಿ ಕೀಳಿಲ್ಲ.

ದಕ್ಷಿಣ ಹಿಂದುಸ್ಥಾನದ ಜನರು ಹೆಚ್ಚು ಹೆಚ್ಚಾಗಿ ನಾವಿಕಾದಳಕ್ಕೆ (Royal Indians Navy) ನೇರುತ್ತಿರುವರೆಂದು ಅವರ ಸ್ಥಾನ ಮಾನಗಳು ಭಾರತದ ಇತರ ಭಾಗದವರಿಗಿಂತ ಕೀಳಲ್ಲವೆಂದೂ ಅಧಿಕಾರಿಗಳಿಂದ ಗೊತ್ತಾಗಿದೆ. ಎಲ್ಲಾ ಶಾಖೆಗಳಲ್ಲೂ ಸಂಬಳವು ಬಹ್ಮಿಯಾಗಿವೆ. ಸೀ ಮನ್ ಬ್ರಾಂಚಿನಲ್ಲಿ ಪ್ರಾರಂಭಕ್ಕೇ ಒಬ್ಬ ಹುಡುಗನಿಗೆ ಮಾಸಿಕ 25 ಕೊಡಲಾಗುತ್ತಿದೆ. ಈಗ ಸಾಧಾರಣ ಸೀಮನ್‌ಗೆ 40 ರೂ. ಸಂಬಳವಿದೆ. ಎರಡನೇ ವರ್ಗಕ್ಕೆ 41-1-50 ಲೀಡಿಂಗ್ ಸೀಮನ್‌ಗೆ 60-5-70 ಸಣ್ಣ ಅಧಿಕಾರಿಗೆ 80-5-85 ಈ ಪ್ರಕಾರವಿದೆ. ಚೀಫ್ ಮೆಕಾನಿಕ್‌ನ ಸಂಬಳ 150 ರೂ. ಅದು 180 ವರಿಗೂ ಹೋಗುತ್ತದೆ. ಈ ಪ್ರಕಾರ R. I. N. ದಲ್ಲಿ ಪ್ರಾರಂಭದಿಂದಲೂ ಒಳ್ಳೆಯ ಸಂಬಳ ವಿದ್ದು, ಉಡುಪು, ಒಳ್ಳೆಯ ಊಟ ಸ್ವಚ್ಛವಾದ ವಸತಿ, ಇರಲಿಕ್ಕೆ ಒಳ್ಳೆಯ ಸ್ಥಾನ, ವ್ಯಾಪಾರಗಳಿಗೆ ಒಳ್ಳೆಯ ಪೌಕರ್ಯಗಳುಂಟು, ಭಾರತ ಸಮುದ್ರದಿಂದ ಬೇರೆಕಡೆ ಹೋಗುವುದಾದರೆ ಇನ್ನೂ ಹೆಚ್ಚಿನ ಪೌಕರ್ಯಗಳುಂಟು

ಹಿಂದುಸ್ತಾನ.

ಸ್ವಾತಂತ್ರ್ಯಕ್ಕಿನ ಹಿಂದಿನ ಮಂತ್ರಿಗಳಾದ ಡಾ. ಸುಬ್ಬರಾಯನ್‌ರವರ ಮಕ್ಕಳಾದ ನೇಜರ್ ಕುಮಾರ ಮಂಗಲಂರವರು ಯುದ್ಧ ಕೈದಿಗಳಾಗಿರಬೇಕೆಂದು ಗೊತ್ತಾಗಿದೆ

ಹಿಂದೂಸ್ತಾನದ ಸೈನ್ಯಾಧಿಪತಿಗಳಾದ ಜನರಲ್ ವಾವೆಲರು 17ನೆಯ ತಾ ಬೆಂಗಳೂರಿಗೆ ಬಂದಿದ್ದರೆಂದು ತಿಳಿದುಬಂದಿದೆ. ಅಂದು ಮದ್ರಾಸ್ ಗವರ್ನರರು ಕಡಪಾದಿಂದ ಬೆಂಗಳೂರಿಗೆ ವಿಮಾನದಲ್ಲಿ ಬೆಳಿಸಿದರು.

ಗಾಜಿಪ್, ಹಿಂದೂಸ್ತಾನವಲ್ಲಿ ೧೨ ರಲ್ಲೊಂದು ಭಾಗವಿದ್ದರೂ, ಹಿಂದೂಸ್ತಾನದಿಂದಾದ ಸೈನ್ಯದ ಭರ್ತಿಯಲ್ಲಿ ಸಂಜಾಬಿನವರು ಅರ್ಧಕ್ಕಿಂತಲೂ ಹೆಚ್ಚಿನ ಜನರನ್ನು ಕೊಟ್ಟು ಹಿಂದೂಸ್ತಾನದ ಸಂರಕ್ಷಣೆಗೆ ಸಹಾಯಮಾಡಿದ್ದಾರೆ, ಅಂಥಾ ವೀರರ ಜೀವನ ಮಟ್ಟವು ಸುಧಾರಿಸಬೇಕಾದರೆ ಇಂಡಿಯಾ ಸರಕಾರವು 40 ಕೋಟಿ ರೂ ಗಳವರೆಗೂ ಸಹಾಯಮಾಡಲು ಕೇಳುತ್ತೇವೆ ನನ್ನ ಈ ಬೇಡಿಕೆಯು ನಿರಾಕರಿಸಲ್ಪಡಲಿಕ್ಕಿಲ್ಲ" ಎಂಬುವಾಗಿ ಪಂಜಾಬಿನ ಮುಖ್ಯ ಮಂತ್ರಿಗಳಾದ ಸರ್ ಸಿಕಂದರ ಹಯಾತ್‌ಖಾನ್‌ರವರು ಬೈಲಪ್ಪರದ ಸಭೆಯೊಂದರಲ್ಲಿ ತಿಳಿಸಿದರು

ವೈಸ್ರಾಯ್ ಕೌನ್ಸಿಲ್ ನೂತನ ಸದಸ್ಯರಾದ ಡಾಕ್ಟರ್ ಅಂಬೇಡ್ಕರ್‌ರವರೂ, ಸರ್ ನುಹಮ್ಮದ್ ಉಸ್ಮಾನ್‌ರವರೂ, ಕಳೆದ ವಾರ ಅಧಿಕಾರ ಸೂತ್ರಗಳನ್ನು ವಹಿಸಿದರು.

ನಾವು ಎಂಥಾ ಸಂದರ್ಭದಲ್ಲೂ ರಷ್ಯಾದಲ್ಲೇ ಅಗಲಿ, ಇನ್ನೆಲ್ಲಿಯಾಗಲಿ ವಿಷ ಗಾಳಿಯನ್ನು ಉಪಯೋಗಿಸುವುದಿಲ್ಲವೆಂದು ಜರ್ಮನ ಪೈಕ ನಾಡಿದ ಪ್ರಕಟನೆಯೊಂದು ಹೇಳುತ್ತದೆ.

ಮಹಾತ್ಮಗಾಂಧಿಯವರ ಬಳವಳಿ

ಮಹಾತ್ಮಗಾಂಧಿಯವರು, ಸ್ವರಾಜ್ಯ ಸಂಪಾದನೆಗಾಗಿ ಹೂಡಲಿರುವ ಸಾಮೂಹಿಕ ಸತ್ಯಾಗ್ರಹದ ಬಗ್ಗೆ, ಪರದೇಶಗಳಲ್ಲಿ ಟೀಕೆ ಪ್ರತಿ ಟೀಕೆಗಳು ಹೆಚ್ಚುತ್ತಲಿವೆ. ಇಂಗ್ಲೆಂಡಿಗಿಂತಲೂ ಅಮೆರಿಕಾದಲ್ಲಿ ಈ ವಿಷಯಕ್ಕೆ ಹೆಚ್ಚು ಆಸಕ್ತಿಯು ಪ್ರದರ್ಶಿತವಾಗುತ್ತಲಿದೆ. ಗಾಂಧಿಯು ಭಾರತದ ಪ್ರಜಾವಾದೀ ರಾಷ್ಟ್ರಗಳ ಶತ್ರು, ಗಾಂಧಿಯಾದೋಳನದಿಂದ ಜಪಾನಿನರು ಹಿಂದೊಸ್ತಾನದ ಮೇಲೆ ದಂಡೆಯ್ದಾಗ, ಸೈನ್ಯದ ಹೇಳುತ್ತಲಿವೆ.

ಇದ್ದಿ ಸರಕಾರದ ಸದಸ್ಯರಿಗಿಂತಲೂ ಕೂಡ ಕಾಂಗ್ರೆಸ್ಸಿನ ಯೋಜನೆಯನ್ನು ಟೀಕಿಸುತ್ತಲಿದ್ದಾರೆ. 1921ರಲ್ಲಾದ ಜಳಕಳೆಯು ಮೂವತ್ತು ಇದಕ್ಕೂ ಇರುವದಂತೆ, ಕರಸಿನಾಕರಣೆ, ಬಹಿಷ್ಕಾರ ಸರಕಾರೀ ಕಾಸಗಳ ಉಲ್ಲಂಘನೆ-ಶಾಲೆ-ಕಾಲೇಜುಗಳನ್ನು ಬಹಿಷ್ಕರಿಸುವದು ಇವಲ್ಲದೆ, ಜೈಲುಗಳಲ್ಲೂ ಸತ್ಯಾಗ್ರಹಿಗಳು ಪ್ರತಿಭಟಿಸುವ ಯೋಜನೆ ಇದೆಯೆಂದು, ಮದ್ರಾಸಿನ ಇಂಡಿಯನ್ ಎಕ್ಸ್‌ಪ್ರೆಸ್ ಬರೆದಿದೆ. ಮಧ್ಯಪ್ರಾಂತದ ಟ್ರೇಡ್ ಯೂನಿಯನ್ ಕಾಂಗ್ರೆಸ್ ಅಧ್ಯಕ್ಷರಾದ ರೂಯಿಕರ್‌ರವರು ಗಾಂಧಿಯವರ ಉಧ್ಯಮಕ್ಕೆ ಕೂಲಿಕಾರರ ಬೆಂಬಲ ಕೊಟ್ಟ ದ್ದಾರೆ. ಬೊಂಬಾಯಿಲ್ಲಿ ಆಗಸ್ಟ್ 4ನೇಯ ತಾ. ಕೂಡುವ ವರ್ಕಿಂಗ್ ಕಮಿಟಿ. 7ನೆಯ ತಾ. ಕೂಡುವ ಅಖಿಲಭಾರತ ಕಾಂಗ್ರೆಸ್ ಸಮಿತಿಯ ಕಡೆ ಎಲ್ಲಾ ಜನತೆಯ ದೃಷ್ಟಿ ಇದೆ

ಶ್ರೀ ಗಿರಿಜಾಬಾಯಿಯು ಮಾನ ಸಂರಕ್ಷಣೆ ಮಾಡಿದ ಬಗೆ. ಹಂತಕನನ್ನು ಕೊಂದಳು.

17ನೆಯ ವಯಸ್ಸಿನ ಗಿರಿಜಾಬಾಯಿಯು ಮಂಗಳೂರಿನಲ್ಲಿ ಶ್ರೀನಿವಾಸಕಡಂಬಲಿತಾಯ ಎಂಬವರ ಮನೆಯಲ್ಲಿ ಬಾಡಿಗೆಗೆ ಇದ್ದಳು. 41ವರ್ಷ ವಯಸ್ಸಿನ ಶ್ರೀನಿವಾಸರಿಗೆ ಹೆಂಡತಿ ಇಲ್ಲ. ಕಳೆದ ಫಿಬ್ರವರಿ ತಿಂಗಳು 16ನೆಯ ತಾ ಗಿರಿಜಾಬಾಯಿಯ ಮನೆಯಲ್ಲಿ ಗಂಡಸರಿಲ್ಲದಾಗ ಶ್ರೀನಿವಾಸರು ಬಂದು ಗಿರಿಜಾಬಾಯಿಯ ಸತೀತ್ವ ಭಂಗಮಾಡಲು ಯತ್ನಿಸಿದರು ಆಕೆಯು ಕೂಗಾಡದಂತೆ ಬಾಯಿ ಮುಚ್ಚಲು ಯತ್ನಿಸುವಾಗ ಗಿರಿಜಾಬಾಯಿಯು ಚಾಕುವನ್ನು ತೆಗೆದುಕೊಂಡು ಶ್ರೀನಿವಾಸರನ್ನು ಛಾಯು ಗೊಳಿಸಿದಳು. ಅವನು ತನ್ನ ಮನೆಗೆ ಹೋಗಿ ವರಾಂಡದ ಮೇಲೆ ಮಲಗಿದನು ಮತ್ತೆ ಎಚ್ಚರವಾಗಲೇ ಇಲ್ಲ ಈ ಘಟನೆಯನ್ನು ಕಣ್ಣಾರೆ ನೋಡಿದ ಸಾಕ್ಷಿಗಳು ದೊರೆಯಲಿಲ್ಲ. ಗಿರಿಜೆಯು ಅಪರಾಧಿಯಲ್ಲವೆಂದು ಮೂವರು ಅಸೆಸರರು ಅಭಿಪ್ರಾಯ ಪಟ್ಟರು. ಸೆಷನ್ ಜಡ್ಜರು ಆಕೆಯ ಕೊಪ್ಪಿ ಗಿರಿಜೆಯನ್ನು ಮುಕ್ತಮಾಡಿದರು

ನಮ್ಮನ್ನು ಪಂಚಾಯ್ತಿ ಬೋರ್ಡು ಅಧಿಕಾರಿಗಳವಶಕ್ಕೆ ಒಪ್ಪಿಸಬೇಡಿರಿ ಪ್ರಾಥಮಿಕ ಉಪಾಧ್ಯಾಯರೊಬ್ಬರ ಪ್ರಾರ್ಥನೆ.

ಮದ್ರಾಸ್ ಸರಕಾರವು ವಿಲೇಜ ಪಂಚಾಯ್ತುಗಳನ್ನು ಸಂಘಟಿಸಲು ಸಮಿತಿಯೊಂದನ್ನೆ ನೇಮಿಸಿ, ಅವರು ಸೂಚಿಸಿದ ಸಿಫಾರ್ಸುಗಳನ್ನು ಅಂಗೀಕರಿಸುವದರಲ್ಲಿ ದ್ದಾರೆಂದು 'ನವಭಾರತ' ಪತ್ರಿಕೆಯಿಂದ, ತಿಳಿದುಬಂದಿದೆ. ಸಮಿತಿಯವರ ಸೂಚನೆಗಳಲ್ಲಿ ಒಂದು ಯಾವುದೆಂದರೆ, ಪಂಚಾಯ್ತಿ ಬೋರ್ಡು ಇರುವ ಊರುಗಳಲ್ಲಿ, ಪ್ರಾಥಮಿಕ ಶಾಲೆಗಳನ್ನು ಪಂಚಾಯ್ತಿಬೋರ್ಡಿನ ಅಧಿಕಾರಕ್ಕೆ ಒಪ್ಪಿಸುವುದು. ಈ ಸೂಚನೆಗೆ ಸಮಿತಿಯ ಸದಸ್ಯರೆಲ್ಲಾ ಒಪ್ಪಿದ್ದಾರೆಂತ ಗೊತ್ತಾಗಿದೆ.

ತಾಲೂಕು ಬೋರ್ಡುಗಳ ಕಾಲದ ಘಟನೆಗಳನ್ನು ಊರಿನವರೂ ಮರೆತಿಲ್ಲ. ಸದರಿ ಆಡಳಿತಕ್ಕೊಳಗಾದ ಉಪಾಧ್ಯಾಯರೂ ಮರೆತಿಲ್ಲ ಸಂಬಂಧಿಸಿದ ಅಧಿಕಾರಿಗಳಮನೆಯಲ್ಲಿ ಗುಮಾಸ್ತನಿಗಿಂತಲೂ ಕಡೆಯಾಗಿರುವುದು. ಊರಿನ ವ್ಯವಹಾರಗಳಲ್ಲಿ ಬೋರ್ಡಧಿಕಾರಿಗಳ ಪಕ್ಷಪಾತಿಸುವುದು. ಶಾಲೆಯ ಅಭಿವೃದ್ಧಿಯನ್ನು ಒಂದೆನಿಗಿಟ್ಟು, ಊರಿನ ಇತರ ಕೆಲಸಗಳಲ್ಲಿ ನಿರತರಾಗಿರುವುದು. ಅಪಮಾನ, ಅನ್ಯಾಯಗಳನ್ನು ನಿತ್ಯವೂ ಸಹಿಸುತ್ತಾ, ಸಂಬಳವನ್ನ ಸರಿಯಾಗಿ ಸಡೆಯಿಸಿ, ಮೈಬೆಸಟ್ಟುವ ದಿನಗಳನ್ನು ನಾವು ಮರೆತಿಲ್ಲ. ತಾಲೂಕು ಬೋರ್ಡಗಳನ್ನು ತೆಗೆಯುವಾಗ, ಜಿಲ್ಲಾಬೋರ್ಡಿಗೆ ಎಲ್ಲಾ ಶಾಲೆಗಳನ್ನೂ ಒಪ್ಪಿಸಿದಾಗ, ನಮಗೆ ಒಳ್ಳೆಯ ಶಾಂತಿಯಾಯಿತು. ಸ್ವಲ್ಪ ವಿಸ್ತಾರವಾದ, ರಂಗವನ್ನು ನಮ್ಮನ್ನು ಸೇರಿಸಿದ್ದಕ್ಕೆ ನಾವು ಋಣಿಗಳಾಗಿ ದೇವರಿಗೆ ಕೃತಜ್ಞತಾ ಸ್ತೋತ್ರಕನ್ನಾಗಿ ಪ್ರಾರ್ಥಿಸಿದೆವು.

ನಾವು ಜಿಲ್ಲಾಬೋರ್ಡಿನ ಆಡಳಿತಕ್ಕೆ ಹೋಗಿದ್ದರೂ, ಕೆಲವು ಜಿಲ್ಲಾಬೋರ್ಡು ಸದಸ್ಯರು ಅವರ ನ್ಯಾಯೋಚಿತ ಕಾರಣಗಳಿಗಾಗಿ, ಒಂದೂರಿಂದ ಮತ್ತೊಂದೂರಿಗೆ ನಮ್ಮನ್ನು ವರ್ಗಾಯಿಸುತ್ತಲಿರುವದು, ಜಿಲ್ಲೆಯ ಕೆಲ ಭಾಗಗಳಲ್ಲಿ ಆಗಾಗ್ಗೆ ಕಂಡುಬರುತ್ತಲಿದೆ. ಕಾಂಗ್ರೆಸ್ ಸಾರ್ಟಿಯು ಅಧಿಕಾರದಲ್ಲಿದ್ದರೂ, ಈ ಅನ್ಯಾಯದ ವರ್ಗಾವಣೆಗಳು ನಿಂತಿಲ್ಲ. ಆದರೂ ತಾ|| ಬೋರ್ಡು ಜಿಲ್ಲಾ ಬೋರ್ಡುಗಳ ಆಡಳಿತವನ್ನು ಹೋಲಿಸಿದರೆ, ನಮ್ಮ ಪರಿಸ್ಥಿತಿಯು ಶೇಕಡ 95 ಭಾಗ ಸುಧಾರಿಸಿತ್ತೆಂದು ಹೇಳಬಹುದು.

ಈಗ ನಮ್ಮನ್ನು ತಾಲೂಕು ಬೋರ್ಡುಗಳಿಗಿಂತಲೂ ಕೀಳಾದ ಪಂಚಾಯ್ತಿ ಬೋರ್ಡುಗಳಿಗೆ ಒಪ್ಪಿಸುವಂತೆ. ಬಹುಮಟ್ಟಿಗೆ ಹಳ್ಳಿಗಳಲ್ಲಿ ಪಾರ್ಟಿಗಳಿರುತ್ತವೆ. ಪಂಚಾಯ್ತಿ ಬೋರ್ಡು ಚುನಾವಣೆಗಳಲ್ಲಿ ಹೊಡೆದಾಡಿ, ವಿಶೇಷ ಖರ್ಚು ಮಾಡಿ ಗೆಲಿಯುತ್ತಾರೆ.

ಒಂದು ಪಾರ್ಟಿಯವರ ಪಕ್ಷವಹಿಸಿದಲೆ, ಮತ್ತೊಂದು ಪಕ್ಷದವರ ಅಪ್ರೀತಿಗೊಳಗಾಗಬೇಕಾಗುತ್ತದೆ. ಹೀಗಾಗಿ ಉಪಾಧ್ಯಾಯರು ಶಾಲೆಯ ಕೆಲಸಬಿಟ್ಟು, ಊರಿನ ಸಕಲರನ್ನೂ ಪ್ರೀತಿಗೊಳಿಸುವ ಕಾರ್ಯದಲ್ಲಿ ತೊಡಗಬೇಕಾಗುತ್ತದೆ. ಇನ್ನೊಂದು ದೊಡ್ಡ ಭಯ ವೆಂದರೆ, ಸಂಬಳದ ವಿಚಾರ. ಮಾಸಿಕ ಸಂಬಳವನ್ನು ಬಳಸಿಕೊಳ್ಳಬಹುದು. ಕಂತುಗಳಾಗಿ ಕೊಡಬಹುದು. ಅಥವಾ ಕಡಮೆಯಾಗಿ ಕೊಡಬಹುದು. ಇನ್ನೂ ಈ ಪತ್ರಿಕೆಯಲ್ಲಿ ವರ್ಣಿಸಲಾಗದ ಅನೇಕ ಕೃತ್ಯಗಳು ನಡೆಯಬಹುದು ಗರ್ಲ್ಸ್‌ಸ್ಕೂಲ್‌ಗಳ ಉಪಾಧ್ಯಾಯರನ್ನು ದೇವರೇ ರಕ್ಷಿಸಬೇಕು.

ಈ ಕಾರಣ ಉಪಾಧ್ಯಾಯ ಸಂಘಗಳವರೂ, ತಾಲೂಕು ಉಪಾಧ್ಯಾಯ ಸಂಘಗಳವರೂ ಎಚ್ಚರವಾಗಿ ನಿಷೇಧಪರ ನಿರ್ಣಯಗಳನ್ನು ಮಾಡಿ, ಡೈರೆಕ್ಟರ್‌ರವರಿಗೆ ತಿ. ಇ. ಒರಮೂಲಕ ಕಳುಹಿಸಬೇಕು. ಆಗಸ್ಟ್ 1942ರಲ್ಲಿ ವಿಶೇಷ ಪಂಚಾಯ್ತಿ ಸಮಿತಿಯ ರಿಪೋರ್ಟು ಸರಕಾರಕ್ಕೆ ಕಳುಹಿಸಲ್ಪಡುತ್ತದೆ. ಊರಿನವರ ಸಭೆಗಳನ್ನು ಮಾಡಿ ಸರಕಾರಕ್ಕೆ ನಿಷೇಧಪರ ನಿರ್ಣಯಗಳನ್ನು ಕಳುಹಿಸಬೇಕು ಜಿಲ್ಲಾ ಪ್ರಾಥಮಿಕೋಪಾಧ್ಯಾಯರ ಸಂಘವು ಈ ವ್ಯವಸ್ಥೆಯನ್ನ ಕೂಡಲೇ ತೆಗೆದುಕೊಳ್ಳಬೇಕು ನಾವು ಸುಸ್ಥಿತಿವಂತರೆ, ಮತ್ತೆ ನಾವು ಬೆಳ್ಳಿಯ ಯುಗ (Silver age) ದಿಂದ, ಸ್ವರ್ಣಯುಗಕ್ಕೆ (Golden age) ಹೋಗುವುದರ ಬದಲು, ಉಕ್ಕಿನಯುಗ (Iron age) ದಿಂದ ಅಧೋಗತಿ ಪಾತಾಳಕ್ಕೆ ಹೋಗುತ್ತೇವೆ. ಆಗ ನಮ್ಮನ್ನಾರೂ ವಿಚಾರಿಸುವರಿರುವದಿಲ್ಲ. ಎಚ್ಚರ.

ಉಪಾಧ್ಯಾಯ ಬಂಧು.

ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಸಮಿತಿ.

(ಸಾಧಾರಣ ಸಭೆ.)

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸಾಧಾರಣ ಸಭೆಯು ಧಾರವಾಡದಲ್ಲಿ ತಾ. ೪-೮-೧೯೪೨ ನೆ ಮಂಗಳವಾರ ಸಾಯಂಕಾಲ ೪ ಘಂಟೆಗೆ ಸೇರುವುದು ಸಭೆಯಲ್ಲಿ ಮೊದಲ ಸಭೆಯ ಕಾರ್ಯ ಕಲಾಪ, ಕಾಂಗ್ರೆಸ್ ವರ್ಕಿಂಗ್ ಕಮೀಟಿಯ ಗೊತ್ತುವಳಿಯ ಬಗ್ಗೆ ವಿಚಾರ. ಅಖಿಲಭಾರತ ಕಾಂಗ್ರೆಸ್ ಸಮಿತಿ ಮತ್ತು ಪ್ರಾಂತೀಯ ಕಾರ್ಯಕಾರಿ ಮಂಡಲದ ಸದಸ್ಯರ ತೆರವಾದ ಸ್ಥಳಗಳನ್ನು ತುಂಬುವದು. ಅಧ್ಯಕ್ಷರ ರಾಜೀನಾಮೆಯ ಬಗ್ಗೆ ಆಲೋಚನೆ, ಇತ್ಯಾದಿ ವಿಷಯಗಳನ್ನು ಚರ್ಚಿಸಲಾಗುವುದು ಎಂದು ಕಾರ್ಯದರ್ಶಿಗಳಾದ ಚನ್ನಬಸಪ್ಪ ಅಂಬಲಿಯವರು ತಿಳಿಸ ತ್ತಾರೆ.

ಸದಸ್ಯರನ್ನು ಮಾಡಿರಿ.

ಇದೇ ಆಗಸ್ಟ್ ತಿಂಗಳ ಕೊನೆಯವರೆಗೆ ಕಾಂಗ್ರೆಸ್ ಸದಸ್ಯರನ್ನು ಮಾಡುವ ಅವಧಿಯು ಬೆಳೆಯಿಸಲ್ಪಟ್ಟಿದೆ ಎಲ್ಲಾ ಕಾಂಗ್ರೆಸ್ ಕಮೀಟಿಗಳು ಹಾಗು ಕಾಂಗ್ರೆಸ್ ಕೆಲಸಗಾರರು ಸದಸ್ಯರನ್ನು ಮಾಡುವ ಕಾರ್ಯವನ್ನು ಕೈಕೊಳ್ಳಬೇಕು. ಮುಂಬೆ ಪ್ರಾಂತದಲ್ಲಿ ಪ್ರತಿನಿಧಿ ಹಾಗು ಕಾಂಗ್ರೆಸ್ ಕಮಿಟಿಗಳ ಚುನಾವಣೆಗಳಾಗಲಿರುವುದು. ಪ್ರತಿಯೊಂದು ಮತದಾನ ಸಂಘದಲ್ಲಿ ಕನಿಷ್ಟ ೫೦೦ ಸದಸ್ಯರಾಗಲೇಬೇಕು. ಇಲ್ಲವಾದರೆ ಆ ಮತದಾರ ಸಂಘಕ್ಕೆ ಪ್ರತಿನಿಧಿಯ ಹಕ್ಕು ಇಲ್ಲವೆಂತಾಗುವದೆಂದು ಕೂಡ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಮೌಲಾನಾ ಅಜಾದರು

ಕಾಯಿಲೆಯು ಕಾರಣ ಸಿಂಗಾಪೂರ್ ಶಕ್ತಿ ಹೋಗುವುದಿಲ್ಲ. ಲಾಹೋರಿಗೇ ಸಂಬಂಧಿಸಿದವರನ್ನು ಕರಸಿಕೊಂಡು ಸಿಂಧ ಪ್ರಕರಣವನ್ನು ಬಗೆ ಹರಿಸಿದರು.

ಚೀನಾದೇಶದ ಮುಖ್ಯ ನಾಯಕರಾದ ಜನರಲ್ ಚಿಯಾಂಗ್‌ಕೈ ಶೇಕವರು, ಕರ್ಲ್‌ಮೀ ಎಂಬವರನ್ನು ಹಿಂದೂಸ್ತಾನಕ್ಕೆ ಕಳುಹಿಸಿದ್ದಾರೆ. ಅವರು ಕಾಂಗ್ರೆಸ್ ಅಧ್ಯಕ್ಷರಾದ ಮೌಲಾನಾ ಅಜಾದರೊಡನೆಯು, ನೆಹರೂರೊಡನೆಯೂ, ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಚರ್ಚಿಸಿದರು. ಕಾಂಗ್ರೆಸ್ ವರ್ಕಿಂಗ್ ಸಮಿತಿಯ ನಿರ್ಣಯದ ಫಲಾಫಲಗಳನ್ನು ವಿವೇಚಿಸಿ, ಕಾಂಗ್ರೆಸ್‌ನೊಡನೆ ಒಪ್ಪಂದವು ಸಾಧ್ಯವಿದೆಯೇ ಎಂಬುದನ್ನು ಆಲೋಚಿಸಿದರೆಂದು ಗೊತ್ತಾಗಿದೆ.

ಭಾರತ ಸಮಾಜ ಸಮತಾವಾದ ಪಕ್ಷ.

ಸರಕಾರದ ಬಹಿಷ್ಕಾರವು ದೂರಾಯಿತು.

ಇಂಡಿಯಾ ಸರಕಾರವು ಭಾರತ ಕಮ್ಯೂನಿಸ್ಟ್ ಪಾರ್ಟಿಯಮೇಲೆ ಇದ್ದ ಬಹಿಷ್ಕಾರವನ್ನು ದೂರಮಾಡಿ ಅವರ ಪತ್ರಿಕೆಗಳಾದ 'ನ್ಯೂಏಜ್' ಮತ್ತು ನ್ಯಾಷನಲ್ ಫ್ರಂಟ್ ಗಳನ್ನು ಪುನಃ ಪ್ರಸಿದ್ಧಿಪಡಿಸಬಹುದೆಂದು ಅಪ್ಪಣೆಕೊಟ್ಟಿರುತ್ತಾರೆ ಕಮ್ಯೂನಿಸ್ಟ್ ಪಾರ್ಟಿಯ ಸರಸಾಗಿ ಮುಖಂಡರಾದ ಶೇಕರು ರಷ್ಯಾ ವು ಯುದ್ಧದಲ್ಲಿ ಪ್ರವೇಶಿಸಿದ ಮೇಲೆ ಬ್ರಿಟಿಷ್ ಯುದ್ಧ ಪ್ರಯತ್ನಗಳಿಗೆ ಸಹಕಾರ ಕೊಡುವರೆಂದು ವಾಗ್ದಾನಮಾಡಿದ್ದರು ಈ ವಾಗ್ದಾನವನ್ನು ಸರಕಾರದವರು ಅಂಗೀಕರಿಸಿ, ಕಮ್ಯೂನಿಸ್ಟ್ ಕೈದಿಗಳನ್ನು ಬಂಧಮುಕ್ತರನ್ನಾಗಿ ಮಾಡಿದ್ದಾರು. ಮದ್ರಾಸ್ ಪ್ರಾಂತ್ಯದಲ್ಲೂ ಸಹ ಇಳಿಯವರಿಗೆ 110 ಜನ ಹಿಂಸಾತತ್ವದ ಕೈದಿಗಳನ್ನು ಬಿಟ್ಟಿದ್ದಾರು.

'ಕಾಕೆಸಸ್' ಎಣ್ಣೆಗಾಗಿ ಜರ್ಮನರ ಯುದ್ಧ

ಜರ್ಮನ ಸೈನ್ಯಗಳು ರೊಸ್ಟವನಗರವ ಉತ್ತರಕ್ಕೆ 20 ಮೈಲಿದೂರದಲ್ಲಿರುವವೆಂದೂ ಘೋರಯುದ್ಧವು ಸಾಗಿರುವದೆಂದೂ ಮಾಸ್ಕೋ ರೇಡಿಯೋ ತಿಳಿಸುತ್ತದೆ. ಮತ್ತೊಂದು ಸುದ್ದಿಯ ಪ್ರಕಾರ ಜರ್ಮನರ ವಿಮಾನ ಪಾಯಿಂದ ರೊಸ್ಟವನಗರವು ಶುರಿಯುತ್ತಲಿದೆಯಂತೆ.

ಸೋವಿಯೆಟ್ ಭಾಗದಲ್ಲಿರ ಜರ್ಮನರು ಹಿಂಬೆಗೆಯುತ್ತಿರುವರೆಂದು ಪ್ರಕಟವಾಗಿದೆ.

ಆಫ್ರಿಕಾದಲ್ಲಿ ಬ್ರಿಟಿಷಸೇನಾಧಿಪತಿಗಳಾದ ಅಚಿಸಲಕರವರು ಹೇಳುತ್ತ ಪ್ರಕಾರ ಈಜಿಪ್ತಿಯ ಸೈನಿಕರು ಕಲತನದಿಂದ ಹೋರಾಡುತ್ತಿರುವರು.

ಮಿಶ್ರ ಪಡಗುಗಳ ನಾಶವು ಅತ್ಯಧಿಕ.

ಅಮೆರಿಕಾದ ಯುದ್ಧ ಖಾತೆಯ ಅಧಿಕಾರಿಗಳ ಹೇಳಿಕೆಯ ಪ್ರಕಾರ ಜುಲೈ 12 ರಿಂದ 19ರವರಿಗೆ ಶತ್ರು ಕಾರ್ಯದಿಂದ ಅತ್ಯಧಿಕ ಹಡಗುಗಳು ನಾಶವಾಗಿವೆ. ಈ ಸಂಖ್ಯೆಯು ಯುದ್ಧಾರಂಭವಾದ ಮೇಲೆ ಬಹಳ ಹೆಚ್ಚಿನದಾಗಿದೆ.

ಇನ್ನುಮೇಲೆ ಹೊರಗೆ ಕಳುಹಿಸುವ ಮತ್ತು ತರಿಸುವ ಸಾಮಾನುಗಳು ಯುದ್ಧಕ್ಕೆ ಸಂಬಂಧಿಸಿರಲೇಬೇಕೆಂದು ನಿಶ್ಚಯಿಸಿರುತ್ತಾರೆ.

ಹಿಟ್ಲರರ ಡೆಪ್ಯೂಟಿಯವರಾದ ಹರ್. ಹೆಸ್. ರವರು ಇಂಗ್ಲೆಂಡಿನಲ್ಲಿಬಂದಿಳಿದದ್ದು ಸಂಧಿಯನ್ನು ಮಾಡಿಸಲಿಕ್ಕಾಗಿ ಎಂದೂ, ಆದರೆ ಅವರ ಸೂಚನೆಯು ವ್ಯರ್ಥವಾಯಿತೆಂದೂ ಮೆಸ್ಸರ್ಸ್‌ಕಾದ ಮಂತ್ರಿಗಳೊಬ್ಬರು ಹೇಳಿದರು.

ರಶಿಯಾದ ದೊಡ್ಡ ಕೈಗಾರಿಕೆಗಳು ಪ್ರತ್ಯಕ್ಷ ಅಪ್ರತ್ಯಕ್ಷರೂಪವಾಗಿ ಶತ್ರುಗಳಿಂದ ನಾಶವಾಗುತ್ತಿರುವ ಅಪಾಯವನ್ನು ಲಕ್ಷಿಸಿ, ರಷ್ಯಾಕ್ಕೆ ಹೆಚ್ಚಿನ ಸಹಾಯವನ್ನು ಒದಗಿಸಲು ಟೈಮ್ಸ್ ಪತ್ರಿಕೆಯು ಬ್ರಿಟಿಷ್ ಸರಕಾರವನ್ನು ಬೇಡಿತ್ತೆ.

ರಶಿಯಾದಲ್ಲಿ:— ಮಾರ್ಷಲ್ ಟಿಮೊಶಂಕೋವರವ ಸೈನ್ಯಗಳು ಸುತ್ತಲ್ಪಡುವ ಬೆದರನ್ನು ತಪ್ಪಿಸಿಕೊಂಡು ಹಿಂಭಾಗಕ್ಕೆ ಸರಿಯಬೆಯೆಂಬುದೂ, ರೊಸ್ಟವ್ ಮತ್ತು ಸ್ಟಾಲಿನ್ ಗ್ರಾಡಿಗೆ ಅಪಾಯವು ಹೆಚ್ಚುತ್ತಲಿವೆಯೆಂದೂ, ಗೊತ್ತಾಗಿದೆ

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಒಸಡಿನ ಫನವಲ್ಲಿಗಳು ೦—೪—೦
ಕೆಲವು ಸಲೀಲಾವಸಪತ್ತುಗಳು ೦—೯—೦
ವಿಜಾನಂದ ಬೋಧೆ ೦—೮—೦
ಸಾಮು ೦—೧—೬
ಅಂಚೆ ಪೆಟ್ಟಿ ಬೇರೆ ಪುಸ್ತಕ ವ್ಯಾಪಾರಗಳಿಗೆ ಸೇರಿದ್ದಲ್ಲಿ ಕೊಳ್ಳುವರಿಗೂ ಧಾರವಾಡ ಕಮೀಶನ್

ಕಾಲೇಜ ಸುಬ್ಬಣ್ಣ, ಮುಚ್ಚಂಟು,
ಬಳ್ಳಾರಿ.

ಬಳ್ಳಾರಿ ಪೇಟೆ ಧಾರಣೆ

24-7-42 ಶುಕ್ರವಾರ

ಭಂಗಾರ ತೊಲ 1ಕ್ಕೆ	51-0-0
ಸಾವರಿನ್	39-2-0
ಬೆಳ್ಳಿ 100 ತೊಲ ರೂ.	83 0 0
ಅರಳೆ ಮುಂಗಾರಿ 12 ಮಣಕ್ಕೆ	80-0-0
ಜಾಳೆ ಸಾರಂ ...	130-0-0
ಅಕ್ಕಿ 1 ರೂ ಗೆ	4 ರಿಂದ 5 ಸೇರು
ಬೇಳೆ ,,	3½ ,,
ಗೋಧಿ ,,	3½ ,,
ಜೋಳ ,,	10½ ,,
ನವಣೆ ,,	15 ,,
ಸಜ್ಜೆ ,,	9 ,,
ನೆಲಗಡಲೆ	1-11-0
ಸಕ್ಕರೆ ಬೀಸ	0-9-0
ಬೆಲ್ಲ	20 ರೂ.
ಚಿಮ್ಮಿ ಎಣ್ಣೆ	4-12-0

ಮಾ॥ ಗಾಂಧಿಯವರ ಲೇಖನಗಳು.

2ನೇ ಪುಟದಿಂದ ಬಂದದ್ದು

ಜನತೆಯ ಕಡೆಗೆ ಇದೆ. ಮತ್ತು ಟಿಂಪಲ್ ಚರ್ಚಿನ ಮೇಲೆ ಬಾಂಬು ಬಿದ್ದಿತೆಂದು ಸುದ್ದಿ ಕೇಳಿದ ಕೂಡಲೆ ನಾನು ರಕ್ತ ಸುರಿಸಿದೆನು. ವೆಸ್ಟ್‌ಮಿನಿಸ್ಟರ್ ಅಬೆ ಮತ್ತು ಉಳಿದ ಪ್ರಾಚೀನ ಕಟ್ಟಡಗಳ ಮೇಲೆ ಬಾಂಬು ಬಿದ್ದಿದೆಯೆಂದು ಕೇಳಿದ ಮೇಲೆ ನನ್ನ ಅಂತಃಕರಣವು ಕರಗಿ ನೀರಾಯಿತು " ಎಂದು ಗಾಂಧೀಜಿಯವರು ಹೇಳಿದರು.

" ಮಾಗಿದ್ದರ ಒರ್ಮನ್ ಸ್ನೇಹಿತರನ್ನು ನಾವು ಗೌರವಿಸುವ ರೀತಿಗೆ ಪ್ರತಿಯಾಗಿ ನೀವು ನಿಮ್ಮ ಜನತೆಯನ್ನು ಪ್ರೋತ್ಸಾಹಿಸಲು ಮಾಡಿದ್ದು ಬಾಣಂತನದ್ದಾಗುವಂತೆ ನಿಮಗನಿಸುತ್ತಿಲ್ಲವೆ ? " ಎಂದರು ಮಹಾತ್ಮರು.

"ಇಷ್ಟು ಏಕೆಂದರೆ ನಮ್ಮ ಸಹಾಯ ನಿಮ್ಮಿಬ್ಬರಿಗೆ ನೀವು ಜರ್ಮನ್ನರ ಇತಿಶ್ರೀ ಮಾಡಿ ಸಲ್ಲಾರಿ ನಾವು ಸ್ವತಂತ್ರರಾದರೆ ನಮ್ಮ ವ್ಯವಸ್ಥೆಯಿಂದ ನಿಮಗೆ ನೂರಕ್ಕೆ ನೂರರಷ್ಟು ಮಟ್ಟಿಗೆ ಸಹಾಯ ಮಾಡಬಲ್ಲೆವು. ಇಂಥ ತೀರ ಸಣ್ಣ ಮಾತು ನಿಮಗೆ ಹೊಳೆಯದಿದ್ದದ್ದು, ನಿಜವಾಗಿಯೂ ಆಶ್ಚರ್ಯಕರವಾದ ಸಂಗತಿಯು ಬ್ರಿಟ್ಸ್‌ರಿಗೆ ಸ್ವತಂತ್ರ ಹಿಂದುಸ್ತಾನದಿಂದ ಯಾವ ಸಹಾಯವೂ ಸಿಕ್ಕುತ್ತಿರುವುದಿಲ್ಲ ನಾಳೆಯ ದಿವಸ ಹಿಂದುಸ್ತಾನವು ಸ್ವತಂತ್ರವಾದ ಕೂಡಲೆ ಅದಕ್ಕೆ ನೈತಿಕ ಬಲದ ಬಂಬಲ ಸಿಕ್ಕುವದು, ಮತ್ತು ಸ್ವತಂತ್ರ ರಾಷ್ಟ್ರದಲ್ಲಿ ಒಳ್ಳೆ ಬಲಿಷ್ಠ ಮಿತ್ರ ರಾಷ್ಟ್ರವಾಗಿ ಪರಿಣಮಿಸುವದು. ಬಲಿಷ್ಠ ಎಂದರೆ ನೈತಿಕ ದೃಷ್ಟಿಯಿಂದ ಬಲಿಷ್ಠವಾಗುವದು. ಇದರಿಂದ ಇಂಗ್ಲಂಡಿನ ಶಕ್ತಿ ನಾವು ಧೈರ್ಯ ಬಯಸಿ ಮಟ್ಟಿಗೆ ಹೆಚ್ಚುವದು ಈ ಮಾತು ಸ್ಪಷ್ಟವಿದ್ದಂತೆ ದುದು "

ಚೀನದ ಅಪಾಯಕಾರಕ ಪರಿಸ್ಥಿತಿ

ನವದೆಹಲಿ ೨೪-೭ ೪೨

"ಚೈನೀಯರು ಎಷ್ಟು ಪ್ರತಿಭಟಿಸಿದರೂ ಜೆಕಿಯಾಂಗ್ ಪ್ರಾಂತ್ಯದಲ್ಲಿ ಜಪಾನರ ಮುನ್ನಡೆಯು ಸಾಗಿದೆ ಅದು ದಕ್ಷಿಣದ ಫುಕಿನದಕಡೆಗೆ ಧಾವಿಸಿದೆಯೆಂದೆ ವೆ ಯೊ ಬಳಿ ದೊಡ್ಡ ಸೈನ್ಯವನ್ನಿಳಿಸಿ, ಫುಟೊಂಡ್ವೀ ಸವನ್ನು ಆಕ್ರಮಿಸಲು ಯತ್ನಗಳುಸಾಗಿವೆ ಚೈನೀಯರ ಅಭಿಪ್ರಾಯದಲ್ಲಿ ಇನ್ನುಳಿದಿರುವ ನೆಂಟೊ - ಮತ್ತು ಪೂಟೊ ಎಂಬ ಎರಡು ಬಂದರುಗಳು ಜಪಾನಿಗೆ ಸೇರಿದನೆಂದರೆ, ಚೀನದ ಆಟವು ಮುಗಿದಂತೆಯೇ.

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ:— ಬಳ್ಳಾರಿ.

ಒಟ್ಟು ವ್ಯವಹಾರದ ಮೊತ್ತ.

31—10—40	31—5—42.
ರು. 1,14,774 0 0	ರು 2,41,525-0-0

ನಮ್ಮಲ್ಲಿ ಸರ್ವ ವಿಧವಾದ ಬ್ಯಾಂಕಿಂಗ್ ವ್ಯವಹಾರವು ನಡೆಯುತ್ತದೆ. ಹಿಂದೂದೇಶದ ಯಾವ ಭಾಗದಲ್ಲಾದರೂ ನಿಮಗೆ ವ್ಯಾಪಾರೀ ಸೌಕರ್ಯವನ್ನೊದಗಿಸಿಕೊಡುತ್ತೇವೆ. ಭಂಗಾರ ಮತ್ತು ಇತರ ಉಪಯುಕ್ತ ಮಾಲಿನ ಮೇಲೆ ಅಲ್ಪದರದ ಬಡ್ಡಿಯಿಂದ ಸಾಲವು ದೊರೆಯುತ್ತದೆ. ಸಮಕ್ಷಮ ಬಂದು ಎಲ್ಲಾ ತಿಳಿದುಕೊಳ್ಳಿರಿ.

ಶಾಖೆಗಳು—

ತಿಮ್ಮನಚರ್ಲ 2 ಕೊಟ್ಟೂರು. 3ಉರವಕೊಂಡ 4 ಪತ್ತಿಕೊಂಡ

ಹೆಚ್. ಶೀತಾರಾಮರೆಡ್ಡಿ,, ಬಿ ಎ ಬಿ. ಎಲ್ (ಎಂ ಎಲ್. ಎ.)
ಡೈರೆಕ್ಟರುಗಳಬೋರ್ಡು ಅಧ್ಯಕ್ಷರು

ಬಿ. ವಿ. ಶೇಷಗಿರಿರಾವ್, ಬಿ ಕಾಂ. ಕಾರ್ಯದರ್ಶಿ.

ಅಚ್ಚಿನ ರಾಷ್ಟ್ರಗಳಾದ ಜರ್ಮನಿ ಮತ್ತು ಜಪಾನಿನ ಯೋಜನೆಗಳು ಆಶ್ಚರ್ಯಕರವಾದ ರೀತಿಯಲ್ಲಿ ಒಂದೇಸರನಾಗಿವೆ. ಬ್ರಿಟ್ ಅಮೆರಿಕಾಗಳು ಒಲಗೊಂಡು ಜರ್ಮನಿಯ ಮೇಲೆ ದಾಳಿನಡೆಸುವದಕ್ಕಿಂತ ಪೂರ್ವನೇ ಜರ್ಮನಿಯು ರಷ್ಯಾವನ್ನು ಮುಗಿಸಲು ನಡೆದಿರುವಂತೆ, ಜಪಾನಾದರೂ ಚೀನವನ್ನು ಮುಗಿಸಲು ಸರ್ವ ವಿಧಸಿದ್ಧತೆಗಳನ್ನು ಮಾಡುತ್ತಲಿನೆ. ಆಸ್ಟ್ರೇಲಿಯದ ಕಡೆಯಿಂದ ಮಿತ್ರಪಕ್ಷದವರು ದಾಳಿಮಾಡಿದಾಗ ಹಿಂಬಾಗಿನಿಂದ ಚೀನವು ಆಕ್ರಮಿಸಿದರೆ, ತನ್ನಗತಿಯೇನಾಗುವುದೆಂಬುದನ್ನರಿತೇ, ಜಪಾನವು ಇಡೀ ಚೀನಾದೇಶವನ್ನಾಕ್ರಮಿಸಲು ಇಷ್ಟು ಅತುರತೆಯನ್ನು ವ್ಯಕ್ತಪಡಿಸುತ್ತಲಿದೆ

ಪೆಸಿಫಿಕ್ ಸಾಗರದಲ್ಲಿ ಬ್ರಿಟಿಷ್ ಮತ್ತು ಡಚ್ ದ್ವೀಪಗಳನ್ನಾಕ್ರಮಿಸಿದ ಕಾರಣ, ಜಪಾನಿಗೆ ಕಚ್ಚಾ ಸಾಮಗ್ರಿಗಳ ಕೊರತೆಯಂತೂ ದೂರವಾಗಿದೆ ಬರ್ಮ, ಸಯಾಮ್, ಮಲಯ, ನೆದರ್‌ಲ್ಯಾಂಡ್ಸ್ ಈಸ್ಟ್ ಇಂಡೀಸ್ ಗಳಿಗಿನ ತನ್ನಸ್ಥಾನ ಮಾನಗಳನ್ನು ಭದ್ರಪಡಿಸಿಕೊಂಡು ಮಿತ್ರಪಕ್ಷದವರಲ್ಲಿ ಒಡಕುಂಟುಮಾಡಿ, ಅಮೆರಿಕಾವನ್ನು ಜೇಪಡಿಸಲು ಸನ್ನಾಹನಡೆಸಿದುವಂತೆ ತೋರುತ್ತದೆ. ಅಥವಾ - ಕೆಲಕಾಲ ಸುಮ್ಮನಿದ್ದು ಯುದ್ಧದ ತಯಾರಿಯನ್ನು ಸಡಿಲಿಸಬಹುದು ಜರ್ಮನಿಯಂತೆ ಜಪಾನಿನ ಅಕ್ಷೋತ್ಪರಗಳು ಗಾವರೂ ಎಲ್ಲೆಯಿಲ್ಲ

ಚೀನದಲ್ಲಿ ಜಪಾನರು ಮುಂದುವರಿಯುತ್ತಿರುವ ಅಪಾಯವನ್ನು ಮಿತ್ರರು ಉದಾಸೀನಮಾಡುವಂತಿಲ್ಲ. ಮಿತ್ರಪಕ್ಷದವರು ಬರ್ಮಾರನ್ನೆ, ಒರ್ಮಾದೇಶಗಳನ್ನು ಕಳೆದುಕೊಂಡದ್ದು, ಚೈನೀಯರ ಎದೆ ಒಡೆದಂತಾಗಿದೆ ಈ ನೈತಿಕ ನಷ್ಟವು ಸಾಮಾನು ಬರುವ ಮಾರ್ಗವನ್ನು ಕಳೆದುಕೊಂಡದ್ದಕ್ಕಿಂತಲೂ ಅಧಿಕವಾಗಿದೆ ಚೀನವಲ್ಲಿ ಜಪಾನರು ಆಶಿಸಿದಷ್ಟು ಜಯಸ್ಸಿದಗಿದರೆ, ಮಿತ್ರಪಕ್ಷದವರಿಗೆ ಮುಖ್ಯ ಕೇಂದ್ರಗಳಲ್ಲದಂತಾಗಿ ಮಿತ್ರರ ಜಯವು ಕಠಿಣ ವಾಗುತ್ತದೆ

ಎಮ್ಮಿಗನೂರು

ಕ್ಷಾಮ ನಿವಾರಣಾ ಸಮಿತಿಯು ಶ್ರೀ ಸೋಮಪ್ಪನವರ ಅಧ್ಯಕ್ಷತೆಯಲ್ಲಿ ಕೂಡಿ, ಈಭಾಗದಲ್ಲಿ ಕೆಲಸಮಾಡುತ್ತಿರುವ ನೆಯ್ತಾರರ ಕೂಲಿಯನ್ನು ಹೆಚ್ಚಿಸಿ, ಗಂಡಸರಿಗೂ ಹೆಂಗಸರಿಗೂ ಒಟ್ಟಿಗೆಲ್ಲವನ್ನು ಕೊಳ್ಳಲು ಸರಕಾರವು ಸಹಾಯಮಾಡಬೇಕೆಂದು ತೀರ್ಮಾನಿಸಿತು.

ನವ ಭಾರತಕ್ಕೆ ಚಂದಾದಾರರಾಗಿರಿ!

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ: 1897.

45 ನೇ ವಾರ್ಷಿಕ ವರದಿಯ ಕೆಲವು ಮುಖ್ಯ ಅಂಶಗಳು

ಒಟ್ಟು ಆದಾಯ	ರೂ.	85,61,000 ಮೀರಿದೆ
ಚಾಲ್ತಿಯಲ್ಲಿರುವ ವಿಮಾ ಪಾಲಿಸಿಗಳು	ರೂ.	14,84,44,000 ,,
ಆಸ್ತಿ	ರೂ.	5,80,86,000 ,,

ಕಂಪೆನಿ ಸ್ಥಾರಂಭವಾದ ಲಾಗಾಯ್ತು ಪಾವತಿ ಮಾಡಿರುವ ಕ್ಲೈಂಗಳು ರೂ. 7,48,66,000 ,,

ಏಜೆನ್ಸಿಗಳಿಗೆ ದರಖಾಸ್ತುಗಳನ್ನು ಕಳುಹಿಸುವುದು.

ಮುಖ್ಯ ಕಛೇರಿ:
ಎಂಪೈರ್ ಆಫ್ ಇಂಡಿಯಾಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬೆಂಗಳೂರು ಬ್ರಾಂಚ್:
ಡಿಸ್ಟ್ರಿಕ್ಟ್‌ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರಿಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ನೂಡಿದ ಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ನೆಸ್ಟ್ ಎಂಡ್ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ಜೋಕೆಯಾತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು,
- ಮಾತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ?

ಹಣಾದರೆ ಕೂಡಲೇ ಕಳಗಿನವರಲ್ಲಿ ವಿವರಗಳನ್ನು ತಿಂಯರಿ

ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು. ಪರೀಕ್ಷೆಯ ಪಾಸು ಪತ್ರಿಕೆಗಳು ಕಛೇರಿ ಕಾರಂಬರಿ ನೌಕರಿ ಹೊರಿಯುವುದಲ್ಲಿ ನಮಗೆ ಎಲ್ಲಾ ವಿಧವಾದ ಮಾಹಿತಿಯೂ, ಪ್ರಚಿತವಾಗಿ ಹೇಳಲಾಗುವುದು

ಟಿ. ಬಿ. ಕೇಶವರಾವ್.
ಕೃಷ್ಣ ಮಾಚಾರಿ ಕಾಂಪೌಂಡು, ಬಳ್ಳಾರಿ

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription	
Annual	
Local	2—0—0
Moffusil	3—0—0
6 Months	
Local	1—4—0
Moffusil	2—0—0

ಚಂದಾ ವಿವರ	
ವರ್ಷಕ್ಕೆ	
ಬಳ್ಳಾರಿಯವರಿಗೆ	2-0-0
ಹೊರಗಿನವರಿಗೆ	3-0-0
೬ ತಿಂಗಳಿಗೆ	
ಬಳ್ಳಾರಿಯವರಿಗೆ	1-4 0
ಹೊರಗಿನವರಿಗೆ	2-0 0

Nava Bharat, Bellary.

REG. No. M. 3937.

Sri_____

Printed at Vittal Press, Car Street Edited & Published by T. B. Keshava Rao, Bellary

Reg M. No. 3937

'ವಂದೇ ಮಾತರಂ'

ನವಭಾರತ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯ ವರಾನ್ನಿಬೋಧತ.

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—

ಸಂಚಿಕೆ ೪೪ ಬಳ್ಳಾರಿ ಆಗಸ್ಟ್ ೯ ನೇ ಭಾನುವಾರ ೧೯೪೨. ಟಿ. ಬಿ. ಕೇಶವರಾವ್

ಹರಿಜನ ಪತ್ರಿಕೆಯಲ್ಲಿ

ಮಹಾತ್ಮ ಗಾಂಧಿಯವರ ಲೇಖನಗಳು.

ವಿಚಾರ ಮಾಡಲು ವಿನಂತಿ

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮಾಡಿದ ಸಾಮೂಹಿಕ ಚಳುವಳಿಯ ತೀರ್ಮಾನಕ್ಕೆ ಇಂಗ್ಲೆಂದು, ಅಮೆರಿಕಾಗಳು ರೋಷದ ಸ್ವಾಗತ ನೀಡಿವೆ. ಆ ದ್ವೇಷದ ಮೇಳಕ್ಕಾಗಿ. ಸೂಚ್ಯವಾಗಿಯೋ ಸ್ಪಷ್ಟವಾಗಿಯೋ ಕಾಂಗ್ರೆಸ್ಸಿಗೆ ಅವರು ತೋರಿದ ಬೆವರಿಕೆಗಾಗಲಿ ಕಾಂಗ್ರೆಸ್ಸು ತನ್ನ ದಾರಿತನು ಬಿಡದು. ವಿರೋಧ, ದಮನ ಪ್ರಯತ್ನದಿಂದ ಇದುವರೆಗೆ ಅದು ಅಭಿವೃದ್ಧಿಗೊಂಡಿದೆ. ಈಗಲೂ ಅಷ್ಟೆ, ಬೇರೆ ತೆರನಾಗಲಾರದು ಅನೆಂಕಾ, ಬ್ರಿಟನ್ನುಗಳಲ್ಲಿ ಕಾಣುವ ಈ ಉನ್ಮತ್ತ ಪ್ರಲಾಪ ಬರಲಿರುವ ದಬ್ಬಾಳಿಕೆಯ ಮುನ್ಸೂಚನೆ. ಇದರಿಂದ ಜನ ಒಂದು ಗಳಿಗೆ ಬೆದರಬಹುದು. ಆನೆರೆ ಒಮ್ಮೆ ಹತ್ತಿದ ಡಂಗೆಯ ದಳ್ಳುರಿಯನ್ನು ಎಂದಿಗೂ ಅದು ಆರಿಸಲಾರದು.

ಪೈಲಿ ಹೆರಾಲ್ಡ್ ಕೂಲಿಗಾರ ಪಕ್ಷವೂ ಉಳಿದೆಲ್ಲ ಟೀಕಾಕಾರರನ್ನು ಮಿಂಚಿಸಿದಾರೆ ಉತ್ಪ್ರೇಕ್ಷೆಯಲ್ಲಿ, ಒಯ್ಗಳಲ್ಲಿ, ಕಾಂಗ್ರೆಸ್ಸಿನ ಬೇಡಿಕೆಯನ್ನು ಅಧ್ಯಮಾಡಿಕೊಳ್ಳಲು ಅವರು ಪ್ರಯಾಸಪಟ್ಟಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು.

ಬ್ರಿಟಿಷರ ಅಧಿಕಾರ ಕೊನೆಗಾಣಲಿಂಬ ಬೇಡಿಕೆ ಅನ್ಯಾಯವೆಂಮ ಯಾರೂ ಹೇಳಿಲ್ಲ. ಎಲ್ಲರ ಖಂಡನೆಗೂ ಗುರಿಯಾಗಿರುವುದು ಅದನ್ನು ಸಲ್ಲಿಸಿರೆಂದು ಕೇಳಿದ ಸಂದರ್ಭ. ಈ ಸಂದರ್ಭವನ್ನೆ ಯಾಕೆ ಆರಿಸಿತೋ, ವರ್ಕಿಂಗ್ ಕಮಿಟಿಯ ತೀರ್ಮಾನದಲ್ಲೆ ಅಂಗೈನೆಲ್ಲಿಕಾಯಂತೆ ಸ್ಪಷ್ಟವಾಗಿ ಹೇಳಿದೆ. ಅದನ್ನೆ ವಿವರಿಸುತ್ತೇನೆ ಇಲ್ಲಿ. ಯುದ್ಧದಲ್ಲಿ ಹಿಂದುಸ್ತಾನ ಪರಿಣಾಮಕಾರಿಯಾದ ಕೆಲಸವನ್ನೇನೂ ಮಾಡುತ್ತಿಲ್ಲ. ಹೀಗಾಯಿತಲ್ಲ ಎಂದು ನಮ್ಮಲ್ಲಿ ಕೆಲವರಿಗೆ ನಾಚಿಕೆಯಾಗುತ್ತಿದೆ. ಇಷ್ಟೇ ಅಲ್ಲ; ಪರಾಧೀನರಲ್ಲದೆ ಸ್ವತಂತ್ರರಾಗಿದ್ದರೆ ಈ ಜಗತ್ ಯುದ್ಧದಲ್ಲಿ ನಾವೂ ಯೋಗ್ಯ ಪಾತ್ರ, ಏಕೆ ಧೃಡವಾದ ಪಾತ್ರ ವಹಿಸಬಹುದಾಗಿತ್ತು ಅನಿಸುತ್ತದೆ. ಈ ಯುದ್ಧ ಇನ್ನೂ ಪರಮಾವಧಿ ಮುಟ್ಟಬೇಕಾಗಿದೆ. ಈ ಕೂಡಲೆ ಭಾರತ ಸ್ವತಂತ್ರವಾಗದಿದ್ದರೆ ಒಳಗೆ ಹುದುಗಿರುವ ಅಸಮಾಧಾನವೆಲ್ಲ. ಜಪಾನೀ ಜನವೇನಾದರೂ ಇಲ್ಲಿ ಕಾಲ್ಗಿಟ್ಟರೆ ಅವರಿಗೆ ಸ್ವಾಗತವಾಗಿ ಪರಿಣಮಿಸೀತೆಂದು ನಮಗೆ ಗೊತ್ತಿದೆ. ಅಂಥ ಪ್ರಸಂಗ ಸಡಿದರೆ ಅತ್ಯಂತ ಘೋರ ವಿಪತ್ತು ಬಂದಂತೆ ಎಂದು ನಮಗನಿಸುತ್ತದೆ. ಭಾರತಕ್ಕೆ ಸ್ವಾತಂತ್ರ್ಯಮೊರೆತಕ್ಕೆ, ಈ ವಿಪತ್ತನ್ನು ತಪ್ಪಿಸಬಹುದು. ಸರಳವಾದ, ಸಹಜವಾದ, ಪ್ರಮಾಣಿಕತನದ ಮಾತು ಇದು. ಇದನ್ನು ನಂಬದಿದ್ದರೆ ಅಸರ್ಥಕ್ಕೆ ಆಹ್ವಾನ ವಿತ್ತಂತೆ

'ತಾವು ಹೊರಟು ಹೋಗುವಾಗ ಬೀಗದ ಕೈ ಯಾರ ಕೈಗೆ ಕೊಡಬೇಕು ಬ್ರಿಟಿಷರು?' ಎನ್ನುತ್ತಾರೆ ಟೀಕಾಕಾರರು. ಚರ್ಚೋ ಸ್ರೈಲ್ಸನು ರಾಷ್ಟ್ರಪತಿ ಮೌಲಾನಾ ಅಬುಲ್ ಕಲಾಮ್ ಆಜಾದ್ ಹೀಗೆ ಹೇಳಿದ್ದಾರೆ:

"ಪ್ರಥಮತಃ ಕಾಂಗ್ರೆಸ್ಸಿಗೆ ಪ್ರಜಾಸ್ವಾಮ್ಯ ರಾಷ್ಟ್ರಗಳಲ್ಲಿ ಸಾನುಭೂತಿಯಿದೆ. ಎರಡನೆಯದಾಗಿ, ಬ್ರಿಟನ್ನಿನ ಯುದ್ಧಪ್ರಯತ್ನಕ್ಕೂ ಬ್ರಿಟನ್ನಿಗೂ ತೊಡಕನ್ನುಂಟು ಮಾಡುವ ಉದ್ದೇಶ ಕಾಂಗ್ರೆಸ್ಸಿಗೆ ಇಲ್ಲವೆ ಇಲ್ಲ ಮೂರನೆಯದು ಜಪಾನೀ ಆಕ್ರಮಣಕ್ಕೆ ಕಾಂಗ್ರೆಸ್ ವಿರೋಧಿ. ತನಗಾಗಿ ಅಧಿಕಾರ ಬಯಸುತ್ತಿಲ್ಲ ಕಾಂಗ್ರೆಸ್; ಸರ್ವರಿಗಾಗಿ ಕಾಂಗ್ರೆಸ್ಸಿಗೆ ನಿಜವಾದ ಅಧಿಕಾರ ಕೊಟ್ಟರೆ ಖಂಡಿತವಾಗಿಯೂ ಉಳಿದೆಲ್ಲ ಪಕ್ಷಗಳನ್ನೂ ಸೇರುವಂತೆ ಮನವೊಲಿಸುತ್ತದೆ. ಕೊಡುವ ಅಧಿಕಾರ ನಿಜವಾಗಿ ಸ್ವಾತಂತ್ರ್ಯವಾಗಿದ್ದರೆ, ಮುಸ್ಲಿಂ ಲೀಗಿಗಾದರೂ ಕೊಡಿ ಮತ್ತಾವ ಪಕ್ಷಕ್ಕಾದರೂ ಕೊಡಿ, ಕಾಂಗ್ರೆಸ್ಸಿಗೇನು ಆಕ್ಷೇಪಣೆಯಿಲ್ಲ' ಎಂದು ರಾಷ್ಟ್ರಪತಿ ಹೇಳಿದರು. "ಯಾವ ಒಂದು ಪಕ್ಷವೂ ಇತರ ಪಕ್ಷಗಳ ಸಹಕಾರವಿಲ್ಲದೆ ಸರಿಯಾಗಿ ಕೆಲಸ ನಿರ್ವಹಿಸಲಾರದು. ಅಧಿಕಾರ ಪಡೆದ ಪಕ್ಷ ಉಳಿದವರನ್ನು ಕಟ್ಟಿಕೊಳ್ಳಲೇ ಬೇಕು.'

ಈಗ ಮಾಡಬೇಕಾದುದು ಒಂಮೇ: ಪೂರ್ಣಾಧಿಕಾರವನ್ನು ಯಾವ ಪರತ್ವೂ ಇಲ್ಲದೆ ಕೊಟ್ಟುಬಿಡುವುದು ಜಪಾನೀ ಆಕ್ರಮಣವನ್ನು ಅಡ್ಡಗಟ್ಟಲು ಮಿತ್ರನೆನಿಸಿತನ, ಕೆಲಸವನ್ನು ಇಲ್ಲಿ ನಡೆಸಬಹುದೆಂಬ ಪರತ್ವೊಂದೇ. ಅದರೆ ಭಾರತದ ವಿಚಾರದಲ್ಲಿ ಕೈಪಾಕಲು ಅವಕ್ಕೆ ಅಧಿಕಾರವಿದೆಯೂ ದಿದೆ. ಬ್ರಿಟನ್ನಿನಷ್ಟೆ ಸ್ವತಂತ್ರವಾಗಿದ್ದೀತು ಭಾರತ.

ಇದರಲ್ಲಿ ಆಕ್ಷೇಪಣೆ ಮಾಡುವಂಥದೇನಿದೆ? ಅಧಿಕಾರ ಪಡೆದ ಪಕ್ಷಕ್ಕೆ ಅದನ್ನು ಉಳಿಸಿಕೊಳ್ಳಲು ಇತರ ಪಕ್ಷಗಳ ಆಸರೆ ಬೇಕಾದೀತು ತಮ್ಮ ತಮ್ಮೊಳಗೆ ಆಸರೆಯಾಗಿದೆ ತಮ್ಮ ಸಂರಕ್ಷಣೆಗಾಗಿ, ಸಹಾಯಕ್ಕಾಗಿ, ಪರರೇಯರನ್ನು ಅವಲಂಬಿಸಿದವ್ಯ ದಿನ ಈ ಪಕ್ಷಗಳು ಕೂಡುವ ಆಸೆಯೇ ಇಲ್ಲ. ವೈಸರಾಯರ ಭಾರತೀಯ ಸಚಿವರ ಪದವಿಗೆ ವೈಸರಾಯೆ ಸರ್ವಾಧಾರ. ಬೇರೆ ಯಾರ ಆಸರೆಯೂ ಬೇಕಾಗಿಲ್ಲ. ದೊಡ್ಡವರಲಿ ಸಣ್ಣವರಲಿ, ಪರಸ್ಪ

ರ ಸಹಾಯವಿಲ್ಲದೆ ಪಕ್ಷಗಳು ಹೇಗೆ ನಿರ್ವಹಿಸಿಯಾವು? ಸ್ವತಂತ್ರಭಾರತದಲ್ಲಿ ಕೆಲವು ಕಾಲದವರೆಗಾದರೂ, ಎಂಥ ಬಲವಾದ ಪಕ್ಷವೆ ಆಗಲಿ ಅದಕ್ಕೆ ಸೇನಾಬಲ ಇರಬೇಕು. ಅಸರೆಗೆ ಸೇನೆ ಇರದು. ಈಗಿನ ಪೋಲೀಸು ದಳ ರಾಷ್ಟ್ರೀಯ ಪ್ರಭುತ್ವದಲ್ಲಿ, ಅದರ ನಿಯಮದ ಪ್ರಕಾರ ಕೆಲಸಮಾಡಲೊಪ್ಪಿದರೆ ಸರಿ; ಇಲ್ಲವಾದರೆ ಮೊದಮೊದಲು ಅನನುಭವಿ ಆದ ಹೊಸ ಪೋಲೀಸೆ. ಆದರೆ ಸ್ವತಂತ್ರ ಭಾರತ ಮಿತ್ರಪಕ್ಷಕ್ಕೆ ನೀಡಬಹುದಾದ ಸಹಾಯ ಶುದ್ಧಗುಣದ ಸಹಾಯ. ಅದರ ಆಳವು ಅನಂತವಾಮದು. ಜಪಾನೀ ಜನಕ್ಕೆ ಸ್ವಾಗತ ಬಯಸಲು ಕಾರಣವೆ ಆಗ ಉಳಿಯದು. ಅಷ್ಟು ಹೊತ್ತಿಗೆ ಇಡೀ ಹಿಂದು ಸ್ಥಾನ ಅಹಿಂಸಾ ಸಂಧ ತುಳಿದರೆ ಆ ಮಾತು ಬೇರೆ: ಇಲ್ಲದಿದ್ದರೆ ಜಪಾನೀ ಆಕ್ರಮಣವಾಗಲಿ ಮತ್ತೊಂದನ್ನಾಗಲಿ ತಡೆಯಲೆಂದು ಮಿತ್ರರಾಷ್ಟ್ರಗಳ ಕಡೆ ಜನರ ದೃಷ್ಟಿ ಹರಿದೀತು. ಭಾರತ ಸಂರಕ್ಷಣೆಗೆ ಅಗತ್ಯವಿರಲಿ ಬಿಡಲಿ, ಮಿತ್ರಸೇನೆ ಇಂದಿಗೂ ನಾಳೆಗೂ ಯುದ್ಧ ಮುಗಿವವರೆಗೂ ಭಾರತದಲ್ಲಿ ಇದ್ದೀತು.

ಕಾಂಗ್ರೆಸ್ ಬೇಡಿಕೆಯ ಅರ್ಥದ ಈ ವಿವರಣೆ ಮಿತ್ರಪತ್ರಿಕಾ ವ್ಯಪಂಚಕ್ಕೂ ಮಿತ್ರರಿಗೂ ಒಪ್ಪಿಗೆಯಾಗದಿದ್ದರೆ ಏತಮ ನಸ್ಸಿನಿಂದ ಮಿತ್ರರಾಷ್ಟ್ರಗಳು ಶತ್ರುನಿರೋಧಕ್ಕಾಗಿ ಮಾಡುತ್ತಿರುವ ಈ ಘೋರ ಸಿದ್ಧತೆಯ ಅಶುಭ ಶಕುನವನ್ನು ಕಂಡು ಅವರ ಪ್ರಾಮಾಣಿಕತೆಯನ್ನು ಭಾರತದ ಸಾರ್ವಜನಿಕ ಕೆಲಸಗಾರರು ಸಂಬದಿದ್ದರೆ ಅವರಿಗೆ ಕ್ಷಮೆ ಇರಲಿ.

ಸಂಸ್ಥಾನದರಸರಿಗೆ ಮಹಾತ್ಮರ ಉಪದೇಶ.

ಭಾರತದ ನರೇಂದ್ರರಲ್ಲಿ ಅನೇಕರ ಪರಿಚಯ ಭಾಗ್ಯ ನನಗಿದೆ. ಕೆಲವರ ಗೆಳೆತನವೂ ಇದೆ. ಆದರೂ ನರೇಂದ್ರರನ್ನು ಕುರಿತು ಯೋಚಿಸಿದಾಗ ಮನಸ್ಸನ್ನು ಅಧೀರತೆ ಕವಿಯುತ್ತದೆ. ಬ್ರಿಟಿಷ್ ರಾಜರು ಸೃಷ್ಟಿಸಿದವರು ಇವರು ಎಂಬ ನೋವಿನ ತಿಳಿವು ಆ ಅಧೀರತೆಗೆ ಕಾರಣ. ಬ್ರಿಟಿಷರು ಬರುವ ಮೊದಲೂ ಕೆಲವರು ಇದ್ದರು. ನಿಜ. ಆದರೆ ಅವರು ಬಂದ ಮೇಲೆ ಇವರ ಬದುಕು ಸಂಪೂರ್ಣವಾಗಿ ಬ್ರಿಟಿಷರ ದಯಾಧೀನವಾಯಿತು. ಆಗ ದೊರೆಗಳಾಗಿದ್ದವರು, ಬೆಲೆ ಕೊಟ್ಟಷ್ಟು ದಯಾಪ್ರಸಾದ. ಈಗಿರುವವರಂತೂ ಸಾಮ್ರಾಜ್ಯದ ಸಂತಾನ. ಅವರ ಮೋರೆ ಕೊಂಚ ಗಂಟಾಗಲಿ, ಇವರಿಗೆ ಸರ್ವನಾಶ.

ಆದರೆ ನಾವು ಈಗಿರುವಂತೆ ಸಾಮ್ರಾಜ್ಯಯಂತ್ರದ ಹಲ್ಲಲ್ಲ. ಜನಾಂಗದ ಅಖಂಡವಾದ ಭಾಗ ಎಂದು ಅವರು ತಿಳಿದರೆ ಇಷ್ಟು ನಿರಾತರಾಗಬೇಕಾಗಿಲ್ಲ. ರಾಷ್ಟ್ರದ ಅಂಗವಾಗದೆ, ಜನಾಂಗದ ಬೆಂಬಲವಿಲ್ಲದೆ ಇದ್ದರೆ ಆ ಯಂತ್ರ ತಲೆಕೆಳಗಾದ ಕೂಡಲೆ ಅವರೂ ಮಾಯವಾವಾರು.

ಬ್ರಿಟಿಷ್ ಜನರ ಇಷ್ಟಾನುಸಾರವಾಗಿಯೊ, ಅಥವ ಅವರ ಶಕ್ತಿಗೆ ಮೀರಿದ ಕಾಲನಿಯಮದಿಂದಲೊ ಅಂತು ಸಾಮ್ರಾಜ್ಯ ಜೀಳಯುತ್ತಿದೆ. ಭಾರತವು ಎಂದಿಗೂ ದಸ್ಯುದೇಶವಾಗಿಯೆ ಉಳಿಯಲಾರದು. ನರೇಂದ್ರರು ಕಾಲಕ್ಕನುಸಾರವಾಗಿ ನಡೆಯುವರೋ, ಸಾಮ್ರಾಜ್ಯರಥದ ಗಾಲಿಗೇ ಕಟ್ಟಿಸಿಕೊಂಡಿದ್ದಾರೋ? ಧೈರ್ಯಮಾಡಿ ರಾಷ್ಟ್ರದ ಜೊತೆಗೆ ಸೇರಿದರೆ ರಾಜ್ಯನಷ್ಟದ ಗಂಡಾಂತರವನ್ನು ಇದಿರಿಸಬಹುದು.

ಇದು ಧೀರತನದ ಕೆಲಸ, ನಿಜವೆ. ಹೋಗಲಿ, ಮಧ್ಯಮಾರ್ಗ ತುಳಿಯಬಹುದಲ್ಲ. ತಮ್ಮ ಜನರಿಗೆ ಅಧಿಕಾರ ಹಂಚಿಕೊಟ್ಟು ಅವರ ಪ್ರೀತಿ ಗಳಿಸಬಹುದಲ್ಲ. ಅವರ ನಿರಂಕುಶಾಧಿಕಾರ ಮಾತ್ರ ಎಲ್ಲ ಕಾಲವೂ ಉಳಿಯಲಾರದು. ಉಳಿಸಿಕೊಳ್ಳಲಾರರು. ತಮ್ಮ ಸೀಮೆಯ ಜನರನ್ನು ತೃಪ್ತಿಗೊಳಿಸಿ, ತಮ್ಮ ಆಡಳಿತದಲ್ಲಿ ಅವರ ಸಹಕಾರ ಪಡೆದರೆ ಎಷ್ಟೋ ಅಧಿಕಾರ ಉಳಿದೀತು. ತಮ್ಮ ಜನ ತೀರ ಹಿಂದುಳಿದಿದ್ದಾರೆ, ಸ್ವಾತಂತ್ರ್ಯಕ್ಕೆ ಅರ್ಹರಲ್ಲ ಎಂಬ ಟೀಕೆಗೆ ಎಡೆಗೊಡುವುದು ತಪ್ಪು; ನರೇಂದ್ರರಿಗಿದು ತರಸಲ್ಲ. ಅವರಿಗೇ ಇದು ಕುಂದಕ. ಸಂಸ್ಥಾನಗಳ ಜನರೂ ಹೊರಗಿನವರೂ ಎಲ್ಲಾ ಒಂದೇ ರಾಸು. ಔದಾರ್ಯದಿಂದ ನರೇಂದ್ರರಿಗೇನೂ ನಷ್ಟವಿಲ್ಲ. ನಿರಂಕುಶಾಧಿಕಾರಕ್ಕೆ ಜೋಡುಬಿದ್ದರೆ ಎಲ್ಲವೂ ನಷ್ಟವೆ.

ನರೇಂದ್ರರು ಇಲ್ಲದಂತಾಗಲೆಂದು ನನ್ನ ಬಯಕೆಯಲ್ಲ. ಅವರ ನಿರಂಕುಶಾಧಿಕಾರ ಹೆಸರಿಗಲ್ಲ. ನಿಜವಾಗಿಯೂ ಯಜಮಾನ ತನವಾಗಲಿ ಎಂಬ ಪವಿತ್ರತನವಾಸೆ. ಅವರ ಸ್ವೇಚ್ಛಾಧಿಕಾರ ಕೊನೆಗಾಣಬೇಕು. ಎಂಥ ಪುರಾತನ ವಂಶವನವಾಗಲಿ, ಎಷ್ಟೇ ಉತ್ತಮ ವಂಶವನವಾಗಿರಲಿ, ಜನರ ಸ್ವಾತಂತ್ರ್ಯ ಒಬ್ಬ ವ್ಯಕ್ತಿಯ ಇಷ್ಟಕ್ಕೆ ಅಧೀನವಾಗಿರಬಾರದು. ರಾಜನಾಗಿರಲಿ, ಶ್ರೀಮಂತ ಜಾಗಿರದಾರನಾಗಿರಲಿ, ವರ್ತಕನಿರಲಿ, ಯಾರೇ ಆಗಲಿ ಪರಂಪರಾ ಸ್ವಾಪ್ತವೊ ಸ್ವಾರ್ಜಿತವೊ ಅಂಥ ಆಸ್ತಿಗೆಲ್ಲ ಸರ್ವಾಧಿಕಾರಿಯಾಗಿ, ಮನಸ್ಸಿಗೆ ಬಂದಂತೆ ವ್ಯವಸ್ಥೆ ಮಾಡಲುಬಾರದು. ತನ್ನ ತನ್ನ ಕೌಶಲವನ್ನು ಉಪಯೋಗಿಸಲು ಪ್ರತಿಯೊಬ್ಬನಿಗೂ ಸಂಪೂರ್ಣ ಸ್ವಾತಂತ್ರ್ಯ ಇರಬೇಕು. ನೆರೆಹೊರೆಯವರಿಗೂ ತಮ್ಮ ಚಾತುರ್ಯವನ್ನು ಉಪಯೋಗಿಸಲು ಅಷ್ಟೆ ಅವಕಾಶವಿರಬೇಕು. ಆದರೆ ಒಬ್ಬರ ಕುಶಲತನದ ಲಾಭವನ್ನು ಇನ್ನೊಬ್ಬರು ತಮ್ಮ ಮನಸ್ಸಿಗೆ ಬಂದಂತೆ ಉಪಯೋಗಿಸಿಕೊಳ್ಳಲು ಅಧಿಕಾರವಿಲ್ಲ. ಪ್ರತಿಯೊಬ್ಬನೂ ಜನಾಂಗದ ಒಂದು ಭಾಗ, ಸುತ್ತಲಿನ ಸಮಾಜದ ಅಂಗ, ಅಂತಲೆ ತನಗಾಗಿಯೆ ತನ್ನ ಕುಶಲತೆಯನ್ನು ಉಪಯೋಗಿಸಲಾರ; ತಾನು ಅಂಗವಾದ ಇಡೀ ಸಮಾಜಕ್ಕಾಗಿಯೆ ಯಾರ ದಯೆಯಿಂದ ತನ್ನ ಬದುಕೋ ಆ ಸಮಾಜಕ್ಕಾಗಿಯೆ ಉಪಯೋಗಿಸಬೇಕು. ಈಗಿರುವ ವಿಷಮತೆಗೆ ಜನರ ಅಜ್ಞಾನವೆ ನಿಜವಾಗಿ ಕಾರಣ ತಮ್ಮ ಸಹಜಬಲ ಅವರಿಗೆ ಗೊತ್ತಾದಹಾಗೆಲ್ಲ, ಈ ಅಸಮಾನತೆ ಮಾಯವಾಗಲೇಬೇಕು. ಈ ಕ್ರಾಂತಿ ಹಿಂಸೆಯಿಂದ ನಡೆದರೆ ಪರಿಸ್ಥಿತಿ ತಲೆಕೆಳಗಾದೀತು, ಉತ್ತಮವಾಗಲಿಕ್ಕಿಲ್ಲ. ಅಹಿಂಸೆಯಿಂದ, ಪರಿವರ್ತನೆಯಿಂದ ಜನಕೋಟಿ ಬಯಸುವ ಹೊಸಯುಗ ಮೂಡೀತು ನನ್ನದಾರಿ, ನನ್ನ ನೋರೆ, ಶುದ್ಧ ಅಕಳಂಕವಾದ ಅಹಿಂಸೆ. ಫ್ರೆಂಚರದೊಂದು ಚಲೋ ಸೂತ್ರವಿದೆ:- ಸ್ವಾತಂತ್ರ್ಯತೆ, ಸಮಾನತೆ ಸೋದರತೆ. ಅದು ಕೇವಲ ಫ್ರೆಂಚರಿಗೆ ಅಲ್ಲ, ಸರ್ವಮಾನವ ಲೋಕದ ಸೊತ್ತು.

ಫ್ರೆಂಚರಿಗೆ ಸಾಧ್ಯವಾಗಿದ್ದುದನ್ನು ನಾವು ಮಾಡಬಾರದೇಕೆ? ನರೇಂದ್ರರು, ಶ್ರೀಮಂತ ಜಾಗಿರದಾರರು, ವ್ಯಾಪಾರಿಗಳು ಮುಂದಡಿ ಯಿಟ್ಟರೇನು? ದಾರಿ ತೋರಬೇಕಾದದು ಅವರ ಕೆಲಸ. ದಿಕ್ಕಿಲ್ಲದ ದರಿದ್ರರೇನು ಮಾಡಿಯಾರು? ಯಾರಿಗೇನು ಹೆಂಚಬಲ್ಲರವರು? ಅವರಿಗೇನಿವೆ ಗತಿವಿಹೀನತೆ, ದೀನದಾರಿದ್ರ್ಯವಲ್ಲದೆ? ಬ್ರಿಟಿಷ್ ಪ್ರಭುತ್ವಕ್ಕೆ ವಾರವಾರವೂ ಬಿನ್ನಪ ವಪ್ಪಿರುವ ನ್ನೇಹಭಾವವೆ ಆ ಬಿನ್ನಹಗಳಲ್ಲೂ ಇವೆ. ಬ್ರಿಟಿಷರು ಅದಕ್ಕೆ ಓಗುಡಲಿಕ್ಕಿಲ್ಲ. ಬ್ರಿಟಿಷರ ಬಲಕ್ಕೆ ಆಧಾರಸ್ತಂಭಗಳಾದ 'ಭಾಗ್ಯವಂತರು' ತಮ್ಮ ಸ್ವಸ್ಥವಾದ ದರ್ಮವನ್ನು ಗುರುತಿಸಿಕೊಂಡರೆ ಬ್ರಿಟಿಷ್ ಪ್ರಭುತ್ವ ಮಣಿಯಲೇ ಬೇಕು. ಈ ಆಧಾರ ಸ್ತಂಭಗಳಿಂದ ಮಾರುತ್ತರ ಬರುವ ಆಸೆಯಿಲ್ಲದುದರಿಂದಲೆ, ಈ ಸ್ತಂಭಗಳಿಗೇ ಆಧಾರವಾದ ಜನರನ್ನು ಪ್ರೋತ್ಸಾಹಿಸುವ ಯೋಚನೆ ಮಾಡಿದೆ. ನಿಸ್ಸಂದೇಹವಾಗಿಯೂ ದೊಡ್ಡ ಗಂಡಾಂತರ ಬರಲಿದೆ. ಅದನ್ನು ತಪ್ಪಿಸಲು ತನ್ನ ಕೈಲಾದುದನ್ನೆಲ್ಲ ಮಾಡಬೇಕು, ಒಂದನ್ನೂ ಬಿಡಲಾರೆ. ಅಂತಲೆ ಈ ಬಿನ್ನಹ.

ಭಾನುವಾರ ತಾ॥ 9-8-1942.

ಈ ಗಂಡಾಂತರದಲ್ಲಿ ಬ್ರಿಟಿಷ್ ಸರಕಾರದ ಕರ್ತವ್ಯ

ರಷ್ಯಾದಲ್ಲಿ ಜರ್ಮನಿಯು ನುಂಗಿ ಹಾಗಿದೆ. ರಷ್ಯನರು ಕಲಿತನದಿಂದ ಕಾದಾಡಿ ಭಯಂಕರವಾಗಿ ಪ್ರತಿಭಟಿಸಿ ಅಪೂರ್ವ ತ್ಯಾಗಮಾಡಿದರೂ ಸಹ ಅಲ್ಲಿನ ಪರಿಸ್ಥಿತಿಯು ನಿತ್ಯವೂ ಕೆಡುತ್ತಲಿದೆ. ಅಮೆರಿಕನರೂ ಬ್ರಿಟಿಷರೂ ರಷ್ಯನರಿಗೆ ಸಹಾಯ ಒದಗಿಸುತ್ತಲಿರುವುದಾದರೂ, ಅದು ಭೌಗೋಲಿಕ ಕಾರಣಗಳಿಂದ ಅಸಾಧ್ಯವಾಗಿದೆ. ಉತ್ತರ ಆಫ್ರಿಕಾದಲ್ಲಿ ಲಿಬ್ಯಾದ ಯುದ್ಧವು ಮುಗಿದು ಈಜಿಪ್ಟಿನ ಯುದ್ಧವಾರಂಭವಾಗಿದೆ. ಅಲ್ಲಿಯೂ ಪರಿಸ್ಥಿತಿಯು ಕೃಷ್ಣಕರವಾಗಿಲ್ಲ. ಜಪಾನರು ಫಿಲಿಪ್ಪೈನ್ ದ್ವೀಪಗಳು, ಬಾಲಿ ಸುಮಾತ್ರ ಮುಲಯದ್ವೀಪಗಳನ್ನು ಗೆದ್ದು ಬರ್ಮಾ ದೇಶವನ್ನೆಲ್ಲಾ ಆಕ್ರಮಿಸಿ ಹಿಂದೂಸ್ತಾನದ ಪರಿಹದ್ದಿನಲ್ಲಿ ಕೂತಿರುವರು. ನಾನಿಕಾ ಮುಖ್ಯರ ಹೇಳಿಕೆಗಳಿಂದ ಹಡಗುಗಳು ಮುಳುಗುವುದು ಹೆಚ್ಚಾಗಿದೆ. ನಿರ್ಮಾಣವು ನಾಶಕಿಂತಲೂ ಕಡಿಮೆಯಾಗಿದೆ. ಮಿತ್ರಪಕ್ಷವು ಇಂಥಾ ಗಂಡಾಂತರದಲ್ಲಿ ಯಾವಾಗಲೂ ಸಿಕ್ಕಿದ್ದಿಲ್ಲ

ಕಾಂಗ್ರೆಸ್ ಪಕ್ಷದ ಪ್ರತಿಯೊಬ್ಬ ಜವಾಬ್ದಾರಿ ಮುಖಂಡರೂ ಸೊದಲಿನಿಂದಲೂ ಮಿತ್ರಪಕ್ಷದವರ ಕಡೆ ಸಹಾನುಭೂತಿ ಅರಿಸಿರುವರು. ಅವರ ಜಯವನ್ನು ಕೋರಿರುವರು. ಫ್ಯಾಸಿಜಂ ಮತ್ತು ನಾಜಿಜಂ ತತ್ವಗಳಿಗೆ ಇಡೀ ಕಾಂಗ್ರೆಸ್ ಸಂಸ್ಥೆಯೇ ವಿರೋಧ ವಿರುವದೆಂದು ನಾವು ಅನೇಕಸಲ ಸಾರಿಸಾರಿ ಹೇಳಿರುತ್ತೇವೆ. ಕಾಂಗ್ರೆಸ್ ಪಕ್ಷವು ಇಟಲೀ ಜರ್ಮನಿಯನ್ನು ವಿರೋಧಿಸುವುದರ ಜೊತೆಯಲ್ಲಿ ಬ್ರಿಟಿಷಿನ ಸಾಮ್ರಾಜ್ಯ ವಾದವನ್ನೂ ವಿರೋಧಿಸುತ್ತಲಿದೆ. ಹಿಂದೂಸ್ತಾನದಲ್ಲಿ ಆದಷ್ಟು ಶೀಘ್ರವಾಗಿ ಸ್ವರಾಜ್ಯವನ್ನು ಸ್ಥಾಪಿಸಬೇಕೆಂಬುದೇ ಕಾಂಗ್ರೆಸ್ಸಿನ ಮಹಾತ್ವಾಕಾಂಕ್ಷೆ ಆ ಉದ್ದೇಶ ಸಾಧನೆಗಾಗಿ ಹಿಂದೆ ಎಷ್ಟೋಸಲ ಬಲಿದಾನವಾಡಿದೆ ಮತ್ತು ಮುಂದೆ ಮಾಡಲಿದೆ. ಬ್ರಿಟಿಷಿನ ಸಂಕಟ ಸಮಯವನ್ನು ಉಪಯೋಗಿಸಿಕೊಳ್ಳಲು ಕಾಂಗ್ರೆಸ್ ಅತುರವಾಗಿರುವದೆಂಬುವ ಅಪವಾದನೆಯನ್ನು ಮಹಾತ್ಮಗಾಂಧಿಯನರೂ, ಜವಹರಲಾಲರೂ ನಿರಾಕರಿಸಿವ್ವಾರೆ. ಅನರಿಗಾಗಲೀ ಕಾಂಗ್ರೆಸ್ ಸಂಸ್ಥೆಗಾಗಲಿ ಅಂಥಾ ದುರದ್ದೇಶಗಳಿಲ್ಲವೆಂದು ಕಾಂಗ್ರೆಸ್ ನಿರ್ಣಯಗಳಿಂದಲೂ, ಮುಖಂಡರ ಹೇಳಿಕೆಗಳಿಂದಲೂ ಸ್ಪಷ್ಟವಾಗಿದೆ.

ತಮಗೆ ನಿಜವಾದ ಅಧಿಕಾರವಿದ್ದರೆ ಜನತೆಯನ್ನು ಯುದ್ಧಕಾರ್ಯದಲ್ಲಿ ಪ್ರನೇತಿಸಬಹುದೆಂದೂ, ಶತ್ರುಗಳ ದಾಳಿಯನ್ನು ಯಶಶ್ವಿಯಾಗಿ ತಡೆಯಬಹುದೆಂದೂ ಕಾಂಗ್ರೆಸ್ ನಿರ್ಣಯಗಳಿಂದ ಸ್ಪಷ್ಟವಾಗಿದೆ.

ಬ್ರಿಟಿಷ್ ಸರಕಾರದ ಪರವಾಗಿ ಸರ್ ಸ್ಟಾಫರ್ಡ ಕ್ರಿಪ್ಸರು ಭಾರತಕ್ಕೆ ಬಂದು ರಾಜಕೀಯ ಮುಖಂಡರೊಡನೆ ಮಾತುಕತೆಗಳನ್ನು ನಡೆಸಿ ಒಪ್ಪಂದಕ್ಕೇನೋ ಪ್ರಯತ್ನಿಸಿದರು. ಆದರೆ ಬ್ರಿಟಿಷ್ ಸರಕಾರದವರು ಮುಖ್ಯವಾದ ಅಧಿಕಾರಗಳನ್ನೆಲ್ಲಾ ತಮ್ಮ ಕೈಯಲ್ಲೇ ಇಟ್ಟುಕೊಂಡು 1935ರ ಘಟನೆಯನ್ನು ಬದಲಾಯಿಸದೆ ನೈಸ್ರಾಯರ ಅಧೀನದಲ್ಲೇ ಸದಸ್ಯರಾಗಿರಲು ಕಾಂಗ್ರೆಸ್ ಮತ್ತು ಲೀಗ್‌ಗಳಿಗೆ ಸೂಚಿಸಿದರು. ಎರಡೂ ಪಕ್ಷಗಳು ಈ ಸೂಚನೆಯನ್ನು ನಿರಾಕರಿಸಿದವು. ಬ್ರಿಟಿಷ್ ಸರಕಾರವು ಇದರ ಅನುಕೂಲತೆ ಪಡೆದು ಪ್ರಪಂಚದಲ್ಲೇ ಭಾರತ ವಿರೋಧ ಪ್ರಚಾರ ನಡೆಸಿತು

ಅಲ್ಲದೆ ಯುದ್ಧಕಾರಣದಿಂದ ಬರ್ಮಾ ಮಲಯಗಳಲ್ಲಿನ ಘಟನೆಗಳಿಂದ ಭಾರತೀಯರಿಗೆ ಬಹಳ ಅಸಮಾಧಾನವು ತಲೆದೋರಿತು, ಅಶಾಂತಿಯು ಹಬ್ಬಿತು. ನಿಜವಾಗಿ ಹೇಳುವುದಾದರೆ ಹಿಂದೂಸ್ತಾನದ ಯಾವ ಭಾಗದಲ್ಲೂ ಜನತೆಗೆ ಸಮಾಧಾನವಿಲ್ಲ. ದ್ವೇಷವು ಹೆಚ್ಚುತ್ತಲಿದೆ. ಆಕ್ರಮಣಕಾರರನ್ನು ತಡೆಯಬೇಕೆಂಬುವ ಮನೋನಿಶ್ಚಯವು ನಿರ್ಬಲವಾಗುತ್ತಿದೆ. ಇಂಥಾ ಭಾವನೆಯು ಯಾರ ದೃಷ್ಟಿಯಿಂದಲೂ ಹಿತಕರವಾದುದಲ್ಲ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಪೂರ್ವಾಪರಗಳನೆಲ್ಲಾ ಆಲೋಚಿಸಿ ವಾರ್ಧಾದಲ್ಲಿ ನಿರ್ಣಯವನ್ನು ಮಾಡಿದೆ. ಈ ನಿರ್ಣಯವು ಅಖಿಲ ಭಾರತ ಕಾಂಗ್ರೆಸ್ ಸಮಿತಿಯವರಿಂದ ಸ್ವೀಕೃತವಾಗುವದರಲ್ಲಿ ಯಾವ ಸಂಶಯವೂ ಇಲ್ಲ. ಕಾಂಗ್ರೆಸ್ ನಿರ್ಣಯವು ಕಾರ್ಯರೂಪಕ್ಕೆ ತರಲ್ಪಟ್ಟಾಗ ದೇಶದಲ್ಲಿ ಎಂಥಾ ವರಿಸ್ಥಿತಿ ಯುಂಟಾಗಬಹುದೆಂಬುದನ್ನು ಯಾರೂ ಹೇಳಲು ಬರುವಂತಿಲ್ಲ. ಬ್ರಿಟಿಷರು ಅಮೆರಿಕಾದ ವೃತ್ತಪತ್ರಿಕೆಗಳು ದ್ವೇಷವನ್ನು ಇನ್ನೂ ಹೆಚ್ಚಿಸುತ್ತಲಿವೆ.

ಬ್ರಿಟಿಷ್ ಸರಕಾರವು ಈ ಅಂದೋಳನವನ್ನು ಬಗ್ಗು ಬಡಿಯಲು ಯತ್ನಿಸಬಹುದು. ಆದರೆ ಈಗಿನ ಸಂದರ್ಭದಲ್ಲಿ ದಬ್ಬಾಳಿಕೆಯಿಂದ ಹಿಂದೂಸ್ತಾನದಲ್ಲಿ ಕೆಡಕು ಆಗಬಹುದೆಂಬುದನ್ನು ಇಲ್ಲಿ ನೇಳದೆ ಇರಲಾರೆವು. ಬ್ರಿಟಿಷ್ ಸರಕಾರವು ಕೂಡಲೇ ಕಾಂಗ್ರೆಸ್‌ನೊಡನೆ ಯುದ್ಧಕಾಲದ ಸಂಧಿಯನ್ನು ಮಾಡಿಕೊಂಡು ಜನತೆಯನ್ನು ಸಮಾಧಾನಗೊಳಿಸುವದೆಂದು ನಂಬಿದ್ದೇನೆ.

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ:— ಬಳ್ಳಾರಿ.

ಒಟ್ಟು ವ್ಯವಹಾರದ ಮೊತ್ತ.

31—10—40	31—5—42
ರು. 1,14,774-0-0	ರು. 2,41,525-0-0

ನಮ್ಮಲ್ಲಿ ಸರ್ವ ನಿಧವಾದ ಬ್ಯಾಂಕಿಂಗ್ ವ್ಯವಹಾರವು ನಡೆಯುತ್ತದೆ. ಹಿಂದೂದೇಶದ ಯಾವ ಭಾಗದಲ್ಲಾದರೂ ನಿಮಗೆ ವ್ಯಾಪಾರೀ ಸೌಕರ್ಯವನ್ನೊದಗಿಸಿಕೊಡುತ್ತೇವೆ. ಭಂಗಾರ ಮತ್ತು ಇತರ ಉಪಯುಕ್ತ ಮಾಲಿನ ಮೇಲೆ ಅಲ್ಪದರದ ಬಡ್ಡಿಯಿಂದ ಸಾಲವು ದೊರೆಯುತ್ತದೆ. ಸಮಕ್ಷೆನು ಬಂದು ಎಲ್ಲಾ ತಿಳಿದುಕೊಳ್ಳಿರಿ.

ಶಾಖೆಗಳು:—

1 ತಿಮ್ಮನಹಳ್ಳಿ. 2 ಕೊಟ್ಟೂರು. 3 ಉರವಕೊಂಡ. 4 ಪತ್ತಿಕೊಂಡ

ಹೆಚ್. ಶೇಷಾರಾಮರೆಡ್ಡಿ, ಬಿ. ಎ. ಬಿ. ಎಲ್ (ಎಂ. ಎಲ್. ಎ)
ಡೈರೆಕ್ಟರುಗಳ ಬೋರ್ಡು ಅಧ್ಯಕ್ಷರು.

ಬಿ. ನಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ

ರಕ್ತದಾನ.

ಘಾಯಹೊಂದಿ ರಕ್ತವನ್ನು ಕಳೆದು ಕೊಂಡು ಪ್ರಾಣೋತ್ಕ್ರಮಣಸ್ಥಿತಿಯ ಲ್ಲಿರಬೇಕಾದರೆ - ಆರೋಗ್ಯವಂತನ ಶರೀರದ ರಕ್ತವನ್ನು ಸಾಯಲಿರುವವನ ಶರೀರದಲ್ಲಿ ತುಂಬಿ ಅವನ ಪ್ರಾಣವನ್ನುಳಿಸುವುದು ಆಧುನಿಕ ವಿಜ್ಞಾನವೈಚಿತ್ರ್ಯಗಳಲ್ಲೊಂದಾಗಿದೆ. ಈಗಿನ ಯುದ್ಧದ ಸಂದರ್ಭದಲ್ಲಿ - ಆರೋಗ್ಯವಂತರ ರಕ್ತವು ಅತ್ಯಾವಶ್ಯಕವಾಗಿ. ಇದಕ್ಕಾಗಿ ಬ್ಯಾಂಕುಗಳನ್ನೇ ತೆಗೆದು (Blood-Banks) ರಕ್ತವನ್ನು ಶೇಖರಿಸುತ್ತಲಿರುವರು. ಇದು ಒಂದು ಅವಶ್ಯಕ ಸೇವಾಕಾರ್ಯವಾಗಿರುವ ಕಾರಣ - ಬೊಂಬಾಯಿನ ಹಿಂದಿನ ಪ್ರಧಾನರಾದ ಖೇರವರೂ, ಪಂಡಿತ ಜವಹರಲಾಲರೂ ತಮ್ಮ ರಕ್ತವನ್ನು ಕೊಡಲೊಪ್ಪಿರುವರು - ಈರಕ್ತದಾನ ಪದ್ಧತಿಯು ಹುಬಳಿಗೆಜೆಟ್ಟಿನಲ್ಲಿ ಈಪ್ರಕಾರ ಪ್ರಕಟವಾಗಿದೆ–

ಯಾವನೊಬ್ಬನು ರಕ್ತದಾನ ಮಾಡಬೇಕಾದರೆ ಮುಂಚಿತವಾಗಿ ವೈದ್ಯರಿಂದ ಸರೀಕ್ಷಿಸಲ್ಪಡುವನು. ಅವನು ನಿರೋಗಿಯೆಂದು ವೈದ್ಯರು ಧೃಢೀಕರಿಸಿದ ನಂತರವೇ ಅವನ ರಕ್ತವನ್ನು ತೆಗೆದುಕೊಳ್ಳಲಾಗುವದು. ರಕ್ತಹೀನತೆ, ಶ್ವಾಸಕೋಶ ಮತ್ತು ಹೃದಯದ ಉಪದ್ರವಗಳಿಂದ ಬಳಲುತ್ತಿರುವವರಿಂದ ರಕ್ತವನ್ನು ತೆಗೆದು ಕೊಳ್ಳುವದಿಲ್ಲ. ರಕ್ತವನ್ನು ದಾನ ಮಾಡುವ ಕ್ರಮವು ಹೀಗಿದೆ:–

ದಾನಮಾಡುವ ಮನುಷ್ಯನನ್ನು ಎತ್ತರದ ಮಂಚದ ಮೇಲೆ ಮಲಗಿಸುವರು ನಂತರ ವೈದ್ಯರು ರಕ್ತದ ಒತ್ತಡವನ್ನು ಅವನ ಬಲ ಇಲ್ಲವೆ ಎಡ ತೋಳಿನಿಂದ ಕಂಡು ಹಿಡಿಯುತ್ತಾರೆ. ಇದಾದ ಮೇಲೆ ಮೊಳಕೈ ಸಮೀಪವಿರುವ ಒಂದು ರಕ್ತನಾಳದ ಪ್ರದೇಶವನ್ನು ತೊಳೆದು, ಶುದ್ಧೀಕರಿಸಲ್ಪಟ್ಟ ಒಂದು ಚುಚ್ಚುಮದ್ದಿನ ಸೂಜಿಯನ್ನು ಆ ರಕ್ತನಾಳದ ಒಳಗೆ ಹಾಕುವರು. ಈ ಸೂಜಿಯು ಪೊಳ್ಳಾಗಿದ್ದು ಅದರ ಇನ್ನೊಂದು ಕೊನೆಯು ಒಂದು ರಬ್ಬರಿನ ಕೊಳವೆಗೆ ಜೋಡಿಸಲ್ಪಟ್ಟಿರುವುದು ಸೂಜಿಯಿಂದ ಇಳಿದು ಬಂದ ರಕ್ತವು ರಬ್ಬರಿನ ನಳಿಕೆಯಿಂದಾಗಿ ಒಂದು ಕಾಜಿನಪಾತ್ರೆಯಲ್ಲಿ ಒಟ್ಟು ಕೂಡುವದು. ರಕ್ತವು ಹೊರಗೆ ಬರುವ ದಾಗಲಿ ಅದು ಕಾಜಿನ ಪಾತ್ರೆಯಲ್ಲಿ ಒಟ್ಟುಕೂಡುವದಾಗಲಿ ರಕ್ತದಾನ ಮಾಡುವವನಿಗೆ ತೋರುವದಿಲ್ಲ. ಈ ರೀತಿ ರಕ್ತವು ಹೊರಸೂಸುತ್ತಿರುವ ವೇಳೆಯಲ್ಲಿ ವೈದ್ಯರು ಅವನ ರಕ್ತದ ಒತ್ತಡವನ್ನು ನೋಡುತ್ತಲೇ ಇರುವರು. ೧೦ ನಿಮಿಷಗಳೊಳಗಾಗಿ ಸುಮಾರು ½ ಪಿಂಟ್ (೬ ಔನ್ಸ) ರಕ್ತವು ಒಟ್ಟು ಕೂಡುವದು. ಇಷ್ಟರಲ್ಲಿ ಸೂಜಿಯನ್ನು ರಕ್ತ ನಾಳದಿಂದ ಹೊರತೆಗೆದು ಸೂಜಿಯಿಂದ ಚುಚ್ಚಲ್ಪಟ್ಟ ಸ್ಥಳವನ್ನು ತಿಕ್ಕಿ ಒಂದು ಚೂರು ಹತ್ತಿಯನ್ನು ಅಲ್ಲಿ ಇಡುವರು. ಸೂಜಿಯಿಂದ ಚುಚ್ಚಲ್ಪಡುವ ವೇಳೆಯಲ್ಲಿ ಆಗುವ ವೇದನೆಗಿಂತ ಹೆಚ್ಚಿನ ಬೇನೆಯು ರಕ್ತ ದಾನಮಾಡುವ ವೇಳೆಯಲ್ಲಿ ಆಗುವದಿಲ್ಲ ರಕ್ತ ದಾನ ಮಾಡಿದ ನಂತರವೂ ದಾನ ಮಾಡಿದ ಮನುಷ್ಯನಿಗೆ ಯಾವುದೇ ತರಹದ ಅಶಕ್ತತೆಯೆನಿಸುವುದಿಲ್ಲ. ಹೀಗ ರಕ್ತವನ್ನು ತೆಗೆದನಂತರ ಅದರ ಒಂದು ಅಂಶವನ್ನು ಶೋಧನಾಲಯ (ಲೆಬೋರೇಟರಿ) ಕ್ಕೆ ಕಳುಹಿಸಿ ಮನಃ ಅದನ್ನು ಪರೀಕ್ಷಿಸುವರು.

ರಕ್ತವನ್ನು ಒಟ್ಟುಗೂಡಿಸಲು ಇಟ್ಟ ಕಾಜಿನ ಪಾತ್ರೆಯಲ್ಲಿ ಇಳಿದ ರಕ್ತವು ಗಟ್ಟಿಯಾಗದಂತೆ ಮಾಡಲು ಕೆಲವು ರಾಸಾಯನಿಕ ಪದಾರ್ಥಗಳನ್ನಿಟ್ಟಿರುತ್ತಾರೆ. ಒಟ್ಟು ಕೂಡಿದ ರಕ್ತದ ಕೆಂಪು ಕಣಗಳನ್ನು ಬೇರ್ಪಡಿಸಲು ಅದನ್ನು ಶೀತೋತ್ಪಾದಕಯಂತ್ರ (ಕೋಲ್ಡ್ ಸ್ಟೋರೇಜ) ದಲ್ಲಿ ಇಡುವರು. ೪೮ ಗಂಟೆಗಳ ಅವಧಿಯಲ್ಲಿ ರಕ್ತದ ಕೆಂಪು ಕಣಗಳು ಬೇರ್ಪಡಿಸಲ್ಪಡುವವು. ಆ ಮೇಲೆ ಉಳಿದ ದ್ರವ ಪದಾರ್ಥವನ್ನು (ಪ್ಲಾಸ್ಮಾ) ಇತರರ ರಕ್ತದ ದ್ರವ ಪದಾರ್ಥದೊಂದಿಗೆ ಬೆರೆಸಿಡುವರು. ಹೀಗೆ ಹೆಚ್ಚು ದ್ರವ ಪದಾರ್ಥವು ಸಂಗ್ರಹಿಸಲ್ಪಟ್ಟ ನಂತರ ಅದನ್ನು ಹೆಪ್ಪುಗಟ್ಟಿಸಿ ಮುಂದೆ ಉಪಯೋಗಕ್ಕಾಗಿ ಕಾಜಿನ ಪಾತ್ರೆಗಳಲ್ಲಿ ಹವೆಯ ಪರಿಣಾಮವಾಗದಂತೆ ಇಡುವರು.

ಪುಷ್ಟಿಯಾಗಿ ಬೆಳೆದವರು ಮತ್ತು ಪೌಷ್ಟಿಕ ಆಹಾರ ತಿನ್ನುವವರು ರಕ್ತದಾನದಿಂದಾಗಿ ತಾವು ಕಳೆದುಕೊಂಡ ರಕ್ತದಪ್ರಮಾಣವನ್ನು ಒಂದು ವಾರದೊಳಗಾಗಿ ಪುನಃ ಸಂಪಾದಿಸಲು ಶಕ್ತರಾಗುವರಲ್ಲದೆ ಒಂದು ಸಲ ದಾನಮಾಡಿದ ೬ ವಾರಗಳನಂತರ ಇನ್ನೊಮ್ಮೆ ದಾನ ಮಾಡಲು ಸಮರ್ಥರಾಗುವರು. ೧೮ ರಿಂದ ೬೦ ವರ್ಷಗಳ ವಯಸ್ಸಿನವರು ರಕ್ತದಾನ ಮಾಡಬಹುದಂತೆ.

ಯುದ್ಧ ವಾರ್ತೆಗಳು.

ಅಟ್ಲಾಂಟಿಕದಲ್ಲಿ ಜಲಾಂತರ್ಗಾಮಿಗಳ ಹಾವಳಿ ಹೆಚ್ಚುವುದೇ?

ಜರ್ಮನ ಜಲಾಂತರ್ಗಾಮಿಗಳ ಮುಖ್ಯರಾದ ಅಡ್ಮಿರಲ್ ಕಾರ್ಲಡೊನಿಟ್ಜರವರು - ಅಟ್ಲಾಂಟಿಕದಲ್ಲಿ ಹಾವಳಿ ಹೆಚ್ಚುಮಾಡಿ ಮಿತ್ರ ಹಡಗುಗಳನ್ನು ಹೆಚ್ಚು ಹೆಚ್ಚು ನಾಶಪಡಿಸುವದಾಗಿ ಹೇಳಿರುವರೆಂದು ಸ್ವಾಕಹಾಂ ಪತ್ರಿಕೆಯ ಬರ್ಲಿನ್ ಸುದ್ದಿಗಾರನು ಹೇಳಿರುವನು. ಅಮೆರಿಕಾದವರು ಹಡಗುಗಳ ಸಂರಕ್ಷಣೆಗಾಗಿ ಏರ್ಪಡಿಸಿರುವ ಕಾರಣ - ಜರ್ಮನರು ಇನ್ನೂ ಹೆಚ್ಚಿನ ಶಕ್ತಿಯುತ ಯಂತ್ರಗಳಿಂದ ನಾಶಕಾರ್ಯಕ್ಕೆ ಯತ್ನಿಸಬೇಕಾಗಿದೆಯಂತೆ.

ಈಜಿಪ್ಟಿನಲ್ಲಿ - ಇಬ್ಬಾಗದವರೂ ತಟಸ್ಥರಿರುವಂತೆ ತೋರುತ್ತದೆ ಜರ್ಮನ ಜನರಲ್ ರೋಮೆಲರವರು - ಮುಂದಿನ ಯುದ್ಧಕ್ಕಾಗಿ ತಯಾರಿನಡಸಿರುವರೆಂದು ನೋತ್ತಾಗಿದೆ. ಕಳೆದವಾರ ಮಿತ್ರಸೈನ್ಯಗಳು ಎರಡು ಶತ್ರುಪಡೆಗಳನ್ನು ಮುಳಿಗಿಸಿದವಂತೆ.

ರಷ್ಯಾದಲ್ಲಿ ಜರ್ಮನರ ಮುನ್ನಡೆ.

ರೊಸ್ಟವ್ ಅಕ್ರಮಿಸಿದಮೇಲೆ ಜರ್ಮನ ಸೈನ್ಯಗಳು ದಕ್ಷಿಣಭಾಗಕ್ಕೆ 30 ಮೈಲಿದೂರ ಮುನ್ನುಗ್ಗಿವೆ. ಸ್ಟಾಲಿನಗ್ರಾಡಪಡಕಡೆಗೂ ಸೈನ್ಯಗಳು ಹೊರಟಿವೆ - ಕಾಕಸನ್ ಕ್ಷೇತ್ರಗಳಿಂದ ಎಣ್ಣೆಯು ಬರುವುದನ್ನು ತಡಯಲಿಕ್ಕಾಗಿಯೇ - ಈ ಪ್ರಯತ್ನಗಳೆಲ್ಲಾ ನಡದಿವೆ ಸ್ಟಾಲಿನಗ್ರಾಡಕ್ಕೆ ಹೋಗುವ ರೈಲ್ವೇಮಾರ್ಗವನ್ನು ಕತ್ತರಿಸಿರುವದಾಗಿ ವಾರ್ತೆಗಳು ಬಂದಿವೆ.

ಭೂಕಂಪ.

ನ್ಯೂಜೀಲೆಂಡದಲ್ಲಿ ಭೂಕಂಪವಾಗಿ ಉತ್ತರಭಾಗದ ಹ್ಯೇಸಪಟ್ಟಣ ವಿಶೇಷ ನಷ್ಟವಾಗಿದೆ.

ಟ್ಯಾಂಕು - ತಂಪಿನ ಸಾಧನ—

ಉತ್ತರ ಆಫ್ರಿಕಾ ಮರಳು ಕಾಡಿನಲ್ಲಿ ಪ್ರಖರವಾದ ಬಿಸಿಲಲ್ಲಿ ಹೋರಾಟವು ಸಾಗಿರಬೇಕಾದರೆ - ಶತ್ರುಗಳು ತಮ್ಮ ಟ್ಯಾಂಕುಗಳಲ್ಲಿ ತಂಪಿನ ಸಾಧನಗಳನ್ನಿಟ್ಟಿದ್ದರೆಂದು (Air Conditioned) ಇಂಗ್ಲೆಂಡಿನಲ್ಲಿ ವಾರ್ಮಿಮೆಂಟು ಕ್ಷೇತ್ರಗಳಲ್ಲಿ ಚರ್ಚೆಯಾಯಿತು ಇದು ಏನೂ ಅಸಾಧ್ಯವಾದುದಲ್ಲವೆಂದು ವೈಜ್ಞಾನೀಕರು ಅಭಿಪ್ರಾಯ ಪಟ್ಟಿದ್ದಾರೆ. ರಷ್ಯಾದ ಟ್ಯಾಂಕುಗಳಲ್ಲೂ ಕೂಡ ಇಂಥಾ ಟ್ಯಾಂಕುಗಳನ್ನು ಉಪಯೋಗಿಸಿರಬೇಕೆಂದು ಸಂಬಲಾಗಿದೆ. ಇದರ ಸಂಶೋಧನೆಯು ಸಾಗಿದೆ.

ಇಂಗ್ಲೆಂಡನ - ನಗರಗಳ ಮೇಲೆ ದಾಳಿ:—

ಇಂಗ್ಲೆಂಡಿನ ಮಿಡಲೆಂಡ್ಸ - ಬರ್ಮಿಂಗಾಂ - ಮತ್ತು ಲಂಡನ್ ಕ್ಷೇತ್ರಗಳ ಮೇಲೆ - ಕಳೆದ ತಿಂಗಳು ಶತ್ರುವಿಮಾನ ದಾಳಿಯಾಗಿ ನಷ್ಟವು ಸಂಭವಿಸಿವೆ - 3 ಆಸ್ಪತ್ರೆಗಳಲ್ಲಿ 2 ನಾಶವಾಗಿವೆ - ಇದು ಮಿತ್ರರದಾಳಿಗೆ ಪ್ರತೀಕಾರವೆಂದು ಭಾವಿಸಲಾಗಿದೆ.

(ಈ ವಾರದ ಕಥೆ)

ಸುಬ್ಬಣ್ಣನ ಪೀಕಲಾಟ!

ವೇ:— "ಶ್ಯಾಮೂ"

ಸೀಮೇನಾಯಿಯೆಂದರೂ, ಡೆಪ್ಯುಟೀ ಕಲೆಕ್ಟರ್ ಎಂದರೂ ಸುಬ್ಬಣ್ಣಗ ಒಂದೇ ಭಯ. ಯರಡೂ ಕಚ್ಚುತ್ತವೆ. ಒಂದು ಕಚ್ಚಿದರೆ ಆಸ್ಪತ್ರಿ, ನುತ್ತೊಂದು ಕಚ್ಚಿದರೆ ಭೋಜನಕ್ಕೆ ತಿರುಸು; ಪ್ರತಿ ಕ್ಲಾಸಿನಲ್ಲೂ ಮೊದಲನೆಯವನಾಗದೇ ಹೋದರೂ, ಇವನ ತಾಯಿ ಕಟ್ಟಿದ ಮುಡುಪುಗಳಿಗೆ ಆಶಿಬಟ್ಟು ಆ ಮನೆಯ ಹರಕೆ ದೇವರುಗಳು ಇವನ್ನ ನೆಟ್ರಿಕ್ ಮೊದಲನೆಯ ಸಲವೇ ಪ್ಯಾಸ್‌ಮಾಡಿ ಬಿಟ್ಟರು. ಇವಕ್ಕಾಗಿ ಒಂದು ತಿರುವತಿ ಯಾತ್ರೆ, ಊರ ಆಂಜನೇಯನಿಗೆ ಎಲೆಯ ತೋರಣ; ಈಶ್ವರನಿಗ ಅಭಿಷೇಕ ಎಲ್ಲವನ್ನೂ ಸಲ್ಲಿಸಿದ್ದಾಯಿತು. ನುತ್ತೆ ಮುಡುಪಿನ ಲಂಚಗಳಿಗ ಆಶಿಬಟ್ಟ ಆ ದೇವರುಗಳು ಇವನಿಗೆ ಗುಮಾಸ್ತಗಿರೀ ಕೊಡಿಸಿದ್ದಲ್ಲದೆ, ಯರಡುವರ್ಷಗಳಲ್ಲೇ ಹೊಸಕೇರಿಗೆ ಜಿಲ್ಲೆದಾರನನ್ನಾಗಿ ಹಾಕಿಸೇ ಬಿಟ್ಟವು. ದೇವರೂ ಅಂದರೇ ಸಾಮಾನ್ಯನೇ! ಭಕ್ತಿಯಿಂದ ಮುಡುಪು ಕಟ್ಟಿದರೇ ಬೇಡಿದ್ದು ಕೊಡದೆ ಯಿರುತ್ತಾನೆಯೇ? ಅದರಲ್ಲೂ ಸುಬ್ಬಣ್ಣನಿಗೆ ತಾಯಿಯ ಬೆಂಬಲ ಜಾಸ್ತಿ. ಆಕೆ ಲಕ್ಷ ಬತ್ತೀ ಹಚ್ಚಿ ಆ ಬೆಳಕಿನ ಸೊಬಗಿನಲ್ಲಿ ದೇವರನ್ನು ತನ್ನ ಮಗನ ಊರ್ಜಿತಕ್ಕಾಗಿ ಬೇಡುತ್ತಿದ್ದಳು. ಮಾಘಸ್ನಾನಗಳು ಮಾಡಿ, ತುಸ್ಸದ ದೀಪಗಳಿಂದ ದೇವರನ್ನು ಸಂತೃಪ್ತಿಪಡಿಸುತ್ತಿದ್ದಳು. ಹೀಗಿರುವಾಗ ನಮ್ಮ ಸುಬ್ಬಣ್ಣನ ಪ್ರಾರ್ಥನೆಗೆ 'ಅಸ್ತು' ಅನ್ನದಿದ್ದರೆ ಆದೀತೇ?

ಜಿಲ್ಲೆದಾರನಾಗಿ ಇನ್ನೂ ತಿಂಗಳು ತುಂಬಿಲ್ಲ. ಇವ್ವತ್ತಿಗೆ ಯಿದ್ದಹಾಗ ಡಪ್ಯೂಟಿ ಕಲೆಕ್ಟರ್ ಧೂರೆಗಳನರು ಆಳೂರಲ್ಲಿ ನೂರುದಿನ ಮುಕ್ತಾಂ ಮಾಡುತ್ತಾರಂದೂ, ಅದಕ್ಕೆ ಬೇಕಾದ ಸಪ್ಲೈ ಯಾಸತ್ತು ನೋಡಿಕೋ ಬೇಕೆಂದೂ ತಾಖೀದು ಬಂತು.

ಧೂರೆಗಳು ಅಲ್ಲಿಗೆ ಏತಕ್ಕೆ ಒಂದು ಮುಕಾಂ ಮಾಡೋದೂ ಗೊತ್ತಿಲ್ಲ. ಅದರಲ್ಲೂ ಹೊಸಬರು, ಸೀಮೇಗ ಹೋಗಿ ಬಂದವರಂತೆ. ಸೀಮೆ ಪೆಣಸಿನಕಾಯಿಗಿಂತ ಘಾಟು ಎಂದು ಕೇಳಬಂದಿತ್ತು. ಸನ್ಯಸಾಚಿಪುಂತವನು. ಹೇಗೆ ಬೇಕಾದ ಹಾಗೆ ಯೆರಡೂಕಡೆ ಅನುಕೂಲ ವಾಗುವಂತೆ ಜಡ್ಜಿಮೆಂಟು ಬರೆಯುವವನೆಂದು ವುಕಾರು. ಕಳೆದಿನ ತಾಲೇದಾರುಗಳಿಗೆಲ್ಲಾ ಸಂಬಸ್ವಪ್ನಡಂಕೆಯಿದ್ದ. ಸ್ವಲ್ಪ ಏನಾದರೂ ಸಪ್ಲೈಗಳಲ್ಲಿ ಹೆಚ್ಚುಕಡಿಮೆ ಬಂದರೆ ತನ್ನ ಕೆಲಸಕ್ಕೆ ಮುಪ್ಪು ಬರುವ ಹುದು ಎಂತ ತಾಖೀದು ತಂದ ಜವಾನು ಸಲಹೇಕೊಟ್ಟ. ಅವರೆಲ್ಲಿ ನುಕಾಂ ಮಾಡಿದರೂ, ಮಹಾರಾಜರಿಗೆ ಸಡಪಂತೆ ನಡೆಯಬೇಕೆಂದು ಹೇಳಬಿಟ್ಟ.

ಸುಬ್ಬಣ್ಣ ತೀರಾ ಹೊಸಬ. ಗೌಡ, ಶ್ಯಾನಭೋಗರ ಮರ್ಜಿ ಇನ್ನು ಗೊತ್ತಾಗಿಲ್ಲ ತಹಶೀಲ್ದಾರನೂ ಜವಾಬ್ದಾರೀ ಎಲ್ಲಾ ಈತನ ತಲೆಯಮೇಲೆ ಹೋರಿಸಿಟ್ಟು ಬಿಟ್ಟಾರೆ. ಈಗ ಮಾಡತಕ್ಕ ಕೆಲಸಗಳೆಷ್ಟೋಯಿವೆ ಅದಕ್ಕ ಹಣಬೇಕಾಗಿತ್ತು, ಜನಸಹಾಯ ಬೇಕು ಅಲೂರ ಗೌಡನೇನೋ ಬಲವಂತನೇ ಆಹುದು. ಆದರೆ ಅಧಿಕಾರಿಗಳೆಂದಲ್ಲಿ ಭಯವಿಲ್ಲ. ತಾನಲ್ಲಿಗ ಬಂದು ತಿಂಗಳಾದರೂ ತನ್ನನ್ನು ಬಂದು ನೋಡೋ ವಾಪಕ್ಕಾದರೂ ಹೋಗಿದ್ದಿಲ್ಲ. ಮೇಲೆ ಖಾಯಂ ಗೌಡನಲ್ಲ. ಮೈನರ್ ಗುಮಾಸ್ತಯೂ ಗಿದ್ದ. ಮೈನರ್ ಹುಡುಗ ಮೈನರ್ ತೀರಿ ವರೀಕ್ಷೆ ವ್ಯಾಸಾಗಿ ಯಿಂದೋ ನಾಳೆಯೋ ಕೆಲಸಕ್ಕೆ ಬರತಕ್ಕವನಿದ್ದಾನೆ ಇನ್ನು ಈ ಗೌಡನು ಮಾತು ಕೇಳುತ್ತಾನೆಯೇ? ಅಲಕ್ಷ್ಯದಿಂದ ಕಾಲ ಕಳೆಯುತ್ತಾಯಿದ್ದ, ಹೇಗೂ ಹೋಗೋ ಕೆಲಸನೇ ಅಲ್ಲಅಂತಾ ಆತನೇ ಟೂಂಕಕಟ್ಟಿ ನಿಂತರೇ ಎಲ್ಲಾ ಸರಿಹೋಗೋದೇ. ಅದರೆ ತನ್ನ ಸೇದ್ಯನೇನೋ ನ್ಯಾಸಾಗಳೇನೋ, ಈಜೆಗ ಬರುತ್ತರೇ ಯಿದ್ದಿಲ್ಲ. ಶಾನಭೋಗನು ಯಿದ್ದಾನಾಗಲಿ, ಏನೂ ಉಪಯೋಗವಿಲ್ಲ. ಬಡವ, ಮೇಲೆ ಅವನು ಹೊಸಬ. ಕೆಲಸಕ್ಕೆ ಬಂದು ಒಂದು ವರ್ಷವಾಗಿತ್ತು ಅಷ್ಟೇ!

ರಾಯರ ಬರುವಿಕೆಗೆ ಇನ್ನು ಮೂರು ದಿನ ಮಾತ್ರವೇ ವ್ಯವಧಿ ಯಿದೆ. ಇಷ್ಟರಲ್ಲೇ ಚಿಪ್ಪರ ವಗೈರೆ ಹಾಕಿಸಬೇಕು. ಜಿಲ್ಲೆದಾರನಿಗೇನೂ ಹೋಚಿಲಿಲ್ಲ, ಶ್ಯಾನಭೋಗನನ್ನು ಕರೆಯಿಸಿ ಕೇಳಿದ, ಏನು ಮಾಡಬೇಕೆಂದು "ನಟೇಲರಿಗೆ ಗಟ್ಟಿಯಾಗಿ ಹೇಳಿಬಿಡಿ ಯಾರಿಷ್ಟಿಗೆ ಮಾಡುತ್ತಾನೆ ಎಲ್ಲಾ?" ಎಂದು ಸಲಹೆಕೊಟ್ಟ 'ಮೇಲಕ್ಕೆ ರಿಪೋರ್ಟು ಮಾಡಿದರೆ ಹುಚ್ಚು ಬಿಡುತ್ತೆ" ಎಂದುಸಹ ಹೇಳಿದ ಆತನಿಗೆ ಹುಚ್ಚು ಬಿಡುತ್ತೋ ಯಿಲ್ಲವೋ ಆಗಲಿ, ತನಗೆ ಹುಚ್ಚು ಹಿಡಿಯೋದು ಮಾತ್ರ ವಾಸ್ತವ ಅಂತ ನನ್ನು ಸುಬ್ಬಣ್ಣನಿಗೆ ಅನಿಸಿತು.

ಶ್ಯಾನಭೋಗನಿಂದ ಇನಯೋಗ ಏನೂ ಕಾಣಲಿಲ್ಲ. ಏನಾದ್ರೂ ಆಗಲೀ ಅಂತಾ ನಟೇಲರಿಗೆ ಜವಾನನ್ನ ಕಳಿಸಿದ. 'ನಾನು ಕರೆಯುತ್ತೇನೆಂದು ಒಂದುಸಲ ಹೇಳಿಬಾ' ಎಂದು "ಗೌಡರು ಬ್ಯಾಸಾಯಕ್ಕೆ ಹೋಗಿದ್ದಾರೆ. ಮನೆಯಲ್ಲಿಲ್ಲ ಎನ್ನುತ್ತ ಅವನು ಹಿಂದಕ್ಕೆ ಬಂದ ಏನಾದರೂ ಕಾಗದದ ಮೇಲಿಡದಿದ್ದರೆ ಲಾಭವಿಲ್ಲ ಎನ್ನುತ್ತ ಒಂದು ತಾಕೀದು ನಟೇಲರಿಗೆ ಬರದೇಬಿಟ್ಟ.

ಹೊಸಕೇರಿ ಜಿಲ್ಲೆದಾರರಿಂದ ನಟೇಲರಿಗೆ ತಾಖೀದು - ಈ ತಿಂಗಳ ೨೫ ನೇ ತೇದಿ ಸಾಯಂಕಾಲ ೬ ಘಂಟೆಗೆ ಶ್ರೀ ಶ್ರೀ ಶ್ರೀ (ಇಲ್ಲಿ ಮೂರುಸಲ ಶ್ರೀ ಯಿಡಬೇಕೆಂದು ಸುಬ್ಬಣ್ಣನ ಅಭಿಪ್ರಾಯ) ಡೆಪ್ಯುಟಿ-ಕಲೆಕ್ಟರ್ ಸಾಹೇಬರು ಬಂದು ನುಕಾಂ ನೂಡೋನರಿದ್ದಾರೆ. ತಕ್ಷಣ ನೀವು ನನ್ನ ಎದುರಿಗೆ ಹಾಜರಾಗಿ ಬೇಕಾದ ವರ್ಸಾಟು ನೂಡೋದು ಇಲ್ಲ ನಾದಲ್ಲಿ ನಿಮ್ಮಮೇಲೆ ಚರ್ಯ ತೆಗೆದು ಕೊಳ್ಳಲಾಗುತ್ತೆ." —

(ಸಹಿ) ಸುಬ್ಬಣ್ಣ,
ಜಿಲ್ಲೆದಾರ.

ಹೀಗೆ ಬರೆದು ಜವಾನನ ಸಂಗಡ ಕಳಿಸಿದ. ಹೋದವನು ತುಸುಹೊತ್ತಿನಲ್ಲಿಯೇ ಹಿಂತಿರುಗಿ ಬಂದು "ಗೌಡರು ಇದು ತೊಗೋಳ್ಳೋದಿಲ್ಲ" ವೆಂದು ಇಂದು ಸಾಯಂಕಾಲ ಅವರು ಯಾವ ಊರಿಗೋ ಹೋಗಬೇಕಂತೆ ನಾಲ್ಕು ದಿನ ರಜಾಕ್ಕೆ ಬರೆದು ಕಳುಹಿಸುತ್ತಾರಂತೆ" ಎಂದು ಹೇಳಿದ.

ಸುಬ್ಬಣ್ಣನಿಗೆ ತೀರಾ ಸಿಟ್ಟು ಬಂದು ಕಡೆ ಭಂ ಪುಂಬಿತು. ಈ ಗೇನು ಮಾಡೋದು. ಗೌಡನ ಮೇಲೆ ರಿಪೋರ್ಟು ಏನೋ ಮಾಡಬಹುದು ಅದರೆ ಮೊದಲು ದೊರೆಗಳವರಿಗೆ ನಡೆಯತಕ್ಕ ಕರ್ಮ ಕಾಂಡ ಯಾವತ್ತು ನಡಯಲೇ ಬೇಕು. ಇದೂ ಅಲ್ಲದೆ ರಿಪೋರ್ಟು ಮಾಡಿದರೆ, ತಾನು ಜಿಲ್ಲೆದಾರ (ಅದರಲ್ಲೂ ಹೊಸಬ) ನಾಗಿದ್ದೂ ಸಪ್ಲೈ ವಿಷಯವಾಗಿ ನಟೇಲರಲ್ಲಿ ತಗಾವೆ ಯಿಟ್ಟುಗೊಂಡನೆಂದು ಅನಕೇರ್ತಿ ಬೇರೇ ಬರಬಹುದು. ತಾನು ಇನ್ನು ನೂರುವರ್ಷ ಆಲೂರಲ್ಲಿ ಬಾಳು ಮಾಡಬೇಕು. ಅದರಿಂದ ಮೇಲಕ್ಕೇನಾದರೂ ಬರೆದರೆ, ವ್ಯವಹಾರ ಕೆಡೋದಲ್ಲದೆ, ಮೇಲೆ ಇದೇ ಊರಲ್ಲಿ ಬಲವದ್ವಿರೋಧ ಆಗಬಹುದೆಂದು ತಿಳಿದು ಆ ತಾಖೀದು ಹರಿದು ಹಾಕೇಬಿಟ್ಟ.

ಶ್ಯಾನಭೋಗನನ್ನೂ, ಜವಾನನನ್ನೂ ಕೂಡಿಸಿಕೊಂಡು ಸಲಹೆ ಕೇಳಿದ ಈಗೇನು ಮಾಡಬೇಕೆಂದು. "ಆ ಗೌಡರನ್ನು ನಂಬಿದರೆ ಲಾಭವಿಲ್ಲ ಕಣ್ರೀ. ಈ ಶ್ರಾದ್ಧ ನಿಮಗೆ ಬಿಟ್ಟಿದ್ದಲ್ಲ ನಾಲ್ಕುಜನ ಮುಖ್ಯ ರೈತರನ್ನು ಕರೆಯಿಸಿ, ಹೇಗೋ ಸರಿಮಾ

ಡಬೇಕು" ಎಂದರು ಕೆಲವು ಮುಖ್ಯರೈತರನ್ನು ಕರೆಯಿಸಿದ್ದೂ ಆಯಿತು. ಆದರೆ ಅವರು ಕೈಗೆ ಸಿಕ್ಕುತ್ತಾರೆಯೇ! ಅವಸರವಿದ್ದಾಗಲೇ ಕಾಲು ಹಿಡಿಯೋ ಮತ ಅವರದು. "ಊರಲ್ಲಿ ಗೌಡರಿಲ್ಲವೇನ್ರಿ? "ಎಂದೊಬ್ಬನೂ" ಸಂಬಳ ತಿನ್ನೋದಿಲ್ಲೊ? ರಿವ್ಯೋರ್ವು ಮಾಡಿಬಿಡ್ರಿ" ಎಂದು. ಮತ್ತೊಬ್ಬನೂ."ಈಗೌಡರಿಗೆ ಕೆಲಸಬಾರದೆಂದು ತಿಗೆದು ಹಾಕಿಸಿ ನನಗೆ ಕೊಡ್ರಿ. ನಿಮಗೆ ಒಂದು ತಾಸಿನಲ್ಲಿ ಎಷ್ಟುಬೇಕಾದರೂಹೇಗೆ ಸಿದ್ಧಮಾಡ್ತೇನೋ ನೋಡ್ರಿ ಎಂದು ಮತ್ತೊಬ್ಬನು, ಹೀಗೆ ಹೇಳಿ ತಮ್ಮ ದಾನಿಗಳು ತಾವು ಹಿಡಿದು ಹೊರಟರು.

ಸುಬ್ಬಣ್ಣನಿಗೆ ಗೆಳ್ಳಂತರ ಕಾಣಲಿಲ್ಲ. ದೊರೆಯುರಾಕ್ಷಸನುಂಡೇಮಗನೆಂದು ಕೇಳಿಕೆ. ಒಂದು ಕವಡೆ ಯಷ್ಟಾದರೂ ಮರ್ಯಾದೆಗೆ ಮೋಸ ಬರಬಾರದೆಂದು ಹೇಳಿದ್ದಾನೆ ಜವಾನ. ಆತನು ಶ್ರೀ ಶಂಕರನಕಿಂತಲೂ ದೊಡ್ಡವನೆಂದೂ, ಬರಲಿ ಕ್ಯಾಗಿಯೇ ಹಾರಗಳೂ ಹ ್ಣಗಳೂ ಎಲ್ಲವೂ ಬಾಗಿಲಲ್ಲೇ ಸಮರ್ಪಣೆ ಮಾಡಬೇಕೆಂದೂ, ಇಲ್ಲವಾದಲ್ಲಿ ಮೋಟಾರಿನಿಂದ ಇಳಿಯುವದೇ ಇಲ್ಲವೆಂದೂ ಹೀಗೆ ಎಷ್ಟೋ ನೃಕಾರುಗಳು ಹೊರಟಿವೆ. ವ್ಯವಹಾರಕ್ಕೆ ವಿಘ್ನೇಶ್ವರ ಪೂಜೆಯಲ್ಲೇ ವಿಘ್ನವಾಯಿತು ನುನಸ್ಸಿನಲ್ಲಿ ಹೆದರಿಕೆಯಾಯಿತು. ಆರಾತ್ರಿ ನಿದ್ರೆಯೇ ಬರಲಿಲ್ಲ.

ಬೆಳಗಾಗುವಲ್ಲಿಗೊಂದು ನಿಶ್ಚಯಕ್ಕೆ ಬಂದ. ತನ್ನ ಭಾವಿ ಸುಖದ ಸಲುವಾಗಿ, ಮೂರು ತಿಂಗಳ ಸಂಬಳವನ್ನು ಖರ್ಚು ಮಾಡಲು ನಿಶ್ಚೈಸಿದ. ಹೀಗೆ ಲೆಕ್ಕಹಾಕಿ, ಪ್ರಾಂಸರೀ ನೋಟಿನ ಮೇಲೆ ಸಾಲತೆಗೆದು ಕೆರೆಯ ಕಟ್ಟೆಯ ಬದಿಯಲ್ಲಿದ್ದ ತಾಳೆಯ ಮರಗಳನ್ನು ಹತ್ತನ್ನು ಹೊಡೆಯಿಸಿ. ಎರಡು ಗಾಡಿಗಳು ಗರಿಗಳನ್ನು ಬಂಗಲೆಯ ಬಳಿಗೆ ಸಾಗಿಸಿ, ನಾಲ್ಕು ಕೂಲಿಯಾಳುಗಳನ್ನಿಟ್ಟು ಚಪ್ಪರವನ್ನು ಹಾಕಿಸಿದ. ಅಂದೇ ತನ್ನ ಜವಾನನನ್ನು ಪಟ್ಟಣಕ್ಕೆ ಕಳುಹಿಸಿ ಒಂದು ಗುಲಾಬಿ ಹಾರ, ಒಂದು ಬೊಕೇ' ಒಂದು ಡಜನ್ ಸಾತಕುಡೀ. ಎರಡು ಡಜನ್ ಆಪಿಲ್ಸೂ. ಹತ್ತು ಅಂಜೂರಿ, ಎಂಟು ಡಾಳಂಬರೀ ಹೀಗೆ ಎಲ್ಲಾ ಹತ್ತು ರೂಪಾಯಿಖರ್ಚುಮಾಡಿ ಅಟ್ಟಹಾಸದಿಂದ ತರಿಸಿದ. ಸಾಯಂಕಾಲ ಆಯಿದಕ್ಕೆ ಎಲ್ಲವೂ ತಯಾರಾಯಿತು. ಅದಿಗೆ ಮಾಡುವದಕ್ಕೆ ಕಟ್ಟಿಗೆ, ಹೊಸಗಡಿಗೆ ಮಡಿಕೆಗಳೂ, ಅಗಸ, ಎಲ್ಲರೂ ಸಿದ್ಧರಾದರು. ಇನ್ನು ದೊರೆಗಳುಬರುವದೇ ಬಾಕಿ.

ಇಪ್ಪರಲ್ಲಿ ಧೊರೆಗಳ ಸಪ್ಲೈ ಜವಾನನೂ' ಅಡಿಗೆಯವನೂ, ಸಾಮಾನುಗಳಿಂದಲೂ, ಧೊರೆಗಳ ಕ್ಯಾಂಪು ಸಾಮಾನುಸಹಿತ ಬಂದು ಇಳಿದರು ಸಪ್ಲೈ ಜವಾನನು ಎಲ್ಲವನ್ನೂ ನೋಡಿ. "ಎಲ್ಲವೂ ಚೆನ್ನಾಗಿದೆ, ಆದರೆ ಅಡಿಗೆಯ ಚಿಪ್ಪರದೂರ ಇರಬೇಕು. ಹೊಗೆ ಯಾದರೆ ರಾಯರಿಗೆ ಸಿಟ್ಟು ಬರುತ್ತೆ. "ಎಂದು ಹೇಳಿದನು. ಧೊರೆಯನಜೊಂದಿಗೆ ಸಾಕಷ್ಟಿತ್ತು ಯಿದ್ದು. ಅವರೊಂದಿಗೆ ತಿರುಗುತಕ್ಕ ಜವಾನನ ಆಜ್ಞೆಯೆಂದರೆ, ಧೊರೆಗಳ ಅಪ್ಪಣೆಗೆ ಮೀರಿದ್ದೇ! ಆಗ ಚಪ್ಪರ ಕಿತ್ತಿ ಬೇರೆಹಾಕಿಸಲು ಅನುಕೂಲವಿಲ್ಲದ್ದರಿಂದ. ಸದ್ಯಕ್ಕೆ ಶ್ಯಾನಭೋಗನ ಮನೆಯಲ್ಲಿ ಮಾಡುವಂತೆಯೂ, ಟಫಿಣ ಕ್ಯಾರಿಯರ್‌ನಲ್ಲಿ ರಾಯರಿಗೆ ತಂದು ಬಡಿಸುವಂತೆಯೂ ಏರ್ಪಾಟು ಮಾಡಿದ್ದಾಯಿತು. ಅಡಿಗೆ ಸಾಮಾನು ಅಲ್ಲಿಗೆ ಸೇರಿಸಿ ಅಡಿಗೆ ವ್ಯಾರಂಭ ಮಾಡಿದ್ದಾಯಿತು.

ಧೊರೆಗಳು ಮೋಟಾರಿನಲ್ಲಿ ಏಳಕ್ಕೆ ಸರಿಯಾಗಿ ಬರುತ್ತಾರೆಂದು ದಫೇದಾರ ಹೇಳಿ ಹಾರ ಹಣ್ಣು ಎಲ್ಲವು ತಸಿಜೀ ನೋಡಿ ಚೆನ್ನಾಗಿವೆಯೆಂದೂ, ರಾಯರಿಗ ಮೆಚ್ಚಿಗೆ ಯಾಗುವದೆಂದೂ ಹೇಳಿದ. ಸುಬ್ಬಣ್ಣನಿಗೆ ಬಹಳ ಆನಂದವಾಯಿತು ಒಂದು ಸಂದೇಹವನ್ನು ಕೇಳಿದ "ದೊರೆಗಳ ಕೊರಳಲ್ಲಿ ಹಾರಹಾಕಿ ನಂತರ 'ಬೊಕೇ' ಕೊಡಬೇಕೇ, ಅಥವಾ ಮೊದ 'ಲು ಬೊಕೇ' ಕೊಟ್ಟನಂತರ ಹಾರ ಹಾಕಬೇಕೆ' ದಫೇದಾರನು ಮುಂದಹಾಸದಿಂದ"ಮೊದಲು ಹಾರವನ್ನು ಕೊರಳಿಗೆ ಹಾಕಿ ನಂತರ ಕೈಯಲ್ಲಿ ಕೊಡಿರಿ" ಎಂದ.

"ಸರೀ! ಆದರೆ ಧೊರೆಗಳಿಗೆ ಈ ಮರ್ಯಾದೆಗಳು ಕಾರಿನಲ್ಲಿರಲಾಗಿ ಮಾಡಬೇಕೇ, ಅಥವಾ ಇಳಿದು ಬಂದಮೇಲೆ ನಡೆಯಿಸಬೇಕೇ? ಇದು ಯರಡನೆಯ ಸಂದೇಹ, ತಾನು ಹೊಸಜನಾದ್ದರಿಂದ, ವಿಚಾರಮಾಡಿ ತಿಳಿಯೋದು ಉತ್ತಮ ಎಂದಪನ ಅಭಿವ್ಯಾಯ.

"ಛೇ ಛೇ! ಎಲ್ಲವೂ ಕಾರಿನಲ್ಲೇ ಾಗಬೇಕು. ಮೋಟಾರುನಿಂತ ತಕ್ಷಣ ನಮಸ್ಕಾರಮಾಡಿ, ಹಾರಹಾಕಿ ಕೈಯಲ್ಲಿ ಬೊಕೇ' ಕೊಡಿ ನಂತರ ಹಣ್ಣಿನ ಪುಟ್ಟಿಯನ್ನು ಕಾರಿನಲ್ಲಿಡಿರಿ. ಹಿಂದೆ ಡ್ರೈವರು ತೆಗೆದುಕೊಂಡು ಬರುತ್ತಾನೆ" ಎಂದ ಧೊರೆಗಳ ಮರ್ಯಾದೆಯ ಪೂಜಾರಿಯಾದ ದಫೇದಾರ.

"ಸರೀ! ನಮ್ಮವರದು ಇಂಗ್ಲೀಷ್ ಪದ್ಧತಿಯೋ, ಅಥವಾ ಹಿಂದೂ ಪದ್ಧತಿಯೋ?"

"ಇವರು ಸೀಮೆಗೆ ಹೋಗಿ ಬಂದಿದ್ದಾರೆ. ಎಲ್ಲಾ ಆ ಪದ್ಧತಿಯೇ ಮೋಟಾರು ಸಹ ಸ್ವಯಂ ನಡೆಯಿಸುತ್ತಾರೆ. ಹ್ಯಾಟೂ ಬೂಟೂ ಸೂಟೂ ಎಲ್ಲಾ ಬಿಳಿಯವರಂತೇ. ಡ್ರೈವರು ಸುಮ್ಮನೇ ಹಿಂದೆ ಕೂತಿರುತ್ತಾನೆ."

ಸಂಜೆ ಏಳು ಘಂಟೆಗಳಾದವು, ಕತ್ತಲಾಯಿತು, ತಲೆಗೆ ರುಮಾಲು ಸುತ್ತಿ, ಕೋಟು, ನೆಕ್‌ಟೈ ಹಾಕಿಕೊಂಡು ಜಿಲ್ಲೆದಾರ ಸುಬ್ಬಣ್ಣ ಹಾದಿ ನೋಮುತ್ತಾ ನಿಂತಿದ್ದಾನೆ. ಹಾರ ಹಣ್ಣುಗಳು ಎಲ್ಲ ನನ್ನೂ ಹಿಡಿದು ಜವಾಲೀ ಹಾಕಿಕೊಂಡು ಜವಾನನು ಪಕ್ಕದಲ್ಲಿ ನಿಂತಿದ್ದಾನೆ. ಬಾಂದರು ಕೈಯಲ್ಲಿ ಹಿಡಿದು ದಫೇದಾರು ಪಕ್ಕದಲ್ಲಿ ನಿಂತ.

ಕತ್ತಲು ಹೆಚ್ಚಾಯಿತು. ನೋಡವು ಕವಿದು ಚಟುಕುಹನಿ ವ್ಯಾರಂಭವಾಯಿತು. ಆದರೆ ಅಲ್ಲಿಂದ ಚಲಿಸುನಹಾಗಿಲ್ಲ ಏಳೂವರೆಯಾಯಿತು ಇನ್ನೂ ಕಾರು ಬಂದಿಲ್ಲ. ಮಳೆ ಬಂದರೇನು, ಕಲ್ಮಳೆಯು ಸುರಿದರೂ ಅಲ್ಲಿಂದ ಸರಿಯಲಿಕ್ಕಾದೀತೇ? ಯಾನ ನಿಮಿಷದಲ್ಲಿ ಕಾರು ಒರುತ್ತದೆಯೋ? ಮುಹೂರ್ತವು ಆಗಲೇ ನಿಶಾರಿದೆ. ಕೊಡೆಯನ್ನು ಹಿಡಿದು ಅಲ್ಲೇ ನಿಂತಿದ್ದಾರೆ ಸಿಬ್ಬಂದಿಯೂನತ್ತು.

ಗೌಡರು ಆಜೆ ನುಳಾಡಲೀಯಿಲ್ಲ. ಜಿಲ್ಲೇದಾರನೇ ಎಲ್ಲನನ್ನೂ ಆಣೆ ಮಾಡುನದನ್ನು ಕೇಳಿ ತನ್ನ ತಲೆಯಮೇಲೆ ಹಾಲೆರದಂತೆ ತಿಳಿದು, ಧೊರೆಗಳು ಬಂದೊಡನೆಯೇ ತನಗೆ ತಿಳಿಸಬೇಕೆಂದು ತಳವಾರನಿಗ ಹೇಳಿ, ಊಟವನ್ನು ಬೇಗನೇ ಮುಗಿಸಿ. ತಾಂಬೂಲವನ್ನು ಹಾಕಿಕೊಳ್ಳುತ್ತಾ ಜಗುಲಿಯ ಮೇಲೆ ಕುಳಿತಿದ್ದ.

ಮುಸಾಫರ್ ಬಂಗಲೇ ಊರಿಗೆ ಒಂದು ಮೈಲು ದೂರದಲ್ಲಿದೆ. ರಾತ್ರಿ ಎಂಟಾಯಿತು. ಇನ್ನು ಕಾರು ಬರಲಿಲ್ಲ ಕಾದು ನೋಡುತ್ತಿರಲಾಗಿ ತಳವಾರ ನೊಬ್ಬನು ಓಡಿಬಂದು"ಅಡಿಗೆಯವನಿಗೆ ಜೇಳು ಕಜ್ಜಿದೆ, ಶ್ಯಾನಭೋಗನನ್ನೂ ಜವೇದಾರನನ್ನೂ ಬೇಗ ಕಳಿಸಿರಿ" ಎಂದ "ಅಯ್ಯೋ! ಈ ಹೊತ್ತಿಗೆ ಈ ಹಾಳು ಜೇಳು ಎಲ್ಲಿಂದ ಬಂತು. ಇನ್ನು ಶಾನಭೋಗರೇ ಅಡಿಗೆ ಮಾಡಬೇಕಾಗುತ್ತೇನೋ! ಹೋಗಿ ಬರುತ್ತೇನೆ ನೀವು ಸಿದ್ಧವಾಗಿರಿ, ನಾನು ಈಗಲೇ ಮರಳಿ ಬರುತ್ತೇನೆ" ಎನ್ನುತ್ತ ಶಾನಭೋಗನೆನ್ನು ಕರೆದುಕೊಂಡು ದಫೇದಾರು ಓಡಿಹೋದ.

ಕೊಂಚ ಹೊತ್ತಿಗೆ ರೋಡ್ಡಿನಮೇಲೆ ಬೆಳಕು ಕಾಣಬಂತು. "ಬಂದರು, ಬಂದರು" ಎನ್ನುತ್ತಾ ಎಲ್ಲರೂ ಸರಿಯಾಗಿ ರುಮಾಲುಗಳನ್ನು ಸರಿಮಾಡಿಕೊಂಡು ಸಾಲಾಗಿ ನಿಂತರು. ಖುರಿನ ತಳವಾರನು ಕೈಯಲ್ಲಿ ಬೆತ್ತವನ್ನು ಹಿಡಿದು. ನೋಟಾರು ನಿಲ್ಲಿಸುವ ಸ್ಥಳವನ್ನು ಸೂಚಿಸುವ ದಕ್ಕೆ ಕೈಎತ್ತಿ ರೋಡ್ಡಿನ ಮಧ್ಯದಲ್ಲಿ ನಿಂತನು. ಹುಬ್ಬಿನ ಮಾಲೆಯನ್ನು ನಲುಗದಂತೆ ಎತ್ತಿ ಶ್ಯಾನಭೋಗನ ಕೈಯಲ್ಲಿ ಕೊಟ್ಟು ತನ್ನಹಿಂದೆ ನಿಲ್ಲುವಂತೆ ಹೇಳಿದ. ಜಿಲ್ಲೆದಾರನು ತನ್ನಟ್ಟಿ ಸವರಿಸಿಕೊಂಡು ಧಫೇದಾರನು ಹೇಳಿದ ಸೂಚನೆಗಳನ್ನು ಮನವರಿಕೆ ಮಾಡಿಕೊಳ್ಳುತ್ತ

ನುನಸ್ಸಿನಲ್ಲೊಂದು ಸಲ ಆಂಜನೇಯನ ಸ್ತೋತ್ರವನ್ನು ಹೇಳಿ ದೇವರಿಗೆ ಹರಕೆ ಮಾಡಿಕೊಂಡ ಜಲ್ಲೆದಾರನ ಜವಾನ ಬಿಲ್ಲೇ ಸವರಿಸಿಕೊಂಡು ಜಲ್ಲೇದಾರನ ಸಕ್ಕದಲ್ಲೇ ನಿಂತಿದ್ದ.

ಇಷ್ಟರಲ್ಲೇ ದೂರದಲ್ಲಿ ಕಂಡ ನೋ [illegible]

ಭಿಮುಖವಾಗಿ ಕಾರನ್ನು ನಡೆಯಿಸಿ ನಿಮಿಷದಲ್ಲೇ ಮಾಯವಾದ.

ರೋಡ್ಡಿನಲ್ಲಿ ನಿಂತಜನಕ್ಕೆ ಇದೇನೂ ಅರ್ಥವಾಗಲಿಲ್ಲ. ಎಲ್ಲರೂ ವಿಸ್ಮಾಂತ ವಾಗಿ ಒಬ್ಬರ ಮೋರೆಗಳನ್ನು ಮತ್ತೊಬ್ಬರು ನೋಡಿಕೊಂಡರು. "ಭೂವೆಗಳಿಗೇನಾದರೂ ಸಿಟ್ಟು ಬಂದು ಹೊರಟು

ಆಗಮಾಡುತಕ್ಕದ್ದೇನು? ಹೀಗೆ ಸ್ವಾಗತ ಕೊಡಬೇಕೆಂದು ನಾಚಕರಾರಾದರೂ ಸಲಹೆ ಸುಬ್ಬಣ್ಣನಿಗೆ ಹೇಳಬಲ್ಲರೇನು? ಮುಡಿಪಿನ ದೇವರು ನಿಜವಾಗಲೂ ಕೈಕೊಟ್ಟಂತೆಯೇ ಏನು?

ಮಹಾತ್ಮರಿಗೆ ಕಳಂಕ ಹಚ್ಚಲು ಇಂಡಿಯಾ ಸರಕಾರದ ಪ್ರಯತ್ನ:—

ಕಳೆದ ಮೇ ತಿಂಗಳಲ್ಲಿ ಅಲಹಾಬಾದಿನಲ್ಲಿ ಕೂಡಿದ ಅಖಿಲಭಾರತ ಕಾಂಗ್ರೆಸ್ ಸಮಿತಿಗೆ ಮಹಾತ್ಮ ಗಾಂಧಿಯವರು ಒಂದು ಕರಾರಿನನ್ವಯ ಕಳುಹಿಸಿ ಅದರಲ್ಲಿ - ಬ್ರಿಟಿಷರು ಭಾರತವನ್ನು ಬಿಟ್ಟುಹೋದಮೇಲೆ - ಭಾರತೀಯರು ಜಪಾನಿನೊಡನೆ ಒಪ್ಪಂದ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಹೇಳಿಕೆಯ ಬರಹದಲ್ಲಿ ಸೂಚಿಸಿದ್ದರೆಂದೂ - ಅದನ್ನು ಜನಹಿತಕಾರಿಯಲ್ಲವೆಂದು ವಿರೋಧಿಸಿದ ಕಾರಣ - ನಿರ್ಣಯವನ್ನು ಬದಲಾಯಿಸಿ ಮಾಡಬೇಕೆಂದು ಸ್ವತಃ ಮಹಾತ್ಮರೇ ಹೇಳಿಕೆಯನ್ನು ಪ್ರಸಿದ್ಧಪಡಿಸಿದರೆಂದೂ ಬರೆದೆಕೆಂದು ಸೂಚಿಸಿದ್ದರೆಂದೂ - ಅದನ್ನು ಜನಹಿತಕಾರಿಯಲ್ಲವೆಂದು ವಿರೋಧಿಸಿದ ಕಾರಣ - ನಿರ್ಣಯವನ್ನು ಬದಲಾಯಿಸಿ ಮಾಡಬೇಕೆಂದು ಸ್ವತಃ ಮಹಾತ್ಮರೇ ಹೇಳಿಕೆಯನ್ನು ಪ್ರಸಿದ್ಧಪಡಿಸಿದರೆಂದೂ ಸರಕಾರದವರು ಅಲಹಾಬಾದಿನಲ್ಲಿ ಅಖಿಲಭಾರತ ಕಾಂಗ್ರೆಸ್ ಭವನವನ್ನು ಪರಿಶೋಧಿಸಿ ಕೆಲ ಕಾಗದ ಪತ್ರಗಳನ್ನು ತೆಗೆದುಕೊಂಡು ಹೋಗಿದ್ದರೆಂದೂ ಸಹಕಾರ್ಯದರ್ಶಿಯೂ ತನ್ನೆ ಏನಗಾಹನೆಗಾಗಿ ತೆಗೆದುಕೊಂಡ ಟಿಪ್ಪಣಿಯನ್ನೇ ಆಧಾರ ಮಾಡಿಕೊಂಡು - ಅನಧಿಕಾರ ಪೂರ್ವಕವಾದ ಪ್ರವೇಶ - ಪ್ರಕಟಿಸಿ - ಪ್ರಮಂಚ

ದಲ್ಲಿ ಮಹಾತ್ಮರಿಗೆ ಹರಡಿರುವುದು ಖಂಡನೀಯ ಮೊದಲು ಇಂಡಿಯ ಜನಹಿತಲಾಲಯೂ - ತಮಗೆ ಅಧಿಕಾ ದುರುದ್ದೇಶಗಳಿಲ್ಲ ಮೊದಲು ಸುಸಾಹಿತ್ಯದಲ್ಲೂ ಹೇಳಿಕೆ ಹೊರಬಿದ್ದಿರುವುದು

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ.

4 ನೆಯ ತಾ॥ ಕೂಡಿದ ಸಾಧಾರಣ ಸಭೆಗೆ ಪ್ರಾಂತದ ಎಲ್ಲಾ ಜಿಲ್ಲೆಗಳಿಂದ ಡಲೂ ಸದಸ್ಯರು ಬಂದಿದ್ದು ಶೇಷಾದ್ರಿ ನುಲ್ಲಿರಲಿಲ್ಲ ಕೆಯಲ್ಲಿ ಕಾರ್ಯಕರ್ತರು ಪಗಳು ವ್ಯಾಪಕಧನಾಗಿ - ನಿರ್ಣಯಗಳ ಗಾಡಲಾಯ್ತು. ಸಾಧಾರ್ಣನಿರ್ಣಯವನ್ನು ಸರ್ವ ಯೊಗ್ಯವಿದ್ದು ಹಿಂಪಡೆಸಾಧನದ ಹಿಂದಿ ಕ್ಷಣಕ್ಕಾಗಿ ಸಾಧಾರಣ ಸಂಸಾಪಡೆಸಿದ ಜೊಂಡಾಪಡೆಯಲ್ಲಿ ಭಾಗ ತೆಗೆದುಕೊಳ್ಳಲು ನಿಷ್ಪಕ್ಷಪಾತಿಯು ಹಿಂದೆ ಅನ್ಯಕ್ಕಾರಣ ಗಿದ್ದ ಶ್ರೀ ಸಾಗನಗಾಡರು ಕಾಸ್ಯ ಬಿದ್ದ ಸ್ಥಾನಕ್ಕೆ ಎ. ಪಿ. ಪಡಸ್ಯಕ್ಕೆ ಕ್ಷಿಣ ರಾಜೀನಾಮೆ ಕೊಟ್ಟಿದ್ದನ್ನು ಸ್ವೀಕರಿಸಲಾಯಿತು. ಕಾರ್ಯಕಾರೀಸಮಿತಿಯ ಜಲ್ಲೆ ತರವಾಡ + ನಗಳಿಗೆ ಶ್ರೀ ಕಲ್ಲು

ಬಾದೇನು, ಶಂಕರಕಾರ್ಯಕೂಟ, ಬಂಧಿಸಿದ್ದೊಡ್ಡಸಮಿತಿ - ಸೇರಿದ್ದು ಕಾ ಬೇಕಾದರು ಅರಿಸಲ್ಪಟ್ಟಿದ್ದರು ಪಕ್ಷದ ಕಷ್ಟ ಪಟ್ಟಿಯ ಕೊಯಮ್ಮತ್ತೂರ ಜಿಲ್ಲಾವಾರಿ ಕಾರಿಗ ಡಯೆಕೊಂಡು ಸಾಧಿಸಿಕ್ಕೆಮಾಡಿ ರಡ್ಡಿ ಗೋಕಲು, ನೀಲಕಂಠ ಪ್ರಸಿದ್ಧಿಗೆ ಎ. ಪಿ. ಬಂಬಲ ಬೇಕಾಯಿತು ತು ಎ ಪಿ ಸಭೆಗೆ ಕಾಮರಾಜ ನೇಡರ್, ಶಂಕರಕಾರ್ಯಕೂಟ, ಮಾರ್ಜ, ಸೀನಪ್ಪ ರೆಡ್ಡಿ, ಸುಬ್ಬರಾಯುಡು ಬರಿ ಸಲ್ಲಿಸಿದರು

ಬಳ್ಳಾರಿ ಜಿಲ್ಲೆಯಲ್ಲಿ ಅಮಿಷ.

ಅದೂನಿ, ಆಲೂರು, ಬಳ್ಳಾರಿ, ಸಿರುಗುಪ್ಪಿ, ರಾಯದುರ್ಗ, ಹೊಸಪೇಟೆ ತಾಲೂಕುಗಳಲ್ಲಿ 141 ಹಳ್ಳಿಗಳಲ್ಲಿ ಬಲಿಯ ಸ್ಥಿತಿಯ ಕಾರಣ, ಸರಕಾರದವರು ರೂ. 1, 91, 340 ರೂ ಭೂಕಂದಾಯ ಸಾಲವನ್ನು ಸೂಚೀ ಮಾಡಿರುವರು ಸಾಧಾರಣ ಜಲೆಯ ಅಕ್ಟೋ ಬರಿಯ ಅಕ್ಟೋಬರ್ 12 ಅಕ್ಟೋ ಹಿಡಿದು, 16 ಹಳ್ಳಿಗಳಲ್ಲಿ ಸ್ವಾರಾ ನಾಸ್ತಿ, 91 ಹಳ್ಳಿಗಳಲ್ಲಿ ಸುಮಾರಾಲು, 24 ಹಳ್ಳಿಗಳಲ್ಲಿ ಶೇ 31½ ಭಾಗ ನಾಸ್ತಿ ನೂಡಿ ಬಾಕಿ.

ಭಾಧ್ಯಕ್ಷರಾದ ಶ್ರೀಸಾವರ್ಕರವರು ಹೇಳಿದರು.

ಪಂಜಾಬಿನ ಪ್ರಧಾನರಾದ ಸರ್ ಸಿಕಂದರ ಹಯಾತ್ ಖಾನರು ಮಧ್ಯ ಪೂರ್ವಕ್ಕೆ ಹೋಗಿರುವರು. ಅಲ್ಲಿನ ಭಾರತ ಸೈನಿಕರಿಗೆ ಧೈರ್ಯೋತ್ಸಾಹಗಳನ್ನು ಕೊಡುವುದೇ ಅವರ ಉದ್ದೇಶ.

ಬಲಗಾಲಿನಿಂದ ಗೇರ್ ಬಾಕ್ಸ್ ತುಳಿದು, ಫುಟ್ ಬ್ರೇಕ್ ಬಿಟ್ಟು, ಪೊದಲಿನಗೇರ್ ಮೇಲೆ ಮುಂದಕ್ಕೆ ಕೊಂಚದೂರ ನಡೆಯಿಸಿ, ಮರಡನೇ ಗೇಯರ್‌ಗೆ ಬದಲೀ ಮಾಡಿ ಅರ್ಧ ನಿಮಿಷದಲ್ಲೇ ಟಾಪ್ ಗೇರ್‌ನಲ್ಲಿ ಸ್ಪೀಡು ಹೆಚ್ಚುಮಾಡಿ ಎಲ್ಲರು ಹುಚ್ಚಾಗಿ ನೋಡುತ್ತಿರಲಾಗಿ. ದಕ್ಷಿಣಾ

ಮತ್ತು ಹಾರ್ನ ಶಬ್ದವೂ ಕೇಳಬಂತು. ಆಚಳಕನ್ನು ನೋಡಿಯೂ, ಆಶಬ್ದವನ್ನು ಕೇಳಿಯೂ ಸುಬ್ಬಣ್ಣ ತಲಯಮೇಲಿಟ್ಟ ಕೈಯನ್ನು ತಗಿಯಲೇ ಯಿಲ್ಲ. ತಾನು ನಿಂತಿರುವದು ಭೂಮಿಯಮೇಲ ಆಹುದೋ ಅಲ್ಲವೋ ಎಂಬಸಿಗ ಸಂಬಕೆಯಿದ್ದಿಲ್ಲ.

ದಕ್ಕೆ ಕೈಎತ್ತಿ ರೋಡ್ಡಿನ ಮಧ್ಯದಲ್ಲಿ ನಿಂತನು. ಹುಬ್ಬಿನ ಮೇಲೆಯನ್ನು ನಲುಗದಂತೆ ಎತ್ತಿ ಶ್ಯಾನಭೋಗನ ಕೈಯಲ್ಲಿ ಕೊಟ್ಟು ಕಸ್ಟಹಿಂದೆ ನಿಲ್ಲುವಂತೆ ಹೇಳಿದ. ಜಿಲ್ಲೆದಾರನು ತನ್ನಟ್ಟೆ ಸವರಿಸಿಕೊಂಡು ಧಫೇದಾರನು ಹೇಳಿದ ಗೂಚನೆಗಳನ್ನು ಮನವರಿಕೆ ಮಾಡಿಕೊಳ್ಳುತ್ತ

ಕೋಟು, ನೆಕ್‌ಟೈ ಹಾಕಿಕೊಂಡು ಜಿಲ್ಲೆದಾರ ಸುಬ್ಬಣ್ಣ ಹಾದಿ ನೋಡುತ್ತಾ ನಿಂತಿದ್ದಾನೆ. ಹಾರ ಹಜ್ಜುಗಳು ಎಲ್ಲವನ್ನೂ ಹಿಡಿಮ ಚವಾಲೀ ಹಾಕಿಕೊಂಡು ಜವಾನನು ಪಕ್ಕದಲ್ಲಿ ನಿಂತಿದ್ದಾನೆ. ಚಾಂದರು ಕೈಯಲ್ಲಿ ಹಿಡಿದು ದಫೇದಾರು ಪಕ್ಕದಲ್ಲಿ ನಿಂತ.

ಜವಾನನು ಎಲ್ಲವನ್ನೂ ನೋಡಿ. "ಎಲ್ಲ ಮೂ ಚೆನ್ನಾಗಿದೆ, ಆದರೆ ಅಡಿಗೆಯ ಜೆಸ್ಪು ರಮೂರ ಇರಬೇಕು. ಹೊಗೆ ಯಾದರೆ ರಾಯರಿಗೆ ಸಿಟ್ಟು ಬರುತ್ತೆ. "ಎಂದು ಹೇಳಿದನು. ಧೊಪೆಯವರೊಂದಿಗೆ ಸಾಕ್ಷಾತ್ತು ಯಿಜ್ಯು. ಅವರೊಂದಿಗೆ ತಿರುಗು ತಕ್ಕೆ ಜವಾನನ ಅಜ್ಞೆಯಿಂಡರಿ, ಧೊಪೆ

ಕಾರ್ಯಕಾರಿಣೀ ಸಮಿತಿಯಲ್ಲಿ 20 ಸದಸ್ಯರಿದ್ದಾರೆ.

ವಿಕ್ಟೋರಿಯಾ ಧಾರವಣೆ.

7—8—42 ಕ್ಕೆ ಕೊಟ್ಟಿರುವ.

ಭೂಗಾರ ಕೊಟ್ಟಿ 1-ಕ್ಕೆ ರೂ. 32-14-0
ಸಾವರಿನ ... 40-4-0
ಬೆಳ್ಳಿ 100 ಕೊಟ್ಟಿ ರೂ. 63-6-0
ಆಲೂಗೆ ಫಾರಂ 115-0-0
ಅರಳಿ ಮುಂಗಾರಿ 12 ಮಣಕ್ಕೆ ....

ಅಕ್ಕಿ 1 ರೂ. ಗೆ 4 ರಿಂದ 5 ಸೇರು
ಜೋಳ " .... 3½ "
ಗೋಧಿ " .... 3½ "
ಜೋಳ " .... 10 "
ನವಣಿ " .... 14¼ "
ಸಜ್ಜಿ " .... 10 "
ಸೆಲಗಡಲಿ 1-11-6
ಸೀಮೆ .... 0—9-0
ಬೆಲ್ಲ 20-0-0
ಬೆಲ್ಲದ ಎಣ್ಣೆ 4-14-0

3 to 8 & 11th Page Printed at Krishna Printing Works. Bellary.
Publisher: T. B. Kesava Rao.

ಸುಬ್ಬಣ್ಣನ ಸ್ವಂತ ಬುದ್ಧಿ.

ವಿಂಡ್ಸರ್ ಸಮಿತಿಯು 2-8-42 ನೆಯ ಭಾನುವಾರ ಸಾಯಂಕಾಲ 6 ಗಂಟೆಗೆ ಆಗಸಿ ಸಾರ್ವಜನಿಕರ ಭೃಪ್ರಯುಕ್ತ ಶ್ರೀ ಗಂಗಾಧರ ವಿಷ್ಣುಪಂತ ಆಪ್ಟೆಯವರ ಮನೆಯ ಕೆಲವು 1942-43ನೆ ಆರ್ಥಿಕ ವರ್ಷದ ಆಯವ್ಯಯವನ್ನು ಆಲೋಚಿಸಲು ಶ್ರೀ ಪಟವರ್ಧನ ಭೀಮಸೇನ ಜಾಥಿರ.

ಉಪಾಧ್ಯಕ್ಷರು:- ಜಿ. ಜಿ. ಸಕ್ಕನಾರಾ ಯಣ

ಕಾರ್ಯದರ್ಶಿಗಳು:- ಕೆ. ವೆಂಕಟಾಪುರ್ ನವರು ಮತ್ತು ಕೆ. ನರಸಿಂಹಮೂರ್ತಿ

ಖಜಾಂಚಿ:- ಎಸ್. ಬಿ. ವಿ. ಬೆಟ್ಟಿ

ಆಡಿಟರ್ಸ್:- ಮೆಸ್ಸರ್ಸ್. ಕೆ. ರಾಮಚಂದ್ರಾವ್ ಮತ್ತು ಸುಬ್ಬಿಸೆಂಜಾಲಕರು:- ಜಿ. ರಾಮು ಮೂರ್ತಿ

ಶ್ರೀ ವಿಶ್ವನಾಥಾಯರಿಗೆ ಶಿಕ್ಷೆ:—

ಒರಿಸ್ಸಾದಿಂದ ಹಿಂದಿನ ಪ್ರಧಾನ ಮಂತ್ರಿಗಳಾದ ಶ್ರೀ ವಿಶ್ವನಾಥದಾಸರು ದಾಖಲಿಸಿದ್ದ ಮೊಕದ್ದಮೆಯಲ್ಲಿ ಭಾಷಣಮಾಡಿದ್ದಕ್ಕಾಗಿ ಆವರಿಗೆ ಜೈಲಿನಲ್ಲಿ ಗಟ್ಟಿಯಾಗಿದೆ - 3 ತಿಂಗಳ ಸಾದಾ ಶಿಕ್ಷೆ ವಿಧಿಸಲಾಗಿದೆ.

ರಕ್ಷಣೆಗೆ ಸಹಾಯ:—

ರಷ್ಯಾದ ಸರ್ವಾಧಿಕಾರಿಗಳಾದ ಸ್ಟಾಲಿನ್‌ರವರಿಗೆ ಅಮೆರಿಕಾ ದೊರೆಯ ಲಿಯಿಸ್ಡ್ ಬಿಲ್ಲು ಕಳುಹಿಸಲಾಗಿದೆಯೆಂದು ಅಧಿಕೃತವಾಗಿ ತಿಳಿಸಿದ್ದಾರೆ. ಇದನ್ನು ತಿಳಿಸಲು ಬಿಳ್ಳ ಸಂದೇಶವಾಹಕರು ಬಂದಿದ್ದಾರೆ.

ಡಬೇಕು" ಎಂದರು ಕೆಲವು ಮುಖ್ಯರೆತ ರನ್ನು ಕರೆಯಿಸಿದ್ದೂ ಆಯಿತು. ಆದರೆ ಅವರು ಕೈಗೆ ಸಿಕ್ಕುತ್ತಾರೆಯೇ! ಅವಸರ ವಿದ್ದಾಗಲೇ ಕಾಲು ಹಿಡಿಯೋ ಮತ ಅವರದು. "ಊರಲ್ಲಿ ಗೌರಿಲ್ಲವೇನ್ರಿ? "ಎಂದೊಬ್ಬನೂ" ಸಂಬಳ ತಿನ್ನೋದಿ ಲ್ಲೂ? ರಿಪೋರ್ಟು ಮಾಡಿಬಿಡ್ರಿ" ಎಂದು. ಮತ್ತೊಬ್ಬನೂ." [illegible] ರದೆಂದು ತೆಗೆದು ನಿಮಗೆ ಒಂದು ಇ ದರೂಹೇಗೆ ಸಿದ್ಧ ಎಂದು ಮತ್ತೊ ತಮ್ಮ ದಾರಿಗಳು ಟರು.

ಸುಬ್ಬಣ್ಣನಿಗೆ ಮೊರೆಯುರಾಕ್ಷಸ ಕೇಳಿಕೆ. ಒಂದು ಮರ್ಯಾದೆಗೆ ಮೆ ಹೇಳಿದ್ದಾನೆ ಜವಾ ರನಕಿಂತಲೂ ದೊ ಕ್ಕಾಗಿಯೇ ಹಾ ಎಲ್ಲವೂ ಬಾಗಿಲ ಡಬೇಕೆಂದೂ, ಇ ನಿಂದ ಇಳಿಯುವ ಎಷ್ಟೋ ಪುಕಾ ವ್ಯವಹಾರಕ್ಕೆ ವಿಘ್ ವಿಘ್ನವಾಯಿತು ಯಾಯಿತು. ಆರ ಲಿಲ್ಲ.

ಬೆಳಗಾಗುವಲ್ಲಿ ಬಂದ. ತನ್ನ ಭಾಷ ಮೂರು ತಿಂಗಳ ಮಾಡಲು ನಿಶ್ಚಿಸಿ ಪ್ರಾಂಸರೀ ನೋಟ ದು ಕೆರೆಯ ಕಟ್ಟೆಯ ಯ ಮರಗಳನ್ನು ಯಿಸಿ. ಎರಡು ಗ ಬಂಗಲೆಯ ಬಳಿ ಕೂಲಿಯಾಳುಗಳ ಹಾಕಿಸಿದ. ಅಂದೆ ಪಟ್ಟಕ್ಕೆ ಕಳುಹಿಸಿ ಹಾರ, ಒಂದು ಬೆ ಸಾತಕುಡೀ. ಎರ ಹತ್ತು ಅಂಜೂರಿ, ಹೀಗೆ ಎಲ್ಲಾ ಹತ್ತು ಮಾಡಿ ಅಟ್ಟಹಾಸ ಯಂಕಾಲ ಆಯಿ ರಾಯಿತು. ಅಡಿಗೆ ಗೆ, ಹೊಸಗಡಿಗೆ ಮಡಿಕೆಗಳೂ, ಅಗಸ, ಎಲ್ಲರೂ ಸಿದ್ಧರಾದರು. ಇನ್ನು ದೊರೆಗಳುಬರುವುದೇ ಬಾಕಿ.

ಇಪ್ಪರಲ್ಲಿ ಧೊರೆಗಳ ಸಪ್ಲೈ ಜವಾನನೂ ಅಡಿಗೆಯವನೂ, ಸಾಮಾನುಗಳಿಂದಲೂ, ಧೊರೆಗಳ ಕ್ಯಾಂಪು ಸಾಮಾನುಸಹಿತ ಬಂದು ಇಳಿದರು ಸಪ್ಲೈ ದ್ದಾರೆ. ಎಲ್ಲಾ ಆ ಪದ್ಧತಿಯೇ ಮೋಟಾರು ಸಹ ಸ್ವಯಂ ನಡೆಯಿಸುತ್ತಾರೆ. ಹ್ಯಾಟೂ ಬೂಟೂ ಸೂಟೂ ಎಲ್ಲಾ ಬಿಳಿಯವರಂತೇ. ಧೈವರು ಸುಮ್ಮನೇ ಹಿಂದೆ ಕೂತಿರುತ್ತಾನೆ."

ಸಂಜೆ ಏಳು ಘಂಟೆಗಳಾದವು, ಕತ್ತ ಲಾಯಿತು, ತಲೆಗೆ ರುಮಾಲು ಸುತ್ತಿ,

385

ನುನಸ್ಸಿನಲ್ಲೊಂದು ಸಲ ಆಂಜನೇಯನ ಸ್ತೋತ್ರವನ್ನು ಹೇಳಿ ದೇವರಿಗೆ ಹರಕೆ ಮಾಡಿಕೊಂಡ ಜಿಲ್ಲೇದಾರನ ಜವಾನ ಬಿಲ್ಲೇ ಸವರಿಸಿಕೊಂಡು ಜಿಲ್ಲೇದಾರನ ಪಕ್ಕದಲ್ಲೇ ನಿಂತಿದ್ದ.

ಇಪ್ಪರಲ್ಲೇ ದೂರದಲ್ಲಿ ಕಂಡ ಮೋಟಾರಿನ ಬೆಳಕು ಸಮೀಪಕ್ಕೆ ಬಂತು. ಆದರೆ ಜಮೇದಾರನು ಯಿನ್ನು ಹಿಂತಿರುಗಿ ಬಂದಿರಲಿಲ್ಲ. ಅಬೆಳಕಿನ ತೀಕ್ಷಣತೆಯಿಂದ ರೋಡ್ಡುಮೇಲೆ ನಿಂತ ಜವಾನನಿಗೆ ಕಣ್ಣುಗಳು ಮಿಂಚುತ್ತವೆ. ತಡಿಯಲಾರದೆ ಕಣ್ಮುಚ್ಚಿ ಕೈಯನ್ನು ನಿಲ್ಲುಸುವ ಸನ್ನೆಯಿಂದ ಮೇಲಕ್ಕೆತ್ತಿದ. ಮೋಟಾರು ಅವನಿದ್ದಲ್ಲಿಗೆ ಬಂದು ನಿಂತಿತು. ತಲೆಯ ಮೇಲೆ ದೊರೆಯ ಟೋಪೀ ಕೊರಳಲ್ಲಿ ಟೈ. ಬಿಳಿಯ ಕಾಲರ್. ಓರ್ವ ಕಾಲರ್ ಕೋಟೂ ತೊಟ್ಟು ಕಣ್ಣಿಗೆ ಕನ್ನಡಕ ವಿಟ್ಟು ಒಬ್ಬಾತ ಚಕ್ರದ ಮುಂದೆ ಕುಳಿತಿದ್ದಾನೆ. ದೃಷ್ಟಿಯನ್ನು ಬಲಾತ್ಕಾರದಿಂದ ಸರಿಮಾಡಿಕೊಳ್ಳುತ್ತಾ ದೊರೆಯವರು ಸ್ವಯಂ ನಡೆಯಿಸುತ್ತಾರೆಂಬುದನ್ನು ತಿಳಿದಿದ್ದ ಕಾರಣ ಮುಂದಕ್ಕೆ ಸರಿದು, ಆ ಧೊರೆಗೆ ನಮಸ್ಕಾರವನ್ನು ಮಾಡಲಾಗಿ, ಆಮೋಟಾರಿನಲ್ಲಿದ್ದ ದೊರೆಯು ತಿರಿಗಿ ಸಲಾಂ ಮಾಡಿದ. ಇದಕ್ಕೆ ನಮ್ಮ ಸುಬ್ಬಣ್ಣನು ಬಹಳ ಸಂತೋಷ ತಟ್ಟಿ ಆಕಾರದಿಂದ ಶ್ಯಾನಭೋಗನ ಕೈಯಿಂದ ಹುಮ್ಮಿನ ಮಾಲೆಯನ್ನು ತೆಗೆದು ಅವರ ಕೊರಳಿಗೆ ಹಾಕಲು ಏರಡು ಕೈಗಳನ್ನು ಮೇಲಕ್ಕೆತ್ತಿದ. ಈ ಸನ್ನಾಹೋತ್ಸವನಕ್ಕೆ ಮಂಗಳವಾದ್ಯದಂತೆ ನಿಂತಿದ್ದ ಮೋಟಾರು ಎಂರ್ಜ ಜಬಜಬ ಹೊಡೆದುಕೊಳ್ಳುತ್ತಿತ್ತು. ಆ ಧೊರೆಯು ತಲೆಯ ಮೇಲಿದ್ದ ಹಾಟ್ ತೆಗೆದು ತಲೆ ಬಾಗಿದ ಹಿಂದೆಯೇ ಹಾರವನ್ನು ಧೊರೆಯ ಕೊರಳಿಗೆ ಹಾಕಿ, 'ಬೊಕೇ' ಹಣ್ಣು ಆತನ ಕೈಯಲ್ಲ ಕೊಟ್ಟು 'ನಮಸ್ಕಾರ' ಎನ್ನುತ್ತ ಎರಡು ಕೈಗಳನ್ನು ಜೋಡಿಸಿದ. ಮೋಟಾರಿನಲ್ಲಿದ್ದ ಧೊರೆಯು "ಥ್ಯಾಂಕ್ಸ್" ಎಂದಂತೆ ಕೇಳಿ ಸುಬ್ಬಣ್ಣ ಹಿರಿ ಹಿರಿಹಿಗ್ಗಿದ. ಡಿಪ್ಯೂಟಿಕಲೆಕ್ಟರ್ ಪ್ರಸನ್ನರಾದರೆಂದು ತಿಳಿದು ಜಿಲ್ಲೇದಾರನು ಆಸಂತಸದಿಂದ ತನ್ನ ಜವಾನನ ಕೈಯಲ್ಲಿದ್ದ ಹಣ್ಣಿನ ಬುಟ್ಟಿಯನ್ನು ಧೊರೆಯವರಿಗೆ ಕಾಣುಸುಂತೆ ಮೋಟಾರಿನಲ್ಲಿಟ್ಟ. ಮೋಟಾರಿನಲ್ಲಿ ಹಿಂದೆ ಕುಳಿತಿದ್ದ ಡ್ರೈವರ್ ಅದನ್ನು ಸ್ವೀಕರಿಸಿದ ಮೇಲೆ ಧೊರೆಯು "ಮೆನಿಥ್ಯಾಂಕ್ಸ ಗುಡ್‌ನೈಟ್" ಎನ್ನುತ್ತ ಬಲಗಾಲಿನಿಂದ ಗೇರ್‌ಬಾಕ್ಸ್ ತುಳಿದು, ಫುಟ್ ಬ್ರೇಕ್ ಬಿಟ್ಟು, ಮೊದಲನಗೇರ್ ಮೇಲೆ ಮುಂದಕ್ಕೆ ಕೊಂಚದೂರ ನಡೆಯಿಸಿ, ಯರಡನೇ ಗೇಯರ್‌ಗೆ ಬದಲೀ ಮಾಡಿ ಅರ್ಧ ನಿಮಿಷದಲ್ಲೇ ಟಾಪ್ ಗೇರ್‌ನಲ್ಲಿ ಸ್ಪೀಡು ಹೆಚ್ಚುಮಾಡಿ ಎಲ್ಲರು ಹುಚ್ಚಾಗಿ ನೋಡುತ್ತಿರಲಾಗಿ. ದಕ್ಷಿಣಾಭಿಮುಖವಾಗಿ ಕಾರನ್ನು ನಡೆಯಿಸಿ ನಿಮಿಷದಲ್ಲೇ ಮಾಯವಾದ.

ರೋಡ್ಡಿನಲ್ಲಿ ನಿಂತಜನಕ್ಕೆ ಇದೇನೂ ಅರ್ಥವಾಗಲಿಲ್ಲ. ಎಲ್ಲರೂ ನಿರ್ಭ್ರಾಂತರಾಗಿ ಒಬ್ಬರ ಮೋರೆಗಳನ್ನು ಮತ್ತೊಬ್ಬರು ನೋಡಿಕೊಂಡರು. "ಧೊರೆಗಳಿಗೇನಾದರೂ ಸಿಟ್ಟು ಬಂದು ಹೊರಟು ಹೋದರೇನೋ" ಎಂದು ಹೆದರುತ್ತ 'ಜಮೇದಾರನೆಲ್ಲಿ?' ಎಂದು ಶ್ಯಾನಭೋಗನನ್ನು ಕೇಳಿದನು. "ನಾನು ಮುಂದೆ ಬಂದೆ. ಹಿಂದೆ ಬರುತ್ತಿದ್ದಾನೆ. ಅಡಿಗೆಯವನಿಗೆ ಔಷಧ ಹಾಕಿಸುತ್ತಿದ್ದಾನೆಂದು ಹೇಳಿದನು. ಈ ಧೊರೆಗಳು ಡೆಪ್ಯುಟೇಕಲೆಕ್ಟರ್ ಸಾಬರು ಅಹುದೋ ಅಲ್ಲವೋ ಎಂಬ ಸಂದೇಹವು ಸಹ ಉಂಟಾಯಿತು. "ಅಲ್ಲವೇನೋ? "ಎಂದರೂ ಶ್ಯಾನುಭೋಗರು. ಬಹುಶ ಅಲ್ಲ' ನೆಂದರು ಮತ್ತೊಬ್ಬರು. ಅಲ್ಲಿ ಡೆಪ್ಯುಟೆಕಲೆಕ್ಟರ್ ನೊಡಿದನರಾರು ಇಲ್ಲ. "ಸಾಹೇಬರೇ ಆಗದ ಮೇಲೆ ನಾವು ಕೊಟ್ಟ ಹಣ್ಣು, ಏತಕ್ಕೆ ತೆಗೆದುಕೊಳ್ಳುತ್ತಾರೆ? "ಎಂದ ಜಿಲ್ಲೇದಾರ. "ಹೌದು, ಏತಕ್ಕೆ ತೆಗೆದು ಕೊಳ್ಳುತ್ತಾರೆ?" ಎಂದ ಶ್ಯಾನಭೋಗ. "ತೆಗೆದು ಕೊಂದರೆ ಏನು?" ಎಂದನು ಒಬ್ಬ ಮುದಿರೈತ. ಧೊರೆಗಳೇ ಆದರೆ ನೋಟಾರ್ ಅನರೇ ನಡೆಯಿಸುತ್ತಾರೇನು?" ಎಂದ ಶ್ಯಾನಭೋಗ. 'ಈಗ ಅದು ಎಲ್ಲರಿಗೂ ಫ್ಯಾಷನ್. ಡ್ರೈವರ್ ಹಿಂದೆ ಕುಳಿತಿದ್ದ" ಎಂದ ಜಿಲ್ಲೇದಾರ.

ಜಿಲ್ಲೇದಾರರ ಜವಾನ ಪಳಿಬ-ಕುರಕೂಸು-ಡೆಪ್ಯುಟಿಕಲೆಕ್ಟರ್ ಅವರ ಡ್ರೈವರ್‌ರನ್ನಾಗಲೀ ಅನನು ಎಂದೂ ಕಂಡಿರಲಿಲ್ಲ. ಆದರೆ ಹಣ್ಣುಗಳು ಕೊಟ್ಟಮೇಲೆ ಸಹ ನೋಟಾರು ಇಳಿಯದೆ ಮತ್ತೆ ನೋಟಾರು ಸ್ಟಾರ್ಟು ಮಾಡಿದ್ದು ನೋಡೀ ಅಲ್ಲಿಗೆ ಅವನಿಗೆ ಕೊಂಚ ಅನುಮಾನವಾಗಿ ಮುಂದಕ್ಕೆ ಸರಿದು ಒಳಗೆ ಬಗ್ಗಿ ನೋಡಿದ. ಕಾರುಮುಂದಕ್ಕೆ ಹೋದಮೇಲೆ "ಅಯ್ಯಬ್ಬೋ! ಎಷ್ಟು ಕೆಲಸ ಮಾಡಿ ಏರಿ, ರಾಯರೇ! ನನಗೀಗ ಜ್ಞಾಪಕಕ್ಕೆ ಬಂತು. ಆಫ್ಟರ್, ಒಳಗಿದ್ದವನು ಇಮಾನನು, ನನಗೆ ಗೊತ್ತು ಅದು ಜಿಲ್ಲಾ ಆರೋಗ್ಯ ತಾಯೆಯ ಅಧಿಕಾರಿಗಳ ಕಾರು. ಅವರು ಬೆಲ್ತಾಫೀಸರ್ ಸ್ವಾಮಿ! "ಎಂದು ಗೋಳಿಟ್ಟ.

ಇಪ್ಪರಲ್ಲೇ ದೂರದಲ್ಲಿ ಮತ್ತೊಂದು ಮೋಟಾರು ಬರುತ್ತಿರುವಂತೆ ಬೆಳಕೂ ಮತ್ತು ಹಾರ್ನ ಶಬ್ದವೂ ಕೇಳಬಂತು. ಅಬೆಳಕನ್ನು ನೋಡಿಯೂ, ಆಶಬ್ದವನ್ನು ಕೇಳಿಯೂ ಸುಬ್ಬಣ್ಣ ತಲೆಯಮೇಲಿಟ್ಟ ಕೈಯನ್ನು ತೆಗಿಯಲೇ ಯಿಲ್ಲ. ತಾನು ನಿಂತಿರುವದು ಭೂಮಿಯಮೇಲೆ ಅಹುದೋ ಅಲ್ಲವೋ ಆವನಿಗೆ ಸಂಬಿಕೆಯುದ್ದಿಲ್ಲ.

ಆಗಮಾಡುತಕ್ಕದ್ದೇನು? ಹೀಗೆ ಸ್ವಾಗತ ಕೊಡಬೇಕೆಂದು ನಾಚಕರಾರಾದರೂ ಸಲಹೆ ಸುಬ್ಬಣ್ಣನಿಗೆ ಹೇಳಬಲ್ಲರೇನು? ಮುಡಿಪಿನ ದೇವರು ನಿಜವಾಗೂ ಕೈಕೊಟ್ಟಂತೆಯೇ ಏನು?

ಹರಿಜನ ಬಾಲರು — ಉಪಾಧ್ಯಾಯರು.

ಶಾಲೆಗಳಲ್ಲಿ ಹರಿಜನ ಬಾಲರನ್ನು ಸೇರಿಸಬೇಕೆಂಬ ನಿರ್ಬಂಧವಿದ್ದರೂ. ಅದನ್ನು ಬಹುಸಂಖ್ಯಾಕ ಉಪಾಧ್ಯಾಯರು ಶ್ರದ್ಧೆವಹಿಸಿ ಕಾರ್ಯಾ ಚರಣೆಯಲ್ಲಿ ತಂದಿಲ್ಲ. ಊರಿನವರಿಗ ಹೆದರಿ ಎಂಥವಾ ಅಸ್ಪೃಶ್ಯತಾ ಕಳಂಕಕ್ಕೆ ನೂನ್ಯಮಾಡಿ ಹೀಗೆ ಮಾಡುತ್ತಿರುವದು ಶೋಚನೀಯವಾಗಿದೆ. ಇತರ ಮಕ್ಕಳಂತೆ ಸಮದೃಷ್ಟಿಯಿಂದ ಇವರ ಅಭಿವೃದ್ಧಿಗೂ ಕೃಷಿಮಾಡಲು ಕೋರಿಕೆ

[ಕೆ. ರಾ.]

ಭಾರತ – ಸಮಾಚಾರ.

ಲೋಕಮಾನ್ಯ ಬಾಲಗಂಗಾಧರ ತಿಲಕರ ಜನ್ಮದಿನೋತ್ಸವವು ಹಿಂದೂಸ್ಥಾನದ ಮುಖ್ಯ ಪಟ್ಟಣಗಳಲ್ಲೆಲ್ಲಾ ಆಚರಿಸಲ್ಪಟ್ಟಿತು. ಬೊಂಬಾಯಿ ಜೌಪಾತಿ ಮೈದಾನದಲ್ಲಿನ ತಿಲಕರ ಪ್ರತಿಮೆಯು ಅಲಂಕರಿಸಲ್ಪಟ್ಟು ಬೊಂಬಾಯಿನ ಅನೇಕ ಸಾರ್ವಜನಿಕ ಸಂಸ್ಥೆಗಳಿಂದ ಪುಷ್ಪ ಮಾಲಾಂಕೃತವಾಯಿತು.

"ಸ್ವಾತಂತ್ರ್ಯವಿಲ್ಲದೆ ಹಿಂದೂ-ಮುಸ್ಲಿಂ ಐಕ್ಯವಿಲ್ಲವೆಂಬ ಜ್ಞಾನೋದಯವು ಈಗ ಕಾಂಗ್ರೆಸ್ಸಿಗೆ ಉಂಟಾಗಿದೆ. ಹಿಂದೂಸ್ಥಾನದ ಐಕ್ಯತೆಗೆ ಭಂಗಬರದ ಹಾಗೆ ತನ್ನ ನೀತಿಯನ್ನು ಸರಿಪಡಿಸಿಕೊಳ್ಳುವ ಧೋರಣೆಯ ಮತ್ತು ಪ್ರಾಂತಗಳಲ್ಲಿ ಜನಸಂಖ್ಯೆಗನುಗುಣವಾಗಿ ಶಾಸನ ಸಭೆಯಲ್ಲಿ ಸ್ಥಾನಗಳನ್ನು ಕಾದಿಡುವ ಭರವಸೆ ಇತ್ತರೆ - ಕಾಂಗ್ರೆಸ್ ಹೂಡುವ ಯಾವ ಸ್ವಾತಂತ್ರ್ಯ ಸಂಗ್ರಾಮದಲ್ಲಾದರೂ - ಹಿಂದೂ ಮಹಾಸಭೆಯು ಭಾಗವಹಿಸುವುದೆಂದು - ಹಿಂದೂ ಮಹಾಸಭಾಧ್ಯಕ್ಷರಾದ ಶ್ರೀಸಾವರ್ಕರವರು ಹೇಳಿದರು.

ಪಂಜಾಬಿನ ಪ್ರಧಾನರಾದ ಸರ್ ಸಿಕಂದರ ಹಯಾತ್ ಖಾನರು ಮಧ್ಯ ಪೂರ್ವಕ್ಕೆ ಹೋಗಿರುವರು. ಅಲ್ಲಿನ ಭಾರತ ಸೈನಿಕರಿಗೆ ಧೈರ್ಯೋತ್ಸಾಹಗಳನ್ನು ಕೊಡುವುದೇ ಅವರ ಉದ್ದೇಶ.

ಕಾಲರಾಕ್ಕೆ

ಶ್ರೇಷ್ಟ ಮತ್ತು ಶೀಘ್ರ ಗುಣಕಾರಿ.

ಕಾಶ್ಮೀರುಅರುಕ್

(ಋಷಿಯ ವೈದ್ಯ.)

(ವಾಂತಿ)

ಎಲ್ಲರೂ "ಕಾಶ್ಮೀರು ಅರುಕ್" ನ್ನು ಪ್ರತಿನಿತ್ಯ ಎರಡುಸಲ ಸೇವನೆ ಮಾಡುವದರಿಂದ ಕಾಲರಾ ಕ್ರಿಮಿಗಳನ್ನು ನಿರ್ಮೂಲಮಾಡಿ ಕಾಲರಾ ಬಾರದಂತೆ ಕಾಪಾಡುವುದು. ವಾಂತಿ ಭೇದಿಗಳನ್ನು ತಕ್ಷಣ ನಿಲ್ಲಿಸಿ ಜೀರ್ಣಶಕ್ತಿಯನ್ನು ಹೆಚ್ಚಿಸುವುದು.

ಎಲ್ಲಾ ಷಾಪುಗಳಲ್ಲಿ ದೊರೆಯುತ್ತದೆ.

ಹೆಚ್. ಯಸ್. ಅಂಡ್ ಸನ್ಸ್., ಬಳ್ಳಾರಿ.

ಬಳ್ಳಾರಿ ನಗರದಲ್ಲಿ ಕಾಲರಾ ಪ್ರತಿಬಂಧಕೋಪಾಯಗಳು

ಬಳ್ಳಾರಿ ನಗರದಲ್ಲಿ ಕಾಲರಾ ಬೇನೆಯು ಹೆಚ್ಚಿ ಅನೇಕರು ಅದಕ್ಕೆ ಆಹುತಿಯಾಗುತ್ತಲಿದ್ದಕಾರಣ ಸರಕಾರದವರೂ, ಆರೋಗ್ಯಶಾಖೆಯವರೂ ಜನಸಂದಣಿ ಹೆಚ್ಚಿಗಿದ್ದ ಹೋಟಲು, ಶಾಲೆ, ಶಿನಿವಾ ಮಂದಿರಗಳನ್ನು 15 ದಿನಗಳವರೆಗೂ ಮುಚ್ಚಿದರು. ಇದರಿಂದ ಪರಿಸ್ಥಿತಿಯು ಸುಧಾರಿಸಿ ಸೋಂಕು ಕಡಮೆಯಾಯಿತು. ಈ ಅವಧಿಯು 3-ನೆ ತಾರೀಖು ಮುಗಿಯಿತು ಇನ್ನೂ ಸಂಪೂರ್ಣವಾಗಿ ನಿಂತಿಲ್ಲ. ಅಲ್ಲಲ್ಲಿ ಕೇಸುಗಳಾಗುತ್ತಲೇ ಇವೆ.

ಇಂಥಾ ಸಂದರ್ಭದಲ್ಲಿ ಮುನಿಸಿಪಲ್ ಆರೋಗ್ಯಶಾಖೆಯವರು 4 ನೆಯ ತಾರೀಖಿನಿಂದ ಹೋಟೆಲುಗಳನ್ನಾರಂಭಿಸಬಹುದೆಂಬ ನಿರ್ಣಯಕ್ಕೆ ಬಂದಿರುವುದು ವಿವೇಕಯುಕ್ತವಾದುದಲ್ಲ. ಮತ್ತೆ 15 ದಿನಗಳು ಮುಚ್ಚಿದ್ದರೆ ಕಾಲರಾ ಸೋಂಕು ಸಂಪೂರ್ಣವಾಗಿ ಇಲ್ಲದಂತಾಗುತ್ತಿತ್ತು. ಮುನಿಸಿಪಲ್ ಅಧಿಕಾರಿಗಳು ಈಗಲಾದರೂ ತಕ್ಕ ಚರ್ಯೆಯನ್ನು ನಗರ ಹಿತದ ದೃಷ್ಟಿಯಿಂದ ತೆಗೆದುಕೊಳ್ಳುವರೆಂದು ಆಶಿಸುತ್ತೇವೆ.

All India Peoples' Benefit Service.

We reserve our comment for a future issue pending the receipt of essential particulars from the depositors and constituents of the above named 'Service' [Editor.]

ಅಖಿಲಭಾರತ ಚರಕಾಸಂಘ ಕುರುಗೋಡು ಶಾಖೆ (ಬಳ್ಳಾರಿ.)

23-7-42 ರಲ್ಲಿ ಶ್ರೀ ಕೆ. ನೆಂಕಟರಾಮಯ್ಯನವರಿಂದ ಪ್ರಾರಂಭಿಸಲ್ಪಟ್ಟ ಈ ಶಾಖೆಯಲ್ಲಿ ಈಗಾಗಲೇ ಕಾರ್ಯಾರಂಭವಾಗಿದೆ. 50 ಚರಕಾಗಳು ಕೆಲಸ ಮಾಡುತ್ತಲಿವೆ. ಶ್ರೀಗಳಾದ ದೇಶಪಾಂಡೆ ಮತ್ತು ರಂಗರಾವ್ ಪಟೇಲರವರು ಈ ಶಾಖೆಯ ನ್ಯಸಸ್ಥಾಪಕರಾಗಿ ಬಂದಿರುತ್ತಾರೆ. ನೂಲುವ ನುತ್ತು ನೆಯ್ಯುವ ಕಲೆಯಲ್ಲಿ ನುರಿತ ಶ್ರೀ ಭೀಮಪ್ಪ ಎಲೆಗಾರ ಇವರು ಶಿಕ್ಷಕರಾಗಿದ್ದಾರೆ.

ಕುರುಗೋಡು. 29ನೆಯ ತಾರೀಖು ಲೇಬರ್ ಶಾಲೆ ಪೋಷಕರ ಸಂಘವು ಜನಾಬ್ ಜಹೀರುದ್ದೀನ ಸಾಹೇಬರ ಧ್ಯಕ್ಷತೆಯಲ್ಲಿ ಸೇರಿ ಪೋಷಕ ಸಂಘದ ಅಧಿಕಾರವರ್ಗವು ಶ್ರೀ ತಪ್ಪದಿ ಈರಪ್ಪ (ಅಧ್ಯಕ್ಷ) ಶ್ರೀ ರಾಮದಾಸ (ಉಪಾಧ್ಯಕ್ಷ) ವರ್ಷಟ್ಟಿತು. ಹೆ. ಮಾ. ರು. ಕಾರ್ಯದರ್ಶಿ. 10 ಜನ ಇತರ ಸದಸ್ಯರಿದ್ದಾರೆ. ಶ್ರೀ ಓಬಪ್ಪನವರು ಪೋಷಕರ ಸಹಕಾರವನ್ನು ಕುರಿತು ಉನನ್ಯಸಿಸಿದರು

ಡಾ. ನಾಗನಗೌಡರು: ಕಾಂಗ್ರೆಸ್ ಪದವಿಗಳಿಗೆ ರಾಜೀನಾಮೆ.

ಬಳ್ಳಾರಿಜಿಲ್ಲಾ ಜೋರ್ಡು ಅಧ್ಯಕ್ಷರಾದ ಡಾಕ್ಟರ್ ನಾಗನಗೌಡರು ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಸಭೆಯ ಅಧ್ಯಕ್ಷಸ್ಥಾನ, ಎ. ವಿ. ಶಿ. ಶಿ. ಸದಸ್ಯತ್ವ ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಗೆ ರಾಜೀನಾಮೆ ಇತ್ತಿರುವರೆಂದು ಸೊತ್ತಾಗಿದೆ.

ಕಾಂಗ್ರೆಸ್ ವರ್ಕಿಂಗ್ ಸಮಿತಿಯ ನಿರ್ಣಯ.

ಬೊಂಬಾಯಿಯಲ್ಲಿ ಕೂಡಿದ ಕಾಂಗ್ರೆಸ್ ವರ್ಕಿಂಗ್ ಸಮಿತಿಯು ಮಾಡಿದ ನಿರ್ಣಯಗಳ ಸಾರಾಂಶವು ಹೀಗಿದೆ. ಸ್ವತಂತ್ರ ಹಿಂದೂಸ್ತಾನವು ಮಾತ್ರವೇ ತನ್ನ ಮಹತ್ತಾದ ಸಂಪತ್ತನ್ನು ನಾಜಿಜಂ ಫ್ಯಾಸಿಸಂ ಮತ್ತು ಸಾಮ್ರಾಜ್ಯ ಶಾಹೀ ಆಕ್ರಮಣ ವಿರೋಧವಾಗಿ ನಡೆಯುವ ಸ್ವಾತಂತ್ರ್ಯ ಹೋರಾಟದ ಸಲುವಾಗಿ ಉಪಯೋಗಿಸಿ ವಿಜಯ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಆಹ್ವಾನವನ್ನು ಕೊಡುವದು. ಹಿಂದೂಸ್ತಾನದ ಸ್ವಾತಂತ್ರ್ಯವನ್ನು ಸಾರಿದ ಕೂಡಲೇ ಎಲ್ಲಾ ಪಕ್ಷಗಳಿಂದ ಕೂಡಿದ ತಾತ್ಕಾಲಿಕ ಸರಕಾರವನ್ನು ಸ್ಥಾಪಿಸಿ ಸಂಯುಕ್ತ ರಾಷ್ಟ್ರಗಳ ಮಿತ್ರರಾಷ್ಟ್ರವಾಗಿ ಸಹಕರಿಸುವುದು. ಆಕ್ರಮಣದಿಂದ ಹಿಂದೂಸ್ತಾನವನ್ನು ಸಂರಕ್ಷಿಸಲು ಶಸ್ತ್ರಾಸ್ತ್ರ ಶಕ್ತಿ ಮತ್ತು ಅಹಿಂಸಾ ಬಲವೆರೆಲ್ಲಾ ಉಪಯೋಗಿಸುವುದು.

ಚೀನಾ ರಶಿಯಾಗಳ ಸಂರಕ್ಷಣೆಗೆ ಧಕ್ಕೆ ತಗಲುವಾರದು ಅವುಗಳ ಸ್ವಾತಂತ್ರ್ಯವು ಅನರ್ಘ್ಯವಾದದು. ಈ ಹಿಂದೆ ಕಾಂಗ್ರೆಸ್ ಮಾಡಿದ ಬಿನ್ನಹಗಳಿಗೆ ಮನ್ನಣೆ ದೊರೆಯಲಿಲ್ಲ ಸ್ವಾತಂತ್ರ್ಯದ ಸಂಪೂರ್ಣ ಹಕ್ಕು ಹಿಂದೂಸ್ತಾನಕ್ಕೆದೆಯೆಂಬುದನ್ನು ವ್ಯಕ್ತಪಡಿಸಲು ಗಾಂಧೀಜೀಯವರ ನೇತೃತ್ವದಲ್ಲಿ ದೊಡ್ಡ ಪ್ರಮಾಣದ ಸಾರ್ವತ್ರಿಕ ಚಳವಳಿ ಹೂಡಲು ಅಪ್ಪಣೆ ಬೇಡುತ್ತದೆ. ಸಾರ್ವತ್ರಿಕ ಚಳವಳಿಯನ್ನಾರಂಭಿಸುವುದರಿಂದ ಎಲ್ಲಾ ಅಧಿಕಾರವನ್ನು ಕಾಂಗ್ರೆಸ್ಸುಗಳಿಸಬೇಕೆಂಬ ಉದ್ದೇಶವಿಲ್ಲ. ಅಧಿಕಾರ ದೊರೆತಾಗ ಅದು ಎಲ್ಲರದಾಗುವುದು.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೮—೦
ಕನ್ನಡ ದಶೋಪನಿಷತ್ತುಗಳು	೦—೯—೦
ಶಿಷಾನುಶಿಷ್ಟ ಜೋಳಿ	೦—೮—೦
ಸುಮತಿ ಶತಕ	೦—೧—೬

ಅಂಚೆ ಪೆಟ್ಟ ಬೇರೆ ಪುಸ್ತಕ ವ್ಯಾಪಾರಗಳಿಗೆ ಪೆಜ್ಜು ಪುಸ್ತಕ ಕೊಳ್ಳುವರಿಗೂ ಧಾರಾಳವಾದ ಕಮಿಷನ್.

ಕಾಲವ ಸುಬ್ಬಣ್ಣ, ಮುರ್ಜೆಂಟು, ಬಳ್ಳಾರಿ.

ಮರಳಿನ ಚೀಲಗಳು ಮತ್ತು ಇಟ್ಟಿಗೆ ಗೋಡೆಗಳು
ನಿಮ್ಮ ಪ್ರಾಣಸಂರಕ್ಷಣೆ ಮಾಡಬಹುದು.
ಅವು ನಿಮ್ಮನ್ನು ರಕ್ಷಿಸದಿದ್ದರೆ
ನೀವು ನಮ್ಮಲ್ಲಿ ಜೀವವಿಮೆ ಮಾಡಿಸಿದರೆ ಹಾವು ನಿಮ್ಮ ಬಂಧುಗಳನ್ನು ರಕ್ಷಿಸುವೆವು.
ಯುದ್ಧಕಾಲದ ಅಪಾಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಹ ಪ್ರತ್ಯೇಕ ಶುಲ್ಕವಿಲ್ಲದೆ ನಾಗರೀಕರ ಜೀವವಿಮೆಯನ್ನು ಭದ್ರಗೊಳಿಸಲಾಗಿದೆ.

ಇಲ್ಲಿಯವರೆವಿಗೆ ಸಲ್ಲಿಸಿರುವ ಹಕ್ಕುಗಳ ಹಣ ರು 26,00,00,000
ಜಾರಿಯಲ್ಲಿರುವ ವಿಮಾಪತ್ರಗಳ ಸೊತ್ತು ರು 85,50,00,000
ವಾರ್ಷಿಕ ಆದಾಯ 1941ರಲ್ಲಿ ಸುಮಾರು ರು 5,00,00,000
ನಿಧಿಯ ದ್ರವ್ಯ ಸುಮಾರು ರು 30,00,00,000

ಓರಿಯಂಟಲ್

ಗವರ್ನಮೆಂಟು ಸೆಕ್ಯೂರಿಟಿಲೈಫ್ ಅಶ್ಯೂರೆನ್ಸ್ ಕಂಪನಿ, ಲಿಮಿಟೆಡ್.
ಸ್ಥಾಪನೆ ೧೮೭೪. ಮುಖ್ಯ ಕಛೇರಿ ಬೊಂಬಾಯಿ

ಶಾಖೆ:-
ಓರಿಯಂಟಲ್ ಬಿಲ್ಡಿಂಗ್ಸ್ ಆರ್ಮೀನಿಯನ್ ಬೀದಿ, ಜಿ. ಟಿ. ಮದ್ರಾಸು.
ಇನ್ಸ್ಪೆಕ್ಟರವರ ಆಫೀಸು:- ೩೦೨ ರೂಪರ್ಟಸ್ ಗೇಟ್ ಬ್ರಾಸಪೇಟೆ ಬಳ್ಳಾರಿ.

ಬಳ್ಳಾರಿ ಜಿಲ್ಲೆ ಆರೋಗ್ಯ

(1—8—42ಕ್ಕೆ ಮುಗಿಯುವ ವಾರ)

ತಾಲೂಕು	ಹತ	ಸತ್ತವರು
ಆಲೂರು ತಾ.	10	14	6
ಅದವಾನಿ	6	22	9
ಯಮ್ಮಿಗನೂರು	11	85	35
ಬಳ್ಳಾರಿ	3	36	44
ರಾಯದುರ್ಗ	9	21	11
ಡೋಣಿ	12	53	22
ಹರಪನಹಳ್ಳಿ	3	10	7
ಕೂಡ್ಲಿಗಿ	2	3	1

ಕೂಡ್ಲಿಗಿ. ರಾಯದುರ್ಗಗಳಲ್ಲಿ ಒಂದೊಂದು ರಂತೆ ಪ್ಲೇಗು ತಗಲಿ ಸತ್ತಿರುವರು. ಬಳ್ಳಾರಿ ನಗರದಲ್ಲಿ ಕಳೆದವಾರ 55 ಜನರಿಗೆ ಕಾಲರಾ ತಗಲಿ 44 ಜನರು ಸತ್ತಿರುವರು.

ಬಳ್ಳಾರಿ ಜಿಲ್ಲೆ ಕ್ಷಾಮಪರಿಸ್ಥಿತಿ.

1.8.42 ಆದವಾನಿ ತಾಲೂಕಿನ 5 ಪೆಂಪ್ರಗಳಲ್ಲಿ 19212 ಜನರು ಸಹಾಯ ಪಡೆಯುತ್ತಿದ್ದರು. ಇದರಲ್ಲಿ 4241 ಜನರಿಗೆ ಆಹಾರ ಕೂಲಿ ಕೆಲ್ಸವಿಲ್ಲದೆ ಕೊಡಲಾಗುತ್ತಿತ್ತು. ಹೆಬ್ಬಟವಲ್ಲಿ 5056 ಜನರು ಪತ್ತು ಮುರವಣಿ ಕೇಂದ್ರವಲ್ಲಿ 3952 ಜನರು ಸಹಾಯ ಪಡೆದರು. ಆದವಾನಿ, ರಾಯದುರ್ಗ ತಾಲೂಕುಗಳಲ್ಲಿ ನೆಯ್ತಾರರು 5118 ಜನ ಸರಕಾರದ ಕೂಲಿ ಪಡೆದರು. ಇನ್ನೂ ಎಲ್ಲೂ ಕಷ್ಟ ಮಳೆಯಾಗಿಲ್ಲ. ಪರಿಸ್ಥಿತಿ ಬದಲಾಯಿಸಿಲ್ಲ.

ಹೊಳಲುಗುಂದಿ

ಪೋಷಕ ಸಂಘ ಸಮಾವೇಶವು 25ನೇ ಶನಿವಾರ ನೆರೆದು, 8 ನೆಯ ತರಗತಿಯಲ್ಲಿ ಇಂಗ್ಲೀಷ್ ಪ್ರವೇಶ, ಶಾಲಾ ಕಟ್ಟಡದ ರಿಪೇರಿ, ಬಾಲಕರ ಸಂಖ್ಯೆಯನ್ನು ಹೆಚ್ಚಿಸುವ ವಿಷಯಗಳನ್ನು ಚರ್ಚಿಸಲಾಯಿತು.

26 ನೆಯ ತಾ. ಭಾನುವಾರ ಯುದ್ಧ ಪ್ರಚಾರ ಸಮಿತಿಯ ಸಭೆಯು ಛತ್ರದಬಳಿ (National War Front) ನಡೆದು ಜಿಲ್ಲಾ ಸಂಘಟಕರಾದ ಶ್ರೀ ಪಿ. ರಂಗಬ್ರಹ್ಮಂ ರವರೂ, ರಿಟೈರ್ಡ್ ಸಬ್ ಇನ್ಸ್ಪೆಕ್ಟರಾದ ಭೀಮಸೇನರಾಯರೂ, ಯುದ್ಧದಲ್ಲಿ ಬ್ರಿಟಿಷರಿಗೆ ಸಹಾಯಮಾಡಲು ಬಿನ್ನವಿಸಿದರು.

ಮೇಲ್ಕಾಣಿಸಿದ ಎರಡು ಸಭೆಗಳಿಗೂ ಶ್ರೀ ಜಿ. ಬಸವನಗೌಡರು ಅಧ್ಯಕ್ಷಸ್ಥಾನ ವಹಿಸಿದ್ದರು.

ಸಂಸ್ಕೃತ ಪಾಠಶಾಲೆ ಹೊಳಲುಗುಂದಿ

(ಆಲೂರು ತಾ॥)

ಪುನಃ ಪ್ರಾರಂಭವಾಗಲಿದೆ ವಿಶೇಷ ಸೂಚನೆ.

ಸದರಿ ಗ್ರಾಮದ ಸಂಸ್ಕೃತ ಪಾಠಶಾಲೆಯು 'ಶ್ರೀಯೋಂಸಿ ಬಹುವಿಘ್ನಾನಿ' ಎಂಬ ಸುಡಿಯಂತೆ ಅನಂತ ಅನಿವಾರ್ಯ ಪ್ರತಿಬಂಧಗಳ ಮೂಲಕ 7—8 ತಿಂಗಳಲಾಗಾಯಿತು ಜರುಗುವುದು ನಿಂತಿದ್ದು, ಪುನಃ ಇದೇ ಶ್ರಾವಣ ಶುಕ್ಲ ತದಿಗೆಗೆ ಪ್ರಾರಂಭವಾಗುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ. ಈ ಶಾಲೆಯು ಹಿಂದಿನಂತೆ ಇನ್ನು ಮುಂದೆ ಅವಿಚ್ಛಿನ್ನವಾಗಿ ನಡೆಯುವುದೆಂಬುವ ವಿಷಯದಲ್ಲಿ ಸಂದೇಹವಿಲ್ಲ. ಏತಕ್ಕೆಂದರೆ, ಬಳ್ಳಾರಿ ಗುರುನಿವಾಸ ಸಂಸ್ಕೃತ ವಿದ್ಯಾಲಯದ ಮಾಜಿ ಅಧ್ಯಾಪಕರಾದ ಪಂಡಿತ ನೀಲಕಂಠ ಶಿವಾಚಾರ್ಯರನ್ನು ಶ್ರೀ ಮದು ಜ್ಜಯಿನೀ ಶ್ರೀ ಮಹಾಸನ್ನಿಧಿಯವರ ಆಪ್ಪಣೆಯ ಪ್ರಕಾರ ಅಧ್ಯಾಪಕರನ್ನಾಗಿ ನಿಯಮಿಸಲಾಗಿದೆ. ಕಾರಣ ಸಂಸ್ಕೃತ ವಿದ್ಯೆಯನ್ನು ಕಲಿಯ ಬಯಸುವ ಈ ಪ್ರಾಂತದ ವಿದ್ಯಾರ್ಥಿಗಳು ಇದೇ ಶ್ರಾವಣ ಶುಕ್ಲ ದಶಮಿಯ ಒಳಗಾಗಿ ಕೂಡಲೇ ಬಂದು ಸೇರತಕ್ಕದ್ದು.

ತಾ. 2.8.42 } ಕಾರ್ಯದರ್ಶಿಗಳು.
ಹೊಳಲಗುಂದಿ } **ಬಸವನಗೌಡರು,**

ಮಹಾತ್ಮರ ಜನ್ಮದಿನೋತ್ಸವ ೧೦ ಲಕ್ಷ ರೂ. ನಿಧಿಯರ್ಪಣೆ

ಮಹಾತ್ಮಗಾಂಧಿಯವರ 74ನೆಯ ಜನ್ಮದಿನೋತ್ಸವದ ಸಂದರ್ಭದಲ್ಲಿ ಅಖಿಲ ಭಾರತ ಚರಖಾಸಂಘದವರು 10 ಲಕ್ಷ ರೂ. ನಿಧಿಯನ್ನರ್ಪಿಸಿ, ಅದನ್ನು ಖಾದಿ ಉತ್ಪನ್ನೆ ಅಭಿವೃದ್ಧಿಯ ಕಾರ್ಯದಲ್ಲಿ ವಿನಿಯೋಗಿಸಲಿರುವರು. ಬೀಹಾರ ರಾಜ್ಯದವರು 74 ಸಾವಿರರೂ, ಗುಜರಾತಿನವರು 1½ ಲಕ್ಷ ರೂ. ಬೊಂಬಾಯಿ ಶಾಖೆಯವರು, 4 ಲಕ್ಷ ರೂ ನಿಧಿಗಾಗಿ ಶೇಖರಿಸಲಿರುವರು. ಬಂಗಾಳದಲ್ಲಿ ಕೊನೆಯ ಪಕ್ಷಕ್ಕೆ 74 ಸಾವಿರ ರೂಪಾಯಿಗಳನ್ನಾದರೂ ಸಂಗ್ರಹಿಸಲಿದ್ದಾರೆ.

ಅಂಗಡಿಗಳನ್ನು ಹುಡುಕುವ ಅಧಿಕಾರ.

ಕಾರ್ಖಾನೆ ಅಂಗಡಿಗಳನ್ನು ಹೊಕ್ಕು ಹುಡುಕುವ ಅಧಿಕಾರವನ್ನು, ಇಂಡಿಯಾ ರಕ್ಷಣೆ ಶಾಸನದ ನ್ಯಾಯ ಅಧಿಕಾರಿಗಳಿಗೆ ವಹಿಸಲಾಗಿದೆ

ಅಖಿಲಭಾರತ ಮುಸ್ಲಿಂಲೀಗ್ ಕಾರ್ಯಕಾರಿಣೀಸಮಿತಿಯು ಈ ತಿಂಗಳ 16ನೆಯ ತಾ. ಬೊಂಬಾಯಿಯಲ್ಲಿ ಕೂಡುವುದೆಂದು ಪ್ರಕಟವಾಗಿದೆ.

Visit Royal Cafe
Near Royal Picture Palace
ROYAL is ROYAL

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸು ಕಂಪೆನಿ, ಲಿಮಿಟೆಡ್

ಸ್ಥಾಪನೆ: 1897.

45 ನೇ ವಾರ್ಷಿಕ ವರದಿಯ ಕೆಲವು ಮುಖ್ಯ ಅಂಶಗಳು

ಒಟ್ಟು ಆದಾಯ	ರೂ. 85,61,000 ಮೀರಿದೆ
ಚಾಲ್ತಿಯಲ್ಲಿರುವ ವಿಮಾ ಪಾಲಿಸಿಗಳು	ರೂ. 14,84,44,000 ,,
ಆಸ್ತಿ	ರೂ. 5,80,86,000 ,,

ಕಂಪೆನಿ ಪ್ರಾರಂಭವಾದ ಲಾಗಾಯ್ತು ಪಾವತಿ ಮಾಡಿರುವ ಕ್ಲೈಂಗಳು ರೂ. 7,48,66,000 ,,

ಏಜನ್ಸಿಗಳಿಗೆ ದರಖಾಸ್ತುಗಳನ್ನು ಕಳುಹಿಸುವುದು.

ಮುಖ್ಯ ಕಛೇರಿ:
ಎಂಪೈರ್ ಆಫ್ ಇಂಡಿಯಾಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬೆಂಗಳೂರು ಬ್ರಾಂಚ್:
ಡಿಸ್ಟ್ರಿಕ್ಟ್‌ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರಿಯುತ್ತವೆ ನಮ್ಮ ಹೆಸರಿನ ಲೇಬಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತವೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮೂಡಿದ ಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ ಮೆನ್ಸ್ ಬಂಡೆ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ಹಿಂದಿ - ಹಿಂದೂಸ್ಥಾನಿ ಕಲಿಯಿರಿ

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು,
- ಮಾತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ?

ಹಾಗಾದರೆ ಕೂಡಲು ಕಳಗಿನವರಲ್ಲಿ ವಿವರಗಳನ್ನು ತಿಳಿಯಿರಿ

ನಿಮಗನುಕೂಲವಾದ ಶಿಕ್ಷಣಕ್ಕೆ ವರ್ಷದಿಸಲಾಗುವುದು. ಪರೀಕ್ಷೆಯ ಪಾರ್ಕ ಪ್ರಶ್ನೆಗಳು ಕಛೆ ಕಾದಂಬರಿ ಪತ್ರಿಕೆ ದೊರೆಯುವುದಲ್ಲದೆ ನಿಮಗೆ ಎಲ್ಲಾ ನಿದಾನದ ಗುಹಿತಿಯೂ, ನೆಚ್ಚಿಗಾಗಿ ಹೇಳಲಾಗುವುದು

ಟಿ. ಬಿ. ಕೇಶವರಾವ್,
ಕೃಷ್ಣ ಮೋಚಾರಿ ಕಾಂಪೌಂಡು, ಬಳ್ಳಾರಿ

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription

Annual

Local 2—0—0
Moffusil 3—0—0

6 Months

Local 1—4—0
Moffusil 2—0—0

ಚಂದಾ ವಿವರ
ವರ್ಷಕ್ಕೆ
ಬಳ್ಳಾರಿಯವರಿಗೆ 2-0-0
ಹೊರಗಿನವರಿಗೆ 3-0-0
೬ ತಿಂಗಳಿಗೆ
ಬಳ್ಳಾರಿಯವರಿಗೆ 1-1 0
ಹೊರಗಿನವರಿಗೆ 2 0 0

Nava Bharat, Bellary.

REG. No. M. 3937.

Sri _____

_____

_____

Printed at Vittal Press, Car Street Edited & Published by T. B. Keshava Rao, Bellary

Reg. No. M. 3937 ವಂದೇ ಮಾತರಂ

ನವಭಾರತ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯ ವರಾನ್ನಿಬೋಧತ.

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—

ಸಂಚಿಕೆ ೪೫ ಬಳ್ಳಾರಿ ಆಗಸ್ಟು ೧೬ ನೇ ಭಾನುವಾರ ೧೯೪೨. ಟಿ. ಬಿ. ಕೇಶವರಾವ್

ಕಾಕಸಸದಲ್ಲಿ ಜರ್ಮನರ ಪ್ರವೇಶ

ಕಾಕಸಸ್ ಶತ್ರುವಶವಾದರೆ.....?

ರಸಿಯೆನ್ನರ ಸರ್ವಸ್ವವೇ ಹೋದಂತಾಗುವದು!!

ಯುಕ್ರೇನದಲ್ಲಿಯ ಗೋಧಿ ಮತ್ತು ಕಾಕಸಸದಲ್ಲಿಯ ಎಣ್ಣೆಯನ್ನು ಪಡೆಯಲು ಆಚ್ಚೆನರಾಷ್ಟ್ರಗಳು ವಿಶೇಷತಃ ಜರ್ಮನಿಯು ಎಷ್ಟೊಂದು ಸಾಹಸ ಪಡುತ್ತಿದೆಂಬುದು ಕಳೆದ ಒಂದು ವರ್ಷದಿಂದ ನಡೆದ ರಶಿಯದ ಯುದ್ಧದಿಂದ ಗೊತ್ತಾಗುವದು. ಕಾಕಸಸಲ್ಲಿ ಜರ್ಮನರು ಒಳ್ಳೇ ವೇಗದಿಂದ ನುನ್ನುಗ್ಗ ಹತ್ತಿದ್ದು ಕ್ರೊಪಟಕೇನಸೆಂಬ ಮಹತ್ವದ ರೇಲ್ವೆ ಕೇಂದ್ರವನ್ನು ಈಗ ಆಕ್ರಮಿಸಿಕೊಂಡಿರುವರೆಂದು ಸುದ್ದಿ ಬಂದಿದೆ. ಕಾಕಸಸದ ಎಣ್ಣೆ ಕೊಳವಿಗಳಲ್ಲಿ ಒಂದು ಕೊಳವಿ ಈ ಭಾಗದಲ್ಲಿರುವದು. ಯುಕ್ರೇನನಂತೂ ಸಂಪೂರ್ಣವಾಗಿ ಶತ್ರುಗಳ ವಶವಾಗಿದೆ. ಈ ಪರಿಸ್ಥಿತಿಯಲ್ಲಿ ಯುಕ್ರೇನ ಮತ್ತು ಕಾಕಸಸದ ಬಗ್ಗೆ ಸ್ವಲ್ಪ ವಿಷಯಗಳನ್ನು ತಿಳಿದುಕೊಳ್ಳುವುದು ಉಪಯುಕ್ತವಾಗದು.

ಯುಕ್ರೇನ ಮತ್ತು ಕಾಕಸಸಗಳು ರಶಿಯದ ಬೆನ್ನೆಲುಬುಗಳೆಂದು ಹೇಳಿದರೆ ತಪ್ಪಾಗದು. ಇಡೀ ರಶಿಯದಲ್ಲಿರುವ 17 ಕೋಟಿ ಜನಸಂಖ್ಯೆಯಲ್ಲಿ ಸುಮಾರು 4 ಕೋಟಿ ಜನರು ಯುಕ್ರೇನದಲ್ಲಿರುವರು. ಸೋವಿಯಟ್ ಯೂನಿಯನ್‌ದಲ್ಲಿ ಯುಕ್ರೇನವು ಒಕ್ಕಲತನದ ಮತ್ತು ಔದ್ಯೋಗಿಕ ಪ್ರದೇಶವು. ಶಾಂತಿ ಕಾಲದಲ್ಲಿ ರಶಿಯಕ್ಕೆ ಬೇಕಾಗುವ ಗೋಧಿಯಲ್ಲಿ 100ಕ್ಕೆ 20ರಷ್ಟು ಗೋಧಿಯು ಮತ್ತು ಬಾರ್ಲಿ, ಓಟ್ಸು, ಸಕ್ಕರೆ ಮುಂತಾದ್ದು ಯುಕ್ರೇನದಿಂದಲೇ ದೊರೆಯುತ್ತದೆ. ಈ ಪ್ರದೇಶದ ಮಧ್ಯ ಭಾಗದಲ್ಲಿಯೇ ಡಾನೆಜದ ಫಲವತ್ತಾದ ಪ್ರದೇಶವಿರುವದು ಇಲ್ಲಿ 100ಕ್ಕೆ 60ರಷ್ಟು ಕಲ್ಲಿದ್ದಲಿ, 60 ರಷ್ಟು ಕಬ್ಬಿಣ ಅದಿರು 50 ರಷ್ಟು ಉಕ್ಕು ಮತ್ತು 70ರಷ್ಟು ಅಲ್ಯುಮಿನಿಂ ದೊರೆಯುತ್ತವೆ ಈ ಭಾಗದಲ್ಲಿ ಮಹತ್ವದ ಔದ್ಯೋಗಿಕ ಕೇಂದ್ರಗಳೆಂದರೆ ಯು.ಕ್ರೇನದ ರಾಜಧಾನಿಯಾದ ಕೀವ, ಖಾರಖಿನ ಸ್ಟಾಲಿನ ಗ್ರಾಡ ನೀಸರ ನೆಪ್ರೋವಸ್ಕ ಮತ್ತು ಮುಖ್ಯ ಬಂದರವಾದ ಒಡೆಸಾ ನೊದಲಾದವುಗಳಿರುವವು.

ಮಧ್ಯ ಯುಕ್ರೇನದಲ್ಲಿರುವ ಔದ್ಯೋಗಿಕ ಯಂತ್ರಗಳಿಗೆ ನಿಪ್ರೊಪೆಟ್ರೊವಸ್ಕದ ದಕ್ಷಿಣಕ್ಕಿರುವ ಝಾಪೊರೊಜೊ ವಿದ್ಯುತ್ಕೇಂದ್ರದಿಂದ ವಿದ್ಯುತ್ತನ್ನು ಪೊದಲು ಸ್ಪೂರೈಸಲಾಗುತ್ತಿತ್ತು. ಇಲ್ಲಿ ದೊಡ್ಡದೊಂದು ಒಡ್ಡು ಹಾಕಿ ನೀಸರ ನದಿಯಿಂದ ನೀರು ತೆಗೆದುಕೊಳ್ಳಲಾಗುತ್ತಿತ್ತು. ಆದರೆ 1941 ರಲ್ಲಿ ಜರ್ಮನರು ಆದನ್ನು ಆಕ್ರಮಿಸುವ ಹೊಂಚು ಹಾಕಿ ಸಮೀಪಕ್ಕೆ ಬಂದ ಕೂಡಲೆ ರಶಿಯನ್ನರು ಆದನ್ನು ಹಾರಿಸಿಬಿಟ್ಟರು. ಔದ್ಯೋಗಿಕ ಯಂತ್ರಗಳು ಶತ್ರುಗಳಿಗೆ ಸಿಕ್ಕಬಾರದೆಂದೂ ಈ ಭಾಗದಲ್ಲಿ ಶತ್ರುಗಳು ನೀಪರ ನದಿಯನ್ನು ದಾಟಿ ಬರಬಾರದೆಂದೂ ಹೀಗೆ ಒಡ್ಡನ್ನೇ ಹಾರಿಸಿಬಿಡಲಾಯಿತು. ಆದರೆ ಇದರಿಂದ ಎಷ್ಟು ಸ್ಫೂರ್ತಿಯಾಯಿತೆಂಬುದು ಸರಿಯಾಗಿ ತಿಳಿದಿಲ್ಲ. ಕಾಕಸಸದಲ್ಲಿ ಎಣ್ಣೆ ಸಿಕ್ಕುವದಲ್ಲದೆ ಕಲ್ಲಿದ್ದಲಿ, ಕಬ್ಬಿಣ ನಿಕೆಲ್ ಮತ್ತು ಮ್ಯಾಂಗಾನೀಜಗಳೂ ವಿಪುಲವಾಗಿ ದೊರೆಯುವವು.

ಮೊದಲು ಈ ಎಣ್ಣೆ ಕ್ಷೇತ್ರದ ಉಪಯೋಗವನ್ನು ಅಷ್ಟು ಹೆಚ್ಚಾಗಿ ಮಾಡಿಕೊಳ್ಳುತ್ತಿರಲಿಲ್ಲ. ಈಗಿನಂತೆ ಬೇರೆ ಬೇರೆ ಉದ್ಯೋಗ ಧಂದೆಗಳಿಗಾಗಿ ಇದರ ಉಪಯೋಗಮಾಡಿಕೊಳ್ಳಬೇಕೆಂಬ ಪ್ರವೃತ್ತಿಯೂ ಇರಲಿಲ್ಲ. ಪ್ರತಿ ದಿನ 1000 ಪುಟು ಕೆಳಗೆ ಕೋರಿ ಸಾವಿರ ಟನ್ನಿನಷ್ಟು ಎಣ್ಣೆಯನ್ನು ತೆಗೆದು ಟನ್ನಿಗೆ 3 ಸಿಲಿಂಗ್‌ನಿಂದ 4 ಸಿಲಿಂಗಗಳಂತೆ ಮಾರಿದರೆ ಆಷ್ಟೊಂದು ಲಾಭವಾಗುವದೆಂದು ಎನಿಸುತ್ತಿರಲಿಲ್ಲ. ಅಂತೆಯೇ ಹಾಳಾಗುತ್ತಿರುವ ಎಣ್ಣೆಯನ್ನು ಸಂಗ್ರಹ ಮಾಡಲು ಮತ್ತು ಸಂಪದಭಿವೃದ್ಧಿಮಾಡಲು ಅಷ್ಟೊಂದು ಪ್ರೋತ್ಸಾಹನೆ ಆಕರ್ಷಣೆ ಇರಲಿಲ್ಲ. ಪ್ರತಿದಿನ ಸ್ವಾಭಾವಿಕವಾಗಿ ಹರಿದು ಹೋಗುತ್ತಿರುವ 10-12 ಸಾವಿರ ಟನ್ನು ಎಣ್ಣೆ ಮತ್ತು 5 ಲಕ್ಷ ಟನ್ನು ಎಣ್ಣೆ ಹಾಳಾಗಿ ಹೋಗುತ್ತಿದ್ದಿತು. ಆಗ ಸಂಗ್ರಹ ಮಾಡುವ ಕಲೆಯೂ ಗೊತ್ತಿರಲಿಲ್ಲ ಮಣ್ಣಿನಸಾಮಗ್ರಿಗಳಲ್ಲಿ ತುಂಬುತ್ತಿದ್ದುದರಿಂದ ಎಷ್ಟೋ ಎಣ್ಣೆ ಹಾರಿ ಹೋಗುತ್ತಿದ್ದಿತು ಆಗ ಕೇನಲ ಚಿಮಣಿ ಎಣ್ಣೆಯನ್ನೇ ತೆಗೆಯುತ್ತಿದ್ದರು. ಈಗಿನಂತೆ ಉಳಿದ ಎಣ್ಣೆಯ ಉಪಯೋಗ ಮಾಡುತ್ತಿರಲಿಲ್ಲ ಆದರೆ ಹೊಸ ಹೊಸ ಸಂಶೋಧನೆಗಳು ಆಗುತ್ತ ನಡೆದಂತೆ ಈ ಎಣ್ಣೆಯಲ್ಲಿಯೂ ಸಂಶೋಧನೆಯಾಗಿ ಬೇರೆ ಬೇರೆ ಉದ್ಯೋಗ ಮಾಡಿಕೊಳ್ಳಬೇಕೆಂದು ಗೊತ್ತಾಯ್ತು. ಎಣ್ಣೆಗೆ ಹೆಚ್ಚಿಗೆ ಮಹತ್ವ ಪ್ರಾಪ್ತವಾಯಿತು. ಸದ್ಯದ ಯುದ್ಧದಲ್ಲಿ ಯಂತೂ ಅದಕ್ಕೆ ಮೊದಲನೇ ಸ್ಥಾನವೇ

ಮರಳಿನ ಚೀಲಗಳು ಮತ್ತು ಇಟ್ಟಿಗೆ ಗೋಡೆಗಳು

ನಿಮ್ಮ ಪ್ರಾಣಸಂರಕ್ಷಣೆ ಮಾಡಬಹುದು.

ಅವು ನಿಮ್ಮನ್ನು ರಕ್ಷಿಸದಿದ್ದರೆ

ನೀವು ನಮ್ಮಲ್ಲಿ ಜೀವವಿಮೆ ಮಾಡಿಸಿದರೆ ನಾವು ನಿಮ್ಮ ಬಂಧುಗಳನ್ನು ರಕ್ಷಿಸುವೆವು.

ಯುದ್ಧಕಾಲದ ಅಪಾಯವನ್ನು ದೃಷ್ಟಿಯಲ್ಲಿಟ್ಟು ಸಹ ಪ್ರತ್ಯೇಕ ಶುಲ್ಕವಿಲ್ಲದೆ ನಾಗರೀಕರ ಜೀವವಿಮೆಯನ್ನು ಭದ್ರಗೊಳಿಸಲಾಗಿದೆ.

ಇಲ್ಲಿಯವರೆವಿಗೆ ಸಲ್ಲಿಸಿರುವ ಹಕ್ಕುಗಳ ಹಣ ರು 26,00,00,000
ಜಾರಿಯಲ್ಲಿರುವ ವಿಮಾಪತ್ರಗಳ ಮೊತ್ತ ರು 85,50,00,000
ವಾರ್ಷಿಕ ಆದಾಯ 1941ರಲ್ಲಿ ಸುಮಾರು ರು 5,00,00,000
ನಿಧಿಯ ಪ್ರವ್ಯ ಸುಮಾರು ರು 30,00,00,000

ಓರಿಯಂಟಲ್

ಗವರ್ನಮೆಂಟು ಸೆಕ್ಯೂರಿಟಿಲೈಫ್ ಅಶ್ಯೂರೆನ್ಸ್ ಕಂಪನಿ, ಲಿಮಿಟೆಡ್.
ಸ್ಥಾಪನೆ ೧೮೭೯. **ಮುಖ್ಯ ಕಛೇರಿ ಬೊಂಬಾಯಿ**

ಶಾಖೆ:-

ಓರಿಯಂಟಲ್ ಬಿಲ್ಡಿಂಗ್ಸ್ ಆರ್ಮೀನಿಯನ್ ಬೀದಿ, ಜಿ. ಟಿ. ಮದ್ರಾಸು.

ಇನ್ಸ್ಪೆಕ್ಟರರವರ ಆಫೀಸು:- ೩೧೨ ರೂಪರ್ಟ್ಸ್ ಗೇಟ್ ಬ್ರಾಸಪೇಟೆ ಬಳ್ಳಾರಿ.

ದೊರೆತದ್ದರಿಂದ ಅದಕ್ಕಾಗಿಯೇ ಜೋರಾಟ ತೀವ್ರ ಸ್ವರೂಪದಲ್ಲಿ ನಡೆದಿದೆ.

ರಶಿಯದಲ್ಲೀಗ ೩ ಕೋಟಿ ಟನ್ನ ಕ್ರೂಡ್ಆಯಿಲ್ ಪ್ರತಿವರ್ಷ ಹೊರಡುತ್ತಿದೆ ಎಂದರೆ ಇಡೀ ಜಗತ್ತಿನಲ್ಲಿಯ ಎಣ್ಣೆಯ ೧/೧೦ ಎಣ್ಣೆ ಹೊರಡುತ್ತದೆ. ಇದೆಲ್ಲ ಅತ್ಯುತ್ತಮ ಎಣ್ಣೆ ಆದರೂ ಬಾಕೂದಲ್ಲಿಯ ಹಳೆಯ ಎಣ್ಣೆ ಭಾವಿಗಳಿಂದಲೇ ಇನ್ನೂ ೧೦೦ಕ್ಕೆ ೭೦ ರಷ್ಟು ಎಣ್ಣೆ ಬರುತ್ತದೆ. ರಶಿಯದಲ್ಲಿಯ ಎಣ್ಣೆ ಶುದ್ಧ ಮಾಡುವ ಕೇಂದ್ರಗಳಲ್ಲಿ ೧೦೦ಕ್ಕೆ ೯೦ ರಷ್ಟು ಕಾಕಸಸದಲ್ಲಿಯೇ ಅದರಲ್ಲಿಯೂ ಬಾಕೂ ಮತ್ತು ಗ್ರೂಝುನಿಯ ಬಾಹ್ಯ ವಲಯದಲ್ಲಿಯೆ ಇವೆ. ಕಾಕಸಸದಲ್ಲಿಯ ಮುಖ್ಯ ಎಣ್ಣೆ ಕ್ಷೇತ್ರಗಳಲ್ಲಿ ೩೩೦ ಲಕ್ಷ ಟನ್ ಎಣ್ಣೆಯು ಬಾಕೂ ಜಿಲ್ಲೆಯಲ್ಲಿ ಇಲ್ಲವೆ ಅವರೇಶಾನ ಪೆನೆನ್‌ಶುಲಾದ ಹತ್ತರ ದೊರಕುತ್ತಿದೆ ಅಲ್ಲಿರುವ ಬೇರೆ ಬೇರೆ ೧೨ ಟ್ಯಾಂಕುಗಳಲ್ಲಿ ಸುಮಾರು ೧೩೫ ಕೋಟಿ ಟನ್ನ ಎಣ್ಣೆ ಹಿಂದಿರಶಿಯದ ಎಣ್ಣೆಯ ಸಂಗ್ರಹದಲ್ಲಿ ಸುಮಾರು ೧೦೦ಕ್ಕೆ ೫೦ ರಷ್ಟು ಅಲ್ಲಿ ಸಂಗ್ರಹಿಸಲಾಗುತ್ತಿದೆಯಂತೆ. ಈ ಬಾಕೂ ಜಲ್ಲೆಯ ಎಣ್ಣೆಯ ಸಂಗ್ರಹಾಲಯವನ್ನು ಬಿಟ್ಟರೆ ಗ್ರೋಝುನಿ ಎಣ್ಣೆ ಕ್ಷೇತ್ರವು ಹೆಚ್ಚು ದೊಡ್ಡದಿದೆ ಇದು ಟೆರೆಕ್ಕ್ ಪ್ರಾಂತದಲ್ಲಿದ್ದು ಇಲ್ಲಿ ಪ್ರತಿ ವರ್ಷ ೨೭ ಲಕ್ಷ ಟನ್ ಎಣ್ಣೆ ಸಿಕ್ಕುತ್ತಿದ್ದು ಒಟ್ಟು ೧೫೫ ಕೋಟಿ ಟನ್ ಎಣ್ಣೆ ಸಂಗ್ರಹಿಸಲಾಗಿದೆಯಂತೆ.

ಈ ಎಣ್ಣೆಯ ಕ್ಷೇತ್ರಗಳಲ್ಲಿಯ ಎಣ್ಣೆಯನ್ನು ಕ್ಯಾಸ್ಪಿಯನ್ ಸಮುದ್ರದಲ್ಲಿ ಹಡಗುಗಳಿಂದ ವೋಲ್ಗಾದವರೆಗೆ ಒಯ್ಯಲಾಗುವದು. ಇಲ್ಲವೆ ರೇಲ್ವೆಯಿಂದ ಅಥವಾ ಪಾಯಿಪಲಾಯಿನ್‌ದಿಂದ ಮಧ್ಯ ಪ್ರದೇಶಕ್ಕೆ ಅಥವಾ ಕಪ್ಪು ಸಮುದ್ರದ ಬಟೋಅಮ್ಮ ನವೊರೊಸಿಸ್ಕ, ಇಲ್ಲವೆ ಟುಯಾಪೆಜ ಬಂದರಗಳಿಗೆ ಕಳಿಸಲಾಗುವದು. ಈ ಬಂದರಗಳಲ್ಲಿ ಎಣ್ಣೆ ಸಂಗ್ರಹ ಮಾಡಲು ಬಹಳ ದೊಡ್ಡ ಟ್ಯಾಂಕಗಳನ್ನಿಡಲಾಗಿದೆ. ರೇಲ್ವೆ ಮಾರ್ಗವಾಗಿ ಸುಮಾರು ೧೫೦ ಲಕ್ಷ ಟನ್ ಸಮುದ್ರಮತ್ತು ಕಾಲುವೆ ಮಾರ್ಗವಾಗಿ ೧೫ ಕೋಟಿ ಟನ್ನು ಮತ್ತು ಪಾಯಿಪಲಾಯಿನ್ ಮಾರ್ಗವಾಗಿ ೬೦ ಲಕ್ಷ ಟನ್ ಎಣ್ಣೆಯನ್ನು ಈ ಬಂದರಗಳಿಗೆ ಒಯ್ಯಲಾಗುತ್ತಿದೆಯೆಂದು ಅನೇಕ ವರ್ಷಗಳ ಹಿಂದೆ ಅಂದಾಜ ಮಾಡಲಾಗಿತ್ತು.

ಬಾಕೂದಿಂದ ಕೆಲ ಅಂತರದ ಮೇಲೆ ಪಡಭೂಮಿಯಿವ್ವು ಮಳೆಯೂ ಕಡಮೆ, ಬಿಸಲೂ ಹೆಚ್ಚು. ಬರುಗಾಳಿಯೂ ನೇಲಿಂದ ನೇಲೆ ಬೀಸುವದು. ದಾರಿಯಲ್ಲಿ ಸಂಗ್ರಹವಾಗುತ್ತಿರುವ ಉಸುಕಿನಿಂದ ಬಾಕುವಲ್ಲಿ ಅನೇಕ ಸಲ ರೇಲ್ವೆ ಸಂಚಾರಕ್ಕೆ ತಡೆಯುಂಟಾಗುತ್ತಿದೆ. ಆದರೆ ಬೆಳಿಸಿದ ಆಜೆಗೆ ಕುರಾಕಣಿಯ ನಂತೆಗೆ ಪ್ರದೇಶವು ಇಳಕ ಲಾಗಿನೆ. ಈ ಪ್ರದೇಶದಲ್ಲಿ ಹಸರು ಭೂಮಿ ಗೆಳನ್ನು ಕಾಣಬಹುದು. ಬಾಕು ಜಲ್ಲೆಯ ಎಲ್ಲಿಯ ಈ ಪ್ರದೇಶಕ್ಕೂ ಗ್ರೋಜಿನಿಯಲ್ಲಿಯ ಎಣ್ಣೆ ಪ್ರದೇಶಕ್ಕೂ ಬಹಳ ವ್ಯತ್ಯಾಸವಿದೆ. ಗ್ರೋಝುನಿ ಪ್ರದೇಶವು ಅತ್ಯಂತಮನೋಹರವಾಗಿದ್ದು ಫಲವತ್ತಾದುದಿದೆ. ಮನೋಹರವಾದ ಸಣ್ಣ ಸಣ್ಣ ಗುಡ್ಡಗಳು ಕಿಕ್ಕೋವೆ ಡಸ್ಯ (ಆಸಿಡ್‌ನೀರು) ಮತ್ತು ಪಿಯಾಟ ಗೊರಸ್ಕದಂಥ ಜಲಾಶಯಗಳುಳ್ಳದ್ದಾಗಿ ಇರುವದು. ಕಾಕಸಸದಲ್ಲಿಯ ದೃಶ್ಯವು ಜಗತ್ತಿನಲ್ಲಿಯ ಹಲವು ಮನಮೋಹಕ ದೃಶ್ಯಗಳಲ್ಲೊಂದಾಗಿದೆ. ಚಳಿಗಾಲದಲ್ಲಿ ಕಣಿವೆಯು ಬರ್ಫಾಚ್ಛಾದಿತವಿದ್ದು ಅನೇಕ ಸಲ ಮಾರ್ಗಗಳ ಸಂಚಾರಕ್ಕೆ ಅತ್ಯಂತ ಗಂಡಾಂತರದ್ದಾಗಿ ಪರಿಣಮಿಸುವದು.

ಈ ರೀತಿ ಅತ್ಯಂತ ಫಲವತ್ತಾದ ಮತ್ತು ಔದ್ಯೋಗಿಕ ಕೇಂದ್ರವಾದ ಯುಕ್ರೇನವು ಈಗಾಗಲೇ ಶತ್ರುವಶವಾಗಿದೆ. ಎಣ್ಣೆಯ ಆಗರವೂ ಕಲ್ಲಿದ್ದಲಿ ಕಬ್ಬಿಣದ ಗಣಿಗಳಿರುವ ಕಾಕಸಸವು ಶತ್ರುವಶವಾದರೆ ಸರಿಸ್ಥಿತಿಯು ತೀರ ಭಯಾನಕವಾಗಬಹುದು ಮತ್ತು ರಶಿಯದ ಸರ್ವಸ್ವನೇ ಹಾಳಾದಂತಾಗುವದೆಂಬದನ್ನು ಬೇರೆ ಹೇಳಬೇಕಾಗಿಲ್ಲ.

[ಕರ್ಮವೀರ]

—ಮುಸಲೀ ಪಟ್ಟಣದಲ್ಲಿಯೂ ಕೂಡ ರೈಲ್ವೆ ಸ್ಟೇಷನ್ನಿಗೆ ಮುತ್ತಿಗೆ ಹಾಕಿರುವರು.

—ಢಾಕಾ ಮತ್ತು ಜಲಗಾಂಗಳಲ್ಲಿ ತಂತಿ ಮತ್ತು ಟೆಲಿಫೋನ್‌ಗಳನ್ನು ಕತ್ತರಿಸಲಾಗಿದೆ. ಕಲ್ಕತ್ತಾದಲ್ಲಿ ವಿದ್ಯಾರ್ಥಿಗಳು ಟ್ರಾಮ-ಬೋಟಾರಗಳಿಗೆ ಬೆಂಕಿ ಹಚ್ಚಿರುವರು. 11ನೆಯ ತಾರೀಖ ಸಾಯಂಕಾಲ ಗುಂಡು-ಹಾರಿಸಿದ ಕಾರಣ 8 ಜನರಿಗೆ ಘಾಯವಾಗಿದೆ.

ಮೈಸೂರು ಮುಖಂಡರ ಬಂಧನ

ಶ್ರೀ ಗಳಾದ ಕೆ. ಪಟ್ಟಾಭಿರಾಮಣ್ ದೊರೆಸ್ವಾಮಿ, ಭಾಷ್ಯಂ, ಟಿ. ಸುಬ್ರಹ್ಮಣ್ಯಂ, ಚಿಂಗಲರಾಯರೆಡ್ಡಿ ಮತ್ತೆರೆ ಅನೇಕರನ್ನು ಮೈಸೂರು ಸರ್ಕಾರದವರು ಬಂಧಿಸಿರುತ್ತಾರೆ.

ರಷ್ಯಾದಲ್ಲಿ ಜರ್ಮನರು

ಉತ್ತರದಿಂದ ಜರ್ಮನ ಸೈನ್ಯಗಳು ಆಸ್ಟ್ರಖಾನದ ಕಡೆಗೆ ಹೊರಟಿವೆ. ಗ್ರೋಜ್ನಿ ಎಣ್ಣೆ ಕಣಿಗಳನ್ನು ಜರ್ಮನರು ಸಮೀಪಿಸಿರುವರು. ವಾಲ್ಗಾನದಿಯನ್ನು ಬೇಗನೆ ಮುಟ್ಟುವ ಸಾಹಸವಾಗುತ್ತಲಿದೆ, ಕಾಕಸಸ ಪರ್ವತದ ಹೆಬ್ಬಾಗಲಲ್ಲಿ ಕಾಳಗವಾಗುತ್ತಲಿದೆ. ರಷ್ಯನರು ಹಿಂದೆ ಸರಿದಿರುತ್ತಾರೆ.

Visit Royal Cafe
Near Royal Picture Palace
ROYAL is ROYAL

The Canara Industrial & Banking Syndicate Ltd.,

(Incorporated in British India. Liability of Share holders Limited.) [Estd. 1925]

Member: **Reserve Bank of India.** ——— Head Office:— **Udipi** (South India.)

Branches:— Bombay, Belgaum, Nippani, Hubli, Dharwar, Byadgi, Gadag, Hospet, Bellary, Adoni, Kurnool, Nandyal, Cuddapah, Proddatur, Tadpatri, Anantapur, Hindupur, Bangalore, Secunderabad, Mangalore, Sholapur etc.,

STATEMENT OF AFFAIRS AS ON 30TH JUNE 1942.

LIABILITIES.	Rs.	As.	Ps.	ASSETS.	Rs.	As.	Ps.
Paid up Capital	6,80,843	0	0	Cash in hand & with Bankers ..	10,11,634	13	6
Reserves	2,11,000	0	0	Investments on Govt. Securities	14,50,097	15	6
Deposits	40,00,392	1	8	,, on shares of other Companies	1,40,806	10	0
Due to Bankers	2,33,450	12	1	Fully Secured Advances . .	14,69,121	4	4
Bills for collection	3,55,772	7	4	Other advances: Bills discounted etc.,	10,04,461	9	5
Sundries	6,01,774	12	11	Landed properties, Office premises, Furniture, Safes, Fittings etc..	3,88,680	1	0
				Bills for collection	3,55,772	7	4
				Sundries	2,62,658	4	11
Total Rs.	**60,83,233**	**2**	**0**	**Total Rs.**	**60,83,233**	**2**	**0**

"MUKUND NIVAS" UDIPI. *20th July 1942.*

ANNOUNCEMENT.
Our Bijapur and Bagalkot Branches will be opened by the end of August 1942.

T. M. A. PAI,
Managing Director.

ಭಾರತ ವಾರ್ತೆಗಳು.

ಒರಿಸ್ಸಾ ಪ್ರಾಂತೀಯ ಅಸೆಂಬ್ಲಿಯ ಉಪಚುನಾವಣೆಯಲ್ಲಿ ಕಾಂಗ್ರೆಸ್ ಉಮೇದವಾರರಾದ ಶ್ರೀ ಸುದನನೋ ಹನ ಪಟ್ನಾಯಕರಿಗೆ 6363, ಅವರ ಎದುರಾಳಿಗಳಿಬ್ಬರಿಗೆ 360 - 333 ಈ ಪ್ರಕಾರ ಬಂದವು. ಕಾಂಗ್ರೆಸ್ ಉಮೇದುವಾರರು ಗೆದ್ದರು. ಎದುರಾಳಿಗಳಿಬ್ಬರು ತಮ್ಮ ಡಿಪಾಜಿಟ್‌ಗಳನ್ನು ಸಹ ಕಳೆದುಕೊಂಡರು.

ಮದ್ರಾಸ್ ಅಸೆಂಬ್ಲಿ ಸಭಾಸದರಾದ ಶ್ರೀ ರಾಜಗೋಪಾಲಾಚಾರಿ, ಸಾಂಬ ಮೂರ್ತಿ ವಗೈರೆ 8 ಸದಸ್ಯರ ಸ್ಥಾನಗಳು ಉಪಚುನಾವಣೆಯಿಂದ ಭರ್ತಿಯಾಗುವ ಸಂಭವನಿಲ್ಲೆಂದು ತಿಳಿದುಬಂದಿದೆ.

ಕಲ್ಕತ್ತಾ ಪಟ್ಟಣದಲ್ಲಿರುವ ಹಿಂದೂ ಸ್ಥಾನದ ಪ್ರಭಾವು ನಾಗರೀಕರಾದ ಡಾಕ್ಟರ್ ಶಾಮ್‌ಪ್ರೆಸ್ಟಕಾಟಂರವರು ಬ್ರಿಟಿಷ್ ಸರಕಾರ ಮತ್ತು ಕಾಂಗ್ರೆಸ್ ಈ ಎರಡು ಸಂಸ್ಥೆಗಳಿಗೂ ಬಿನ್ನಪಮಾಡಿ ಕೇಂದ್ರದಲ್ಲಿ ನಿಜವಾದ ಅಧಿಕಾರವುಳ್ಳ ಪ್ರತಿನಿಧಿ ಸಭೆಯನ್ನು ಏರ್ಪಡಿಸಬೇಕೆಂದು ಕೋರಿರುವರು.

ಕಾಂಗ್ರೆಸ್ ಮುಖಂಡರನ್ನು ಬಂಧಿಸಿದಕಾರಣ ಕರಾಚಿ ವರ್ತಕರು ತಮ್ಮ ಸಂತಾಪನನ್ನು ವ್ಯಕ್ತಮಾಡಲೋಸುಗ ಒಂದುವಾರದ ವರೆಗೆ ಕಾಟನ್ ಮಾರ್ಕೆಟ್ ಮುಚ್ಚಲು ನಿಶ್ಚಯಿಸಿರುವರು.

ಕಾಂಗ್ರೆಸ್ ಮುಖಂಡರು ಬಂಧಿಸಲ್ಪಟ್ಟರು.

ಬೊಂಬಾಯಿ :— ಅಖಿಲಭಾರತ ಕಾಂಗ್ರೆಸ್ ಸಮಿತಿಯು ಸಭೆಗಾಗಿ ಬಂದ ಕೆಲ ಸದಸ್ಯರು ಮಹಾತ್ಮ ಗಾಂಧಿ, ಮೌಲಾನಾ ಅಬುಲಕಲಾಂ ಅಜಾದ, ಸರ್ದಾರ ವಲ್ಲಭಭಾಯಿ ಪಟೇಲ ಪಂಡಿತ ಜವಹಾರಲಾಲ ನೆಹರೂರವರು 9 ನೆಯ ತಾ. ಪ್ರಾತಃಕಾಲ ಬಂಧಿಸಲ್ಪಟ್ಟರು. ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಮುಖ್ಯಾಧಿಕಾರಿಗಳನ್ನು ಬಂಧಿಸಲಾಗಿದೆ. ಕಳೆದ ಭಾನುವಾರದಿಂದ ಬೊಂಬಾಯಿಯಲ್ಲಿ ಗಲಾಟೆಗಳಾದವು. ಪೋಲೀಸರು ಲಾಠಿ ಪ್ರಾರ್ಜಮಾಡಿ ಕೆಲಕಡೆಗಳಲ್ಲಿ ಗುಂಡು ಹಾರಿಸಿದ ಕಾರಣ 31 ಜನರು ಸತ್ತರೆಂದು 250 ಜನರು ಘಾಯ ಹೊಂದಿದರೆಂದೂ ಅಧಿಕೃತ ವಾರ್ತೆಯೊಂದು ತಿಳಿಸುತ್ತದೆ.

ಅಲಹಾಬಾದ್ — ಅಖಿಲಭಾರತ ಕಾಂಗ್ರೆಸ್ ಸಮಿತಿಯ ಕಾರ್ಯಾಲಯ ಮತ್ತು ಸ್ವರಾಜ್ಯ ಭವನಗಳನ್ನು ಸರಕಾರದವರು ವಶಪಡಿಸಿಕೊಂಡು ಬೀಗಹಾಕಿರುತ್ತಾರೆ. ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿ, ತಮಿಳನಾಡು ಪ್ರಾಂತೀಯ ಸಮಿತಿಗಳ ಶೋಧನೆಯು ನಡೆಯಿತು —

ಒರಿಸ್ಸಾ, ಬಂಗಾಳ, ಬೀಹಾರ, ಮಧ್ಯಪ್ರಾಂತ, ಯು. ಪಿ. ಮತ್ತು ಪಂಜಾಬುಗಳಲ್ಲಿ ಪ್ರಾಂತೀಯ ಸರಕಾರದವರು ಮುಖ್ಯಕಾಂಗ್ರೆಸ್ ಕಾರ್ಯಕರ್ತರಮೇಲೆ ಚರ್ಯೆ ತೆಗೆದುಕೊಂಡು ಬಂಧಿಸಿರುವಂಶವು ದಿನ ಪತ್ರಿಕೆಗಳಲ್ಲಿ ಬಿಳಿಲ್ಲಿ ಪ್ರಕಟವಾಗುತ್ತಿರುವ ಸುದ್ದಿಗಳಿಂದ ಧೃಡಪಟ್ಟಿದೆ.

ಸರಕಾರದ ಚರ್ಯೆಗೆ ಕಾರಣ.

ಭಾರತ ಮಂತ್ರಿಗಳ ಭಾರತ ಸರಕಾರದ ಹೇಳಿಕೆಯ ಸಾರಾಂಶ.

ಅಖಿಲಭಾರತ ಕಾಂಗ್ರೆಸ್ ಸಮಿತಿಯು ಹಿಂದೂಸ್ಥಾನದಲ್ಲಿ ಸಾರ್ವತ್ರಿಕ ಚಳವಳಿಯನ್ನು ಪ್ರಾರಂಭಿಸಲು ತೀರ್ಮಾನಿಸಿದ ಕಾರಣ ಮತ್ತು ಇದು ಯುದ್ಧ ಪ್ರಯತ್ನಗಳಿಗೆ ಅಡ್ಡಿಯಾಗುತ್ತಿದ್ದ ಕಾರಣ ಸರಕಾರದವರು ತೀಕ್ಷ್ಣವಾಗಿ ಕಾಂಗ್ರೆಸ್ ಸಂಸ್ಥೆಯಮೇಲೆ ಚರ್ಯೆಯನ್ನು ತೆಗೆದುಕೊಳ್ಳಬೇಕಾಯಿತು. ಕಾಂಗ್ರೆಸ್ ನವರು ಯುದ್ಧ ಪ್ರಯತ್ನಗಳಿಗೆ ಅಡ್ಡಿಯಾಗುವ ಮತ್ತು ವಾರ್ತೆಗಳನ್ನು ನಿಲ್ಲಿಸುವ ಯತ್ನಗಳ ತಯಾರಿ ನಡೆಸಿ ವೇಕದ ಶಾಂತಿ ಜೀವನಕ್ಕೆ ಅಡ್ಡಿಮಾಡುತ್ತಿದ್ದರು, ಬ್ರಿಟಿಷ್ ಸರಕಾರದವರು ಆಸ್ಟ್ರೇಲಿಯಾ ಕಾನಡಾಗಳಿಗೆ ಕೊಟ್ಟ ಸ್ವಾತಂತ್ರ್ಯವನ್ನು ಹಿಂದೂಸ್ಥಾನಕ್ಕೂ ಕೂಡ ಯುದ್ಧವಾದನಂತರ ಕೊಡಲು ತಯಾರಿದ್ದಾರೆ. ಜನರು ಸರಕಾರಕ್ಕೆ ಸಹಾಯ ಒದಗಿಸಬೇಕು – ವಗೈರೆ –



ಭಾನುವಾರ 16—8—1942.

ದಿ ಕ್ಯಾನರಾ ಇಂಡಸ್ಟ್ರಿಯಲ್ ಮತ್ತು ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ದಿ ಕ್ಯಾನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇವರ ಅರ್ಧ ನಿರ್ವಾಂತ್ಯದ ವರದಿಯು ಇನ್ನೊಂದೆಡೆ ಪ್ರಕಟವಾಗಿದೆ. ಈವರದಿಯಿಂದ ಸಿಂಡಿಕೇಟ್ ಬ್ಯಾಂಕಿನ ಭದ್ರತೆಯು ಮತ್ತು ಅಭಿವೃದ್ಧಿಯು ಸ್ಪಷ್ಟವಾಗಿ ಒಡೆದು ಕಾಣುತ್ತದೆ. ತಾ॥ 31-12-41 ಕ್ಕೆ ಅಂತ್ಯವಾಗುವ ಸಿಂಡಿಕೇಟಿನ 16ನೇ ವರ್ಷಾಂತ್ಯಕ್ಕೆ ಇದ್ದ ಶೇರು ಭಂಡವಾಳ ರಿಜರ್ವ ಫಂಡು ರೂ. 8,20,230 - ರಿಂದ 30-6-42 ಕ್ಕೆ ರೂ. 8,91,843 ಕ್ಕೆ ನುಟ್ಟಿದೆ. ಅದೇರೀತಿ ಡಿವಾಜಿಟ್ಟುಗಳು ರೂ. 33,82,235 ರಿಂದ 40,00,392 ಕ್ಕೆ ಬಂದು ನಿಂತಿವೆ. ಬಡ್ಡಿ ರೇಟು ಕಡಿಮೆ ಮಾಡಿದ್ದಾಗ್ಯೂ ಡಿವಾಜಿಟ್ಟುಗಳು ಹೆಚ್ಚುತ್ತಾ ಬರುವದು, ಸಿಂಡಿಕೇಟಿನಲ್ಲಿ ಜನರಿಗಿರುವ ದೃಢವಿಶ್ವಾಸವನ್ನು ಸೂಚಿಸುತ್ತದೆ. ಅಲ್ಲದೇ ಡಿವಾಜಿಟು ಹಣವನ್ನು ಯಾವ ಸಮಯದಲ್ಲಿ ಕೇಳಿದರೂ ಕೊಡಲಿಕ್ಕೆ ಅನುಕೂಲವಾಗುವಂತೆ ರೂ. 10.11,634/- ಕೈಯಲ್ಲಿರುವ ನಗದು ಮತ್ತು ಇತರ ಬ್ಯಾಂಕುಗಳಲ್ಲಿ (cash in hand and with Bankers) ರೂ. 14,50,097 ನ್ನು ಗವರ್ನಮೆಂಟ್ ಪೇಪರ್, ರೂ. 14,69,121/- ನ್ನು ಬಂಗಾರ, ಸರಕುಗಳಿಗೆ ಇತ್ಯಾದಿ ಭದ್ರವಾದ ಸಾಲಗಳಲ್ಲಿ (fully secured loans) ರೂ. 10,04,461/- ನ್ನು ಹುಂಡಿ ಚಕ್ಕು ರೈಲ್ವೆ ರಶೀದಿಗಳನ್ನು ವಟ್ಟಾಯಿಸುವುದರಲ್ಲಿ (Discounting) ವಿನಿಯೋಗಿಸಿರುತ್ತಾರೆ. ಅಲ್ಲದೇ ಬ್ಯಾಂಕಿನ ಸ್ಥಿರಾಸ್ತಿ ಇತರ ಕಂಪನಿ ಶೇರುಗಳಿಗೆ ಇತ್ಯಾದಿಮೇಲೆ ವಿನಿಯೋಗಿಸಿದ ಹಣ ರೂ. ೫,29,486 ಕ್ಕೆ ನಿಂತಿದೆ. ವಸೂಲಿಗೆ ಬಂದ ರೈಲ್ವೇ ರಶೀದಿ ಚಕ್ಕು ಹುಂಡಿ ಇತ್ಯಾದಿಗಳ ಮೊತ್ತವು ರೂ. 3,55,772,- ಕ್ಕೆ ನಿಂತಿದೆ. ಈ ಸಂಸ್ಥೆಯು ದಿನೇದಿನೇ ಅಭಿವೃದ್ಧಿ ಹೊಂದಿ ನಮ್ಮ ನಾಡಿಗೆ ಆದರ್ಶಪ್ರಾಯವಾಗಿ ಬೆಳಗಲೆಂದು ನಾವು ಹಾರೈಸುತ್ತೇವೆ.

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ:— ಬಳ್ಳಾರಿ.

ಒಟ್ಟು ವ್ಯವಹಾರದ ಸೊತ್ತ.

31—7—41	31—7—42
ರು. 1,60,292-13-4	ರು. 2,71,722-10-10

ನಮ್ಮಲ್ಲಿ ಸರ್ವ ವಿಧವಾದ ಬ್ಯಾಂಕಿಂಗ್ ವ್ಯವಹಾರವು ನಡೆಯುತ್ತದೆ. ಹಿಂದೂದೇಶದ ಯಾವ ಭಾಗದಲ್ಲಾದರೂ ನಿಮಗೆ ವ್ಯಾಪಾರೀ ಸೌಕರ್ಯವನ್ನೊದಗಿಸಿಕೊಡುತ್ತೇವೆ. ಭಂಗಾರ ಮತ್ತು ಇತರ ಉಪಯುಕ್ತ ಮಾಲಿನ ಮೇಲೆ ಅಲ್ಪದರದ ಬಡ್ಡಿಯಿಂದ ಸಾಲವು ದೊರೆಯುತ್ತದೆ. ಸಮಕ್ಷನು ಬಂದು ಎಲ್ಲಾ ತಿಳಿದುಕೊಳ್ಳಿರಿ.

ಶಾಖೆಗಳು:—

1 ತಿಮ್ಮನಹರ್ಲ. 2 ಕೊಟ್ಟೂರು. 3 ಉರವಕೊಂಡ. 4 ಪತ್ತಿಕೊಂಡ.

ಹೆಚ್. ಶೇತಾರಾಮರೆಡ್ಡಿ, ಬಿ. ಎ. ಬಿ. ಎಲ್ (ಎಂ. ಎಲ್. ಎ.)
ಡೈರೆಕ್ಟರುಗಳ ಬೋರ್ಡು ಅಧ್ಯಕ್ಷರು.
ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ರಾಯಲಸೀಮ ಬ್ಯಾಂಕಿನ ಶಾಖೆಯು ಹರಪನಹಳ್ಳಿಯಲ್ಲಿ 18—8—42 ಕಾ. ಪ್ರಾತಃಕಾಲ ತೆರೆಯಲ್ಪಡುವದು.

ಯುದ್ಧ ವಾರ್ತೆಗಳು.

ರಷ್ಯಾದಲ್ಲಿ ಜರ್ಮನಿಯ ಮುನ್ನಡೆ.

ರಷ್ಯಾದ ದಕ್ಷಿಣ ಭಾಗದಲ್ಲಿ ಜರ್ಮನಿಯ ಮುನ್ನಡೆಯು ಜೋರಾಗಿ ಸಾಗಿದೆ ಸ್ಟಾಲಿನಗ್ರಾಡ ಪಟ್ಟಣವನ್ನು ಎರಡುಕಡೆಗಳಿಂದ ಮುತ್ತುವ ಲಕ್ಷಣಗಳು ತೋರಿ ಬರುತ್ತಿವೆ. ಸ್ಟಾಲಿನ್‌ಗ್ರಾಡ ಪಟ್ಟಣವು ಯುದ್ಧದಲ್ಲಿ ಉಪಯೋಗವಾಗುವ ಟ್ಯಾಂಕುಗಳನ್ನು ತಯಾರಿಸುವ ಪ್ರಸಿದ್ಧ ಕೇಂದ್ರವಾಗಿದ್ದಿತು. ಆಪಟ್ಟಣದ ಮೂಲಕವೇ ಎಣ್ಣೆಯ ಸಳವು ಉತ್ತರಕ್ಕೆ ಹೋಗುತ್ತಿತ್ತು. ಈಗ ಜರ್ಮನಸೈನ್ಯವು ಸ್ಟಾಲಿನಗ್ರಾಡಕ್ಕೆ 30 ಮೈಲಿನಳಿಗೆ ಇರುವದೆಂದು ಪ್ರಕಟವಾಗಿದೆ. ದಕ್ಷಿಣದಲ್ಲಿ ಜರ್ಮನ ಸೈನಗಳು ಕಾಕಸಸ್ ಪರ್ವತಪಂಕ್ತಿಯನ್ನು ಸಮೀಪಿಸುತ್ತಿವೆಯೆಂದು ಹೇಳಲಾಗಿದೆ. ರಷ್ಯನಸೈನ್ಯಗಳು ಅನೇಕ ಕಡೆಗಳಲ್ಲಿ ಜರ್ಮನರ ಒತ್ತಡವನ್ನು ಸಹಿಸಲಾರದೆ ಹಿಂದೆಗೆದಿವೆ. ನೊವಾರಿಸ್ಕ್- ಸ್ಟಾಲಿನಗ್ರಾಡ ರೈಲ್ವೆಯ ಕತ್ತರಿಸಲಾಗಿದೆಯೆಂದು ಸೊತ್ತಾಗಿದೆ. ಮೈಕಾವ್ ಎಣ್ಣೆ ಉತ್ಪತ್ತಿಕೇಂದ್ರವನ್ನು ತಾವು ವಶಪಡಿಸಿಕೊಂಡಿರುವದಾಗಿ ಜರ್ಮನರು ಹೇಳುತ್ತಾರೆ. ರಷ್ಯನರು ಬಲವಾಗಿ ಪ್ರತಿಭಟಿಸುತ್ತಿರುವರು.

ಉತ್ತರದಲ್ಲಿ ಲೊಕೊನೆಜ ಭಾಗದಲ್ಲಿ ರಷ್ಯನರಿಗೆ ಜಯವಾಗಿದೆ.

ಪೆಸಿಫಿಕ್ ಸಾಗರದಲ್ಲಿ – ಆಸ್ಟ್ರೇಲಿಯಾದ ಉತ್ತರದಲ್ಲಿ.

ಜಪಾನ ಮತ್ತು ಅಮೇರಿಕಾ ನಾವೆಗಳಲ್ಲಿ ಬಲವಾದ ಯುದ್ಧವಾಗಿ, ಇಭ್ಭಾಗಗಳಲ್ಲಿಯೂ ನಷ್ಟವು ಸಂಭವಿಸಿದೆ. ಅಮೆರಿಕನ್ನರು ಜಪಾನರು ಆಕ್ರಮಿಸಿಕೊಂಡಿದ್ದ ಸಾಲೊರ್ಮನ್ ದ್ವೀಪಗಳಲ್ಲಿ ಇದರಿಂದು ಪ್ರಕಟವಾಗಿದೆ. ಇನ್ನೂ ಭೀಕರವಾದ ಯುದ್ಧವು ಸಾಗಿಸಿದೆಯೆಂದು ಪ್ರಕಟನೆಗಳು ಹೇಳುತ್ತವೆ. ಆಸ್ಟ್ರೇಲಿಯಾಕ್ಕೆ ಮಿತ್ರವರ್ಗದಿಂದ ಬರುವ ಸಹಾಯವು ಸಾಕಷ್ಟಿಲ್ಲವೆಂದು ವೃತ್ತವತ್ರಗಳಲ್ಲಿ ಪ್ರಚಾರವು ನಡೆದಿದೆ.

ಇಂಗ್ಲೆಂಡಿನ ಮೇಲೆ ಶತ್ರುವಿಮಾನ ದಾಳಿ:—

ಕಳೆದವಾರ ಇಂಗ್ಲೆಂಡಿನ ಕೆಲಮುಖ್ಯ ಪಟ್ಟಣಗಳಮೇಲೆ ಜರ್ಮನ ವಿಮಾನ ದಾಳಿಯಾಗಿ ಅಲ್ಲಲ್ಲಿ ನಷ್ಟವು ಸಂಭವಿಸಿತು. ಕೆಲವರು ಸತ್ತರು. ಅನೇಕಮನೆಗಳು ಸಾಶವಾದವು. ಶತ್ರುಗಳು ಫಾಸ್ಫರಸ್ ಬಾಂಬುಗಳನ್ನು ಉಪಯೋಗಿಸಿದರೆಂದು ತಿಳಿದುಬಂದಿದೆ.

ಪರ್ಶಿಯಾದಲ್ಲಿ ಬ್ರಿಟಿಷ್ ಅಧಿಕಾರಿಗಳ ಕೊಲೆ:—

ಬ್ರಿಟಿಷರಾಯಭಾರಿ ಕಚೇರಿಗೆ ಸೇರಿದ ಹ್ಯಾರಿಸ್‌ರನರೂ, ಮೆಡಿಕಲ್ ಆಫೀಸರ್‌ರವರಾದ ಗ್ರಿಫಿತರವರೂ ಕೊಲೆಮಾಡಲ್ಪಟ್ಟರುವರೆಂದೂ, ಕಾರಣಗಳು ತಿಳಿದುಬಂದಿಲ್ಲವೆಂದೂ, ತೆಹರಾನ ವಾರ್ತೆಯು ಪ್ರಕಟಿಸುತ್ತದೆ. ಗ್ರಿಫಿತರವರೆ ಮಗನೂ ಕೂಡ ನಾಸತ್ತೆಯಾಗಿರುವನು.

ಸಾಮೂಹಿಕ ಚಳವಳಿ
ಸಂಬಂಧ
ದೇಶ ವಿದೇಶ ಪ್ರತಿಕ್ರಿಯೆಗಳು.

ಲಂಡನ್ ಟೈಂಸ್:— ವಿಧಾಯಕ ಕಾರ್ಯಕ್ರಮವಿಲ್ಲದೆ ದಬ್ಬಾಳಿಕೆಯನ್ನು ಸಾಗಿಸುವ ಕಾರ್ಯವು ಶಾಂತಕಾಲಕ್ಕಂತಲೂ ಯುದ್ಧಕಾಲದಲ್ಲಿ ಅಪಾಯಕರಕವಾಗಿದೆ. ಕ್ರಿಪ್ಸರವರ ಸೂಚನೆಗಳು ಬ್ರಿಟನ್‌ದ ವಿಷಯದಲ್ಲಿ ಭಾರತದ ಸಹಾನುಭೂತಿಯನ್ನು ಹೆಚ್ಚಿಸಿದ್ದವು. ನಿಶ್ಚಯವುತ್ತು ಉಪಯುಕ್ತ ಕಾರ್ಯಕ್ರಮವನ್ನು ಸೂಚಿಸುವುದರ ಅವಶ್ಯಕತೆಯು ಈಗ ಕಂಡುಬರುತ್ತದೆ. ಈಗಿನ ಗಂಡಾಂತರ ತಲ್ಲಿಯೂ ಕೂಡ ಭಾರತ ಅಭಿಪ್ರಾಯವು ಆಶಾದಾಯಕವಿದ್ದು ಶಾಂತಿಗೆ ಹೊಸ ಅವಕಾಶವನ್ನು ಕಲ್ಪಿಸಿರುವುದು. ಗಾಂಧಿ ಮತ್ತು ಅವರ ಅನುಯಾಯಿಗಳಮೇಲೆ ಚರ್ಯೆಯನ್ನು ತೆಗೆದುಕೊಳ್ಳಲು ರಾಷ್ಟ್ರೀಯ ಭಾವನೆಯುಳ್ಳ ನೈಸ್ರಾಯಿ ಕೌನ್ಸಿಲ್ ಸದಸ್ಯರು ಜವಾಬ್ದಾರಿ ಹೊತ್ತಿರುತ್ತಾರೆ. ಹಿಂದೂಸ್ತಾನದ ಇತರ ರಾಜಕೀಯ ವಕ್ಷಗಳು ಕಾಂಗ್ರೆಸ್‌ಗೆ ವಿರುದ್ಧವಿವೆ. ಆದರೆ ರಾಜಕೀಯ ಸ್ಥಿತಿಯು ಹೀಗೆಯೇ ಇರುವದಿಲ್ಲ .... ಕ್ರಿಪ್ಸರವರ ಸೂಚನೆಗಳಿಗನುಸಾರವಾಗಿಯೋ ಎಂಬಂತೆ ರಾಜಗೋಪಾಲಾಚಾರಿಯವರು ತಾತ್ಕಾಲಿಕ ಸರಕಾರದ ಸ್ಥಾಪನೆಯ ಸಲಹೆಯನ್ನಿತ್ತಿರುವರು. ಕ್ರಿಪ್ಸರವರ ಸೂಚನೆಗಳನ್ನು ಹಿಂದೆಗೆದುಕೊಂಡಿಲ್ಲ. ಯುದ್ಧದ ಅವಸರವನ್ನೇ ಅಲ್ಲ, ಭಾರತದ ಭವಿಷ್ಯದೃಷ್ಟಿಯಿಂದಲೂ ಕೂಡ ಈ ಭೇದವನ್ನು ದೂರಗೊಳಿಸಿ ಭಾರತವು ಸ್ವಪರಿಪಾಲನೆಯನ್ನು ತೊಂದುವಂತೆ ಮಾಡಬೇಕು.

ವಾಷಿಂಗ್ಟನ್ ಪೋಸ್ಟ್:— ಗಾಂಧಿಯವರದು ಬ್ರಿಟೀಷರಿಗೆ ಎಷ್ಟೇಪ್ರೇರಣವಿರಲಿ ಬ್ರಿಟಿಷ್ ಇತಿಹಾಸದ 'ಇಂಧಾಗಡಾಂತರ ಸಮಯದಲ್ಲಿ ಭಾರತವನ್ನು ಅವಾಜಕತೆಗೆ ಗುರಿ ಮಾಡಿರುವದಕ್ಕೆ ಕಾರಣವೇ ಇಲ್ಲ. ಹೋಳಿಕಾರ್ಯ ಲೂಟಿ ಇವುಗಳನ್ನು ಅಸಹಕಾರವೆಂದು ಹೇಳಲು ಬರುವಂತಿಲ್ಲ. ಗಾಂಧಿಯವರು ಇಂಥಾ ಕಾರ್ಯ ಮಾಡಿರೆಂದು ಹೇಳಿದ್ದರೂ, ಅವರು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಹೆರಾಲ್ಡ್ ಟ್ರಿಬ್ಯೂನ್ ನ್ಯೂಯಾರ್ಕ್

ಗಾಂಧಿ ಮತ್ತು ಇತರ ಕಾಂಗ್ರೆಸ್ ನಾಯಕರ ಬಂಧನದಿಂದ ಹಿಂಸಾಕೃತ್ಯಗಳಾರಂಭವಾಗಿವೆ. ಸ್ವತಂತ್ರ ಹಿಂದೂಸ್ತಾನದಲ್ಲಿ ಮುಸಲ್ಮಾನರನ್ನು ಹಿಂದೂಗಳಿಗೆ ಒಪ್ಪಿಸಿದ್ದರೆ ಈ ಹಿಂಸೆಯನ್ನು ತಪ್ಪಿಸಬಹುದಿತ್ತು. ಬ್ರಿಟಿಷ್ ಸರಕಾರವು ಆರಂಭದಲ್ಲಿಯೇ ತಕ್ಕ ಚರ್ಯೆಯನ್ನು ತೆಗೆದುಕೊಂಡಿದ್ದು ನ್ಯಾಯವಾಗಿದೆ. ಹಿಂದೂಸ್ತಾನದ ಸ್ವಾತಂತ್ರ್ಯಬೇಡಿಕೆಗೆ ಸಹಾನುಭೂತಿಯನ್ನು ತೋರಿಸಿದರೂ ಕಾಂಗ್ರೆಸ್‌ನ್ನು ಅಮೆರಿಕಾದ ಪತ್ರಿಕೆಗಳು ಟೀಕಿಸುತ್ತಲಿವೆ.

ಶ್ರೀ **ಟಿಸಿಯಾಂಗ್‌ಪು**:— ಚೀನಾ ರಾಜಕೀಯ ಖಾತೆಯ ಡೈರೆಕ್ಟರವರಾದ ಶ್ರೀ ಟಿಸಿಯಾಂಗ್‌ಪುರವರು ಹೀಗೆ ಹೇಳಿದ್ದಾರೆ. 'ಚೀನಾಸರಕಾರವು ಬ್ರಿಟಿಷ್ಷಿಗೆ ಮಿತ್ರವೇಶವಾಗಿದೆ. ಭಾರತೀಯರು ಮತ್ತು ಚೈನೀಯರಲ್ಲಿ ಕೂಡ ಗಾಢವಾದ ಮಿತ್ರತ್ವವಿದೆ. ಈ ಕೊನೆಯ ಸಮಯದಲ್ಲಿಯೂ ಕೂಡ ಭಾರತ ಪರಿಸ್ಥಿತಿಯನ್ನು ಸುಧಾರಿಸಲು ಒಂದು ಉಪಾಯವನ್ನು ಹುಡುಕಬೇಕು. ಚೀನವು ಏನಾದರೂ ಮಾಡಬೇಕಿದ್ದರೆ, ಅದನ್ನು ಸಂತೋಷದಿಂದ ಅದು ನಿರ್ವಹಿಸುವುದು ಭಾರತ ಚೀನ ಬರ್ಮಾ ಕೋರಿಯಾಗಳಿಗೆ 'ವ್ಯಾಸಿಫಿಕ್ ಚಾರ್ಟರ್' ಅನ್ವಯಿಸಿ ಭವಿಷ್ಯವನ್ನು ಸ್ಪಷ್ಟಪಡಿಸುವದರಿಂದ ಒಳ್ಳೆಯದಾದೀತು.

ಶ್ರೀ **ಸಿ. ರಾಜಗೋಪಾಲಾಚಾರಿ**:— ಈ ಪರಿಸ್ಥಿತಿಯನ್ನು ಹಡಕ್ಕೆ ತರುವುದು ಅಸಾಧ್ಯವಲ್ಲ. ಆಕ್ಸಿಸ್ ರಾಷ್ಟ್ರಗಳ ನ್ನೆದುರಿಸಲು ಭಾರತ ಬ್ರಿಟಿಷ್ ನೇಹವು ಧೃಡಗೊಳ್ಳುವಂತಾಗಬೇಕು. ಕಾಂಗ್ರೆಸ್ ನವರ ನಿಶ್ಚಯದಿಂದ ಇದರಲ್ಲಿ ಬದಲಾವಣೆಯಿಲ್ಲ. ದಬ್ಬಾಳಿಕೆಯಿಂದ ಇನ್ನೂ ಕೆಡುವುದು. ಕಾಂಗ್ರೆಸ್ ನಿರ್ಣಯದಲ್ಲಿ ಸಹಕಾರಕ್ಕೆಮ್ಮೋ ಮಾರ್ಗವಿದೆ. ಬ್ರಿಟಿಷ್ ಮುಖಂಡರು ಶಾಂತವಾಗಿ ಪರಿಶೀಲಿಸಿದರೆ, ಇದನ್ನರಿಯುವುದು ಕಷ್ಟವಾಗಲಿಕ್ಕಿಲ್ಲ.

ಹಾಲ್ಟೆರ್ ಸುಬ್ಬರಾಯರ್: — ಬ್ರಿಟನ್ ಮತ್ತು ಅಮೆರಿಕಾಗಳಲ್ಲಿನ ರಾಜಕೀಯವೇತ್ತರು ಯತ್ನಿಸಿ ಬ್ರಿಟಿಷ್ ಸರಕಾರವು ಕಾಂಗ್ರೆಸ್ ನೊಡನೆ ಸಂಧಾನವನ್ನು ಹೂಡುವಂತೆ ಮಾಡದಿದ್ದರೆ ಮಿತ್ರಪಕ್ಷದ ಉದ್ದೇಶಕ್ಕೆ ಬಹಳ ಅಪಾಯವು ತಟ್ಟುತ್ತದೆ. ಭಾರತೀಯರು ಅಳರಸರ ಕೃತ್ಯಗಳಿಗೆ ಉದ್ರೇಕರಾಗಬಾರದು. ಹಿಂಸಾಕೃತ್ಯಗಳನ್ನು ಮಾಡಬಾರದು.

ಸ್ವಾಮಿ ಸಹಜಾನಂದ :— ಅಖಿಲ ಭಾರತ ಕಿಸಾನ ಸಭೆಯ ಮುಖ್ಯ ಕಾರ್ಯದರ್ಶಿಗಳಾದ ಸಹಜಾನಂದರು ಹೀಗೆ ಹೇಳಿರುವರು.'' ಇದು ವ್ಯಸನ ಕಾಲ. ಕಾಂಗ್ರೆಸ್ ಮೇಲೆ ದಾಳಿಯಾಗಿದೆ. ನಾವು ದಬ್ಬಾಳಿಕೆಯ ವಿರುದ್ಧ ಮಾತಾಡಿದರೆ ಅದು ಪ್ರಕಟವಾಗುವದಿಲ್ಲ. ಕಾಂಗ್ರೆಸ್ಸನ್ನು ಟೀಕಿಸಿದರೆ ಸರಕಾರದವರು ಅದರಿಂದ ಲಾಭ ಪಡೆಯಲೆತ್ನಿಸುವರು. ಎಂಥಾ ಭೀಕರದಬ್ಬಾಳಿಕೆಯಾಗಲಿ ಕಮ್ಯೂನಿಸ್ಟರು ತೋರಿಸಿರುವರು.''

ಈಸ್ಟ್ ಇಂಡಿಯಾ ಕಾರ್ಟ್ ಅ ಸೋಸಿಯೇಷನ್ ಬೊಂಬಾಯಿ :— ಮಹಾತ್ಮ ಗಾಂಧಿಯವರು ನೈಸ್ರಾಯರೊಡನೆ ಮಾತಾಡ ಬೇಕೆಂದಿದ್ದರೂ ಸರಕಾರದವರು ಚರ್ಯೆ ತೆಗೆದುಕೊಂಡದ್ದು ದೇಶದ ವ್ಯಾಪಾರ ಉದ್ಯೋಗಗಳಿಗೆ ಅಪಾಯತಟ್ಟದೆ. ಗಾಂಧಿಯವರೊಡನೆ ಸರಕಾರದವರು ಸಂದಾನ ಸ್ಥಾರಂಭಿಸಿ ರಾಜಕೀಯ ಸಮಸ್ಯೆಯನ್ನು ಬಗೆಹರಿಸಬೇಕು.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೪—೦
ಕನ್ನಡ ದಕೋಪನಿಷತ್ತುಗಳು	೦—೪—೦
ಶಿವಾನುಭವ ಬೋಧೆ	೦—೪—೦
ಸುಮತಿ ಶತಕ	೦—೧—೬

ಆಂಜಿ ವೆಚ್ಚ ಬೇರೆ ಪುಸ್ತಕ ವ್ಯಾಪಾರಿಗಳಿಗೆ ಹೆಚ್ಚು ಪುಸ್ತಕ ಕೊಳ್ಳುವರಿಗೂ ಧಾರಾಳವಾದ ಕಮಿಷನ್.

ಕಾಲವ ಸುಬ್ಬಣ್ಣ, ಮರ್ಚೆಂಟು, ಬಳ್ಳಾರಿ.

ಬಳ್ಳಾರಿ ಪೇಟೆ ಧಾರಣೆ.
14—8—42 ಶುಕ್ರವಾರ.

ಭಂಗಾರ ತೊಲೆ 1-ಕ್ಕೆ ರೂ.		52—8—0
ಸಾವರನ್		40—0—0
ಬೆಳ್ಳಿ 100 ತೊಲೆ ರೂ.		83—0—0
ಅರಳೆ ಫಾರಂ	ರೇಟು ಇಲ್ಲಾ	
ಅರಳೆ ಮುಂಗಾರಿ 12 ಮಣಕ್ಕೆ	,,	
ಅಕ್ಕಿ 1 ರೂ. ಗೆ	4 ರಿಂದ 5	ಸೇರು
ಬೇಳೆ ,, ...	3½	,,
ಗೋಧಿ ,, ...	3½	,,
ಜೋಳ ,, ...	10½	,,
ನವಣೆ ,, ...	14¼	,,
ಸಜ್ಜೆ ,, ...	10½	,,
ನೆಲಗಡಲೆ	1-11-0	
ಸಕ್ಕರೆ ವೀಸ	0—8—6	
ಬೆಲ್ಲ	20—0—0	
ಚಿಮ್ಮಿ ಎಣ್ಣೆ	4—14—0	

ಕಾಲರಾಕ್ಕೆ

ಶ್ರೇಷ್ಠ ಮತ್ತು ಶೀಘ್ರ ಗುಣಕಾರಿ.

ಕಾಶ್ಮೀರುಅರುಕ್

(ಮನೆಯ ವೈದ್ಯ.)

(ವಾಂತಿ)

ಎಲ್ಲರೂ "ಕಾಶ್ಮೀರು ಅರುಕ್" ನ್ನು ಪ್ರತಿನಿತ್ಯ ಎರಡುಸಲ ಸೇವನೆ ಮಾಡುವದರಿಂದ ಕಾಲರಾ ಕ್ರಿಮಿಗಳನ್ನು ನಿರ್ಮೂಲಮಾಡಿ ಕಾಲರಾ ಬಾರದಂತೆ ಕಾಪಾಡುವುದು. ವಾಂತಿ ಭೇದಿಗಳನ್ನು ತಕ್ಷಣ ನಿಲ್ಲಿಸಿ ಜೀರ್ಣಶಕ್ತಿಯನ್ನು ಹೆಚ್ಚಿಸುವುದು.

ಎಲ್ಲಾ ಷಾಪುಗಳಲ್ಲಿ ದೊರೆಯುತ್ತದೆ.

ಹೆಚ್. ಯಸ್. ಅಂಡ್ ಸನ್ಸ್., ಬಳ್ಳಾರಿ.

ಕರ್ನಾಟಕ ಪ್ರಾಂತೀಕ ಕಾಂಗ್ರೆಸ ಸಮಿತಿ.

ಈ ಕಾರ್ಯಾಲಯವನ್ನು ಪರಿಶೋಧಿಸಿ ಸರಕಾರದವರು ಬೀಗಹಾಕಿರುತ್ತಾರೆ. ಹುಬ್ಬಳ್ಳಿಯಲ್ಲಿ ಡಾಕ್ಟರ್ ಹರ್ಡೀಕರ, ಶಿವಶಂಕರಪ್ಪ, ಕಗಗುದ್ರಿ, ಸೈಯ್ಯದ ನಾಹೇಬ ಮಗೈರೇಯವರು ಇಂಡಿಯಾ ರಕ್ಷಣೆಶಾಸನದನ್ವಯ ಬಂಧಿಸಲ್ಪಟ್ಟರು

ಸರಹದ್ದ ಪ್ರಾಂತ್ಯ :— ಡಾಕ್ಟರ್ ಖಾನಸಾಹೇಬ, ಖಾನ ಅಬ್ದುಲ್‌ಗಫರ ಖಾನ ಸೋದರರು ನಿಷಾವರ, ಚಾರ್ಸಾಡಗಳಲ್ಲಿ ಸದ್ಯದ ರಾಜಕೀಯ ಪರಿಸ್ಥಿತಿಯ ಮೇಲೆ ಭಾಷಣಕೊಟ್ಟರು. ಅವರು ಬಂಧಿಸಲ್ಪಟ್ಟಿಲ್ಲ.

ಮದ್ರಾಸ್ ಪ್ರಾಂತ್ಯದ ಅನೇಕ ಭಾಗಗಳಲ್ಲಿ ಕಾಂಗ್ರೆಸ್ ನವರು ಇಂಡಿಯಾ ರಕ್ಷಣೆ ಶಾಸನದನ್ವಯ ಬಂಧನಿಗೊಳಗಾಗಿರುತ್ತಾರೆ. ಸುಧೂರಾದಲ್ಲಿ ಗಲಾಟೆಯು ಸಂದರ್ಭವಾಗಿ ಪೋಲೀಸರು ಗುಂಡು ಹಾರಿಸುವ ಪ್ರಸಂಗ ಬಂದು ೫ ಸತ್ತಿರುವರು.

ಪೂನಾ – ಇಲ್ಲಿ ಗುಂಡುಹಾರಿಸುವ ಪ್ರಸಂಗವುಂಟಾಗಿ ಒಬ್ಬರು ಸತ್ತಿರುವರೆಂದು ಪ್ರಕಟನಾಗಿದೆ.

ಸಾಟ್ನಾ — ಬಾಬೂರಾಜೇಂದ್ರ ಪ್ರಸಾದ, ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ ಕೈಲ್ಲಸಿಂಹ ಮಗೈರೇಯವರು ಬಂಧಿಸಲ್ಪಟ್ಟರು.

ನ್ಯಾಸಕ್ರಾನಿಕಲ್ ಟೀಡಿಕೆ:—

ಲಂಡನ್ನಿನ ನ್ಯಾಸಕ್ರಾನಿಕಲ್ ಪತ್ರಿಕೆಯು ಬ್ರಿಟಿಷ್ ಸರಕಾರಕ್ಕೆ ವಿಜ್ಞಾಪಿಸುತ್ತಾ ಕಾಂಗ್ರೆಸಿನ ಪ್ರಮುಖ ಮುಖಂಡರಾದ ಶ್ರೀ ರಾಜಗೋಪಾಲಾಚಾರಿಯವರ ಮೂಲಕ ಹಿಂದೂಸ್ಥಾನದಲ್ಲಿ ಶಾಂತಿಯನ್ನೇರ್ಪಡಿಸಬೇಕೆಂದೂ ಗೌರವಯುತವಾದ ಒಪ್ಪಂದಕ್ಕೆ ಬರಬೇಕೆಂದೂ ಸಂವಾದಕೀಯ ಲೇಖನವನ್ನು ಬರೆದಿದೆ.

ಕಾಂಗ್ರೆಸ್ ಆಂದೋಳನ - ಸರಕಾರದ ಚರ್ಯೆ.

ಹಿಂದೂಸ್ಥಾನದ ಎಲ್ಲಾ ಭಾಗಗಳಿಂದಲೂ ಕಾಂಗ್ರೆಸ್ ಆಂದೋಳನಕ್ಕಾಗಿ ಬಂಧನಗಳಾಗುತ್ತಿರುವ ಸುದ್ದಿಗಳು ಪ್ರಕಟವಾಗುತ್ತಲಿವೆ. ಉದ್ರೇಕಗೊಂಡ ಜನಸಂದಣಿಯನ್ನು ಚದರಿಸಲು ಇದುವರೆಗೆ ಬೊಂಬಾಯಿ, ಜೆಲ್ಲಿ, ಆಗ್ರ, ಕಾನಪುರ, ಪಾಟ್ನಾ, ಧಾನಾ ನಾಸಿಕ್, ಅಹಮ್ಮದಾಬಾದು, ಮಧರಾಗಳಲ್ಲಿ ಸರಕಾರದವರು ಗುಂಡುಹಾರಿಸಿರುತ್ತಾರೆ ಆಯಾ ಪ್ರಾಂತ್ಯಗಳ ಸರಕಾರಗಳು ಪ್ರಕಟನೆಗಳನ್ನು ಹೊರಡಿಸಿ ಪರಿಸ್ಥಿತಿಯನ್ನು ವಿವೇಚಿಸಿ ತಮ್ಮ ಚರ್ಯೆಗಳನ್ನು ಸಮರ್ಥಿಸಿರುವರು

ಶ್ರೀಮತಿ ಕಸ್ತೂರಿಬಾಯಿ ಗಾಂಧಿ ಮತ್ತು ಡಾಕ್ಟರ್ ಸುಶೀಲಾ ನಾಯರ್ ರವರು ಬೊಂಬಾಯಿಯಲ್ಲಿ ಬಂಧಿಸಲ್ಪಟ್ಟು ಪೂನಾಕ್ಕೆ ತರಲ್ಪಟ್ಟಿರುವರು.

ಬೊಂಬಾಯಿ ಎ. ವಿ. ಸಿ. ಸಭೆಗಾಗಿ ಹೋಗಿದ್ದ ಶ್ರೀ ಮುತ್ತುರಂಗ ಮೊದಲಿಯಾರ್ ಭಕ್ತವತ್ಸಲಂ ಮತ್ತು ಸತ್ಯಮೂರ್ತಿ ಮಗೈರೇಯವರು ಹಿಂದಿರುಗಬೇಕಾದರೆ ಬಂಧಿಸಲ್ಪಟ್ಟಿರುವರು. ಇವರಲ್ಲದೆ ಅನೇಕ ಅಸೆಂಬ್ಲಿ ಸದಸ್ಯರು ಬಂಧಿಸಲ್ಪಟ್ಟಿರುವರು.

ಬೆಂಗಳೂರು ಕಂಟೋನ್ಮೆಂಟ್ ಮತ್ತು ತಿಟಿಯಲ್ಲಿ ಸುಮಾರು 30 ಜನ ಕಾಂಗ್ರೆಸಾನನರು ಬಂಧಿಸಲ್ಪಟ್ಟಿರುವರು.

ಹಿಂದೂಸ್ಥಾನದ ಮುಖ್ಯ ಪಟ್ಟಣಗಳಲ್ಲಿ ಹೆರತಾಳವಾದ ಸುದ್ದಿಗಳು ಪ್ರಕಟವಾಗಿವೆ. ವಿದ್ಯಾರ್ಥಿಗಳು ಭಾಗವಹಿಸಿರುವುದು ಗೊತ್ತಾಗಿದೆ

ಬರ್ಮಾದ ಹಿಂದಿನ ಮಂತ್ರಿ ಶ್ರೀಯೂ. ಸಾ. ರವರು ಈಜಿಪ್ಟಿನಲ್ಲಿ ಸತ್ತರೆಂದು ಪ್ರಕಟವಾಗಿದ್ದಿತು. ಅವರು ಈಜಿಪ್ಟಿನಲ್ಲಿಲ್ಲವೆಂದು ಕೈರೋದ ವಾರ್ತೆಯು ತಿಳಿಸುತ್ತದೆ.

ಕಲ್ಕತ್ತೆಯಮುಪ್ಪರವ ಬಂದರಾದ ನೋಪೊರಾಸಿಕಾಗೆ 75 ಮೈಲಿ ದೂರದಲ್ಲಿರುವ ಕಾಕ್ಸ್‌ಬಜಾರ್ ಎಂಬ ಸ್ಥಳವನ್ನು ಜರ್ಮನರು ಹಿಡಿದಿರುವುದು ಲಂಡನ್ನಿನಲ್ಲಿ ಇನ್ನೂ ಧೃಡಪಟ್ಟಿಲ್ಲ.

ಬಳ್ಳಾರಿಯಲ್ಲಿ.

ಶ್ರೀ ಹೆಚ್. ಶೀ ತಾ ರಾಮ ರೆಡ್ಡಿಯವರ ಬಂಧನ :—

ಮದ್ರಾಸ್ ಅಸೆಂಬ್ಲಿ ಕಾಂಗ್ರೆಸ್ ಸದಸ್ಯರೂ, ರಾಯಲಸೀಮಾ ಬ್ಯಾಂಕಿನ ಸ್ಥಾಪಕರಲ್ಲೊಬ್ಬರೂ ಆದ ಶ್ರೀ ಹಾಲವಿ ಶೀತಾರಾಮರೆಡ್ಡಿ ಬಿ. ಎ. ಬಿ. ಲ್., (ಎಂ. ಎಲ್. ಎ.) ರವರು 9 ನೆಯ ತಾ. ಮಧ್ಯಾಹ್ನ ಜಿಲ್ಲಾ ಸೂಪರಿಂಟಿಂಡೆಂಟ್ ಶ್ರೀ ಸಿ. ಸುಬ್ಬರಾಯುಲುರವರಿಂದ ಇಂಡಿಯಾ ರಕ್ಷಣೆ ಶಾಸನದನ್ವಯ ಬಂಧಿಸಲ್ಪಟ್ಟು ಸೆರೆಮನೆಗೆ ಕಳುಹಿಸಲ್ಪಟ್ಟರು. ಶ್ರೀ ರೆಡ್ಡಿಯವರನ್ನು ಅನೇಕ ಸಂಸ್ಥೆಯವರೂ, ವ್ಯಕ್ತಿಗಳೂ ಪುಷ್ಪಮಾಲೆಗಳಿಂದ ಸತ್ಕರಿಸಿ ಬೀಳ್ಕೊಟ್ಟರು. ಸಾಂಬಮೂರ್ತಿ ಮೈದಾನದಲ್ಲಿ 10 ನೆಯ ತಾ. ನಾಗರೀಕರ ಸಭೆಯೂ, 11 ನೆಯ ತಾ. ವಿದ್ಯಾರ್ಥಿಗಳ ಸಭೆಯೂ ಕೂಡಿ ಕಾಂಗ್ರೆಸ್ ಮುಖಂಡರ ಬಂಧನಕ್ಕಾಗಿ ನಿಷೇಧವರ ವ್ಯಾಖ್ಯಾನ ನಿರ್ಣಯಗಳನ್ನು ಮಾಡಿ ಪುರಸ್ಕರಿಸಿದರು.

ಮುನಿಸಿಪಲ್, ಸಾರ್ವಜನಿಕ ಮತ್ತು ಇತರ ಶಾಲೆಗಳವರು ಸಾಮಾನ್ಯ ಹರತಾಳ ನಡೆಸಿ ಬೀದಿಗಳಲ್ಲಿ ಜಯಕಾರ ವಿಂದ ಸಂಚರಿಸಿದರು.

ನೇಮಕಲ್ಲಿನಲ್ಲಿ ಕಾಂಗ್ರೆಸ್ ಮುಖಂಡರ ಬಂಧನಕ್ಕಾಗಿ 10 ನೆಯ ತಾ. ನಿಷೇಧ ಸರ್ವಸಹಿರಂಗ ಸಭೆಯಾಯಿತು.

Pages 3, 4, 5 & 6 Printed at Krishna Press, Bellary. Published by T. B. Kesava Rao, Bellary.

ತೆನಾಲಿ ಭಾಗದಲ್ಲಿ ಗಲಭೆ.

ಕಾಂಗ್ರೆಸ್ ಮುಖಂಡರ ಬಂಧನ ಕ್ಕಾಗಿ ಉದ್ರೇಕಗೊಂಡ ಗುಂಪು ಪೆರವಣಿಗೆಯಲ್ಲಿ ಬಂದು ತೆನಾಲಿಯ ರೈಲ್ವೆ ಸ್ಟೇಷನ್ ಮೇಲೆ ದಾಳಿಮಾಡಿ ಗೂಡ್ಸಶೆಡ್ ಸುಟ್ಟು - ಪೂರಿ ಪ್ಯಾಸೆಂಜರ್ ಗಾಡಿಯಿಂದ ಜನರನ್ನಿಳಿಸಿ ಅದನ್ನು ಸುಟ್ಟರೆಂದು ಗೊತ್ತಾಗಿದೆ. ಅನೇಕ ಭಾಗಗಳಲ್ಲಿ ರೈಲ್ವೆ ಕಂಬಿಗಳನ್ನು ಕಿತ್ತಿರುವುದೂ ತಂತಿ, ಟೆಲಿಫೋನ್ ತಂತಿಗಳನ್ನು ಕಿತ್ತೊಗೆದಿರುವುದೂ ಪ್ರಕಟವಾಗಿದೆ. ಚೀರಲ, ದುಗ್ಗಿರಾಲ ನುಂತಾದ ಭಾಗಗಳಲ್ಲಿಯೂ ಸ್ಟೇಷನ್ನುಗಳನ್ನು ಸುಟ್ಟಿರುವುದು ತಿಳಿದುಬಂದಿದೆಯೆಂದು ಮದ್ರಾಸು ಹಿಂದೂ ಪತ್ರಿಕೆಯು ಬರೆದಿದೆ, ಟ್ರೈನುಗಳು ಗುಂತಕಲ್ ಮಾರ್ಗವಾಗಿ ಉತ್ತರ ದೇಶಗಳ ಕಡೆ ಹೋಗುತ್ತವೆ. ಪೋಲೀಸು, ಮಿಲಿಟರಿಯು ಹೋಗಿದೆಯೆಂದು ಗೊತ್ತಾಗಿದೆ.

ದೆಹಲಿ, ನಾಗಪುರ, ಲಕ್ನೋ, ಅಲಹಾಬಾದುಗಳಲ್ಲಿ ದೊಂಬಿ ಕೃತ್ಯಗಳಾಗಿ ಪೋಲೀಸರು ಗುಂಡುಹಾರಿಸುವ ಪ್ರಸಂಗ ಬಂದಿದೆ.

ಅಮೆರಿಕಾದ ಸೈನ್ಯಗಳು. ಹೊಂಬಿಯನ್ನಡಗಿಸಲು ಬರುವುದಿಲ್ಲ

ಭಾರತವಲ್ಲಿರುವ ಅಮೆರಿಕಾ ಸೈನ್ಯಗಳು ಹಿಂದೂಸ್ತಾನದಮೇಲೆ ಜಪಾನ ದಾಳಿಯಾದರೆ ಎದುರಿಸುವವಾಗಲಿ ಒಳನಾಡಿನ ಗಲಭೆಗಳನ್ನಡಗಿಸಲು ಉಪಯೋಗಿಸಲ್ಪಡುವುದಿಲ್ಲವೆಂದು ಅಮೆರಿಕಾದ ಸ್ಟೇಟ್ ಡಿಪಾರ್ಟ್‌ಮೆಂಟಿನವರು ವಾಶಿಂಗ್ಟನ್‌ದಿಂದ ಪ್ರಕಟಿಸಿದ್ದಾರೆ. ತಮ್ಮ ಮೇಲೆ ದಾಳಿಯಾದರೆ ಆತ್ಮರಕ್ಷಣೆ ಮಾಡಿಕೊಳ್ಳಬೇಕೆಂದು ಸೂಚಿಸಲಾಗಿದೆ

ಲಂಡನ್ನಿನ ಈವಿನಿಂಗ್ ಸ್ಟಾಂಡರ್ಡ್ ಪತ್ರಿಕೆಯು ಕಾಂಗ್ರೆಸೊಡನೆ ಸಂಧಾನ ಮಾಡಿಕೊಳ್ಳಲು ಸಲಹೆ ಇತ್ತಿದೆ.

ಜಪಾನು ಇಂಡಿಯಾದಮೇಲೆ ಬೀಳುವುದೇ ?

ಚಂಗ್‌ಕಿಂಗ್‌ನಿಂದ ಹಿಂದೂ ಪತ್ರಿಕೆಯ ಸುದ್ದಿಗಾರರೊಬ್ಬರು "ಜಪಾನು ಹಿಂದೂಸ್ತಾನದಮೇಲೆ ದಂಡೆತ್ತಿ ಬರುವ ಸನ್ನಾಹ ಮಾಡುತ್ತಿದೆ. ತಾಮುಲೆಂಪ, ಬರ್ಮಾಗಳಿಗೆ ಸೈನ್ಯಕಳುಹಿಸುತ್ತಲಿದೆ, ಪ್ರಾಯಶ, ಪೂರ್ವತೀರಕ್ಕೆ ಭಯವಿದೆಯೆಂದು ಮಿಲಿಟರಿ ಕ್ಷೇತ್ರಗಳಿಂದ ಗೊತ್ತಾಗಿದೆ."

ಅಕ್ಕೋಗ್ಗೆ:— ಜಿಲ್ಲೆಯ 32 ಹಳ್ಳಿಗಳಲ್ಲಿ 37 ಜನರಿಗೆ ಈವಾರ ಕಾಲರಾತಗಲಿ 77 ಜನರು ಸತ್ತಿರುವರು. ಕೊಪ್ಪಿಗಿ ತಾಲೂಕಿನಲ್ಲಿ 8 ಜನರು ಸ್ಲೋಗಿನಿಂದಲು ಹರಪನಹಳ್ಳಿ ತಾಲೂಕಿನಲ್ಲಿ 3 ಮೈಲಿ ಬೇನೆಯಿಂದಲೂ ಸತ್ತಿರುವರು ಅದವಾನಿನಗರದಲ್ಲಿ 45 ಜನರು ಬಳ್ಳಾರಿಯಲ್ಲಿ 14 ಜನರೂ ಕಾಲರಾದಿಂದ ಮರಣ ಹೊಂದಿರುವರು.

ಮೆಟ್ರು.

ಹೊಸಪೇಟೆ ರೇಂಜು ಡೆ ಇ. ಶ್ರೀ ನಿಂಹಾದ್ರಿರಾಯರಿಗೆ ಕರ್ನೂಲು ಜಿಲ್ಲೆಗೆ ವರ್ಗವಾದುದರಿಂದ ಅವರನ್ನು ಬೀಳ್ಕೊಡುವ ಸಮಾರಂಭವು 8 ನೆಯ ತಾ. ಉಪಾಧ್ಯಾಯರ ಕೇಂದ್ರಸಭೆಯಲ್ಲಿ ನಡೆಯಿತು. ಜಾಲಿಕರ ಸ್ವಾರ್ಥನೆಯ ನಂತರ ಶ್ರೀ ದೊಡ್ಡನಗೌಡರೂ, ಮಹಮದಸಯ್ಯನವರೂ ಸ್ವಾಗತ ಪದ್ಯಗಳನ್ನೊಂದಿ ಅರ್ಪಿಸಿದರು. ಸಂಘದ ಕಾರ್ಯದರ್ಶಿ ವೀರಭದ್ರಪ್ಪನು ಭಟ್ಟರು, ಸಹಾಯೋಪಾಧ್ಯಾಯರಾದ ನಾಗಚೇರಾಚಾರ್ಯರು, ಲಂಬಾಣಿ ಈರನ್ನನವರು ಡೆ. ಇ. ರವರ್ನು ಸ್ತುತಿಸಿ ಅವರ ಸದ್ಗುಣಗಳನ್ನು ಕುರಿತು ಉಪನ್ಯಾಸಿಸಿದರು. ಶ್ರೀ ನಿಗ್ಗಾಲಿಯವರು ಲಾವಣಿಯನ್ನೊಂದಿದರು.

ಡೆ. ಇ. ರು ಸಮುಚಿತೋತ್ತರ ಉತ್ತರ ಕೊಟ್ಟನಂತರ ಸಭೆಯು ಉಪಾಹಾರದಿಂದ ಪರಿಸಮಾಪ್ತಿಯಾಯಿತು.

ಜಿಲ್ಲಾ ಬೋರ್ಡು ಪ್ರಾಥಮಿಕೋಪಾಧ್ಯಾಯರಿಗೆ ಇಂಕ್ರಿಮೆಂಟು.

ಬಳ್ಳಾರಿ ಜಿಲ್ಲಾಬೋರ್ಡು ಕಛೇರಿಯಿಂದ ಹೀಗೆ ತಿಳಿದುಬಂದಿದೆ. "ಕೆಲವಿಂಗಳಕೆಳಗೆ ಜಿಲ್ಲಾ ಬೋರ್ಡು ಪ್ರಾಥಮಿಕ ಉಪಾಧ್ಯಾಯರ ವಿಷಯಮಂಡಲವೂ ಒಂದು Deputation ಜಿ. ಬೋ. ಅಧ್ಯಕ್ಷರನ್ನು ಕಂಡು ಸಂಬಳದ ಹೆಚ್ಚಳಕ್ಕಾಗಿ ಬರಹಮೂಲಕ ಬೇಡಿತು. ಇದರಿಂದ ಉದ್ಭವಿತವಾದ ಪರಿಸ್ಥಿತಿಯನ್ನು ವಿಚೇಚಿಸಿ ಅನ್ಯಾಯಗಳಾಗಬಾರದೆಂದು. ಹಿಂದಿನ ನುಂಎನ ಎಲ್ಲಾ ವಿವರಗಳನ್ನು ತೆಗೆದು ಇಂಕ್ರಿಮೆಂಟ್‌ಗೆ ಅರ್ಹರಾದ ಉಪಾಧ್ಯಾಯರ ಪಟ್ಟಿಯನ್ನು ತಯಾರಿಸುತ್ತಿದ್ದೇವೆ. ಒಂದು ಶಾಖೆಯಿಂದ ಮತ್ತೊಂದು ಶಾಖೆಗೆ ಗುಮಾಸ್ತರು ಅದಲು ಬದಲಾದ ಕಾರಣ ಸ್ವಲ್ಪ ಕಷ್ಟವಾಗಿ ಸಾವಕಾಶಕ್ಕೆ ಕಾರಣವಾಗಿದೆ. ಸೆಪ್ಟಂಬರ್ ತಿಂಗಳೊಳಗಾಗಿ ಪಟ್ಟಿಯು ತಯಾರಾಗಿ ಅಕ್ಟೋಬರ್ ತಿಂಗಳಲ್ಲಿ ಇಂಕ್ರಿಮೆಂಟ್ ಕೊಡಲಾಗುವದು. ಆದರಿವರಗೆಲು ಸಿದ್ಧವಾದಾಗ 'ನವಭಾರತ' ಕ್ಕೆ ತಿಳಿಸುತ್ತೇವೆ.

ಬಳ್ಳಾರಿ ಜಿಲ್ಲಾ [8-8-42ಕ್ಕೆ ಮುಗಿಯುವ ವಾರಕ್ಕೆ]

ಕ್ಷಾಮ:— ಅದವಾನಿ ತಾಲೂಕಿನ 4 ಕೇಂದ್ರಗಳಲ್ಲಿ ಒಟ್ಟಿಗೆ 18625 ಜನರಿಗೆ ಸಹಾಯ ಒದಗಿಸಲಾಯಿತು. ಆಲೂರು ತಾಲೂಕಿನ ಹೆಬ್ಬಟ ಹೊಳಲುಗುಂದಿ ಕೇಂದ್ರದಲ್ಲಿ 3650 ಜನರು, ಸಿರುಗುಪ್ಪೆ ತಾಲೂಕು ರಾವಿಹಾಳು ವತ್ತುಮುರವಣಿಯಲ್ಲಿ 4285 ಜನರೂ ಸಹಾಯ ಹೊಂದಿದರು. ಕ್ಷಾಮ ಕೇಂದ್ರಗಳಲ್ಲಿ 2384 ಮಕ್ಕಳಿಗೆ ಕೆಲಸವಿಲ್ಲದೆ ಕೂಲಿಕೊಡಲಾಯಿತಲ್ಲದೆ 2917 ಜನರಿಗೆ ಆಹಾರ ಒದಗಿಸಲಾಯಿತು. ರಾಯದುರ್ಗ ಎಮ್ಮಿಗನೂರು ಕೇಂದ್ರಗಳಲ್ಲಿ 6118 ಜನನೆಯ್ಯರಿಗೆ ಸಹಾಯ ಕೊಡಲಾಯಿತು.

ಗುಂಟೂರಲ್ಲಿ ಗುಂಡುಹಾರಿಸಿದ ಕಾರಣ ಇಬ್ಬರು ಸತ್ತರೆಂದು ಗೊತ್ತಾಗಿದೆ.

ಯು. ಪಿ. ಅಡ್ವೊಕೇಟ ಜನರಲ್ ಆದ ಶ್ರೀ ಬಲದೇವನಹಾಯರು ತಮ್ಮ ಪದವಿಗೆ ರಾಜೀನಾಮೆ ಇತ್ತಿರುವರು.

ಡಾಕಾದಲ್ಲಿ ಮುನ್ಸಿಫ್‌ಕೋರ್ಟು ರಿಕಾರ್ಡು ಸುಟ್ಟಿರುವರು. ಜಿಲ್ಲಾ ಜಡ್ಜರು ಅಲ್ಲಿಗೆ ಬಂದರು ಅನರಿಗೂ ಪೆಟ್ಟು ತಗಲಿದೆ.

13 ನೆಯ ತಾ. ಹಿಂದೂಸ್ತಾನ ವಿಮಾನ ಕಾರ್ಖಾನೆಯ 6 ಸಾವಿರ ಕೂಲಿಕಾರರು ಮೆರವಣಿಗೆ ಹೊರಟು ಮುಖ್ಯ ಮುಖ್ಯ ಬೀದಿಗಳಲ್ಲಿ ಹಾದುಹೋದರು. ಆ ದಿನ ಕಾರ್ಖಾನೆಗೆ ರಜಾ ಕೊಡಲಾಯಿತು.

ಬ್ರಿಟೀಷ್ ವಿಮಾನ ವಾಹಕವು ಮುಳುಗಿತು.

'ಈಗಲೆ' ಎಂಬ 22,000 ಟನ್ ತೂಕದ ವಿಮಾನ ವಾಹಕವೂ ಭೂಮಧ್ಯ ಸಮುದ್ರದಲ್ಲಿ ಶತ್ರುಕಾರ್ಯದಿಂದ ಮುಳುಗಿದೆ.

ಬಳ್ಳಾರಿ ವರ್ತಕ ಸಂಘದ ತೀರ್ಮಾನ:— ಭಾರತ ದೇಶದ ಮೂರ್ತಿಪ್ರಾಯರಾದ ಗಾಂಧೀಜಿ ಮತ್ತು ಇತರ ನಾಯಕರನ್ನು ಬಂಧಿಸಿದ್ದು ಒಳ್ಳೆಯದಾಗಿಲ್ಲ. ಗಾಂಧೀಜಿಯು ವೈಸ್ರಾಯರೊಡನೆ ಮಾತಾಡಿ ಸಂಧಿಯಮೂಲಕ ಮಿತ್ರಪಕ್ಷಕ್ಕೆ ಅನುಕೂಲವಾಗುವ ಸಂಭವವಿತ್ತು ಇದರಿಂದ ದೇಶದ ಉದ್ಯೋಗ ವ್ಯಾಪಾರಗಳಿಗೆ ಧಕ್ಕೆತಗಲಿದೆ. ಪ್ರಸ್ತುತ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲು ಮಹಾತ್ಮ ಗಾಂಧಿಯವರೊಡನೆ ಕೂಡಲೆ ಸಂದಾನ ವಾರಂಭಿಸಿ ಸರಕಾರದವರು ಪರಿಸ್ಥಿತಿಯ ಸ್ಪಷ್ಟತೆಯನ್ನರಿತು ರಾಜಕೀಯ ವಿವೇಕದಿಂದ ವರ್ತಿಸಬೇಕು. ಅಹಿಂಸಾತತ್ವಕ್ಕೆ ವಿರುದ್ಧವಾದ ಈಗ ನಡೆಯುತ್ತಿರುವ ಸಾರ್ವಜನಿಕ ಹಿಂಸಾತ್ಮಕಗಳನ್ನು ಈಸಂಧಿವು ಬಲವಾಗಿ ಖಂಡಿಸುತ್ತದೆ.

This Page also printed at Krishna Press, Bellary.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ: 1897.

45 ನೇ ವಾರ್ಷಿಕ ವರದಿಯ ಕೆಲವು ಮುಖ್ಯ ಅಂಶಗಳು

ಒಟ್ಟು ಆದಾಯ	ರೂ. 85,61,000 ಮೀರಿದೆ
ಚಾಲ್ತಿಯಲ್ಲಿರುವ ನಿಮಾ ಪಾಲಿಸಿಗಳು	ರೂ. 14,84,44,000 ,,
ಆಸ್ತಿ	ರೂ. 3,80,86,000 ,,

ಕಂಪೆನಿ ಪ್ರಾರಂಭವಾದ ಬಾಗಾಯ್ತು ಪಾವತಿ ಮಾಡಿರುವ ಕ್ಲೈಂಗಳು ರೂ. 7,48,66,000 ,,

ಏಜನ್ಸಿಗಳಿಗೆ ದರಖಾಸ್ತುಗಳನ್ನು ಕಳುಹಿಸುವುದು.

ಮುಖ್ಯ ಕಛೇರಿ:
ಎಂಪೈರ್ ಆಫ್ ಇಂಡಿಯಾಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬೆಂಗಳೂರು ಬ್ರಾಂಚ್:
ಡಿಸ್ಟ್ರಿಕ್ಟ್‌ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರಿಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮೂಡಿದ ಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ವೆಸ್ಟ್ ಎಂಡ್ ಜಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು,
- ಮಾತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ?

ಹಾಗಾದರೆ ಕೂಡಲೇ ಕೆಳಗಿನವರಲ್ಲಿ ವಿವರಗಳನ್ನು ತಿಳಿಯಿರಿ

ನಿಮಗೆನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು. ಪರೀಕ್ಷೆಯ ಪಾಠ್ಯ ಪುಸ್ತಕಗಳು, ಕಥೆ ಕಾದಂಬರಿ ಇತ್ಯಾದಿ ದೊರೆಯುವುದಲ್ಲದೆ ನಿಮಗೆ ಎಲ್ಲಾ ವಿಧವಾದ ಮಾಹಿತಿಯೂ, ಪತ್ರಿಕೆಯಾಗಿ ಹೇಳಲಾಗುವುದು

ಟಿ. ಬಿ. ಕೇಶವರಾವ್,
ಕ್ರಿಸ್ಟಮಾಚಾರಿ ಕಾಂಪೌಂಡು, ಬಳ್ಳಾರಿ

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription	
Annual	
Local	—0—1
Mofussil	3—0—0
6 Months	
Local	1—4—0
Mofussil	2—0—0

ಚಂದಾ ವಿವರ	
ವರ್ಷಕ್ಕೆ	
ಬಳ್ಳಾರಿಯವರಿಗೆ	2-0-0
ಹೊರಗಿನವರಿಗೆ	3-0-0
೬ ತಿಂಗಳಿಗೆ	
ಬಳ್ಳಾರಿಯವರಿಗೆ	1-4-0
ಹೊರಗಿನವರಿಗೆ	2-0-0

Nava Bharat, Bellary.

REG. No. M 3937.

Sri _____

_____

_____

Printed at Vitral Press, Car Street Edited & Published by T. B. Keshava Rao, Bellary

Reg. No. M. 3937 ವಂದೇ ಮಾತರಂ

ನವ ಭಾರತ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯ ವರಾನ್ನಿಬೋಧತ.

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—

ಸಂಚಿಕೆ ೪೬ ಬಳ್ಳಾರಿ ೨೩ ನೇ ಆಗಸ್ಟ್ ಭಾನುವಾರ ೧೯೪೨. ಟಿ. ಬಿ. ಕೇಶವರಾವ್

★ ಯುದ್ಧ ವಾರ್ತೆಗಳು ★

ಚರ್ಚಿಲ-ಸ್ಟಾಲಿನ ಭೇಟಿ.

ಬ್ರಿಟಿಷ್ ಪ್ರಧಾನ ಮಂತ್ರಿಗಳಾದ ವಿಂಸ್ಟನ ಚರ್ಚಿಲರವರು ಸಿಬ್ಬಂದಿ ಯೊಂದಿಗೆ ಮಾಸ್ಕೋಕ್ಕೆ ಹೋಗಿ ರಷ್ಯಾದ ಸರ್ವಾಧಿಕಾರಿ ಸ್ಟಾಲಿನರನ್ನು ಭೇಟಿ ಯಾದರು. ಬ್ರಿಟ್ ಮತ್ತು ರಷ್ಯಾದ ರಾಯಭಾರಿಗಳೂ ಭಾರತದ ದಂಡನಾ ಯಕರಾದ ಜನರಲ್ ವಾವೇಲರೂ ಕೂಡ ಹಾಜರಿದ್ದರು ರಷ್ಯದಮೇಲೆ ಜರ್ಮನಿಯ ಹಿಡಿತವನ್ನು ಕಡಿಮೆ ಮಾ ಡಲು ದ್ವೀತಿಯ ರಣರಂಗವನ್ನು ಸ್ಥಾಪಿ ಸಬೇಕಾದ ಸಾಧ್ಯಾಸಾಧ್ಯಗಳನ್ನು ಸಹ ಚರ್ಚಿಸಿರಬಹುದಾಗಿ ಊಹಿಸಲಾ ಗಿದೆ.

ಹೊಸ ಸೈನ್ಯಾಧಿಪತಿ :— ಯುದ್ಧ ಪೂರ್ವದಲ್ಲಿ ಜನರಲ್ ಆಚಿನಲೆಕರಿಗೆ ಬದಲಾಗಿ ಜನರಲ್ ಅಲೆಕ್ಸಾಂಡರವರು ನಿಯಮಿಸಲ್ಪಟ್ಟಿರುವರು ಆಚಿನಲೆಕರು ಯಾವರಣರಂಗದ ಆಧಿಪತ್ಯವನ್ನು ವಹಿ ಸುವರೋ ಇನ್ನೂ ಪ್ರಕಟವಾಗಿಲ್ಲ.

ಸಾಲೋಮನ್ ದ್ವೀಪಗಳು :—

ಇಲ್ಲಿ ದೊಡ್ಡ ಸಮುದ್ರಯುದ್ಧವಾಗಿ ದೆ ಯೆಂದೂ. ಸದ್ಯಕ್ಕೆ ಯಾವುದನ್ನೂ ಹೇಳಲು ಬರುವಂತಿಲ್ಲವೆಂದೂ ಪ್ರಕಟ ವಾಗಿದೆ. ಜಪಾನರು ಮರಣ ಹೊಂದು ವವರಿಗೆ ಹೋರಾಡಬೇಕೆಂದು ಆಜ್ಞೆ ಯಾಗಿದೆ.

ರಷ್ಯ-ಜರ್ಮನಿ ಯುದ್ಧ :— ಮೇ 15 ರಿಂದ ಆಗಷ್ಟ 15 ರವರಿಗೆ 3 ತಿಂಗ ಳಲ್ಲಿ ಜರ್ಮನರು 4 ಲಕ್ಷ 80 ಸಾವಿರ ಸೈನ್ಯ 3390 ಟ್ಯಾಂಕುಗಳು, 4000 ಗ ಮತ್ತು 4000 ವಿಮಾನಗಳನ್ನು. ರಷ್ಯ ನರು 6 ಲಕ್ಷ 6 ಸಾವಿರ ಸೈನ್ಯ, 2240 ಟ್ಯಾಂಕು, 3162 ಗ್ಗಳನ್ನು ಕಳೆದು ಕೊಂಡಿರುವರೆಂದು ಮಾಸ್ಕೊ ಪ್ರಕಟನೆ ಹೇಳುತ್ತದೆ. ತಮ್ಮಿಂದ ಆಕ್ರಮಿಸಲ್ಪಟ್ಟ ಪ್ರದೇಶಗಳಿಂದ ಅನೇಕ ವಿಭಿಜ್ಞ ಸೈನ್ಯ ಯುದ್ಧ ಶಸ್ತ್ರಗಳನ್ನು ತಂದು ರಷ್ಯದ ಮುಖ್ಯ ಭಾಗಗಳನ್ನು ಆಕ್ರಮಿಸಿತು. ಸ್ಯೆಕಾಸ್ ಎಣ್ಣೆಯ ಬಾವಿಗಳನ್ನು ಸಂಪೂರ್ಣವಾಗಿ ನಾಶಮಾಡಿರುವದಾಗಿ ಹೇಳಲಾಗಿದೆ. ಕ್ಲೆಪ್ಟಿಸ್ಕಾಯಾದ ಬಳಿ ರಷ್ಯನರು ಮತ್ತೆ ಹಿಂದಕ್ಕೆ ಸರಿದಿರು ನರು.

ರಷ್ಯನರು ಹಿಂದಕ್ಕೆ ಸರಿಯುತ್ತಲೇ ಇರುವರು. ಕ್ರಾಸ್ನೊಪಾರ ನಗರವು ಶತ್ರುವಶವಾಯ್ತೆಂದೂ, ಗ್ರಾಪ್ಸ್ನಿ ಎಣ್ಣೆಯ ಭಾವಿಗಳಿಗೂ, ಕಪ್ಪು ಸಮುದ್ರದ ನೊ ವಾರಿಸಿಸ್ಕ ಬಂದರಿಗೂ ಅಪಾಯವು ಹೆಚ್ಚಿದೆಯೆಂದು ಹೇಳಲಾಗಿದೆ.

ಮಿತ್ರ ವರ್ಗದವರಿಗೆ :— ಬ್ರಿಟನ್ನಿ ನಿಂದ ಸಾವಿರಾರು ವಿಮಾನಗಳ ದಾಳಿ ಯು ಫ್ರೆಂಚ್ತೀರದಲ್ಲಿ ಜಿಪ್ಪೆ ಭಾಗದ ನೇಲಾಯಿತು ಪರಿಣಾಮವು ತಿಳಿದು ಬಂದಿಲ್ಲ

ಬ್ರಿಟಿಷ್ ಹಡಗುಗಳನಾಶ:— ಮಾ ಲ್ಟಾದ್ವೀಪಕ್ಕೆ ಆಹಾರ ಸಾಮಗ್ರಿಗಳನ್ನೊ ಯ್ಯುತ್ತಿದ್ದ ಹಡಗುಗಳ ಸೈಕಿ-ಈಗಲ್, ನಾರ್ಫಾಕ್ಸ್ಟರ್, ಕೈರೊ, ಫೋರ್ಟ್ಸೈಟ್ ಎಂಬ 4 ಹಡಗುಗಳು ಮುಳುಗಿದವೆಂದು ನಾವಿಕಾ ಶಾಖೆಯವರು ಪ್ರಕಟಿಸಿರುವರು

ಜರ್ಮನರ ವಿನಾಶಿಕೆಯೊಂದು ದಕ್ಷಿಣ ಅಟ್ಲಾಂಟಿಕ್ ಸಮುದ್ರದಲ್ಲಿದ್ದು ಅಮೆರಿ ಕಾದ ವರ್ತಕ ಹಡಗೊಂದನ್ನು ಮುಳು ಗಿಸಿದೆಯೆಂಬುದಾಗಿ ಎಚ್ಚರಿಕೆ ಕೂಡ ಲಾಗಿದೆ.

ದಕ್ಷಿಣ ಅಮೆರಿಕಾದ ಬ್ರೆಜಿಲ ದೇಶದ ಹಡಗುಗಳನ್ನು ಜರ್ಮನಿಯು ಮುಳುಗಿ ಸಿದಕಾರಣ ಅವರು ಜರ್ಮನರ ಜಲಾಂತ ರ್ಗಾಮಿಗಳನ್ನು ಮುಳುಗಿಸಿರುವರು ಜರ್ಮನ ಸರ್ಕಾರಕ್ಕೆ ನಿಷೇಧ ಪತ್ರವು ಹೋಗಿದೆ.

ಪೆಸಿಫಿಕ್ ಸಾಗರದ 8 ತಿಂಗಳ ಯುದ್ಧ ದಲ್ಲಿ ಜಪಾನರು ½ ಭಾಗದ ವ್ಯಾಪಾರೀ ಹಡಗುಗಳನ್ನು ಕಳೆದುಕೊಂಡಿರುವರು

ಸ್ಟಾಲಿನ್‌ಗ್ರೇಡ್ ದಾಳಿಯ ಫಲ :— ಇಂಗ್ಲೆಂಡು ಜರ್ಮನಿ ಎರಡೂ ಕಡೆ ಗಳಲ್ಲಿ ಅತಿಶಯ ನಷ್ಟವಾಗಿದೆಯೆಂತ ಲಂಡ್ ಪ್ರಕಟನೆ ಹೇಳುತ್ತದೆ. 72 ಶತ್ರು ವಿಮಾನಗಳು, 6 ಗ್ಗಬ್ಯಾಟರಿ, ಮದ್ದಿನ ಕಾರ್ಖಾನೆಗಳು, ನಾಶವಾಗಿವೆ. ನಮ್ಮ ವಿಮಾನಗಳು 95 ನಾಶವಾಗಿವೆ. ಘಾಯ ಹೊಂದಿದ ಸೈನಿಕರು ಅಸ್ಪತ್ರೆಯಲ್ಲಿ ದಾಖಲಾದರು. ಇದರಿಂದ ಮಿತ್ರವರ್ಗ ದವರಿಗೆ ಒಳ್ಳೆಯ ಅನುಭವವು ದೊರೆ ಯಿತಂತೆ.

ಪೆಸಿಫಿಕ್ ಸಾಗರದ ಸಾಲೋರ್ಮ ದ್ವೀಪಗಳ ಯುದ್ಧದಲ್ಲಿ 'ಕ್ಯಾನ್‌ಬರ' ಎಂಬ 10 ಸಾವಿರ ಟನ್ನಿನ ಆಸ್ಟ್ರೇಲಿ ಯಾ ದೇಶದ ಯುದ್ಧದ ಹಡಗು ಮುಳು ಗಿಸಲ್ಪಟ್ಟಿತೆಂದು ಅಧಿಕಾರ ರೀತ್ಯಾ ಸಾರಲಾಗಿದೆ.

ಜಪಾನೀಯರ ಯುದ್ಧದ ಹಡ ಗೊಂದು ಅಲ್ಯೂಷಿಯರ್ ದ್ವೀಪಗಳ ಭಾಗದಲ್ಲಿ ಅಮೆರಿಕಾದ ನಾವಿಕಾದಳ ದಿಂದ ಮುಳುಗಿಸಲ್ಪಟ್ಟಿದೆ.

ದ್ವಿತೀಯ ರಣರಂಗದ ಸಾಧ್ಯಾ ಸಾಧ್ಯಗಳನ್ನು ಕುರಿತು ಅಮೆರಿಕಾದಲ್ಲಿ ಅಭಿಪ್ರಾಯವು ಶೇ 61 ಭಾಗವು ಅನು ಕೂಲವಿದೆ ಇನ್ನು 2 3 ತಿಂಗಳಲ್ಲಿ ಜರ್ಮನರ ಮೇಲೆ ಬೇಳಲು ಸನ್ನಾಹ ಮಾಡಿದರೆ ಜಯವು ದೊರೆಯಬಹು ದೆಂದೂ ಕೆಲವರು ಇದರಿಂದ ಯಶಸ್ಸು ಸಿಗಬಾರದೆಂದೂ ಹೇಳಿದ್ದಾರೆ.

Visit ROYAL CAFE
Near Royal Picture Palace
Royal is Royal

THE NAVABHARAT
ಸಂಯುಕ್ತ-ಪ್ರಾ.ಪೀಪಲ್ಸ್‌ವಾದ
ಭಾನುವಾರ 23—8—1942.

ವೃತ್ತಪತ್ರಿಕಾ ನಿರ್ಬಂಧಗಳು

ಪೀಠಿಕೆ :— ಮಹಾತ್ಮ ಗಾಂಧಿಯವರ ಬಂಧನಾನಂತರ ಸ್ವಾರಂಭವಾದ ಸಾಮೂಹಿಕ ಚಳವಳಿಯನ್ನು ಅಡಗಿಸಲು ಸರಕಾರದವರು ತನ್ನ ಶಕ್ತಿ ಸರ್ವಸ್ವವನ್ನು ವಿನಿಯೋಗಿಸುತ್ತಿರುವರು. ಈ ದಮನನೀತಿಗನುಗುಣವಾಗಿಯೋ ಎಂಬಂತೆ ದೇಶದಲ್ಲಿ ಹಿಂಸಾವಾತಾವರಣವೂ ಪೆಚ್ಚುತ್ತಲಿರುವದು ವಿಷಾದಕರ ಘಟನೆಯಾಗಿದೆ. ಒಂದೆಲ್ಲೊಂದೆಡೆ ಗುಂಡುಹಾರಿಸುವ ಪ್ರಕರಣವೂ, ಜನರು ಸಾಯುತ್ತಿರುವ ಅಂಶವೂ ನಿತ್ಯದ ನಿಧಿಯಾಗಿದೆ. ಒಳನಾಡಿನಲ್ಲಿ ಇಂಥಾ ಅಶಾಂತ ಪರಿಸ್ಥಿತಿ, ಮತ್ತು ಹಿಂದೂಸ್ತಾನದ ಬಾಗಿಲಲ್ಲಿ ಶತ್ರುವು ಬೆಕ್ಕಿನಂತೆ ಹೊಂಚು ಹಾಕಿಕೊಂಡು ಕಾಯುತ್ತಿರುವ ಅಪಾಯದ ಕಾಲದಲ್ಲಿ ವೃತ್ತಪತ್ರಿಕೆಗಳ ಕರ್ತವ್ಯವು ಗುರುತರವಾಗಿದೆ. ಶಾಂತಕಾಲಕ್ಕಿಂತಲೂ ಈ ಕಾಲದಲ್ಲಿ ಸತ್ಯವಾದ ವಾರ್ತೆಗಳು ಪ್ರಶಿದ್ಧಿಸಲ್ಪಡುವ ಆವಶ್ಯಕತೆಯು ಪೆಚ್ಚಾಗಿದೆ.

ನಿರ್ಬಂಧಗಳ ವಿಚಾರ :— ಸಾಮೂಹಿಕ ಚಳವಳಿಯಾರಂಭವಾದ ಮೇಲೆ ಸರಕಾರದವರು ವೃತ್ತಪತ್ರಗಳಮೇಲೆ ಕೆಲನಿರ್ಬಂಧಗಳನ್ನು ಹೇರಿರುವರು. ಇವು ಅಸಹ್ಯವಾಗಿವೆ. ವಿವಿಧ ಪ್ರಾಂತಗಳಲ್ಲಿ ಅಧಿಕಾರಿಗಳು ತಮ್ಮ ಮನಸ್ಸಿಗೆ ಹೊಳೆದಂತೆ ಈ ನಿರ್ಬಂಧಗಳ ಅರ್ಥ ಮಾಡಿ ಅಧಿಕಾರವನ್ನು ಚಲಾಯಿಸುತ್ತಿರುವರು. ಉದಾಹರಣಾರ್ಥವಾಗಿ ದಿವಲಿಯ ಪೋಲೀಸ್ ಕಮಿಷನರವರು ಹಿಂದೂಸ್ತಾನ ಟೈಂಸ್ ಪತ್ರಿಕೆಯಲ್ಲಿ ನಿ ಕಾಲಂಗಳಿಗಿಂತ ಹೆಚ್ಚಾಗಿ ಚಳವಳಿಯ ಸುದ್ದಿಗಳಿರಬಾರದೆಂದು ಆಜ್ಞೆಯನ್ನು ಹೊರಡಿಸಿ ಅದನ್ನು ಸಂಪಾದಕರು ಉಲ್ಲಂಘಿಸಿದ ಕಾರಣ ಅವರನ್ನು ಬಂಧಿಸಿರುವರು. ಚಳವಳಿಯ ಸಂಬಂಧ ವಿವಿಧ ಪ್ರಾಂತಗಳ ಸರಕಾರ ಪ್ರಕಟಿಸಿದರೂ ಕೂಡ ಅವು ಅನೇಕ ಕಾಲಂಗಳಾಗುತ್ತಿ. ಆದರಲ್ಲಿ ಪ್ರಾಮುಖ್ಯ ದಿನ ಪತ್ರಿಕೆಯಾದ 'ಹಿಂದುಸ್ತಾನ ಟೈಂಸ್' ದೇಶದ ಪಾರ್ಟಿಗಳನ್ನೆಲ್ಲಾ ಕೊನದಿದ್ದರೆ ಹೇಗೆ ? ಅಲ್ಲದೆ ಸುದ್ದಿಗಾರರು ಜಿಲ್ಲಾ ಕಛೇರಿಗಳಲ್ಲಿ ಹೆಸರುಕೊಟ್ಟ 'ರಿಜಸ್ಟರ್' ಮಾಡಿಸಿಕೊಳ್ಳಬೇಕು. ರಿಜಸ್ಟರಾಗದ ಸುದ್ದಿಗಾರರು ಚಳವಳಿಯ ಸಂಬಂಧ ಸುದ್ದಿಗಳನ್ನು ಕಳುಹಿಸಲು ಬರುವಂತೆಯೇ ಇಲ್ಲ. ಯು. ಪಿ. ಸರಕಾರದವರು ಪತ್ರಿಕೆಗಳಲ್ಲಿ ಎಷ್ಟು ದೊಡ್ಡ ಅಕ್ಷರಗಳಿರಬೇಕೆಂಬುದನ್ನು ನಿಶ್ಚಯಿಸಿರುವರು.

ಇದು ಅವಿವೇಕವಾದದ್ದು :—

ಅಧಿಕಾರಿಗಳು ವೃತ್ತಪತ್ರಿಕೆಗಳವರಿಗೆ ತಮ್ಮ ಜವಾಬ್ದಾರಿಗಳನ್ನು ತಿಳಿಯಹೇಳುವರು ಅವಿವೇಕವಾದುದೆಂತ ನಮ್ಮ ಅಭಿಪ್ರಾಯ. ವೃತ್ತಪತ್ರಗಳ ಸಂಪಾದಕರೂ, ಸುದ್ದಿಗಾರರೂ, ಸಾಕಾದಷ್ಟನ್ನು ರಿತವರೂ, ಸುಸಂಸ್ಕೃತರೂ, ಅಧಿಸಂಖ್ಯಯಲ್ಲಿ ದೊರೆಯುತ್ತಾರೆ. ಅಲ್ಲದೆ ಒಳನಾಡಿನ ಅಶಾಂತಿಯ ಘಟನೆಗಳನ್ನು ಪ್ರಕಟಿಸುವದರಲ್ಲಿ ಸತ್ಯಾಸತ್ಯ ಅಂಶಗಳಕಡೆ ದೃಷ್ಟಿಇಟ್ಟು ಘನತೆ ಹೊಂದಿದ ಮಹಾಸೀಯರಿಂದ ಬಂದ ಸುದ್ದಿಗಳನ್ನಷ್ಟೇ ಪ್ರಕಟಮಾಡುವ ವಡ್ಡತಿಯು ಎಲ್ಲಾ ವೃತ್ತಪತ್ರಗಳವರೂ ಅರಿತದ್ದಾಗಿದೆ. ಹೀಗಿರುವಲ್ಲಿ ಜಾರಿಯಲ್ಲಿರುವ ಶಾಸನಗಳ ಜೊತೆಗೆ ಇನ್ನೂ ನಿರ್ಬಂಧಗಳನ್ನು ಹೇರಿರುವುದು ಅನ್ಯಾಯವೆಂದು ಹೇಳುತ್ತೇವೆ.

ಪರಿಣಾಮವೇನು ? ಸ್ವಾತಂತ್ರ್ಯ ಸಂಗ್ರಾಮಕ್ಕೆ ಬೆಂಬಲ ಕೊಡುವ ಪತ್ರಿಕೆಗಳು ಶಾಸನಗಳಿಗೆ ಬಲಿಯಾಗುವುದರಲ್ಲಿ ಸಂಶಯವೇ ಇಲ್ಲ. ರಾಷ್ಟ್ರೀಯ ಪ್ರವೃತ್ತಿಯ ಮತ್ತು ಜನತೆಗೆ ಸತ್ಯವಾದ ಸಮಾಚಾರಗಳನ್ನು ತಿಳಿಸಬೇಕೆಂಬ ಪತ್ರಿಕೆಗಳಿಗೆ ಕೈಕಾಲು ಕಟ್ಟಿದಂತಾಗಿದೆ. ಈ ಕಾರಣ ಕಲ್ಕತ್ತೆಯ 14 ಪತ್ರಿಕೆಗಳೂ, ಬಳ್ಳೋದ, 'ನ್ಯಾಷನಲ್ ಹೆರಾಲ್ಡ್' ದೆಹಲಿಯ ಹಿಂದೂಸ್ತಾನ್ ಟೈಂಸ್, ಮದ್ರಾಸ್‌ನಗರದ, ಇಂಡಿಯನ್ ಎಕ್ಸ್‌ಪ್ರೆಸ್ ದಿನಮಣಿ ಆಂಧ್ರಪ್ರಭ ನವಯುಗ, ಫ್ರೀಪ್ರೆಸ್ ಭಾರತೆಯೇನ ಕಾಂಗ್ರೆಸ್ ಮುಂತಾದ ಪತ್ರಿಕೆಗಳು ಬೆಂಗಳೂರಿನ 4 ಕನ್ನಡ ಪತ್ರಿಕೆಗಳು 20-8-42 ರಿಂದ ಸರಕಾರದ ನಿರ್ಬಂಧಗಳ ನಿಷೇದಾರ್ಥವಾಗಿ ತಮ್ಮ ಪ್ರಕಟನೆಗಳನ್ನು ನಿಲ್ಲಿಸಿವೆ. ಇನ್ನೂ ಅನೇಕ ಪತ್ರಿಕೆಗಳು ನಿಲ್ಲಬಹುದಾದ ಸೂಚನೆಗಳಿವೆ.

ದೆಹಲಿಯಸಭೆ :— ವೃತ್ತ ಪತ್ರಿಕಾ ಸಂಪಾದಕರ ಕಾರ್ಯಕಾರೀ ಸಮಿತಿಯು 24ನೆ ತಾರೀ ದೆಹಲಿಯಲ್ಲಿ ಸೇರಲಿದೆ. ಸರಕಾರದವರು ಸಭೆಗೆ ಯಾವಪ ಸೂಫಾಫಾವನ್ನು ಕೊಡುವರೋ ಇನ್ನು ನೋಡಬೇಕಾಗಿದೆ. ಅಲ್ಲದೆ. ಸರಕಾರದವರು ನಿರ್ಬಂಧಗಳನ್ನು ಹಿಂದೆಗೆದುಕೊಳ್ಳದಿದ್ದರೆ ದೇಶದಲ್ಲಿ ವಿಷಮ ಪರಿಸ್ಥಿತಿಯುತ್ಪನ್ನವಾಗುತ್ತದೆ. ಮುಖ್ಯ ಪತ್ರಿಕೆಗಳಿಲ್ಲದ ಹಾಗಾದರೆ ಸುಳ್ಳುಸುದ್ದಿಗಳಿಗೆ ಪ್ರಾಶಸ್ಯವು ದೊರೆತಂತಾಗುತ್ತದೆ.

ನಮ್ಮ ಆಶೆ :— ಸ್ವಾತಂತ್ರ್ಯ ಸೂರ್ಯನು ಉದಯಿಸುವ ಪೂರ್ವದ ಲಕ್ಷಣಗಳೆಲ್ಲಾ ತೋರಿಬರುತ್ತಲಿವೆ. ಕಾಲ ನೇನೂ ದೂರವಿಲ್ಲ. ಪ್ರಪಂಚದ ಸಂಕಟವೆಲ್ಲಾ ಪರಿಹಾರವಾಗಿ ವೃತ್ತ ಪತ್ರಿಕೆಗಳಿಗೇ ಏಕ.ಅಖಿಲ ಹಿಂದೂಸ್ತಾನಕೂ ಸ್ವಾತಂತ್ರ್ಯವು ದೊರೆತು, ಅಂಧಾ ಸ್ವತಂತ್ರ ಸಾತಾವರಣದ ಸುಖವನ್ನು ಎಲ್ಲರೂ ಅನುಭವಿಸುವ ಕಾಲವೂ ಬಂದೇ ಬರುತ್ತದೆ. ರಾಷ್ಟ್ರೀಯ ಪ್ರವೃತ್ತಿಯ ವಾಚಕರೆಲ್ಲಾ ಪತ್ರಿಕೆಗಳಿಗಿರುವ ಕಷ್ಟಗಳನ್ನು ಸಹಾನುಭೂತಿಯಿಂದ ಮನನಮಾಡಿಕೊಳ್ಳಲು ನಮ್ಮ ವಿನತಿ.

ಮುಸ್ಲಿಂಲೀಗಿಗೆ ಕಾಂಗ್ರೆಸ್ಸಿನ ಸಲಹೆ

ಮಹಾತ್ಮ ಗಾಂಧಿಯವರ ಅಭಿಪ್ರಾಯ :— ಮುಸ್ಲಿಂಲೀಗು ಕಾಂಗ್ರೆಸ್ಸಿನ ಬೇಡಿಕೆಯಾದ ಸಂಪೂರ್ಣ ಸ್ವಾತಂತ್ರ್ಯದಲ್ಲಿ ಸಹಕರಿಸಿದರೆ ತಾನುಸ್ವತಂತ್ರವಾಗಿಯಾಗಲಿ ಇತರ ಪಾರ್ಟಿಗಳೊಡನೆ ಕಲೆತಾಗಲಿ ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವನ್ನು ರಚಿಸಬಹುದೆಂಬ ಸಲಹೆಯನ್ನು ಕಾಂಗ್ರೆಸ್ ಅಧ್ಯಕ್ಷರಾದ ಅಜಾದರು ಕೊಟ್ಟಿರುವದನ್ನು ಸಮರ್ಥಿಸಿ ಮಹಾತ್ಮ ಗಾಂಧಿಯವರು ಬೊಂಬಾಯಿನ ವಿತ್ರರೊಬ್ಬರಿಗೆ ಬಂಧನದ ಪೂರ್ವ ಬಂದು ಪತ್ರಬರೆದಿದ್ದರು ಅದು ಈಗ ಪ್ರಕಟವಾಗಿದೆ.

ಹಿಂದೂಸ್ತಾನ ಟೈಯಿಮ್ಸ್ ಮತ್ತು ಹಿಂದೂಸ್ತಾನ ಪತ್ರಿಕೆಗಳ ಸಂಪಾದಕರಾದ ಶ್ರೀ ದೇವದಾಸ ಗಾಂಧಿಯವರನ್ನು (ಮಹಾತ್ಮ ಗಾಂಧಿಯವರ ಮಕ್ಕಳು) ಬಂಧಿಸಿದ್ದಾರೆ.

ಸರಹದ ಪ್ರಾಂತ್ಯದಲ್ಲಿ ಖಾನ ಅಬ್ದುಲ್ ಗಫರ ಖಾನರೂ, ಅವರ ಸೋದರರಾದ ಡಾಕ್ಟರ್ ಖಾನ ಸಾಹೇಬರೂ ಸ್ವತಂತ್ರರಿದ್ದಾರೆ.

ಶ್ರೀ ರಾಜಗೋಪಾಲಾಚಾರಿಯವರು ಚೆನ್ನಾರನವರಿಗೆ ಮಾಡಿಕೊಂಡ ವಿನ್ನಹವನ್ನು ಮುಸ್ಲಿಂಲೀಗು ಕಾರ್ಯಕಾರಿಣೀ ಸಮಿತಿಯು ನಿರಾಕರಿಸುತ್ತಲಿದೆ.

ಆಸ್ತಿಗಳನ್ನು ನಾಶಪಡಿಸಿದವರಿಗೆ ಮರಣದಂಡನೆ.

ಖೈಲ್ವೆ ಆಸ್ತಿಗಳನ್ನು ನಾಶಪಡಿಸುವವರಿಗೂ, ತಂತಿಗಳನ್ನು ಕಡಿಯುವವರಿಗೂ, ಘಟಕಶಿಕ್ಷೆಯಿಂದ ಮರಣದಂಡನೆಯವರಿಗೂ ವಿಧಿಸಲಾಗುವದೆಂದು ಸರಕಾರದವರು ಪ್ರಕಟಿಸಿದ್ದಾರೆ.

ಸರಕಾರದ ನಿರ್ಬಂಧಗಳನ್ನು ಪ್ರತಿಭಟಿಸುತ್ತಾ ಬೆಂಗಳೂರಿನ 4 ವೃತ್ತ-ಪತ್ರಿಕೆಗಳು ಪ್ರಕಟನೆಯನ್ನು ನಿಲ್ಲಿಸಿವೆ

★ ಜಪಾನರ ಮುಂದಿನ ಹೆಜ್ಜೆ ★

ಸೈಬೀರಿಯ, ಚೀನ, ಭಾರತ, ಆಸ್ಟ್ರೇಲಿಯ ಈ ನಾಲ್ಕರ ಮೇಲೂ ದಾಳಿಯ ಅಂಜಿಕೆ.

(ರಾಜಕಾರಣ – ಕರ್ಮವೀರದಿಂದ.)

ಜಪಾನವು ಮುಂದೆ ಯಾವ ಹೆಜ್ಜೆಯನ್ನಿಡುವುದೆಂಬ ಪ್ರಶ್ನೆ ಜಗತ್ತಿನೆದುರಿಸುತ್ತಿದೆ. ಸೈಬೀರಿಯದ ಗಡಿಯಲ್ಲಿ ಅಸಂಖ್ಯಾತ ಸೈನ್ಯ ಸಂಗ್ರಹಮಾಡಿಕೊಂಡು ಈಗಲೊ ಇನ್ನೊಂದು ಪಕ್ಷಗೆಗೊ ಜಪಾನವು ರಶಿಯದ ಮೇಲೆ ಬೀಳಲು ಸಮಯ ಕಾಯುತ್ತಿರುವಂತೆ ಒಂದು ಕಡೆಯಿಂದ ವರ್ತಮಾನ ಬರುತ್ತಿದೆ. ಸೈಬೀರ್ಯೆ ವ್ಯಾಸಿಫಿಕದಲ್ಲಿ ಉತ್ತರ ಆಸ್ಟ್ರೇಲಿಯದ ಸಮೀಪದಲ್ಲಿರುವ ಕೆಲವು ದ್ವೀಪಗಳನ್ನು ಆಕ್ರಮಿಸಿಕೊಂಡು ಯಾವ ಕ್ಷಣಕ್ಕೆ ಆಸ್ಟ್ರೇಲಿಯದ ಮೇಲೆ ದೊಡ್ಡ ಪ್ರಮಾಣದ ದಾಳಿ ಮಾಡಲಿರುವುದೊ ಎಂದು ಶಂಕೆಯನ್ನುಂಟುಮಾಡುವ ಸಮಾಚಾರಗಳು ಬರುತ್ತಿರುವುದರಿಂದ ಬರುತ್ತಿವೆ. ಭಾರತ ರಾಜಕೀಯ ಸ್ಥಿತಿಯನ್ನು ಕಾಡು ಬರ್ಮಾದ ಗಡಿಯಲ್ಲಿ ಸಂಗ್ರಹಿತವಾಗಿದೆಯೆಂದು ತೋರಿಬರುವ ಜಪಾನಿ ಸೈನ್ಯವು ಎಲ್ಲಿ ಭಾರತದ ಮೇಲೆ ಬೀಳುವುದೊ ಎಂಬ ಭಯಶಂಕೆಗಳು ಅನೇಕರ ತಲೆಯಲ್ಲಿ ಸುಳಿದಾಡುತ್ತಿವೆ. ಒಟ್ಟಿನಲ್ಲಿ, ಒಂದೇ ಸಮಯದಲ್ಲಿ ಮೂರು ಭಾಗಗಳ ಮೇಲೆ ದಾಳಿ ಮಾಡುವ ಹೆದರಿಕೆಯನ್ನು ಜಪಾನವು ಹಾಕಿದೆ. ರಶಿಯದ ಮೇಲೆಯೇ ಬೀಳುವುದೊ ಅಥವ ಭಾರತದ ಮೇಲೆ ಬೀಳುವುದೋ ತಪ್ಪಿದಲ್ಲಿ ಆಸ್ಟ್ರೇಲಿಯದ ಮೇಲೆ ಬೀಳುವುದೊ ಎಂಬುದನ್ನು ನಿಕರವಾಗಿ ಹೇಳುವದಕ್ಕೆ ಒದಲಾಗಿ ಯಾವ ಯಾವ ಭಾಗದಲ್ಲಿ ಯಾವ ಯಾವ ಸಿದ್ಧತೆಗಳನ್ನು ಜಪಾನು ಮಾಡಿಕೊಂಡಿದೆಯೆಂಬುದನ್ನು ವಾಚಕರ ಮುಂದಿಟ್ಟರೆ ಜಪಾನದ ಮುಂದಿನ ಹೆಜ್ಜೆ ಯಾವದೆಂಬುದನ್ನು ಅವರೇ ನಿರ್ಧರಿಸಿಕೊಳ್ಳಬಹುದು.

ಜಪಾನದ ಯುದ್ಧ ಕಾರ್ಯಾಚರಣೆಯು ಸದ್ಯದ ಸಮರ ಸ್ಥಿತಿಗನುಗುಣವಾಗಿ ಬದಲಾವಣೆ ಹೊಂದುತ್ತದೆಂದು ಹೇಳಬಹುದಾದರೂ ಜಪಾನವು ತನ್ನ ಯುದ್ಧದ ವೇಳಾಪತ್ರಿಕೆಯನ್ನು ಹಾಕಿಕೊಂಡು ಎಷ್ಟೋ ವರ್ಷಗಳಾದವೆನ್ನಬಹುದು. ಆಯಕಟ್ಟಿನ ದೃಷ್ಟಿಯಿಂದಲೂ ಆಹಾರ ಮತ್ತು ಇತರ ಕಚ್ಚಾವಸ್ತುಗಳ ದೃಷ್ಟಿಯಿಂದಲೂ ಜಪಾನವ ಮೊದಲ ರಣರಂಗ (ಚೀನದ ಸಂಕರ) ವ್ಯಾಸಿಫಿಕ ಸಾಗರದಲ್ಲಾಯಿತು.

ಚೀನವು ಜಪಾನರ 'ಸವಮನ್ವಂತರ' ದ ಕೇಂದ್ರ. ಚೀನದಲ್ಲಿ ತಳವೂರಲು ಸಾಧ್ಯವಿಲ್ಲದಿದ್ದರೆ ಉಳಿದೆಡೆಗಳಲ್ಲಿ ತನ್ನ ಸಾಮರ್ಥ್ಯ ಪ್ರದರ್ಶನ ಮಾಡಲು ಜಪಾನಿಗೆ ಸಾಧ್ಯವೇ ಇರಲಿಲ್ಲವೆನ್ನಬಹುದು.

ಆಸ್ಟ್ರೇಲಿಯದ ಮೇಲೆ ದಾಳಿಯೇ ?

ಜಪಾನದ ಯುದ್ಧಗತಿಯು ಭೌಗೋಲಿಕ ಮತ್ತು ವಾತಾವರಣಕ್ಕನುಗುಣವಾಗಿ ಇಲ್ಲದೆ ಇಲ್ಲ. ಬರ್ಮಾ ಮತ್ತು ಭಾರತ ದೇಶಗಳು ಹಿಂಗಾರು ಮುಂಗಾರು ಮಳೆಗಳ ಕ್ಷೇತ್ರದೊಳಗಿವೆ. ಮೇ ತಿಂಗಳಿಂದ ಅಕ್ಟೋಬರ್ ತಿಂಗಳ ವರೆಗೂ ಭಾರತ, ಬರ್ಮಾಗಳಲ್ಲಿ ಸಾಮಾನ್ಯ ಭಾಗಗಳು ಮುಂಗಾರು ಹಿಂಗಾರು ಮಳೆಗೆ ಸಿಕ್ಕಿಕೊಂಡಿರುತ್ತವೆ. ಸಾಲದು ದಕ್ಕೆ ಅಂದಮಾನ ದ್ವೀಪಗಳು ಮತ್ತು ಅರಕಾನ ಕರಾವಳಿಯು ವರ್ಷವರ್ಷವೂ 'ಟೈಫೂನ'ದ ಹಾವಳಿಗೂ ಸಿಕ್ಕಿಕೊಳ್ಳಬೇಕಾಗುತ್ತದೆ. ಮುಂಗಾರು ಮಳೆಯ ಭೀತಿ ಇದ್ದುದರಿಂದಲೇ ಫಿಲಿಪ್ಪೈನ್ಸ, ಮಲಯ, ಡಚ್ ಈಸ್ಟ ಇಂಡೀಸ್‌ಗಳ ದಾಳಿಯನ್ನು ಜಪಾನವು ಅವ್ಯವಹಾರದಲ್ಲಿ ಮಾಡಿ ಮುಗಿಸಿಬಿಟ್ಟಿತು ನ್ಯೂಗಿನಿಯ ಮತ್ತು ಉತ್ತರ ಆಸ್ಟ್ರೇಲಿಯಗಳ ಮೇಲೆ ಅಗುತ್ತಿದ್ದ ಮುಂಗಾರು ಮಳೆಗಾಲ ಈಗ ತಾನೆ ಮುಗಿದಿದೆ. ಈ ತಿಂಗಳಿಂದ ಅಕ್ಟೋಬರ ತಿಂಗಳವರೆಗೆ ಆ ಭಾಗಗಳ ವಾಯುಗುಣವು ಹಿತಕರವಾಗಿಯೇ ಇರುತ್ತದೆ. ಆದ್ದರಿಂದ ಈಗ ಜಪಾನವು ಆಸ್ಟ್ರೇಲಿಯದ ಮೇಲೆ ದಾಳಿ ಮಾಡಲು ಸಕಾಲವೆಂದು ಕೆಲವು ಸಮರಜ್ಞರು ಅಭಿಪ್ರಾಯ ಪಡುತ್ತಾರೆ.

ಸೆಪ್ಟೆಂಬರಲ್ಲಿ ಭಾರತದಮೇಲೆ ಬೀಳುವದೇ ?

ಬಂಗಾಲ ಸಾಮುದ್ರ ಧುನಿ, ಅಂದಮಾನ ದ್ವೀಪಗಳು, ದಕ್ಷಿಣ ಅಸಾಮು ಮತ್ತು ಅರಕಾನ ಕರಾವಳಿ ಬರ್ಮಾದ ದಕ್ಷಿಣ ಪ್ರಾಂತಗಳು, ಇವೆಲ್ಲ ಮುಂಗಾರು ಮಳೆಯ ಕ್ಷೇತ್ರದೊಳಗಿವೆ. ಒಂದೊಂದು ಸಮಯದಲ್ಲಿ ಅಸಾಮಿನ ಮೇಲೆ ೫೦೦ ಅಂಗುಲ ಮಳೆ ಬೀಳುತ್ತದೆ. ಆ ಕಾಲದಲ್ಲಿ ಗಂಗಾನದಿಯು ಪ್ರವಾಹ ಬೇರೆ. ದಕ್ಷಿಣ ಬರ್ಮಾದಲ್ಲಿ ನುಲೇರಿಯಾದ ಪೀಡೆ, ಚಿಂದ್ವೀನ ನದಿಯನ್ನು ದಾಟುವದೇ ಅಸಾಧ್ಯವಾಗುತ್ತದೆ. ಸೆಪ್ಟೆಂಬರ ತಿಂಗಳ ವೇಳೆಗೆ ಪ್ರಕೃತಿಯು ಸ್ವಲ್ಪ ಸೌಮ್ಯಾವತಾರವನ್ನು ತಾಳುತ್ತದೆ. ಆಗ ಜಪಾನವು ಅರಕಾನ ಆಸಾಮು ಬಂಗಾಲಗಳಲ್ಲಿ ಮೂಲಕ ಭಾರತದ ಮೇಲೆ ಬೀಳುವುದು ಎಂದು ಕೆಲವರು ಅಭಿಪ್ರಾಯಪಡುತ್ತಾರೆ

ಸೈಬೀರಿಯಾದ ಮೇಲೆ ಯಾವಾಗ ?

ಜಪಾನವು ಮಂಚೂರಿಯವನ್ನು ಆಕ್ರಮಿಸಿ ಕೊಂಡಂದಿನಿಂದ ರಶಿಯಾ ಜಪಾನಗಳ ವಾತಾವರಣವು ಬಾಂಧವ್ಯವು ಅಷ್ಟೇನೂ ಸುಧಾರವಾಗಿಲ್ಲ. ಸೋವಾರು ಗೋಳೀಬಾರು ಘಟನೆಗಳು ಮುಂತಾರಿಯಾ – ಸೈಬೀರಿಯಾ ಗಡಿಗಳಲ್ಲಿ ನಡೆಯುತ್ತಲೇ ಇವೆ ಒಬ್ಬರ ಮೇಲ ಒಬ್ಬರು ಬೀಳುವದಿಲ್ಲವೆಂದು ರಶಿಯಾ ಜಪಾನುಗಳು ಕಳೆದ ಏಪ್ರಿಲ ತಿಂಗಳಲ್ಲಿ ಮಾಡಿಕೊಂಡ ಒಪ್ಪಂದದ ಅವ್ವೇಶವು ಕಮ್ಮ ಸಮರ ಬಲಾಸ್ತ್ರವನ್ನು ಬೇರೆ ಕಡೆಗ ಕೇಂದ್ರೀಕರಿಸುವನೇ ಆಗಿದೆ.

ಸೈಬೀರಿಯದಲ್ಲಿರುವ ಬಯ್ಕಾಲ ಸರೋವರದ ವಶ್ಚಿಮದ ಚಿಟಿ ರಶಿಯನರನ್ನು ಓಡಿಸಿ ಬಿಟ್ಟರೆ ತನ್ನ ಸ್ಥಾನವು ಸುರಕ್ಷಿತವಾಗುವವರೆಗು ಜಪಾನವು ಬಹುದಿವಸಗಳಿಂದ ಲೆಕ್ಕಹಾಕಿದೆ. ಇದನೆಲ್ಲಾ ಅರಿತ ರಶಿಯವು ಸೈಬೀರಿಯ ಗಡಿಯನ್ನು ಸಂರಕ್ಷಿಸಿಕೊಳ್ಳುವ ಪ್ರಯತ್ನದಲ್ಲಿರುವದಾದರೂ ಅತ್ತ ವಶ್ಚಿಮದಲ್ಲಿ ಕಾಕಸಸ ಮತ್ತು ಲೆನಿನಗ್ರಾಡ್‌ಗಳ ವ್ಯಾಮುಖ್ಯತೆಯನ್ನು ಕಡೆಗಾಣಿಸುವಂತಿಲ್ಲವಾದ್ದರಿಂದ ತಾನಾಗಿಯೇ ಜಪಾನದ ಮೇಲೆ ಬೀಳುವದಕ್ಕೂ ಅವು ಇದುವರೆಗೆ ಕೈಹಾಕಲಿಲ್ಲ.

ಜಪಾನಕ್ಕೆ ಭಯ

ಯುದ್ಧಾರಂಭವಾದಂದಿನಿಂದ ನಕಾಲದಲ್ಲಿ ರಶಿಯದ ಬೆನ್ನಿಗೆ ಇರಿಯಬೇಕೆಂದು ಜಪಾನವು ಹೊಂಚುಹಾಕುತ್ತಿದೆ. ಪೂರ್ವ ಸೈಬೀರಿಯದಲ್ಲಿರುವ ವ್ಲಾಡಿವೊಸ್ತಾಕ ಮುಂತಾದ ಪ್ರದೇಶಗಳಲ್ಲಿ ಮಿತ್ರರು ನೌಕಾ ಮತ್ತು ವೈಮಾನಿಕ ನೆಲೆಯನ್ನು ಸ್ಥಾಪಿಸಿಕೊಂಡು ಜಪಾನದ ಪ್ರಮುಖ ನಗರಗಳ ಮೇಲೆ ದಾಳಿಮಾಡಲು ಬಹಳ ಅನುಕೂಲವಾದವುಗಳಾಗಿರುವದರಿಂದ ಪೂರ್ವ ಸೈಬೀರಿಯವು ರಶಿಯನರ ಸ್ವಾಧೀನದಲ್ಲಿರುವ ವಿಷಯದಲ್ಲಿ ಜಪಾನರು ಸದಾ ಸಂಶಯಪೂರ್ಣರಾಗಿರುವರು.

[ಮುಂದಿನ ಪುಟವನ್ನು ನೋಡಿರಿ.]

[ಜಪಾನರ ಮುಂದಿನ ಹೆಜ್ಜೆ-ಹಿಂದಿನಪುಟದಿಂದ]

ಹಿಟ್ಲರನನ್ನು ಸದೆಬಡೆಯದ ಹೊರತು ರಶಿಯವು ತನ್ನ ಗಮನವನ್ನು ಬೇರೆಕಡೆ ತಿರುಗಿಸುವಂತಿಲ್ಲ. ಆದರೆ ಈಗ ಆಯಾ ಗದಿಯಲ್ಲಿರುವ ಉಭಯ ದೇಶದ ಸೈನ್ಯಗಳೂ ತಮ್ಮ ಶಕ್ತಿಪ್ರದರ್ಶನಕ್ಕೆ ಸಿದ್ಧವಾಗಿಯೇ ಇವೆ. ರಶಿಯದ ಶಕ್ತಿಯೇನಾದರೂ ಹೆಚ್ಚಿನದಾದ ಸಕ್ಕದಲ್ಲಿ ಜಪಾನದ ಮುಖ್ಯ ಬಂದರಗಳೂ, ಕೈಗಾರಿಕ ಕೇಂದ್ರಗಳಾದ ಟೋಕಿಯೊ, ಯೋಕೋಹಾಮಾ, ಒಸಾಕಾ, ಕೊಬೆ, ನಗೊಯಾಗಳು ನಾಶಕ್ಕೀಡಾಗುವದರಲ್ಲಿ ಸಂಶಯವೇ ಇಲ್ಲ.

ಈ ಸಮಯದಲ್ಲಿ ಇತ್ತೀಚಿನ ಸಮರ ಘಟನಾವಳಿಗಳನ್ನು ಜ್ಞಾಪಿಸಿಕೊಂಡರೆ ಜಪಾನದ ವಾಯುಬಲವೂ ಕಡೆಗಾಣತಕ್ಕಂತಹದೇನೂ ಅಲ್ಲವೆಂಬುದು ಸ್ಪಷ್ಟವಾಗುತ್ತದೆ. ಇದೇ ಸಮಯವೆಂದು ಜಪಾನರು ತಮ್ಮ ನೌಕಾಬಲವನ್ನು ಪ್ರಯೋಗಿಸಿ ಪೂರ್ವ ಸೈಬೀರಿಯಾದ ಕೆಲವು ಬಂದರುಗಳನ್ನು ವಶಪಡಿಸಿಕೊಳ್ಳುವದೂ ಅಸಾಧ್ಯವಾದುದೇನೂ ಆಗಲಾರದೆಂದು ಮಿ. ವಿಲಿಯಂ ಹೆನ್ರಿ ಚೇಂಬರ್ಲೀನರು ಅಭಿಪ್ರಾಯಪಟ್ಟಿರುವರು.

ಚೀನ ಮತ್ತು ಸೈಬೀರಿಯಾ

ಏಕ ಕಾಲದಲ್ಲಿ ಚೀನಾ ಮತ್ತು ಸೈಬೀರಿಯಾಗಳ ಮೇಲೆ ದಾಳಿಮಾಡುವದೂ ಜಪಾನದ ಸಮರಯೋಜನೆಯಲ್ಲಿ ಇದೆ ಎಂದು ಟನಾಕಾ ಮೆಮೋರಿಯಲ್ಲನ್ನು ಓದಿದವರಿಗೆ ಗೊತ್ತಾಗಿರುವದು. ಚೀನಾ ಸಮುದ್ರದಿಂದ ಅಮೇರಿಕನರನ್ನೂ, ಡಚ್ಚರನ್ನೂ ಬ್ರಿಟಿಷರನ್ನೂ ಒಂದೇಕಾಲದಲ್ಲಿ ಓಡಿಸಲು ಪ್ರಯತ್ನ ಪಟ್ಟಂತೆ ರಶಿಯಾ ಚೀನಗಳ ಮೇಲೆ ಏಕಕಾಲದಲ್ಲಿ ಬಲವಾದ ದಾಳಿಮಾಡುವದು ಜಪಾನಕ್ಕೆ ಅಸಾಧ್ಯವಾದ ಕೆಲಸವೇನೂ ಆಗ್ಲಿಲ್ಲವೆಂದು ಮಿ॥ ಜಿ॥ ಸರ್ ಡಿಗ್ಬಿ ಶಟಲವರ್ತರು ಹೇಳುತ್ತಾರೆ.

ಜಪಾನಿಗೆ ಇದೇ ಸಮಯ

ರಶಿಯದ ಸರ್ವಸೈನ್ಯವೂ ಜರ್ಮನಿಯನ್ನೆದುರಿಸುವದರಲ್ಲಿ ಕೇಂದ್ರೀಕೃತವಾಗಿರುವಾಗ ತನಗಿದೇ ಸಮಯವೆಂದು ಜಪಾನವು ರಶಿಯದಮೇಲೆ ಬಿದ್ದರೂ ಬೀಳುವದು ಅತ್ಯಾಶ್ಚರ್ಯಕರ ಸಂಗತಿಯೇನೂ ಆಗಲಾರದು. ರಶಿಯವೂ ಸಾಕಾದಷ್ಟು ಸಿದ್ಧತೆಯನ್ನು ಮಾಡಿಕೊಂಡೇ ಇದೆ. ಒಂದೂ ಜರ್ಮನಿಯು ರಶಿಯದ ರಣಭೂಮಿಯಲ್ಲಿ ವಿಜಯ ಶಿಖರವನ್ನು ಮುಟ್ಟಿರುವ ಸಮಯವನ್ನು ನೋಡಿ ಜಪಾನವು ಸೈಬೀರಿಯಾದಮೇಲೆ ಬೀಳಬಹುದು ಆವರೆ ಜಪಾನು ವಾಯುಗುಣಕ್ಕೆವಿರುದ್ಧವಾಗಿ ಬಲಪರೀಕ್ಷೆಮಾಡಲು ಹೊರಟರೆ ಪರಾಜಯಹೊಂದಬೇಕಾದೀತು. ಚಳಿಗಾಲ ಬರುವದರೊಳಗಾಗಿ ವ್ಲಾಡಿವೊಸ್ಟಾಕ ಬಂದರವನ್ನು (ರಶಿಯನದು) ಆಕ್ರಮಿಸುವ ಪ್ರಯತ್ನ ಮಾಡಬಹುದು. ಇಲ್ಲದಿದ್ದರೆ ಅನಂತರ ಅದು ಹೆಪ್ಪುಗಟ್ಟಿ ಸೈನ್ಯ ಚಲನವಲನಕ್ಕೆ ನಿರುಪಯುಕ್ತವಾಗುವದು.

ಪೂರ್ವ ಸೈಬೀರಿಯದ ಆಕ್ರಮಣವನ್ನು ಜಪಾನವು ಒಮ್ಮೆ ಮಾಡಿತೆಂದರೆ ತೀರಿತು. ರಶಿಯದ ವಿಮಾನ ನಿರ್ಮಾಣಗಳೆಲ್ಲ ಜಪಾನದ ಕೈಗೆ ಬಿದ್ದು ಹೋಗುವದು ಸುಲಭವಾಗುವದು. ಆಗ ಜಪಾನದಮೇಲೆ ದಾಳಿಮಾಡಲು ಮಿತ್ರರಿಗೆ ವೈಮಾನಿಕ ನೆಲೆಗಳೇ ಇಲ್ಲದಂತಾಗುವದು. ಇದೇ ಸಮಯವೆಂದು ಜಪಾನವು ಸಖಲಿನ ದ್ವೀಪದ ಉತ್ತರದ ಅರ್ಧಭಾಗವನ್ನು (ನಕ್ಷೆಣಾರ್ಧವು ಜಪಾನರ ಕೈಯಲ್ಲಿಯೇ ಇದೆ) ಆಕ್ರಮಿಸಿಕೊಳ್ಳಬಹುದು ಅದು ವಶವಾದರೆ ಜಪಾನದ ಆಹಾರ ಮತ್ತು ಎಣ್ಣೆಯ ಸೌಕರ್ಯಗಳು ಮತ್ತಷ್ಟು ಸುಧಾರಿಸುವವು.

ಮುಖ್ಯವಾಗಿ ಭೂಭಾಗದ ಮೂಲಕ ಜಪಾನರು ಸೈಬೀರಿಯದ ಮೇಲೆ ಬೀಳಿರುವದರಿಂದ ಅವರು ನೌಕಾಬಲವನ್ನು ಅಷ್ಟಾಗಿ ಉಪಯೋಗಿಸಲಿಕ್ಕಿಲ್ಲ. ಈಗಲೂ ಸಹ ಭೌಗೋಲಿಕ ಸ್ಥಿತಿಗಳಿಗನುಗುಣವಾಗಿ ಜಪಾನವು ತನ್ನ ದಾಳಿಯನ್ನು ಮುಂದುವರಿಸುವಂತಿದೆ.

ಜಪಾನದ ಮುಂದಿನ ಹೆಜ್ಜೆಯು ಜರ್ಮನಿಯ ಜಯಾಪಜಯಗಳನ್ನು ಅವಲಂಬಿಸಿದೆ ಜರ್ಮನಿಗೆ ಸೋಲಾದರೂ ಜಪಾನಿಗೆ ಸುಖವಿಲ್ಲ. ಜರ್ಮನಿಗೆ ಸಂಪೂರ್ಣ ಜಯವಾದರೂ ಜಪಾನಿಗೆ ಆದನ್ನು ಸಹಿಸಿಕೊಂಡಿರುವದು ಸಾಧ್ಯವಿಲ್ಲ. ಜರ್ಮನಿಗೆ ಸೋಲಾಗಿ ರಶಿಯವು ತಲೆಯೆತ್ತುವಂತಾದರೆ ತನ್ನ ಸ್ಥಾನ ಭದ್ರಪಡಿಸಿಕೊಳ್ಳಲು ಮತ್ತು ಅಚ್ಚಿನ ರಾಷ್ಟ್ರಗಳ ಒಪ್ಪಂದ ಪರಿಪಾಲಿಸಲು ಜಪಾನವು ರಶಿಯದ ಮೇಲೆ ಬೀಳಲೇಬೇಕಾಗುತ್ತದೆ. ಜರ್ಮನಿಯು ಗೆದ್ದಲ್ಲಿ ಸೈಬೀರಿಯವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಮಿತ್ರಬಲದವರು ತನ್ನ ಮೇಲೆ ಪ್ರಬಲವಾದ ದಾಳಿಮಾಡದಿರದಂತೆ ನೋಡಿಕೊಳ್ಳಲು ಸಹ ಸೈಬೀರಿಯದಮೇಲೆ ದಾಳಿಮಾಡಲೇಬೇಕಾಗುತ್ತದೆ. ರಶಿಯಾ ಜರ್ಮನಿಗಳಿಗೆ ಒಪ್ಪಂದವಾದರಂತೂ ಜಪಾನಕ್ಕೆ ಸುಖವೇ ಆಗುವದು.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦-೮-೦
ಕನ್ನಡ ದಶೋಪನಿಷತ್ತುಗಳು	೦-೯-೦
ಶಿವಾನುಭವ ಬೋಧೆ	೦-೮-೦
ಸುಮತಿ ಶತಕ	೦-೧-೬

ಆಂಚೆ ಪೆಟ್ಟಿ ಜೀರೆ ಪುಸ್ತಕ ವ್ಯಾಪಾರಿಗಳಿಗೆ ಹೆಚ್ಚು ಪುಸ್ತಕ ಕೊಳ್ಳುವರಿಗೂ ಧಾರಾಳವಾದ ಕಮಿಷನ್.

ಕಾಲವ ಸುಬ್ಬಣ್ಣ, ಮುರ್ಚಿಂಟು, ಬಳ್ಳಾರಿ.

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯಂ:— ಬಳ್ಳಾರಿ.

ಒಟ್ಟು ವ್ಯವಹಾರದ ಮೊತ್ತ.

31—7—41	31—7—42
ರು. 1,60,292-13-4	ರು. 2,71,722-10-10

ನಮ್ಮಲ್ಲಿ ಸರ್ವ ವಿಧವಾದ ಬ್ಯಾಂಕಿಂಗ್ ವ್ಯವಹಾರವು ನಡೆಯುತ್ತದೆ. ಹಿಂದೂದೇಶದ ಯಾವ ಭಾಗದಲ್ಲಾದರೂ ನಿಮಗೆ ವ್ಯಾಪಾರೀ ಸೌಕರ್ಯವನ್ನೊದಗಿಸಿಕೊಡುತ್ತೇವೆ. ಭಂಗಾರ ಮತ್ತು ಇತರ ಉಪಯುಕ್ತ ಮಾಲಿನ ಮೇಲೆ ಅಲ್ಪದರದ ಬಡ್ಡಿಯಿಂದ ಸಾಲವು ದೊರೆಯುತ್ತದೆ. ಸಮಸ್ತರು ಬಂದು ಎಲ್ಲಾ ತಿಳಿದುಕೊಳ್ಳಿರಿ.

ಶಾಖೆಗಳು:— 1 ತಿಮ್ಮನೆಚರ್ಲ.

2 ಕೊಟ್ಟೂರು. 3 ಉರವಕೊಂಡ. 4 ಪತ್ತಿಕೊಂಡ. 5 ಹರಪನಹಳ್ಳಿ

ಹೆಚ್. ಶೇಕಾರಾಮರೆಡ್ಡಿ, ಬಿ. ಎ. ಬಿ. ಎಲ್ (ಎಂ. ಎಲ್. ಎ.)
ಡೈರೆಕ್ಟರುಗಳ ಬೋರ್ಡು ಅಧ್ಯಕ್ಷರು.

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ಸಿರುಗುಪ್ಪೆ ತಾಲೂಕು ಉಪಾಧ್ಯಾಯರ ಸಂಘ :—

ಈ ಸಂಘದ ಸಭೆಯು 30-8-42ನೆ ಭಾನುವಾರ ಸಿರುಗುಪ್ಪೆ ತಾಲೂಕು ಕಛೇರಿಲ್ಲಿ ಸೇರಲಿದೆ. ಎಲ್ಲಾ ಉಪಾಧ್ಯಾಯರೂ ಒರಲು ಪ್ರಾರ್ಥನೆ. [ಆರ್. ನರಸಿಂಹಾಚಾರಿ ಕಾರ್ಯದರ್ಶಿ]

ದೇಶದಲ್ಲಿ ಅಶಾಂತಿಯ ಘಟನೆಗಳು.

★ ★ ★

ಮದ್ರಾಸ್ ಪ್ರಾಂತ್ಯದಲ್ಲಿ.

ಉಪ್ಪಲೂರು :— ಬೆಜವಾಡಕ್ಕೆ 12 ಮೈಲಿದೂರವಿರುವ ಉಪ್ಪಲೂರು ರೈಲ್ವೆ ಸ್ಟೇಷನ್‌ಗಳನ್ನು 30 ಜನರ ಗುಂಪು ಪೂರ್ಣವಾಗಿ ಸುಟ್ಟಿರುತ್ತಾರೆ.

ಪೊದನೂರು :— ದಕ್ಷಿಣ ಇಂಡಿಯಾದ ಪೊದನೂರು - ಬಿಂಗನಲ್ಲೂರು ಮಧ್ಯ ರೈಲ್ವೆ ಕಂಬಿಗಳು ಕಿತ್ತಲ್ಪಟ್ಟಕಾರಣ ಗೂಡ್ಸುಗಾಡಿಯು ಬಿದ್ದಿದೆಯೆಂದು ಗೊತ್ತಾಗಿದೆ.

ಮದ್ರಾಸ್ ನಗರದಲ್ಲಿ ಬಂಧನ :— ಈ ಹಿಂದೆ ಎ ಆರ್ ಪಿ ವಾರ್ಡನ್ ಆಗಿದ್ದ ನಿರ್ವಸಾಧನ್ ಶ್ರೀ ಮಹೇಶ್ವರ ಆಯರ್. ಶ್ರೀಮತಿ ಕಮಲಾದೇವಿ ಆಯರ್. **ಹಿಂದಿನ ಮಂತ್ರಿ ಶ್ರೀ ವಿ. ವಿ. ಗಿರಿ. ಕಾಮರಾಜನಾಡರ್.**

ಭೀಮವರಂ :— ಮತ್ತು ದೇವಕೋಟೆಗಳಲ್ಲಿ ಕ್ರಮವಾಗಿ ಗುಂಡುಹಾರಿಸುವಿಕೆಯಿಂದ 6 ಜನ ಮತ್ತು 5 ಜನರು ಸತ್ತಿರುವರೆಂತಲೂ ಪ್ರಾಂತ್ಯದಲ್ಲಿ ಪರಿಸ್ಥಿತಿಯು ಅಶಾಂತಿಕರವಾಗಿದೆಯೆಂದೂ 10 ಜಿಲ್ಲೆಗಳಲ್ಲಿ ಏನೂ ಗಲಾಟೆಗಳಿಲ್ಲವೆಂದೂ ಸರಕಾರೀ ಪ್ರಕಟನೆ ಹೇಳುತ್ತದೆ.

ಅನಂತಪುರ :— ಕಾಲೇಜು ವಿದ್ಯಾರ್ಥಿಗಳ 'ಸ್ಟಾಯಿಕ್' ನಿಲ್ಲಿಸಲು ಪೋಲೀಸರು ಕಾಲೇಜುಬಳಿ ಲಾರಿಪ್ರಹಾರ ಮಾಡಿದರು. ಹಳೆಯ ಹಾಸ್ಟಲ್ ಬ್ಲಾಕ್‌ನಲ್ಲಿ ಒಳಹೊಕ್ಕು ಲಾರಿ ಪ್ರಹಾರಮಾಡಲಾಯ್ತೆಂದೂ ಡೆಪ್ಯುಟಿ ಕಾರ್ಡನರು ಬಂದು ಹೇಳಿದನಂತರ ಪೋಲೀಸರು ಹೊರಗೆ ಹೋದರೆಂದೂ ತಿಳಿದುಬಂದಿದೆ. ಕೆಲವು ವಿದ್ಯಾರ್ಥಿಗಳಿಗೆ ಬಲವಾದ ಘಾಯಗಳಾಗಿವೆ. ಒಬ್ಬ ವಿದ್ಯಾರ್ಥಿಯು ಆಸ್ಪತ್ರೆಯಲ್ಲಿ ಸತ್ತನಂತೆ.

ಕೊಯಂಬತೂರು :— 13ನೆ ತಾ॥ ಸಿಂಗನಲ್ಲೂರು 10ಅರಳಿಗರಣ(ಮಿಲ್)ಗಳು ಕೆಲಸವನ್ನು ನಿಲ್ಲಿಸಿದ್ದವು ಈಚೆಗೆ ಪರಿಸ್ಥಿತಿಯು ತಿಳಿದುಬಂದಿಲ್ಲ. ಕೂಲಿಕಾರ ಮುಖಂಡರಾದ ರಾಮಸ್ವಾಮಿಯವರನ್ನು ಹಿಡಿಯಲಾಗಿದೆ.

ತಂಜಾವೂರು :— ಗಾಂಧಿಜೀಯವರ ಬಂಧನಕ್ಕಾಗಿ ಸೇರಿದ ಸಭೆಯು ಲಾಠೀಪ್ರಹಾರದಿಂದ ಚದರಿಸಲ್ಪಟ್ಟು ಜೊಕ್ಕಲಿಂಗಂ ವಾಫರ್‌ರವರು ಬಂಧಿತರಾದರು.

ಗುಂತಕಲ್ :— ಬೆಜವಾಡ ಭಾಗದಲ್ಲಿ ಮುದ್ದಿಕೆರಿ ಸ್ಟೇಷ್ ಬಳಿ ಕಂಬಿಗಳನ್ನು ಕಿತ್ತಿಕಾರಣ ಗೂಡ್ಸುಗಾಡಿಯು ಕೆಳಗುರುಳಿ ದಾರಿಗೆ ನಷ್ಟವಾಗಿದೆ. 40 ಗಜಗಳ ದಾರಿಯಲ್ಲಿ ಕಂಬಿಗಳನ್ನು ಕಿತ್ತಿದ್ದರೆಂದು ಗೊತ್ತಾಗಿದೆ.

ಗುಂಟೂರು.— 13 ನೆಯ ತಾ॥ ಗುಂಟೂರಲ್ಲಿ ಗುಂಡುಹಾರಿಸಿದ ಕಾರಣ ಇಬ್ಬರು ವಿದ್ಯಾರ್ಥಿಗಳು ತಕ್ಷಣ ಸತ್ತರು. 14 ಜನರಿಗೆ ಗುಂಡಿನ ಘಾಯಗಳಾಗಿವೆ. ಶ್ರೀ ಚಂದ್ರಮೌಳಿ, ರಾಮಸ್ವಾಮಿ ಚೌದರಿಯವರನ್ನು ಬಂಧಿಸಲಾಗಿದೆ.

ಮಸಲಿಪಟ್ಟ :— ಇಲ್ಲಿ ನಡೆವ ಲಾಠಿಪ್ರಹಾರದಿಂದ 12 ವಿದ್ಯಾರ್ಥಿಗಳಿಗೆ ಘಾಯಗಳಾಗಿವೆ.

ಮಧುರ :— ಇಲ್ಲಿ ಎರಡನೆಯ ಸಲ ಗುಂಡುಹಾರಿಸಲಾಯಿತು. 4 ಜನರು ಸತ್ತರು 8 ಜನರಿಗೆ ಘಾಯಗಳಾಗಿದೆ.

ಅಯ್ಯಂಪೇಟೆ :— ಇಲ್ಲಿಯು ಸಾವಿರಾರು ಜನರ ಸಮೂಹವು ವರುವತಿ ಕೋಯಿಲ್ ಸ್ವಾಮಿಗಳ ಮಂದಿರವನ್ನು ಲೂಟಿಮಾಡಿದೆ

ಕುಂಭಕೋಣ :— ಇಲ್ಲಿ ಗುಂಡುಹಾರಿಸಿದ ಕಾರಣ ಒಬ್ಬರು ಸತ್ತಿದ್ದಾರೆ, 4 ಜನರಿಗೆ ಘಾಯಗಳಾಗಿದೆ.

ಮಂಗಳೂರು :— ಶ್ರೀ ಕೆ ಜಿ. ಕಾರಂತರವರನ್ನು ಬಂಧಿಸಲಾಗಿದೆ.

ಅಮಲಾಪುರ :— ಅಡಿಷನಲ್ ನೆಬ್ಲಿಕ್ ಪ್ರಾಸಿಕ್ಯೂಟರ್‌ರವರಾದ ಶ್ರೀ ಬಿ. ಎನ್. ಶಾಸ್ತ್ರಿಯವರು ರಾಜೀನಾಮೆ ಕೊಟ್ಟಿರುತ್ತಾರೆ.

ಮೈಸೂರು ದೇಶ :— ಮಂಡ್ಯದ ಕಾಂಗ್ರೆಸ್ ಅಧ್ಯಕ್ಷ ಬಂಡಿಗೌಡರನ್ನು ಬಂಧಿಸಿ ಮೈಸೂರಿಗೆ ಕಳುಹಿಸಲಾಗಿದೆ. ವೀರಣ್ಣಗೌಡರ ಸತ್ನಿ ತಾಯಮ್ಮನವರು ನುಡ್ಡೂರು ಬಿಟ್ಟು ಹೋಗಬಾರದೆಂದು ಆಜ್ಞಾಪಿಸಲ್ಪಟ್ಟಿರುವರು. ಬೋರಣ್ಣಗೌಡ ಸಿ. ಸೀತಾರಾಮಯ್ಯ ರಂಗರಾಮಯ್ಯ ತಗಡೂರು ರಾಮಚಂದ್ರರಾವ್ ಸಾಹುಕಾರಚೆನ್ನಯ್ಯ ಕೋಲಾರದ ಭಂಗಾರಪೇಟೆ ಗಣಿಯಹತ್ತಿರ 30 ಜನ ಕಾಂಗ್ರೆಸ್‌ನವರು, ಕೋಲಾರದ ನಾರಾಯಣ ಗೌಡರು ಬಂಧಿಸಲ್ಪಟ್ಟರು. ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮುಖ್ಯಸದಸ್ಯರೆಲ್ಲಾ ಬಂಧಿಸಲ್ಪಟಂತಾಯಿತು.

ಬೆಂಗಳೂರು :— 16ನೆ ತಾ॥ ಬೆಂಗಳೂರಲ್ಲಿ ಗುಂಡು ಹಾರಿಸಿದಕಾರಣ ಒಬ್ಬರು ಸತ್ತರೆಂತಲೂ 38 ಜನರಿಗೆ ಘಾಯಗಳಾಗಿವೆಯೆಂತಲೂ ಗೊತ್ತಾಗಿದೆ.

ದಾವಣಗೆರೆ :— ಇಲ್ಲಿ ಪೋಲೀಸರು ಜನರ ಗುಂಪುಗಳಮೇಲೆ ಗುಂಡುಹಾರಿಸಿದ ಕಾರಣ 3 ಸತ್ತರೆಂತಲೂ ಅನೇಕರಿಗೆ. ಘಾಯಗಳಾಗಿದೆಯೆಂತಲೂ ಗೊತ್ತಾಗಿದೆ. ರೈಲ್ವೆಸ್ಟೇಷ್ ಮತ್ತು ಓವರ್ ಬ್ರಿಜ್ ಸುಟ್ಟಿರುವರೆಂತಲೂ ಹರಿಹರ ದಾವಣಗೆರೆ ರಸ್ತೆಯು ಮರಗಳಿಂದ ಬಂಧಿಸಲ್ಪಟ್ಟಿರುವದೆಂತಲೂ ತಿಳಿದುಬಂದಿದೆ

ಇತರ ಪ್ರಾಂತ್ಯಗಳಲ್ಲಿ:— ಪೋಲೀಸರು ಗುಂಡುಹಾರಿಸಿರುವುದು — ನೋರಖಪುರ, ಬನಾರಸ, ಧಾಕಾ ನಾಗಪುರ, ದೇಹಲಿ, ಅಲಹಾಬಾದ್, ಹುಬ್ಬಳ್ಳಿ, ಬೈಲಹೊಂಗಲ, ಬೆಳಗಾಂ.

ಪುಂಡುಗಂದಾಯ — ಈ ಶಾಸನವನ್ನು ಬೊಂಬಾಯಿ ಪ್ರಾಂತ್ಯದ ಯಾವ ಭಾಗದಲ್ಲಾದರೂ ಜಾರಿಗೆ ತರಬಹುದೆಂದು ಸರಕಾರದವರು ಪ್ರಕಟಿಸಿದ್ದಾರೆ. ಮಧ್ಯಪ್ರಾಂತ್ಯದ ರಾಮಟೇಕ ಭಾಗದಲ್ಲಿ 30 ಸಾವಿರ ರೂ. ಪುಂಡುಗಂದಾಯವನ್ನು ಹೇರಿರುತ್ತಾರೆ. ಆಗಸ್ಟ್ 16 ನೇ ತಾ॥ ಸಬ್‌ಡಿವಿಜನಲ್ ಮಾಜಸ್ಟೇಟ್ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಇತರ ಅಧಿಕಾರಿಗಳು ಮಧ್ಯಪ್ರಾಂತದ ಜೀಮೂ ಎಂಬ ಹಳ್ಳಿಯಲ್ಲಿ ಕೊಲ್ಲಲ್ಪಟ್ಟಿರುವರು.

ಕಲ್ಕತ್ತಾ.

ರಾಷ್ಟ್ರೀಯ ಪತ್ರಿಕೆಗಳ ನಿರ್ಧಾರ 21-ನೆಯ ತಾ॥ ನಿಂದ ನಿಲ್ಲುವವು.

ಭಾರತ ಸರಕಾರದವರು ಪತ್ರಿಕೆಗಳ ಮೇಲೆ ಹೇರಿದ ಹೊಸ ನಿರ್ಬಂಧಗಳನ್ನು ವ್ಯತಿಭಟಿಸಲು ಕಲ್ಕತ್ತಾನಗರದ ಇಂಗ್ಲೀಷ್ ಮತ್ತು ದೇಶಭಾಷೆಯ ಈ ಕೆಳಗೆ ಕಾಣಿಸಿದ ಪತ್ರಿಕೆಗಳು 21-8-42 ರಿಂದ ಪ್ರಕಟವಾಗುವದು ನಿಲ್ಲಬೇಕೆಂದು ಸಂಪಾದಕರು ನಿಶ್ಚಯಿಸಿರುವರು. ಈ ನಿರ್ಧಾರದಿಂದ 14 ಪತ್ರಿಕೆಗಳು ನಿಲ್ಲುತ್ತವೆ. ಅಮೃತ ಬಜಾರ ಪತ್ರಿಕ, ಯುಗಾಂತರ, ಹಿಂದೂಸ್ತಾನ ಸ್ಟಾಂಡರ್ಡ್. ಆನಂದ ಬಜಾರಪತ್ರಿಕ ಅಡ್ವಾನ್ಸ್, ವಿಶ್ವಮಿತ್ರ, ಮಾತೃಭೂಮಿ, ಬಸುಮತಿ,ಟೆಲಿಗ್ರಾಫ್, ಭಾರತ, ಲೋಕಮಾನ್ಯ, ಕ್ರಿಷಕ, ಜಾಗೃತಿ, ಪ್ರತ್ಯಾಹ.

ನ್ಯಾಷನಲ್ ಹೆರಾಲ್ಡ್ - ಲಖ್ನೊ. ಹಿಂದೂಸ್ತಾನ್ ಟೈಮ್ಸ್ - ದೆಹಲಿ.

ಸದ್ಯದ ಪರಿಸ್ಥಿತಿಯಲ್ಲಿ ಇಂಥಾ ನಿರ್ಬಂಧಗಳಿಂದ ಪತ್ರಿಕೆಗಳು ನಡೆಯುವುದು ಅಸಾಧ್ಯವೆಂದು ಈ ಪತ್ರಿಕೆಗಳೂ ನಿಂತಿವೆ.

ಕಾಲರಾ ಪ್ರತಿಬಂಧಕ ಉಪಾಯಗಳು.

ಲೇ:-ವೈದ್ಯ ಪಿ. ವ್ಹಿ. ಜಾಯವೇ, ಬ್ಯಾಡವೇ, ಹುಬ್ಬಳ್ಳಿ.

(1) ಕುಡಿಯುವ ನೀರನ್ನು ತಾಮ್ರದ ಪಾತ್ರೆಯಲ್ಲಿ ಎಸರು ಬರುವಂತೆ ಕಾಸಿ ಆದರಲ್ಲಿಯೇ ನೀರನ್ನು ಶಡಕಕ್ಕಮ್ಮು. ಅದನ್ನು ಕುಡಿಯಲಿಕ್ಕೆ ಉಪಯೋಗ ಮಾಡತಕ್ಕದ್ದು. ತಾಮ್ರದ ಪಾತ್ರೆಯಲ್ಲಿ ತುಕ್ಕೆ ಹುಟ್ಟುತ್ತದೆ ಮತ್ತು ಅದು ಕಾಲರಾ ಜಂತುಗಳಿಗೆ ಮಾರಕವಾಗಿರುತ್ತದೆ

(2) ಯಾವುದೇ ತರಹದ ಅವಕ್ಕ ಅಂದರೆ ಬೇಯಿಸದೆ ಇದ್ದ ಅನ್ನವನ್ನು ತಿನ್ನಕೂಡದು. ಅಪಕ್ಕ. ಸದಾರ್ಥಗಳ ಲ್ಲಿದ್ದೆ ಕಾಲರಾದ ಜಂತುಗಳು ಹೊಟ್ಟೆಯಲ್ಲಿ ಹೋಗುವ ಸಂಭವವು ಬಹಳ.

(3) ಕೊಳೆತ ಹಣ್ಣುಗಳನ್ನು, ಸೊಣಕುಳಿತ ಸದಾರ್ಥಗಳನ್ನು ಮತ್ತು ಹಳಸಿದ ಅನ್ನವನ್ನು ತಿನ್ನಲೇಬಾರದು. ರೋಗಿಯ ಶೌಚ ಮತ್ತು ವಾಂತಿಯಮೇಲೆ ನೊಣಗಳು ಕೂತು ರೋಗ ಜಂತುಗಳನ್ನು ಹುಟ್ಟಿಸುತ್ತವೆ.

(4) ದಿನಾಲು ನಿಯಮದಿಂದ ಬೇಸಿನ ತೊಸ್ಸಲವನ್ನು ಅಲ್ಪನ್ಪಮಾಣದಿಂದ ಕೆಲವು ದಿವಸದವನುಟ್ಟಿಗೆ ಸೇವನೆ ಮಾಡಬೇಕು. ಬೇವು ಕ್ರಿಮಿಗಳನ್ನು ನಾಶ ಮಾಡಿ ರಕ್ತವನ್ನು ಶುದ್ಧಗೊಳಿಸಿ ಪಚನ ಶಕ್ತಿಯನ್ನು ಹೆಚ್ಚಿಸುವದುಂಟು ಬೇವು ಸೇವಿಸುವವನಿಗೆ ಕಾಲರಾ ಜಂತುಗಳ ಬಾಧೆಯಿಲ್ಲ.

(5) ಕಪ್ಪರ ಮತ್ತು ಬಳ್ಳೊಳ್ಳಿ ಇವು ಕ್ರಿಮಿ ನಾಶಕವಿರುವುದರಿಂದ ಕಾಲರಾ ಬೇನೆಯ ಕಾಲದಲ್ಲಿ ಅವು ಬಹಳ ಉಪಯೋಗಿಯಾಗಿವೆ. ಆದ್ದರಿಂದ ಅವುಗಳನ್ನು ಪ್ರಸಂಗ ಬಂದಾಗ್ಗೆ ಸೇವನೆ ಮಾಡಬೇಕು.

(6) ಕಾಲರಾ ಬೇನೆಯು ಇದ್ದಾಗ್ಗೆ ರೇಚಕ ಅಂದರೆ ಭೇದಿಯ ಔಷಧ ತೆಗೆದುಕೊಳ್ಳಬಾರದು. ಜಡವಾದ ಆಹಾರವನ್ನು ತಿನ್ನಲೇಬಾರದು. ಕಡಿಮೆ ಊಟ ಮಾಡುವುದು ಬಹಳ ಒಳ್ಳೇದು.

(7) ಹೀಗಿದ್ದರೂ ಕಾಲರಾ ಬೇನೆಯು ಬಂದರೆ ಪ್ರಥಮೋಪಾಯವೆಂದು ಚಕ್ರಾಣಿ ಬೇರನ್ನು ನಿಂಬಿಹಣ್ಣಿನ ರಸದಲ್ಲಿ ತೇಯ್ದು ಕುಡಿಸಬೇಕು ಮತ್ತು ಕೂಡಲೆ ತಜ್ಞರನ್ನು ಕರೆದು ಔಷಧೋಪಚಾರವನ್ನು ಮಾಡಿಸಬೇಕು. ಚಕ್ರಾಣಿ ಇದು ಕಾಲರಾ ಬೇನೆಯ ಮೇಲೆ "ರಾಮಬಾಣ" ಔಷಧವೇನೂ ಅಲ್ಲ. ಆದರೆ ಡಾಕ್ಟರ ಅಥವಾ ವೈದ್ಯರ ಔಷಧ ಸಿಗುವತನಕ ವ್ಯಾವಹಾರಿಕ ಉಪಚಾರ ನಾಗಬಲ್ಲದು.

(8) ಜೊಳ್ಳು ಉಪಚಾರಗಳನ್ನು ಮಾಡುತ್ತ ಕೂಡ್ರಬಾರದು. ಸಮಾಜದಲ್ಲಿ ಕಾಲರಾದ ಮೇಲೆ ಧರ್ಮಾರ್ಥ ಔಷಧ ಕೊಡುವ ಅನೇಕ ಜನರುಂಟು. ಬಹುತರವಾಗಿ ಕಾಲರಾಕ್ಕೆ ಆವು ಕೊಡುವ ರೂಢಿಯುಂಟು. ಆದರಿಂದ ವಾಂತಿ ಮತ್ತು ಭೇದಿಯು ಕೂಡಲೆ ನಿಲ್ಲುವವು. ಆದರೆ ಅದರಿಂದ ರೋಗದ ದೋಷ ಉಳಿದು ಹೊಟ್ಟೆ ಉಬ್ಬಿ ರೋಗಿಯು ಮರಣ ಹೊಂದುವನೆಂಬುದು ಅನುಭವಸಿದ್ಧವಾಗಿದೆ.

ಕಾಲರಾಕ್ಕೆ

ಶ್ರೇಷ್ಠ ಮತ್ತು ಶೀಘ್ರ ಗುಣಕಾರಿ.

ಕಾಶ್ಮೀರುಅರುಕ್

(ಮನೆಯ ವೈದ್ಯ.)

(ವಾಂತಿ)

ಎಲ್ಲರೂ "ಕಾಶ್ಮೀರು ಅರುಕ್" ನ್ನು ಪ್ರತಿನಿತ್ಯ ಎರಡುಸಲ ಸೇವನೆ ಮಾಡುವದರಿಂದ ಕಾಲರಾ ಕ್ರಿಮಿಗಳನ್ನು ನಿರ್ಮೂಲಮಾಡಿ ಕಾಲರಾ ಬಾರದಂತೆ ಕಾಪಾಡುವುದು. ವಾಂತಿ ಭೇದಿಗಳನ್ನು ತಕ್ಷಣ ನಿಲ್ಲಿಸಿ ಜೀರ್ಣಶಕ್ತಿಯನ್ನು ಹೆಚ್ಚಿಸುವುದು.

ಎಲ್ಲಾ ಷಾಪುಗಳಲ್ಲಿ ದೊರೆಯುತ್ತದೆ.

ಹೆಚ್. ಯಸ್. ಅಂಡ್ ಸನ್ಸ್., ಬಳ್ಳಾರಿ.

ಆದವಾನಿಯ ಕನ್ನಡಿಗರ ಕೊರಗು.

ಈ ಪುರದಲ್ಲಿ ಕಳೆದ ಮೂರು ವರ್ಷಗಳ ಅಗಾಯಿತು ಕನ್ನಡದ ಜನಾಂಗದ ಸಲುವಾಗಿ ಮುನಿಸಿಪಲ್ ಹೈಸ್ಕೂಲಿನಲ್ಲಿ ಕನ್ನಡ ಭಾಷೆಯ ಮೂಲಕ ಬೋಧಿಸಲು ಏರ್ಪಾಟು ಮಾಡಿರೆಂದು ಕರ್ನಾಟಕ ಸಂಘ ಮತ್ತು ಕನ್ನಡ ಶಿಕ್ಷಕರ ಗುಂಪು ಮತ್ತು ವೀರಶೈವ ವಿದ್ಯಾವರ್ಧಕ ಸಂಘದವರು ಎಲ್ಲರೂ ಏಕೀಭವಿಸಿ ಪ್ರಚಾರಮಾಡಿ ಡೈರಕ್ಟರಿಂದ ಅನುಕೂಲ ಉತ್ತರವನ್ನು ಹೊಂದಿದರೂ ಸದ್ರಿ ಹೈಸ್ಕೂಲಿನಲ್ಲಿ ಮಾತ್ರ ಕನ್ನಡದಲ್ಲಿ ಬೋಧಿಸಲು ಏರ್ಪಾಟು ಮಾಡದಿರುವುದು ನಿಷಾದಕರವಾದ ಸಂಗತಿ. ಹಾಗು ತೆಲುಗನ್ನು ಬೋಧಿಸಲು, ತೆಲುಗು ಉಪಾಧ್ಯಾಯರನ್ನು ಹೆಚ್ಚಿಗೆ ತೆಗೆದುಕೊಳ್ಳಲು, ತೆಲುಗು ರೆಕ್ರೂಟ್ ಹೆಚ್ಚುಮಾಡಲು ಮಾತ್ರ, ಇಲ್ಲಿಯ ಮುನಿಸಿಪಾಲಿಟಿಗೆ ಹಣ ಉಂಟು. ಕನ್ನಡ ವಿಭಾಗವು ಪ್ರಾರಂಭವಾದ್ರಿಂದ ಡೈರಕ್ಟರ್ ಆರ್ಡರ್ ಇದೆ ಎಂದರೆ ಹಣವಿಲ್ಲವೆಂದು ಹಾಡುಹೇಳುತ್ತಾರೆ ಇದು ಎಂಥಾ ನ್ಯಾಯವೋ ತಿಳಿಯದು ಸದ್ರಿ ಹೈಸ್ಕೂಲಿನಲ್ಲಿ .... ತೆಲುಗು ಮಾತೃಭಾಷಾ ಉಳ್ಳವರು 175 ಕನ್ನಡ ಮಾತೃಭಾಷೆಯುಳ್ಳವರು 250 ವಿದ್ಯಾರ್ಥಿಗಳಿದ್ದಾರೆ. ವೀರಶೈವ ವಿದ್ಯಾವರ್ಧಕ ಸಂಘದಿಂದ ನಡೆಯುತ್ತಿರುವ ಕನ್ನಡ ವ್ಯಾಧಮಿಕ ಶಾಲೆಯಲ್ಲಿ 250 ವಿದ್ಯಾರ್ಥಿಗಳಿದ್ದು ಅದು ದಿನೇ ದಿನೇ ಅಭಿವೃದ್ಧಿಯಾಗುತ್ತಲಿದೆ. ಹೀಗಿದ್ದೂ ಕನ್ನಡಿಗರಿಗೇಕೆ ಸೌಕರ್ಯವಾಡಬಾರದು ಎಂದು ಪ್ರಶ್ನೆಮಾಡಿದರೆ ವಿದ್ಯಾರ್ಥಿಗಳು ಒಂದಾಗ ವ್ಯಾರಂಭಿಸುತ್ತೇವೆ ಎನ್ನುವರು. ವಿದ್ಯಾರ್ಥಿಗಳು ಕನ್ನಡ ತೆಗೆದು ಕೊಳ್ಳಲು ಸಿದ್ಧವಾಗಿ ಕೇಳಿಕೊಂಡರೆ ಮೇಲಿನವರ ಆಜ್ಞೆ ಇಲ್ಲ ಪುರಸಭೆಯನವರಲ್ಲಿ ಹಣವಿಲ್ಲೆನ್ನುವರು.

'ಒಂದುಕಣ್ಣಲ್ಲಿ ಎಣ್ಣೆ - ಒಂದು ಕಣ್ಣಲ್ಲಿ ಸುಣ್ಣ' ಆದವಾನಿ ಪುರ ಸಭೆಯವರ ಈ ನೀತಿಯನ್ನು ಖಂಡಿಸದ ಗತ್ಯಂತರವಿಲ್ಲ. ಕನ್ನಡಿಗರೆಲ್ಲಾ ಜಾಗೃತರಾಗುವವರೆಗೂ ಇದೇ ಪರಿಸ್ಥಿತಿಯೇ! ಈ ಕಾರಣ ಕನ್ನಡಿಗರು ಕೂಡಲೇ ಎಚ್ಚತ್ತುಕೊಳ್ಳಲೆಂದು ನನ್ನ ಪ್ರಾರ್ಥನೆ.

ಹೆಚ್. ಎಂ. ರಾಜೋಟಯ್ಯ,
ಆದವಾನಿ.

ಮರಳಿನ ಚೀಲಗಳು ಮತ್ತು ಇಟ್ಟಿಗೆ ಗೋಡೆಗಳು

ನಿಮ್ಮ ಪ್ರಾಣಸಂರಕ್ಷಣೆ ಮಾಡಬಹುದು.
ಅವು ನಿಮ್ಮನ್ನು ರಕ್ಷಿಸದಿದ್ದರೆ
ನೀವು ನಮ್ಮಲ್ಲಿ ಜೀವವಿಮೆ ಮಾಡಿಸಿದರೆ ನಾವು ನಿಮ್ಮ ಬಂಧುಗಳನ್ನು ರಕ್ಷಿಸುವೆವು.

ಯುದ್ಧಕಾಲದ ಅಪಾಯವನ್ನು ದೃಷ್ಟಿಯಲ್ಲಿಟ್ಟೂ ಸಹ ಪ್ರತ್ಯೇಕ ಶುಲ್ಕವಿಲ್ಲದೆ ನಾಗರೀಕರ ಜೀವವಿಮೆಯನ್ನು ಭದ್ರಗೊಳಿಸಲಾಗಿದೆ.

ಇಲ್ಲಿಯವರೆಗೆ ಸಲ್ಲಿಸಿರುವ ಹಕ್ಕುಗಳ ಹಣ	ರು. 26,00,00,000
ಜಾರಿಯಲ್ಲಿರುವ ವಿಮಾಪತ್ರಗಳ ಮೊತ್ತ	ರು. 85,50,00,000
ವಾರ್ಷಿಕ ಆದಾಯ 1941 ರಲ್ಲಿ ಸುಮಾರು	ರು. 5,00,00,000
ನಿಧಿಯ ದ್ರವ್ಯ ಸುಮಾರು	ರು. 30,00,00,000

ಓರಿಯಂಟಲ್

ಗವರ್ನಮೆಂಟು ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪನಿ, ಲಿಮಿಟೆಡ್.
ಸ್ಥಾಪನೆ ೧೮೭೪. ಮುಖ್ಯ ಕಛೇರಿ ಬೊಂಬಾಯಿ

ಶಾಖೆ :—

ಓರಿಯಂಟಲ್ ಬಿಲ್ಡಿಂಗ್ಸ್, ಅರ್ಮೀನಿಯನ್ ಬೀದಿ, ಜಿ. ಟಿ. ಮದ್ರಾಸು.
ಇನ್ಸ್‌ಪೆಕ್ಟರರ ವಿಳಾಸ:- **೩೧೨ ರೂಪರ್ಟಸ್ ಗೇಟ್ ಬ್ರಾಸಪೇಟೆ ಬಳ್ಳಾರಿ.**

ಬಳ್ಳಾರಿ ಜಿಲ್ಲಾ ವಾರ್ತೆಗಳು

ಹರಪನಹಳ್ಳಿ :— ಬಳ್ಳಾರಿ ರಾಯಲ ಸೀಮ ಬ್ಯಾಂಕು ಲಿಮಿಟೆಡ್‌ನ ಶಾಖೆಯು 18ನೆ ತಾ॥ ಪ್ರಾತಃಕಾಲ 11 ಘಂಟೆಗೆ ವರ್ತಕ ಸಂಘದ ಭವನದಲ್ಲಿ, ಪಂಚಾಯ್ತಿ ಬೋರ್ಡು ಅಧ್ಯಕ್ಷ ಶ್ರೀ ಟಿ. ಪಂಚಾಕ್ಷರಯ್ಯ ನವರಿಂದ ತೆರೆಯಲಾಯಿತು. ಊರಿನ ವರ್ತಕರೆಲ್ಲಾ ಸಹಕರಿಸಿ ಬಳ್ಳಾರಿಯ ಬ್ಯಾಂಕನ್ನು ಪ್ರೋತ್ಸಾಹಿಸಬೇಕೆಂಬ ಭಾವನೆಯನ್ನು ವ್ಯಕ್ತಪಡಿಸುತ್ತಾ ಸ್ಥಳೀಕ ವರ್ತಕರ ಪರವಾಗಿ ಶ್ರೀ ಮು. ಕ್ರಿಷ್ಟಪ್ಪನವರು ಬ್ಯಾಂಕಿನವರನ್ನು ವಂದಿಸಿದರು. ಶ್ರೀ ಕೇತವರಾಯರು ಬ್ಯಾಂಕುಗಳಿಂದ ಹೇಗೆ ಆರ್ಥಿಕಾಭಿವೃದ್ಧಿಯಾಗುವುದೆಂಬಂಶವನ್ನೂ, ಬ್ಯಾಂಕ್ ಸೆಕ್ರೆಟರಿ ಶೇಷಗಿರಿರಾಯರು ಬ್ಯಾಂಕಿನ ವಿವಿಧ ಚಟುವಟಿಕೆಗಳನ್ನೂ ತಿಳಿಸಿದರು. ಅಧ್ಯಕ್ಷರು ಬ್ಯಾಂಕಿನ ಉಪಯೋಗ, ಬೇಕಾದ ಸಹಕಾರ ವಿವರಿಸಿದೆ ಮೇಲೆ ವಂದನಾರ್ಪಣೆ ತಾಂಬೂಲ ವಿನಿಯೋಗದ ನಂತರ ಸಭೆಯು ಮುಗಿಯಿತು.

ಶ್ರೀ ಟಿ. ಸುಬ್ರಮಣ್ಯಂನವರು ಸಾರ್ವ ಜನಿಕ ಸಭೆಯಲ್ಲಿ ಕಾಂಗ್ರೆಸ್ ಗೊತ್ತುಗುರಿಗಳನ್ನು ತಿಳಿಸಿದರು. ಕಳೆದ ಮಂಗಳವಾರ ಸಾಯಂಕಾಲ ವಿದ್ಯಾರ್ಥಿಗಳು ರಾಷ್ಟ್ರೀಯ ಹಾಡುಗಳನ್ನು ಹೇಳುತ್ತಾ ನಗರ ಪ್ರದಕ್ಷಿಣೆ ಮಾಡಿದರು.

ಹರಪನಹಳ್ಳಿ - ಕೊಟ್ಟೂರು ಭಾಗದ ತಂತಿಯನ್ನು ಯಾರೋ ಕತ್ತರಿಸಿದ್ದರು. ಅದು ಮರಸ್ತಾದಂತೆ ಸೊತ್ತಾಗಿದೆ.

ಗುಂತಕಲ್ಲು-ಹುಬ್ಲಿ ಲೈನು :—

ಒಂಟನಹಾಳು ಹತ್ತಿರ ರೈಲು ಕಂಬಿ ತೆಗೆದ ಕಾರಣ ಗೂಡ್ಸು ಗಾಡಿಯು ಬಿದ್ದು ಎಂಜಿನ್ ಸಿಕ್ಕಿಕೊಂಡಿತ್ತು. ಈಗ ಸದರಿ ಲೈನು ರಿಪೇರಿಯಾಗಿದೆ. ರಾತ್ರಿ ಗಾಡಿಗಳ ಸಂಚಾರ ನಿಲ್ಲಿಸಲಾಗಿದೆ.

ಕಾಂಗ್ರೆಸ್ ಪ್ರಚಾರ :— ಶ್ರೀ ಟಿ. ಸುಬ್ರಮಣ್ಯಂರವರು ಕಳೆದ ವಾರ ಕೊಟ್ಟೂರು, ಹೊಸಪೇಟೆ ಹರಪನಹಳ್ಳಿ ರಾಯದುರ್ಗಗಳನ್ನು ಸಂದರ್ಶಿಸಿ ಕಾರ್ಯಕರ್ತರೊಡನೆ ಕಾಂಗ್ರೆಸ್ ಗೊತ್ತುಗುರಿಗಳ ಸಂಬಂಧವಾಗಿ ವಿಮರ್ಶಿಸಿ ಸಾರ್ವಜನಿಕ ಸಭೆಗಳಲ್ಲಿ ಸದ್ಯದ ಪರಿಸ್ಥಿತಿಯ ವಿಷಯವಾಗಿ ಭಾಷಣ ಕೊಟ್ಟರು.

ಬಳ್ಳಾರಿ - ನಗರ

ಇಲ್ಲಿ ಕಾಲರಾ ಗಲಾಟೆಯು ತಗ್ಗಿದೆಯೆಂದು ಹೇಳಬಹುದು. ಕಳೆದ ವಾರ 3 ಜನರಿಗೆ ತಗಲಿ 6 ಜನರು ಸತ್ತಿರುವರು. ಆಂಧ್ರ ಮಹಾ ಸಭಾಧ್ಯಕ್ಷರಾದ ಸರ್. ವಿಜಯರಾಘವರು ಇಲ್ಲಿಗೆ ಬಂದು ಆಂಧ್ರ ಪ್ರಾಂತೀಕರಣ ವಿಷಯವನ್ನು ಇಲ್ಲಿಯವರೊಡನೆ ವಿಮರ್ಶಿಸಿದರು. ಆಂಧ್ರ ಮಹಾಸಭೆಯ ಕಾರ್ಯಕಾರೀ ಸಮಿತಿಯು ಸದ್ಯದ ದಬ್ಬಾಳಿಕೆಯನ್ನು ಖಂಡಿಸಿ ಮುಖಂಡರನ್ನು ಕೂಡಲೇ ಬಂಧ ಮುಕ್ತರನ್ನಾಗಿ ಮಾಡಬೇಕೆಂದು ನಿರ್ಣಯವನ್ನು ಮಾಡಿತು. 16ನೆ ತಾ॥ ಸಾರ್ವ ಜನಿಕ ಸಭೆಯಲ್ಲಿ ದಿವಂಗತ ಮಹದೇನ ವೀರಾಯಿಯವರ ದುಃಖ ಸೂಚಕ ನಿರ್ಣಯದ ನಂತರ ಸದ್ಯದ ಪರಿಸ್ಥಿತಿಯ ಮೇಲೆ ಶ್ರೀ ಕೇಶವರಾವ್ ಡಿ. ಹೆಚ್. ವೆಂಕೋಬರಾವ್, ರಾಮ ಚಂದ್ರಗುಪ್ತ, ಟಿ. ಸುಬ್ರಮಣ್ಯಂ ನವರು ಮಾತಾಡಿ ಸರಕಾರದ ದಬ್ಬಾಳಿಕೆಯನ್ನು ಖಂಡಿಸಿದರು.

ಬಳ್ಳಾರಿ ಪೇಟೆ ಧಾರಣೆ.

21—8—42 ಶುಕ್ರವಾರ.

ಭಂಗಾರ ತೊಲೆ 1-ಕ್ಕೆ ರೂ.		53-0-0
ಸಾವರನ್	..	41-0-0
ಬೆಳ್ಳಿ 100 ತೊಲೆ ರೂ.		86-0-0
ಅರಳೆ ಫಾರಂ	....	ಪೇಟೆ ಇಲ್ಲಾ.
ಅರಳೆ ಮುಂಗಾರಿ 12 ಮಣಕ್ಕೆ		,,
ಅಕ್ಕಿ 1 ರೂ. ಗೆ		4 ರಿಂದ 5 ಸೇರು
ಬೇಳೆ ,,	....	3½ ,,
ಗೋಧಿ ,,	....	3 ,,
ಜೋಳ ,,	....	10½ ,,
ನವಣೆ ,,	....	14¼ ,,
ಸಜ್ಜೆ ,,	....	10½ ,,
ನೆಲಗಡಲೆ	....	1-11-6
ಸಕ್ಕರೆ ವೀಸ		0—8-6
ಬೆಲ್ಲ	....	20-0-0
ಚಿಮ್ಮಿ ಎಣ್ಣೆ	....	4-14-0

ತುಂಗಭದ್ರ-ಮಂತ್ರಾಲಯ ಜಾತ್ರೆಗೆಳ್ಳಿ. 144ನೇ ಸೆಕ್ಷನ್.

ಕಾಲರಾ ರೋಗವು ಹಬ್ಬುವದೆಂಬ ಭಯದಿಂದ ಆರೋಗ್ಯ ಶಾಖಾಧಿಕಾರಿಗಳ ಸಲಹೆ ಪಡೆದು, ಆದವಾನಿಯ ಸಬ್ ಮ್ಯಾಜಸ್ಟೇಟರು 20-8-42 ರಿಂದ 3-9-42 ರವರಿಗೆ 144 ಸೆಕ್ಷನ್ ಜಾರಿಮಾಡಿ ತುಂಗಭದ್ರ ಮಂತ್ರಾಲಯಗಳ ಜಾತ್ರೆ ನಿಲ್ಲಿಸಿದ್ದಾರೆ. ಯಾರೂ ಹೋಗಬಾರದು.

ಹಿಂದುಸ್ತಾನ.

ಮುಸ್ಲಿಂಲೀಗು :— ಕಾರ್ಯಕಾರಿಣೀ ಸಮಿತಿಯು ಬೊಂಬಾಯಿಯಲ್ಲಿ ಕೂಡಿ ಸದ್ಯದ ರಾಜಕೀಯ ಪರಿಸ್ಥಿತಿಯ ಮೇಲೆ ಒಂದು ನಿರ್ಣಯವನ್ನು ಮಾಡಿದೆ. ಸಾರಾಂಶವೇನಂದರೆ, ಹಿಂದೂ-ಮುಸ್ಲಿಂ ಐಕ್ಯತೆಯಿಲ್ಲದೆ ಕಾಂಗ್ರೆಸ್ ನವರು ಚಳವಳಿಯನ್ನಾರಂಭಿಸಿ ಆಸ್ತಿ ನಷ್ಟ ಪ್ರಾಣಹಾನಿಗೆ ಆಕರಮಾಡಿರುವುದು ವಿಷಾದಕರ ಪಾಕಿಸ್ತಾನದ ಬೇಡಿಕೆಯು ಮಾನ್ಯವಾಗುವುದಾದರೆ ಲೀಗು ಯಾವಪಕ್ಷದೊಡನೆಯಾದರೂ ಸಮುದ್ಯಿಷ್ಟಿಯಲ್ಲಿ ಸಹಕರಿಸಿ ತಾತ್ಕಾಲಿಕ ಸರಕಾರವನ್ನು ರಚಿಸಲು ಸಿದ್ಧವಿದೆ. ಮುಸಲ್ಮಾನರು ಚಳವಳಿಯಲ್ಲಿ ಸೇರಬಾರದು.

ಬಾಂಬು ಸ್ಫೋಟ :— ಲಕ್ನೋದಲ್ಲಿ ಕಳೆದವಾರ ಬಾಂಬಿನ ಸ್ಫೋಟವಾಗಿ ಒಬ್ಬ ಪೋಲೀಸರವನಿಗೆ ಘಾಯವಾಗಿದೆ.

ಸರಹದ್ದ ಪ್ರಾಂತ :— ತೀಂದಿ-ಸಾರಾಯಿ ಅಂಗಡಿಗಳ ಶಾಂತಕರವಾದ ಸಿಕೆಟಿಂಗ ಪೆಶಾವರದಲ್ಲಿ ಪ್ರಾರಂಭವಾಗಿದೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸು ಕಂಪೆನಿ, ಲಿಮಿಟೆಡ್

ಸ್ಥಾಪನೆ : 1897.

45 ನೇ ವಾರ್ಷಿಕ ವರದಿಯ ಕೆಲವು ಮುಖ್ಯ ಅಂಶಗಳು

ಒಟ್ಟು ಆದಾಯ	ರೂ. 85,61,000	ಮೀರಿದೆ.
ಚಾಲ್ತಿಯಲ್ಲಿರುವ ವಿಮಾ ಪಾಲಿಸಿಗಳು	ರೂ. 14,84,44,000	,,
ಆಸ್ತಿ	ರೂ. 5,80,86,000	,,

ಕಂಪೆನಿ ಪ್ರಾರಂಭವಾದ ಲಾಗಾಯ್ತು ಸಾವತಿ ಮಾಡಿರುವ ಕ್ಲೈಂಗಳು ರೂ. 7,48,66,000 ,,

ಏಜನ್ಸಿಗಳಿಗೆ ದರಖಾಸ್ತುಗಳನ್ನು ಕಳುಹಿಸುವುದು.

ಮುಖ್ಯ ಕಛೇರಿ :
ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬೆಂಗಳೂರು ಬ್ರಾಂಚ್ :
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ.

S. V. SETTY & BROS, BELLARY.

ಯುಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಜೆಮ್ಮೆಯ ವಸ್ತುಗಳು ನಮ್ಮಲ್ಲಿ ಸೊರೆಯುತ್ತವೆ ನಮ್ಮ ಪೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ ನಮ್ಮ ಪೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿಸಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಮಪತ್ತೇವೆ. ವೆಸ್ಟ್ಯಎಂಡ್ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ಸೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ನರೀಕ್ಷಿಸಿರಿ.

ಹಿಂದಿ ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು
- ಮಾತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ ?

ಹಾಗಾದರೆ ಕೂಡಲೇ ಕೆಳಗಿನವರನ್ನು ವಿಳಾಸಗಳನ್ನು ಕಲಿಯಿರಿ

ನಿಮಗೆಇಷ್ಟವಾದ ವಿಶ್ವಜನಕ್ಕೆ ಏರ್ಪಡಿಸಲಾಗುವುದು ಪರೀಕ್ಷೆಯ ಪಾಠ್ಯ ಪುಸ್ತಕಗಳು, ಕವಿ, ಕಾದಂಬರಿ ಮೊದಲಾದುವನ್ನೆಲ್ಲ ನಿಮಗೆ ಎಲ್ಲಾ ವಿಧವಾದ ಸಹಾಯವೂ, ಸೂಚನೆಯೂ ಬೇಕಾಗಿ ಬೇಕಾಗುವುದು.

ಟಿ. ಬಿ. ಕೇಶವರಾವ್,
ಕೃಷ್ಣಮಾಚಾರಿ ಕಾಂಪೌಂಡು, ಬಳ್ಳಾರಿ.

NAVA BHARAT, BELLARY.

With which is incorporated Congress Bulletin

THE LEADING NATIONAL WEEKLY.

ನವಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.

The Rates of Subscription

Annual

Local	2—0—0
Moffusil	3—0—0

6 Months

Local	2—0—0
Moffusil	2—0—0

ಚಂದಾ ವಿವರ.

ವರ್ಷಕ್ಕೆ

ಬಳ್ಳಾರಿಯವರಿಗೆ	2-0-0
ಹೊರಗಿನವರಿಗೆ	3-0-0

೬ ತಿಂಗಳಿಗೆ

ಬಳ್ಳಾರಿಯವರಿಗೆ	1-4-0
ಹೊರಗಿನವರಿಗೆ	2-0-0

NAVA BHARAT BELLARY.

Reg. No. M. 3937.

Sri

———— ————

———— ————

Printed at Krishna Press, Bellary. Edited & Published by T. B. Keshava Rao, Bellary.

Reg. No. M. 3937 ವಂದೇ ಮಾತರಂ

ನವ ಭಾರತ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯ ವರಾನ್ನಿಬೋಧತ.

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ.—

ಸಂಚಿಕೆ ೪೭ ಬಳ್ಳಾರಿ ೩೦ ನೇ ಆಗಸ್ಟ್ ಭಾನುವಾರ ೧೯೪೭. ಟಿ. ಬಿ. ಕೇಶವರಾವ್

★ ಭಾರತಕ್ಕೆ ಸ್ವಾತಂತ್ರ್ಯ ★

ಅಮೆರಿಕನರ - ಆಸಕ್ತಿ.

'ನಮ್ಮ ಅಧ್ಯಕ್ಷರು ಭಾರತೀಯ ಸ್ವಾತಂತ್ರ್ಯದ ಸಲುವಾಗಿ ಮಧ್ಯಸ್ಥಿಕೆ ವಹಿಸಲು ನಾವು ಅವರನ್ನು ಒತ್ತಾಯಪಡಿಸುವುದು ನಮ್ಮ ಹಕ್ಕಾಗಿದೆ ಯುದ್ಧ ಪ್ರಾರಂಭವಾದಾಗಿನಿಂದ ಅಮೆರಿಕೆಯು ಇಂಗ್ಲೆಂಡಿನ ವರವಾಗಿ ಯುದ್ಧದಲ್ಲಿ ಭಾಗವಹಿಸುವಂತೆ ಪ್ರಯತ್ನಿಸಿರುವಂತಾಗಿ ಚರ್ಚಿಲ್ಲರು ಇತ್ತೀಚೆಗೆ ಜಗತ್ತಿಗೇ ಸಾರಿ ಸಾರಿ ಹೇಳಿದ್ದಾರೆ. ನಾಯಿ-ಜಪಾನ್‌ಗಳು ದಿನ ದಿನಕ್ಕೆ ಏರಿ ಬರುತ್ತಿರೆ ಆದರೆ ಭಾರತಕ್ಕೆ ಸ್ವಾತಂತ್ರ್ಯ ದೊರೆಯುವಂತೆ ನಾವು ನಮ್ಮ ಅಧ್ಯಕ್ಷರನ್ನು ಒತ್ತಾಯಪಡಿಸದಿದ್ದರೆ ನಾವು ಯುದ್ಧದ ಸಲುವಾಗಿ ವ್ಯಯಿಸುತ್ತಿರುವ ನಮ್ಮ ಶಕ್ತಿ-ಸರ್ವಸ್ವವನ್ನೆಲ್ಲ ಹೊಳೆಯಲ್ಲಿ ಹುಣಸೆ ವಣ್ಣು ಕೊಳೆದಂತಾಗುವದು ಖಂಡಿತ. ಅಟ್ಲಾಂಟಿಕ್ ಚಾರ್ಟರ ಭಾರತಕ್ಕೆ ಅನ್ವಯಿಸದಿರುವದು ತೀರ ಶೋಚನೀಯ. ನಮಗೆ ಮಾತ್ರ ಯುದ್ಧದಲ್ಲಿ ಜಯ ದೊರೆಯಲಾರದು."

ಡಾ ಫ್ರಾಂಕ್ ಲೌಬಾಚ್‌ರವರು ನಿಸೆಂಟರ (ಅಮೇರಿಕ) ಹುಲುತ್ ಎಂಬಲ್ಲಿ ನೆರೆದ ಜನಸಮೂಹದ ಸಭೆಯೊಂದರಲ್ಲಿ ಭಾಷಣ ಮಾಡುತ್ತ ಮೇಲಿನಂತೆ ಹೇಳಿದರು. ಡಾ ಫ್ರಾಂಕರವರು ಹಾಗೇ ಮುಂದುವರೆದು ಫಿಲಿಪಾಯಿನ್ ಜನರು ಅನುಭವಿಸುತ್ತಿರುವ ಮಾನವ ಸ್ವಾತಂತ್ರ್ಯದ ಮಾದರಿಯ ವಿಷಯವಾಗಿ ವಿವರಿಸುತ್ತ ಈ ರೀತಿ ಹೇಳಿದರು "ಜಗತ್ತಿನ ಅರ್ಧ ಜನಸತಿಯು ಏಶಿಯಖಂಡದಲ್ಲಿದೆ. **ಬಿಳಿಯರ ಸಲುವಾಗಿ ಹೋರಾಡಲು ಅಲ್ಲಿಯ ಪ್ರಜೆಗಳಿಗೆ [illegible] ಬ್ಲದ್ದರಿಂದಲೇ ಜಪಾನು ಇತರಗಳನ್ನು ಸ್ವಾಧೀನಪಡಿಸಿಕೊಂಡಿತು** ಫಿಲಿಪಾಯಿನ್ ನಿವಾಸಿಗಳು ಮಾತ್ರ ಬಿಳಿಯರ ಸಲುವಾಗಿ ಹೋರಾಡಬೇಕೆಂದು ಬಯಸುತ್ತಿದ್ದಾರೆ ಅಲ್ಲಿಮಾತ್ರವೇ ಬಿಳಿಯರು ಒಳ್ಳೆಯ ಕಾರ್ಯವನ್ನು ಮಾಡಿದ್ದಾರೆ ಇನ್ನಿತರ ಕಡೆಗಳಲ್ಲೆಲ್ಲ ಐಶ್ವರ್ಯವಂತ ಬಿಳಿಯರು ಅಲ್ಲಲ್ಲಿಯ ಮೂಲನಿವಾಸಿಗಳನ್ನು ತಮ್ಮ ಅಧಿಕಾರಕ್ಕೆ ಒಳಗಾಗುವಂತೆ ಮಾಡಿಕೊಂಡಿದ್ದಾರೆ. ಅಮೆರಿಕಾಖಂಡದಲ್ಲಿ ನೆಲೆಸಿರುವ ಅನೇಕ ಜನಗಳಲ್ಲಿ ಅವರ ಭವಿಷ್ಯತ್ತಿನ ಬಗ್ಗೆ ಸುಳ್ಳು ಹಾಗೂ ಅನ್ಯಾಯವಾದ ಭರವಸೆ ಸಜ್ಜನಗಳನ್ನು ಕೊಟ್ಟಿದ್ದಾರೆ. ಬಾರತದ ಸ್ವಾ ಒಂಭನುಕ್ತವಾಗಲು ನಾವು ನೆರವಾಗದ ಹೊರತು ಗಾಂಧಿ ಮತ್ತು ಜವಾಹರಲಾಲರು ನಮ್ಮ ಹೊಸದಾಗಿ ಭಾರತಕ್ಕೆ ಕಳಿಸಿದ ಅಮೆರಿಕನ್ ಮಿಲಿಟರಿ ಸಿಬ್ಬಂದಿಯಲ್ಲಿ ನಮನಸ್ಸು ಹಾಕಲಾರರು.

ಮಿನಿಸೋಟಾದಲ್ಲಿ ಕೂಡಿದ ಅಮೇರಿಕನ್ ಜನಸಮೂಹದಲ್ಲಿಯ ಜನರು ಭಾರತದಲ್ಲಿಯ ಹಿಂದು-ಮುಸ್ಲಿಂ ಸಮಸ್ಯೆಯಬಗೆಗೆ ಸೂಚಿಸಿದರು. ಅವರ ಈ ಸಮಸ್ಯೆಗ ಡಾ ಲೌಬಾಚ್‌ರವರು ಹೀಗೆ ಉತ್ತರ ಕೊಟ್ಟರು - "ಸಮಸ್ಯೆಯನ್ನು ತಡೆಯಬಹುದು ಮತ್ತು ತಡೆಯಬೇಕು ಮಿತ್ರಮಂಡಲಿಯವರ ದೃಷ್ಟಿಯಲ್ಲಿ ಭಾರತಕ್ಕೆ ಈಗಲೇ ಸ್ವಾತಂತ್ರ್ಯ ಸೂಚಿಸುವ ಸಮಸ್ಯೆಯು ನೇತಾಡುತ್ತಿದೆ. ಈಗ ಭಾರತಕ್ಕೆ ಸ್ವಾತಂತ್ರ್ಯ ಘೋಷಿಸದ ವಿನಃ ಮಿತ್ರಮಂಡಲಿಯವರಿಗೆ ಸಮ್ಮದ ಮಹಾಯುದ್ಧದಲ್ಲಿ ಜಯ ದೊರೆಯಲಾರದು!"

ಜನಸಮೂಹವು ಪ್ರಚಂಡವಾಗಿ ಕೂಡಿದ್ದಿತು. ಈ ವಿಷಯವನ್ನು ತಂತಿಯಿಂದ ಮಿ ಚರ್ಚಿಲ್ಲ, ಕಾಂಟರಬರಿಯ ಆರ್ಚ್‌ಬಿಶಪ್, ಗಾಂಧಿಜಿ ಹಾಗು ಪಂಡಿತ ನೆಹರು ಹಾಗು ಅಧ್ಯಕ್ಷ ರೂಜವೆಲ್ಟ್ ಅವರಿಗೆ ತಿಳಿಸಲು ತಾರಿನ ವೆಚ್ಚವನ್ನೂ ಸಂಗ್ರಹಿಸಿಕೊಟ್ಟರು

ಗಾಂಧಿಜಿ ಹಾಗು ನೆಹರು ಅವರಿಗೆ ಕಳಿಸಿದ ತಂತಿಯು ಈ ಆಶಯವನ್ನಿದ್ದಿತು. 'ನಿಮ್ಮ ಪ್ರೇಮದ ಮಹಾಶಕ್ತಿಯಲ್ಲಿ ನಾವೂ ಸಹಭಾಗಿಗಳಾಗಿದ್ದೇವೆ. ನಮಗೆ ಭಾರತವು ಸ್ವತಂತ್ರವಾಗಬೇಕಾಗಿದೆ ಮತ್ತೆದರೆ ಸಲುವಾಗಿ ನಾವು ಇಂಗ್ಲೆಂಡಿನಲ್ಲಿ ಅವಶ್ಯವಾದ ಕಾರ್ಯವನ್ನಡಿಸಿದ್ದೇವೆ"

ಈ ತಂತಿಯು ಗಾಂಧಿಯವರ ಕೈ ಸೇರಲಿಲ್ಲವೆಂಬುದು, ಮಿನಿಸೊಟಾದಲ್ಲಿ ಸೇರ್ತಿಗಿರಿ ನೆಯ ತಾರೀಖಿಗೆ ಸಭೆ ಗೂಡಿದ ಸುದ್ದಿಯನ್ನು ಭಾರತದ ಪ್ರಜೆಗಳಿಗೆ ಗೊತ್ತಾಗಗೂಡದಂತೆ ಮಾಡಲಾಯಿತೆಂದೂ ಶ್ರೀ. ಮಹಾದೇವ ಭಾಯಿ ದೇಸಾಯಿಯವರು 'ಹರಿಜನ' ಪತ್ರಿಕೆಯಲ್ಲಿ ಹೇಳಿದ್ದಾರೆ ಚರ್ಚಿಲ್ಲರಿಗೆ ಕಳಿಸಿದ ತಂತಿಯು ಈ ಆಶಯವನ್ನಿದ್ದಿತು.

"ಭಾರತದ ಬೇಡಿಕೆಯನ್ನು ತೀವ್ರ ಘೋಷಿಸಬೇಕು"

ಅಧ್ಯಕ್ಷ ರೂಜವೆಲ್ಟರಿಗೆ ಕಳಿಸಿದ ತಂತಿಯು ಈ ಆಶಯವನ್ನಿತ್ತು

'ತಕ್ಷಣವೇ ಭಾರತಕ್ಕೆ ನಾಲ್ಕು ಬಗೆಯ ಸ್ವಾತಂತ್ರ್ಯಗಳು ಲಭಿಸುವಂತೆ ಮಾಡಬೇಕೆಂದು ಇಂಗ್ಲೆಂಡಿಗೆ ಒತ್ತಾಯ ಪಡಿಸಬೇಕು. ಗಾಂಧಿಜಿ ಹಾಗು ನೆಹರುರವರಿಗೆ ಅಮೇರಿಕದ ವರವಾಗಿ ಪ್ರೇಮಾದರಗಳನ್ನು ವ್ಯಕ್ತಪಡಿಸಿ ಅವರಿಗೆ ನಮ್ಮಿಂದ ಯಾವ ಬಗೆಯ ಸಹಾಯ ಬೇಕಾಗಿದೆಯೆಂದು ಕೇಳಿರಿ. ಈ ಸಂದರ್ಭದಲ್ಲಿ ನೀವು ಭಾರತದ ಬಗ್ಗೆ ಏನನ್ನೂ ಮಾಡಲು ಸಿದ್ಧರಿರಬೇಕು ಈಗ ತೀರ ತಡವಾಗಿದೆ ಬರುವ ಒಂದೆರಡು ವಾರಗಳಲ್ಲಿ ಸಾವಿರ ವರ್ಷಗಳ ಸಾನವತೆಯ ದೈವವರೀಕ್ಷೆಯಾಗಿ ಹೋಗುವದು. ಸಂದರ್ಭವನ್ನು ಮುಂದೆ ಹಾಕುವದು ನಿರರ್ಥಕ."

★ ಯುರೋಪದಲ್ಲಿ ★

ದ್ವಿತೀಯ ರಣರಂಗ.

ಡಾನ ನದಿಯ ಯುದ್ಧಮುಖದಲ್ಲಿ ರಶಿಯನರು ದಿನದಿನಕ್ಕೆ ಪರಾಭವಗೊಳ್ಳುತ್ತ ತೀರಾ ಹಣ್ಣಾಗುತ್ತಿರುವದು ನೋಡಿದರೆ ಇತ್ತ ಯುರೋಪಿನಲ್ಲಿ ಮಿತ್ರ ಮಂಡಲಿಯವರು ದ್ವಿತೀಯ ಯುದ್ಧ ಮುಖವನ್ನು ರಚಿಸುವದು ತೀರ ಮುಹ ತ್ಪದ್ದಾಗಿರುವದೆಂದು ಶ್ರೀ ಕೆ ಸಂತಾನಂ ಎಂಬುವರು, 'ಹಿಂದುಸ್ತಾನ ಟಾಯಿ ಮ್ಸ್'ದ ತಮ್ಮ ಒಂದು ಲೇಖನದಲ್ಲಿ ಸ್ವಾರಸ್ಯವಾಗಿ ವಿವೇಚಿಸಿದ್ದಾರೆ.

ಯುರೋಪಿನಲ್ಲಿ ದ್ವಿತೀಯ ಯುದ್ಧ ಮುಖವನ್ನು ರಚಿಸುವ ಬಗ್ಗೆ ಸುತ್ತೂ ಕಡೆಯಿಂದ ಕೂಗು ದಿನ ದಿನಕ್ಕೆ ಹೆಚ್ಚಾ ಗುತ್ತಲೆ ಇದೆ ಹಿಟ್ಲರನ ವಸಂತ ದಾಳಿ ಯಲ್ಲಿ ಮಿತ್ರಮಂಡಲಿಯವರು ರಶಿಯ ನರ ಪ್ರಗತಿಯನ್ನು ಬಣ್ಣ ಹಚ್ಚಿ ಅತಿಶ ಯೋಕ್ತಿಯಾಗಿಯೇ ಪ್ರಚಾರ ಮಾಡಿದ ರು. ಆದರೆ ರಶಿಯನರು ಇಂದು ಡಾನನದಿ ಯ ರಣರಂಗದಲ್ಲಿ ಹಿಂದಿಗೆಯ ಬೇಕಾಗಿ ರುವದು ಶೋಚನೀಯವಾಗಿದೆ. ಅಮೆರಿ ಕೆಯಲ್ಲಿಯಂತೂ ದ್ವಿತೀಯ ರಣರಂಗದ ಸಲುವಾಗಿ ಅತಿಯಾಗಿ ಸಿದ್ಧತೆ ನಡೆದಿ ರುವದು ನೋಡಿದರೆ, ಬ್ರಿಟಿಷ ಹಾಗು ಅ ಮೆ ರಿ ಕೆ ಯ ವರು ಮನಸ್ಸಿನ ಮೇಲೆ ತೆಗೆದುಕೊಂಡರೆ ಯುರೋಪಿನಲ್ಲಿ ದ್ವಿತೀಯ ರಣರಂಗವೊಂದೇ ಏಕೆ ಜಗ ತ್ತಿನ ತುಂಬೆಲ್ಲ ರಣಮುಖಗಳನ್ನು ರಚಿಸಿ ಜಪಾನ-ಜರ್ಮನಿಗಳನ್ನು ಹೇಳ ಹೆಸರಿ ಲ್ಲದಂತೆ ಮಾಡಿ ಬಿಡಬಹುದೆಂದು ಜನ ಸಾಮಾನ್ಯರು ಕಲ್ಪನೆ ಮಾಡುತ್ತಿರುವದು ಸಹಜವಾಗಿದೆ. ಇದು ಒರೇ ಪ್ರಚಾರ ವೆಂದೇ ಹೇಳಬಹುದು. ಮಿತ್ರಮಂಡ ಲಿಯ ಒಂದು ತಂತ್ರ. ಜನಸಾಮಾನ್ಯ ರನ್ನು ಸಂತಯಿಸುವದೇ ಈ ಪ್ರಚಾರ ತಂತ್ರದ ಒಳ ಗುಟ್ಟಾಗಿರಬೇಕು. ಯುರೋಪಿನಲ್ಲಿ ದ್ವಿತೀಯ ರಣಮುಖ ವನ್ನು ರಚಿಸಬೇಕಾದರೆ ಮಿತ್ರಮಂಡಲಿ ಯವರಿಗೆ ಅದೆಷ್ಟೋ ಅಡ್ಡಿ-ಆತಂಕಗ ಳಿವೆ. ಬ್ರಿಟಿಷ ಸರಕಾರವು ಇದೀಗ ಒಂದು ಹೊಯ್ದಾಟದ ಸ್ಥಿತಿಯಲ್ಲಿದೆ. ದ್ವಿ ತೀಯ ರಣರಂಗವು ಗಂಡಾಂತರದ್ದಾಗಿ ದೆಯೇ, ಅಥವಾ ಅದನ್ನು ರಚಿಸುವದು ಸಾಧ್ಯವೇ ಇಲ್ಲವೇ ಅಥವಾ ಅವರು ರಶಿ ಯಕ್ಕೆ ಸಹಾಯಮಾಡಲು ಮನಸ್ಸಿಲ್ಲ ಇದಾವುದನ್ನೂ ಬ್ರಿಟಿಷರು ಸ್ಪಷ್ಟಗೊಳಿ ಸಲಾರದವರಾಗಿದ್ದಾರೆ. ಸ್ಪಷ್ಟವಿದ್ದ ದಂಡ ಯಾತ್ರೆಗಿಂತ ಸಂಯೋಜಿತ ಪ್ರಚಾರ ಕಾರ್ಯವು ಅವರಿಗೆ ತೀರ ಮಹತ್ವದ್ದಾ ಗಿರುವುದು.

ಪಶ್ಚಿಮದಿಂದ ಪೂರ್ವಕ್ಕೆ

ಹಿಟ್ಲರ ಮೊದಲು ರಶಿಯದೊಡನೆ ಒಪ್ಪಂದ ಮಾಡಿಕೊಂಡಿದ್ದನು ಬ್ರಿಟಿ ಷಿನ ತಪ್ಪು ದಾಳಿಯು ನಿರಾಶೆಯಲ್ಲಿ ಕೊನೆಗಾಣುವದೆಂದು ಮುನವರಿಕೆಯಾ ದೊಡನೆಯೇ ಅತ್ತ ಪೂರ್ವದಲ್ಲಿ ರಶಿಯ ಜರ್ಮನಿಯೆಕರಾರನ್ನು ಮುರಿದು ರಶಿ ಯದ ಮೇಲೆ ಸಾಗಿಹೋದನು ಅವನು ಬ್ರಿಟನನ್ನು ಜಯಿಸಿದ್ದೇ ಆಗಿದ್ದರೆ ಅವನು ಅಟ್ಲಾಂಟಿಕ್ ಸಾಗರದ ದೊರೆ ಯಾಗುತ್ತಿದ್ದ. ಅವನಿಗೆ ಬಲವಾದ ರಶಿ ಯದ ಬಗ್ಗೆ ಯಾವ ಬಗೆಯ ಭೀತಿಯು ಇಲ್ಲದಾಗುತ್ತಿತ್ತು ಇತ್ತ ಆಂಗ್ಲ-ಅಮೆ ರಿಕನರ ಮೈತ್ರಿಯೂ ಅತ್ತ ಸೋವ್ಹಿ ಯೇಟ ಯೂನಿಯ್ ಬಲಶಾಲಿಯಾಗಿ ರುವದು, ಇಂಥ ಪರಿಸ್ಥಿತಿಯಲ್ಲಿಯೂ ಹಿಟ್ಲರ ರಶಿಯದ ಮೇಲೆ ಸಾಗಿಹೋ ಗುವ ಮುಂದುಮುಕತನವನ್ನು ಮಾಡಿದ. ಇದರಿಂದ ಅವನಿಗೆ ಅವನ ಉದ್ದೇಶವೇ ಸಾಧಿಸದಂತಾಯಿತು. ಕಳೆದ ವರ್ಷವೇ ಅವನು ರಶಿಯವನ್ನು ಮೂಲೆಗುಂಪು ಮಾಡಿದ್ದರೆ, ಇತ್ತ ಸ್ಪಷ್ಟಿಯುದಲ್ಲಿ ನಿರಾ ತಂಕವಾಗಿ ಮಿತ್ರ ಮಂಡಲಿಯನ್ನು ಎದುರಿಸಬಹುದಿತ್ತು ಬ್ರಿಟಿಷ-ಅಮೇರಿ ಕೆಗಳು ಯುರೋಪಿನ ಮೇಲೆ ಸಾಗಿ ಬರುವದೆಂದರೆ ಸುಲಭ ಸಾಧ್ಯವಿಲ್ಲ ಜರ್ಮನಿಯು ಬ್ರಿಟನ್ನಿನ ಮೇಲೆ ದಾಳಿ ನಾಡಬೇಕಾದರೆ ಅದೆಷ್ಟು ಕಷ್ಟದಾಯ ಕವಾಗಿದೆಯೋ ಅಷ್ಟೇ ಕಷ್ಟತೊಂದರೆ ಯನ್ನು ಬ್ರಿಟ ಅಮೇರಿಕಗಳು ಯುರೋಪಿನ ಮೇಲೆ ದಾಳಿ ಮಾಡಿದರೆ ಎದುರಿಸಬೇಕಾಗಿ ಬರುವದು.

ಯುರೋಪಿನ ಅನಾರವಾದ ಕರಾ ವಳಿಪ್ರದೇಶ ಹಾಗು ಹಸ್ತಗತ ದೇಶಗಳ ಲ್ಲಿಯ ಜನತೆಯ ಅಸ್ತಿತಿಗಳೆ ಅನುಕೂ ಲತೆಗಳಿಂದ ಮಿತ್ರಮಂಡಲಿಯವರು ಯುರೋಪಿನ ಮೇಲೆ ಯಶಸ್ವಿಯಿಂದ ದಾಳಿ ಮಾಡಲನುಕೂಲವಾಗಬಹು ದೆಂದೂ ಒಂದು ದೃಷ್ಟಿಯಿಂದ ವಾದಿಸ ಬಹುದಾಗಿದೆ. ನಿಜವೇ, ಆದರೆ ಇದ ರಿಂದ ಮುತ್ತನ್ನು ಅತ್ತಿ ಆತಂಕಗಳು ಹೆಚ್ಚುವ ಸಂಭವವಿದೆ. ದಾಳಿಗಾರ ದಂ ಡುಗಳು ವೈರಿದಂಡುಗಳಿಂದ ಸುತ್ತುಗಟ್ಟಲ್ಪಡುವ ಸಂಭವವಿದೆ. ಆದರೆ ನಾರ್ಮೆ ಅಥವಾ ಸ್ಪೇನ ಮುಖಾಂತರವಾಗಿ ಯುರೋಪ ಮೇಲಿ ನ ದಾಳಿ ನಡೆಸಿದರೆ ಮಾತ್ರ ಇದೊಂದು ತೊಂದರೆ ತಪ್ಪಬಹುದೆಂದು. ಸ್ಪೇನಿನ ಮುಖಾಂತರ ದಾಳಿ ಮಾಡಿದರೆ ಅಲ್ಲಿಯ ಜನತೆಯ ಅನುಕೂಲತೆ ಯಿರಬೇಕು ಯುದ್ಧ ವ್ಯಾರಂಭವಾದಾಗಿನಿಂದಲೂ

ಮರಳಿನ ಚೀಲಗಳು ಮತ್ತು ಇಟ್ಟಿಗೆ ಗೋಡೆಗಳು

ನಿಮ್ಮ ವ್ಯಾಣಸಂರಕ್ಷಣೆ ಮಾಡಬಹುದು.

ಅವು ನಿಮ್ಮನ್ನು ರಕ್ಷಿಸಿವೆ

ನೀವು ನಮ್ಮಲ್ಲಿ ಜೀವವಿಮೆ ಮಾಡಿಸಿದರೆ ನಾವು ನಿಮ್ಮ ಬಂಧುಗಳನ್ನು ರಕ್ಷಿಸುವೆವು.

ಯುದ್ಧಕಾಲದ ಅವಾಯವನ್ನು ದೃಷ್ಟಿಯಲ್ಲಿಟ್ಟು ಸಹ ಪ್ರತ್ಯೇಕ ರುಲ್ಕವಿಲ್ಲದೆ ನಾಗರೀಕರ ಜೀವವಿಮೆಯನ್ನು ಭದ್ರಗೊಳಿಸಲಾಗಿದೆ.

ಇಲ್ಲಿಯವರೆವಿಗೆ ನಲ್ಲಿಸಿರುವ ಹಕ್ಕುಗಳ ಹಣ ರು 26,00,00,000

ಜಾರಿಯಲ್ಲಿರುವ ವಿಮಾಪತ್ರಗಳ ಮೊತ್ತ ರು. 85,50,00,000

ವಾರ್ಷಿಕ ಆದಾಯ 1941 ರಲ್ಲಿ ನುನೂರು ರು. 5,00,00,000

ನಿಧಿಯ ದ್ರವ್ಯ ನುನೂರು ರು. 30,00,00,000

ಓರಿಯಂಟಲ್

ಗವರ್ನಮೆಂಟು ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ ೧೮೭೪. ಮುಖ್ಯ ಕಛೇರಿ ಬೊಂಬಾಯಿ

ಶಾಖೆ :—

ಓರಿಯಂಟಲ್ ಬಿಲ್ಡಿಂಗ್ಸ್ ಆರ್ಮೀನಿಯನ್ ಬೀದಿ, ಜಿ. ಟಿ. ಮದ್ರಾಸು.

ಇನ್ಸ್ಪೆಕ್ಟರರವ ಆಫೀಸು:- ೩೧೨ ರೂಪರ್ಟಸ್ ಗೇಟ್ ಬ್ರೂಸಪೇಟೆ ಬಳ್ಳಾರಿ.

ಯುದ್ಧವಾರ್ತೆಗಳು.

ದಕ್ಷಿಣ ಅಮೆರಿಕಾದಲ್ಲಿನ ಬ್ರೆಜಿಲ್ ದೇಶವು ಜರ್ಮನಿ ಮತ್ತು ಇಟಲಿದೇಶಗಳ ಮೇಲೆ ಯುದ್ಧವನ್ನು ಸಾರಿದೆ. ಉರುಗ್ವೇದೇಶವೂ ಕೂಡ ಯುದ್ಧಹೂಡಲಿರುವುದೆಂದು ಅಲ್ಲಿಯ ಮಂತ್ರಿಗಳು ಹೇಳಿದರು.

ಜರ್ಸಾ ಚೀನಾಯುದ್ಧದಲ್ಲಿ ಜೈಸೀಯರು ಜಪಾನಿಂದ 3 ಪಟ್ಟಣಗಳನ್ನು ಕಸಿದುಕೊಂಡಿರುವರು. ಬೆಕಿಯಾಂಗ ರೈಲ್ವೇಡ ಮೇಲಿದ್ದ ಜಪಾನೀಯರ ಹಿಡಿತವು ಕಡಿಮೆಯಾಗಿದೆ.

ಅಮೆರಿಕಾದ ನಾರ್ಫೊ ಎಂಬ ನೌಕಾನಿಲಯದಿಂದ ಆಫ್ರಿಕಾದ ಕಾಂಗ್ರೊ ನದಿಗೆ 500 ಮೈಲಿ ದೂರದಲ್ಲಿ ನುಗ್ಗಿ ಸಲ್ಫಟ್ಟಿತು.

ಜರ್ಮನರು ಕಾಕಸಸ್ ಮುಖಾಂತರ ಇರಾಕ್‌ನ ಮೇಲೆ ದಂಡೆತ್ತುವದಾದರೆ ಇರಾಕ್ ಮಿತ್ರನುಂತಲಿಯೊಂದಿಗೆ ಹೋರಾಡಲು ಸಿದ್ಧವಿದೆ ಯೆಂಬುದಾಗಿ ಇರಾಕ್ ಮಂತ್ರಿಗಳು ಹೇಳಿಕೊಟ್ಟಿರುವರು.

ಬ್ರಿಟಿಷ್ ಅತಂಗಾರ್ಮಿ (ನಮ್ಮ ಭೀಕ್) 'ಅನ್‌ಸೋಲ್ಡರ್' ಭೂಮಧ್ಯ ಸಮುದ್ರದಲ್ಲಿ ನುಗ್ಗಿಸಲ್ಪಟ್ಟಿತೆಂದೂ, ಅದು ಬಹಳಕಾಲ ಶತ್ರು ಹಡಗುಗಳನ್ನು ಮುಳುಗಿಸಿದ ಕಾರ್ಯದಲ್ಲಿದ್ದಿತೆಂದೂ ಗೊತ್ತಾಗಿದೆ.

ರಷ್ಯನರು ಜರ್ಮನಿಯ ಆಧೀನದಲ್ಲಿರುವ ಪೋಲೇಂಡಿನ ರಾಜಧಾನಿ ವಾರ್ಸಾ ನಗರವನ್ನು ಬಾಂಬ್ ಮಾಡಿದರು.

ಅಮೆರಿಕಾದಿಂದ ವೆಂಡಲ್ ವಿಲ್ಕಿಯವರು ರಷ್ಯಾ, ಚೀನಗಳಿಗೆ ಹೋಗಿ ಅಲ್ಲಿನ ಪರಿಸ್ಥಿತಿಗಳನ್ನು ಚರ್ಚಿಸಲಿರುವರು. ಅವರು ಇಂಡಿಯಾಕ್ಕೂ ಬರಲಿರುವರು.

ಜಪಾನಿನ ಯುದ್ಧದ ಹಡಗಿನಿಂದ ಮುಳುಗಿಸಲ್ಪಟ್ಟ ಕ್ಯಾಸಿಬೇರಾ ಎಂಬ ಹಡಗಿನಲ್ಲಿ 193 ಜನರು ನಷ್ಟವಾದರೆಂದು ಪ್ರಕಟವಾಗಿದೆ.

ಇಂಗ್ಲೆಂಡಿನಿಂದ ಜರ್ಮನಿಯ ಮೇಲೆ ನಾಡಿದ ದಾಳಿಯಲ್ಲಿ ನಿತ್ರವರ್ಗದ 500 ವಿಮಾನಗಳು ಭಾಗವಹಿಸಿದ್ದವೆಂದು ಹೇಳಲಾಗಿದೆ.

ಜರ್ಮನರಿಗೆ ಅವರ ಮಂತ್ರಿಗಳ ಎಚ್ಚರಿಕೆ.

ಜರ್ಮನಿಯ ಪ್ರಚಾರ ಮಂತ್ರಿಗಳಾದ ಗಾಬೆಲ್ಸರವರೂ 'ದಾಸ್‌ರೀಚ್' ಎಂಬ ಪತ್ರಿಕೆಯಲ್ಲಿ ಹೀಗೆ ಬರೆದಿದ್ದಾರೆ" ಜರ್ಮನಿಯ ಕೆಲಕುಟುಂಬಗಳಲ್ಲಿ 3-4 ಜನರು ಸತ್ತಿರುವರು. ಇದು ಉಳಿಯುವ-ಯಾ-ಅಳಿಯುವ ಪ್ರಶ್ನೆ. ಪ್ರಪಂಚದಲ್ಲಿ ಎಂಥಾ ಬಿರುಗಾಳಿಯೇ ಬೀಸಲಿ ಎಷ್ಟೇ ಅಶಾಂತಿ ವಾತಾವರಣವು ಹುಟ್ಟಲಿ, ಒಂದು ಏನ ಶಾಂತಿಯಾಗಲಿಕ್ಕೇಬೇಕು. ಅಂದು ಜರ್ಮನಿಯ ನಶದಲ್ಲಿ ಏನೂ ಇಲ್ಲದೆ ನಿರ್ಬಲವಾದರೆ ನನ್ನು ಜನ್ಮದ ಅನಕಾಶವನ್ನೇಕಳೆದುಕೊಂಡಂತಾಗುವದು. ಡಾಂಜಿಗ್ ನುಳ್ತು ಒಂದು ಮೋಟಾರ್ ರಸ್ತೆಯುಸ್ಥಿಟ್ಟು ಕೊಂಡು ನಾವು ತೃಪ್ತರಾಗಿರುವ ಕಾಲ ಹಿಂದಾಯಿತು. ಹೀಗ ಆಲೋಚಿಸುವುದು ಹುಚ್ಚತನ.

ಜರ್ಮನರು ಸ್ಟಾಲಿನಗ್ರಾಡ್ ನಗರವು ಉರಿಯುತ್ತಿರುವದಂತೆ.

ಜರ್ಮನರು ಸ್ಟಾಲಿನಗ್ರಾಡ ದಾಳಿಯಲ್ಲಿ 3 ಲಕ್ಷದಿಂದ 10 ಲಕ್ಷದವರೆಗೆ ಸೈನಿಕರನ್ನು ಉಪಯೋಗಿಸುತ್ತಿರುವರು.

ದೇಹಲಿ ಕೇಂದ್ರ ಅಸೆಂಬ್ಲಿಯ

ಸಭೆಯು ನಷ್ಟದ ಪರಿಸ್ಥಿತಿಯನ್ನು ಚರ್ಚಿಸಲು ಸೆಪ್ಟಂಬರ್ 16 ರಿಂದ ವ್ಯಾರಂಭವಾಗಿ ಒಂದು ವಾರದಪರೆಗೂ ನಡೆಯಲಿದೆ.

ಪಂಡಿತ ಮಾಳವೀಯರವರು ಹಿಂಸಾತ್ಮಕ ಕೃತ್ಯಗಳನ್ನಾಚರಿಸಿ ಮಹಾತ್ಮ ಗಾಂಧಿಯವರಿಗೆ ಕಳಂಕ ತರಬಾರದೆಂದು ಭಾರತೀಯರಿಗೆ ಒಂದು ವ್ಯಾರ್ಥನೆ ಮಾಡಿದ್ದಾರೆ.

ಡಾಕ್ಟರ್ ಲತೀಫಿಯವರು ಜಿನ್ನಾರವರಿಗೆ ಅಪೀಲುಮಾಡಿ ಕಾಂಗ್ರೆಸ್ ಲೀಗ್ ಸಂಧಾನವನ್ನು ಫಲಕಾರಿಯಾಗಿ ಮಾಡಿ ದೇಶದಲ್ಲಿ ಶಾಂತಿಯನ್ನು ಪ್ರತಿಷ್ಠಾಪನ ಮಾಡಲು ಕೋರಿರುವರು.

ಬಂಗಾಳ ಸ್ಯಾಂತದಲ್ಲಿ ಸುಮಾರು 300 ಕಮ್ಯೂನಿಸ್ಟ್ ಜನರನ್ನೇಲಿರುವ ನಿರ್ಬಂಧಗಳನ್ನು ಸರ್ಕಾರದವರು ತೆಗೆದುಹಾಕಿರುವರು.

ಅಹಮ್ಮದಾಬಾದ್ ಮುನಿಸಿವಾಲಿಟಿಯನ್ನು ತಾತ್ಕಾಲಿಕವಾಗಿ ರದ್ದುಮಾಡಿ ಕಲೆಕ್ಟರವರನ್ನು ಆಡಳಿತಗಾರರೆನ್ನಾಗಿ ಬೊಂಬಾಯಿ ಸರಕಾರದವರೇರ್ಪಡಿಸಿರುತ್ತಾರೆ.

ಸ್ಯಾಮುಖ್ಯ ಯುದ್ಧಸಮಿತಿಯಲ್ಲಿ ಭಾರತೀಯರಿಗೆ ಸ್ಥಾನವಿಲ್ಲ.

ನ್ಯೂಜೀಲೆಂಡ್‌ನ ಮಂತ್ರಿಗಳಾದ ಮಿ॥ ವಾಲ್ಟರ್‌ನಾಷ್‌ರವರು ಇಂಥಾ ಪ್ರಕಟಿಸಿ ಕೊಟ್ಟಿರುತ್ತಾರೆ. "ಅಮೆರಿಕಾ ಬ್ರಿಟನ್, ಚೀನ, ರಷ್ಯಾ, ಇಂಡಿಯಾ ಈ ರಾಜ್ಯಗಳ ಪ್ರತಿನಿಧಿಗಳನ್ನೊಳಗೊಂಡ 'ಸುಪ್ರೀಂ ವಾರ್ ಕೌನ್ಸಿಲ್' ನ ಅವಶ್ಯಕತೆಯುಂಟು. ಭಾರತೀಯರು ಪರಿಸ್ಥಿತಿಯನ್ನು ಅರಿತರೆ ನಮ್ಮ ತೊಂದರೆಗಳೆಲ್ಲಾ ನಿವಾರಣೆಯಾಗುವುವು. ಬ್ರಿಟಿಷ್ ಸಾಮ್ರಾಜ್ಯದಲ್ಲಿ ಭಾರತದ ಭವಿಷ್ಯವು ಏನೇಇರಲಿ ಪ್ರಸಂಚದ ಜನಾಂಗದಲ್ಲಿ ಹಿಂದೂಸ್ತಾನವು ಮುಖ್ಯ ಭಾಗವಾಗಿರುವದರಿಂದ ಈ ಕೆಲಸವಾಗಲಿಕ್ಕೇಬೇಕು. ಇಂಗ್ಲೆಂಡಿನಲ್ಲಾದರೂ ಜನತೆಗೆ 'ನಾವು ಗೆದ್ದೇತೀರುವೆವು' ಎಂಬ ಅಭಿಪ್ರಾಯವು ದೂರವಾಗುತ್ತಿದೆ.

ಬೀಹಾರಿನಲ್ಲಿ ಸಾರ್ವತ್ರಿಕ ಗಲಭೆಗಳು.

ಕಳೆದವಾರ ವ್ಯಾಪ್ತಿಯ ಎಲ್ಲಾ ಭಾಗಗಳಲ್ಲೂ ವೈಲ್ಡ್ ಟೆಲಿಫೋನ್ ಭೂಮಾರ್ಗಗಳ ಮೇಲೆ ದಾಳಿಯಾಗಿ ನಷ್ಟವಾಗಿದೆ. ಸರಕಾರದವರು ಅವಶ್ಯಕವಾದ ಮಾರ್ಗಗಳನ್ನಿಟ್ಟುಕೊಂಡರೂ ಈಗ ಸಂಭವಿಸಿರುವ, ಮುಂದೆ ಸಂಭವಿಸಲಿರುವ ನಷ್ಟಗಳಿಂದ ಜನತೆಗೆ ಅನಾಸುಕೂಲವಾಗುವುದೆಂದು ಒಂದು ಪ್ರಕಟನೆಯಲ್ಲಿ ತಿಳಿದ್ದಾರೆ. ಭಾಗಲ್ಪುರದಲ್ಲಿ ವ್ಯವಸಾಯ ಪರಿಶೋಧನಾಲಯಕ್ಕೆ ಬೆಂಕಿ ಹಚ್ಚಲಾಗಿದೆ. ಸುಲ್ತಾನಗಂಜದಲ್ಲಿ ಗೂಡ್ಸ್‌ಷೆಡ್‌ಗೆ ಬೆಂಕಿ ಹಚ್ಚುತ್ತಿರುವಾಗ ಮಿಲಿಟರಿಯವರು ಗುಂಡು ಹಾರಿಸಿ 6 ಜನರನ್ನು ಕೊಂದರು. ಶಾಖದಲ್ಲಿಯೂ ಮಿಲಿಟರಿಯವರು ಗುಂಡು ಹಾರಿಸಿದ ಕಾರಣ ಒಬ್ಬರು ಸತ್ತರು. ಡೋನುಚಂಡದಲ್ಲಿ (ಹಜಾರಿಭಾಗ) ಜಿಲ್ಲಾ ಮ್ಯಾಜಿಸ್ಟ್ರೇಟರಮೇಲೆ ಬಿದ್ದಕಾರಣ ಗುಂಡು ಹಾರಿಸಲಾಗಿ ಇಬ್ಬರು ಸತ್ತರು. ವ್ಯಾಪ್ತಿಯ ಎಲ್ಲಾ ಕಡೆ ಇಂಥಾ ಘಟನೆಗಳಾಗಿವೆ.

ಸಾಲೋಮನ್ ದ್ವೀಪಗಳಲ್ಲಿ ಭೂ ವಾಯುಗಳ ಯುದ್ಧವು ಬಲವಾಗಿ ನಾಗಿದೆ.

ಕಾಕಸಸ್ ಮತ್ತು ಸ್ಟಾಲಿನ್‌ಗ್ರಾಡಗಳಲ್ಲಿ ಪರಿಸ್ಥಿತಿಯು ಭಯಂಕರವಾಗಿರುವದೆಂದು ತಿಳಿದು ಬಂದಿದೆ.

ನ್ಯೂಗಿನಿಯಾದ ಮಿಲ್ನೆ ಬೇ ಎಂಬ ಸ್ಥಳದಲ್ಲಿ ಜಪಾನೀಯರು ಇಳಿದಿದ್ದಾರೆ.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಧನವಣ್ಣೀತಿ	೦—೮—೦
ಕನ್ನಡ ವಶೋಪನಿಷತ್ತುಗಳು	೦—೯—೦
ಶಿವಾನುಭವ ಬೋಧೆ	೦—೮—೦
ಸುಮತಿ ಶತಕ	೦—೧—೬

ಅಂಚೆ ವೆಚ್ಚ ಬೇರೆ. ಪುಸ್ತಕ ವ್ಯಾಪಾರಿಗಳಿಗೆ ಹೆಚ್ಚು ಪುಸ್ತಕ ಕೊಳ್ಳುವರಿಗೆ ಧಾರಾಳವಾದ ಕಮೀಷನ್.

ಕಾಲವ ಸುಬ್ಬಣ್ಣ ಮರ್ಚೆಂಟ್ಸು, ಬಳ್ಳಾರಿ.

ಬಳ್ಳಾರಿ ನಗರ.

ಮುನಿಸಿಪಾಲಿಟಿ:— ಹಣಕಾಸಿನ ಪಟ್ಟಿಯಲ್ಲಿ ತಲೆಕೆಳಗಾದುದನ್ನು ಸರಿಪಡಿಸಲು ಸರಕಾರದವರು ಕೇಳಿದ್ದರು. 22 ನೆಯ ತಾ॥ ವಿಾಟಂಗಿನಲ್ಲಿ ಹೈಸ್ಕೂಲ್ ಮ್ಯಾನುಯಲ್ ಸೆಕ್ಷ್ ತೆಗೆದು ಹಾಕ ಬೇಕೆಂದೂ, 9 ನೆಯ ಸಲ ಫೀ ವಸೂಲಿ ಮಾಡಬೇಕೆಂದೂ, ಊರಿನ ನಾಗರೀಕರ ಮೇಲೆ ಹೆಚ್ಚಿಗೆ ತೆರಿಗೆ ವಿಧಿಸಬೇಕೆಂದೂ ತೀರ್ಮಾನವಾಯಿತು. ದಿವಂಗತ ಮಹ ದೇವ ದೇಶಾಯಿಯವರ ನಿಧನದಬಗ್ಗೆ ದುಃಖಸೂಚಕ ನಿರ್ಣಯವಾಯಿತು. ಹೈ ಸ್ಕೂಲ್ ತೆಗೆಯಬೇಕೆಂಬ ಸೂಚನೆಯು ಬಿದ್ದು ಹೋಯಿತು.

ಹೆಚ್ಚಿನ ತೆರಿಗೆ ಬೇಡ:— 25 ನೆಯ ತಾ॥ ಸಾಯಂಕಾಲ ಅಗಡಿ ಮರೆನ್ನ ಸಿದ್ಧಪ್ಪನವರ ಛತ್ರದಲ್ಲಿ ಶ್ರೀ ಮುಲ್ಲಂಗಿ ಗೂಳಪ್ಪನವರ ಅಧ್ಯಕ್ಷತೆಯ ಕೆಳಗೆ ನಾಗರೀಕರ ಸಭೆಯುಸೇರಿ ಬಳ್ಳಾರಿ ಪುರ ಸಭೆಯವರು ಹೆಚ್ಚಿಗೆ ತೆರಿಗೆ ವಿಧಿ ಸಬೇಕೆಂದು ನಿರ್ಣಯಮಾಡಿದುದನ್ನು ವಿರೋಧಿಸಿ ತೀರ್ಮಾನಿಸಿದರು. ತಮ್ಮ ಉಪಸಮಿತಿಯ ಸಿಪಾರ್ಸನ್ನು ತಾವೇ ಧಿಕ್ಕರಿಸಿದುದು ಅನ್ಯಾಯವೆಂದೂ ಈ ವಿಷಯದಲ್ಲಿ 5 ಜನರ ಶಿಷ್ಟಮಂಡಲವು, ಛೇರ್ಮೆನರನ್ನು ನೋಡಬೇಕೆಂದೂ, ಗೊತ್ತಾಯಿತು.

ಹಚ್ಚೊಳ್ಳಿ ಟೋಕ್ರ ಕಂಟ್ರಾಕ್ಟು.

ನಮ್ಮ ಗ್ರಾಮದ ಕಡೆಯಿಂದ ಹೈದ್ರಾ ಬಾದ್ ಪ್ರಾಂತ್ಯದ ಹಳ್ಳಿಗಳಿಗೆ ಹೋಗ ಲಿರುವ ಜನ, ಜಾನುವಾರು, ಮೂಟೆ ವಸ್ತೆ ರೇಗಳಿಗೆ ಇಲ್ಲಿ ಟೋಕ್ರ ಕಂಟ್ರಾಕ್ಟು ಹಿಡಿದಿರುವ ಮಹಸೀಯರು ನಿಯಮಿತ ದರಗಳಿಗಿಂತಲೂ ಹೆಚ್ಚು ವಸೂಲಿ ಮಾಡುತ್ತಿರುವರು. ಈ ವರ್ಷ ತುಂಗ ಭದ್ರಾ ಪ್ರವಾಹವು ಅಧಿಕವಿದ್ದ ಕಾರಣ ಬಡ ಜನರಿಗೂ ಇತರ ವ್ಯಾಪಾ ರೀ ಜನಗಳಿಗೂ ಬಹಳ ತೊಂದರೆ ಯಾಯಿತು. ಉದಾಹರಣಾರ್ಥವಾಗಿ ಮನುಷ್ಯರೊಬ್ಬರಿಗೆ ಮೂರಾಣೆ ಯಿಂದ 0-3-0, ಸಾಲ್ಯಾಣೆಯವರಿಗೂ 0-4-0 ವಸೂಲಿ ಮಾಡುತ್ತಾರೆ. ಜಿಲ್ಲಾ ಬೋರ್ಡು ದರಗಳಿರುವುದು ತಲೆ ವಂದಕ್ಕೆ 0-0-9 ಪೈಗಿಂತ ಹೆಚ್ಚಿಗಿಲ್ಲ. ಧಾನ್ಯದ ಚೀಲಗಳು, ಇತರ ಮೂಟೆ, ಪ್ರಾಣಿಗಳನ್ನು ಪ್ರವಾಹ ಕಾಲದಲ್ಲಿ ಸಾಗಿಸುವ ಪ್ರಸಂಗ ಬಂತೆಂದರೆ, ಈ ದುರ್ಭಿಕ್ಷ ಕಾಲದಲ್ಲಿ ಕ್ವಾಮ ಕೆಲಸ ಗಳು ನಮ್ಮ ಭಾಗದಲ್ಲಿ ಸಾಗಿರಬೇಕಾ ದರೆ ಬಡವರಿಗೂ ನಿರ್ಧನಿಗಳಿಗೂ ಸಂಕ ಟಕರವಾಗುತ್ತದೆ. ನಾವು ಎಷ್ಟು ಸಲ ಬೇಡಿಕೊಂಡರೂ, ಎಚ್ಚರಿಕೆ ಕೊಟ್ಟರೂ, ಉಪಯೋಗ ಬೀಳಲಿಲ್ಲ. ಸಾರ್ವಜನಿಕ ಹಿತಕ್ಕಿಂತಲೂ ಲಾಭದ ಆಶೆಯ ಪ್ರವೃ ತ್ತಿಯೇ ಹೆಚ್ಚಾಗಿ ಕಂಡುಬರುತ್ತದೆ.

ಈ ಕಾರಣ ಜಿಲ್ಲಾ ಬೋರ್ಡು ಅಧ್ಯ ಕ್ಷರು ಇದನ್ನು ವಿಚಾರಿಸಿ ಸದರೀ ಮಹ ನೀಯರ ಲೈಸನ್ಸ್ ಕ್ಯಾನ್ಸಲ್ ಮಾಡ ಬೇಕು. ಅಲ್ಲದೆ ಅವರು ಹೆಚ್ಚು ದರಗ ಳನ್ನು ವಸೂಲಿ ಮಾಡಿದ್ದಕ್ಕಾಗಿ ಅವರ ಮೇಲೆ ಚರ್ಯೆ ನಡಿಸಿ ಮುಂದೆ ಕಂ ಟ್ರಾಕ್ಟು ತೆಗೆದು ಕೊಳ್ಳುವ ಮಹಸೀಯ ರಿಗೂ ಇದು ಎಚ್ಚರಿಕೆಯ ಗುರ್ತಾಗಿ ಪರಿಣಮಿಸುವಂತೆ ಮಾಡಬೇಕು. ತಾವು ಈ ವಿಷಯದಲ್ಲಿ ನಮಗೆ ಸಹಾಯ ನೀಡಬೇಕೆಂದು ಪ್ರಾರ್ಥಿಸುತ್ತೇನೆ.

ಹೆಚ್. ಕೆ. ದುಬೆದಂಡಯ್ಯ.
ಹೆಚ್. ಮರಿಬಸವನಗೌಡ.
ಯಂ. ಬಸವನಗೌಡ.
ಮೂಲೆಮಹದ ಚನ್ನಯ್ಯ.
ಕಂದುಕೂರು ರಾಮಲಿಂಗಪ್ಪ.
ಸಿದಬಸ್ವನಗೌಡ.
ಕೈಸ್ತ ಬಸಪ್ಪ.

26-8-42 ಹಚ್ಚೊಳ್ಳಿ (ಸಿರುಗುಪ್ಪೆ ತಾ)

ಹಡಗುಗಳ ಪರಿಸ್ಥಿತಿ ಸುಧಾರಣೆ

ಶತ್ರುಗಳು ಮುಳುಗಿಸಿದ ಪರಿಣಾಮಕ್ಕಿಂತ ಜುಲೈ ತಿಂಗಳಲ್ಲಿ ಅಮೆರಿಕಾದ ಕಾರ್ಖಾ ನೆಗಳಲ್ಲಿ ಹೆಚ್ಚಿನ ಹಡಗುಗಳು ನಿರ್ಮಿತ ವಾದವು.

ಉನ್ನತ ಪ್ರಾಥಮಿಕ ಶಾಲೆಗಳ ಇ. ಎಸ್. ಎಲ್. ಶಿ. ಪರೀಕ್ಷೆ.

ಹೈಯರ್ ಎಲಿಮೆಂಟರಿಶಾಲೆಗಳಲ್ಲಿ ಇ. ಎಸ್. ಎಲ್. ಪರೀಕ್ಷೆಯನ್ನು ಜಾರಿಗೆ ತಂದಿರುವ ಉದ್ದೇಶವು ಫಲಕಾ ರಿಯಾಗಿಲ್ಲ. ಸದರಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದರೂ ಸಹ ಮೂರನೆಯ ಫಾರಂಗೆ ಸೇರಿಸುವರು. ಹೀಗಾಗಿ ವಿದ್ಯಾ ರ್ಥಿಗೆ ಮತ್ತೊಂದು ವರ್ಷ ನಷ್ಟವಾಗು ತ್ತದೆ. ಎಲಿಮೆಂಟರೀ ಶಾಲೆಗಳಲ್ಲಿನ ಇಂಗ್ಲೀಷ್‌ಜ್ಞಾನದ ಮಟ್ಟವನ್ನು ಹೈ ಸ್ಕೂಲ್ ಉಪಾಧ್ಯಾಯರು ದುರ್ಲಕ್ಷಿ ಸುತ್ತಿರುವರು. ಪ್ರಾಥಮಿಕ ಮತ್ತು ಉ ನ್ನತ ವಿದ್ಯಾಭ್ಯಾಸಕ್ಕೆ ಮಧುರ ಸಂಬಂ ಧವೇ ಏರ್ಪಟ್ಟಿಲ್ಲ. ಇ. ಎಸ್. ಎಲ್. ಶಿ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ವಿದ್ಯಾರ್ಥಿಗಳು ಹೈಸ್ಕೂಲಿನ 4ನೆ ಫಾರಂಗೆ ಅರ್ಹರೆಂಬ ನಿಯಮವು ವಿದ್ಯಾಖಾತೆಯವರಿಂದ ಹೊರಡಬೇಕು. ಅಲ್ಲದೆ ಎಲಿಮೆಂಟರೀಶಾಲೆಗಳಲ್ಲಿ 3ನೆಯ ಸ್ಟಾಂಡರ್ಡದಿಂದ ಇಂಗ್ಲೀಷ್ ಶಿಕ್ಷ ಣವು ಸೆಕಂಡರೀ ಉಪಾಧ್ಯಾಯರಿಂದ ಕೊಡಲ್ಪಡಬೇಕು. ಇಂಥಾ ಯೋಗ್ಯ ವಾದ ಪ್ರಾಥಮಿಕ ಶಾಲೆಗರುವಕಡೆ ಹೈಸ್ಕೂಲುಗಳಲ್ಲಿರುವ ಎಲಿಮೆಂಟರಿ ಸೆಕ್ಷ್ ತೆಗೆದುಹಾಕಬೇಕು. ಹೀಗಾದರೆ ಪ್ರಾಥಮಿಕ ಮತ್ತು ಉನ್ನತ ವಿದ್ಯಾಭ್ಯಾ ಸಕ್ಕು ಒಳ್ಳೆಯ ಸಂಬಂಧವೇರ್ಪಡುವುದು.

ಒಬ್ಬ ಉಪಾಧ್ಯಾಯ.

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ:— ಬಳ್ಳಾರಿ.

ಒಟ್ಟು ವ್ಯವಹಾರದ ಮೊತ್ತ.

31—7—41	31—7—42
ರು. 1,60,292-13-4	ರು. 2,71,722-10-10

ನಮ್ಮಲ್ಲಿ ಸರ್ವ ವಿಧವಾದ ಬ್ಯಾಂಕಿಂಗ್ ವ್ಯವಹಾರವು ನಡೆಯುತ್ತದೆ. ಹಿಂದೂದೇಶದ ಯಾವ ಭಾಗದಲ್ಲಾದರೂ ನಿಮಗೆ ವ್ಯಾಪಾರೀ ಸೌಕರ್ಯವನ್ನೊದಗಿಸಿಕೊಡುತ್ತೇವೆ. ಭಂಗಾರ ಮತ್ತು ಇತರ ಉಪಯುಕ್ತ ಮಾಲಿನ ಮೇಲೆ ಅಲ್ಪದರದ ಬಡ್ಡಿಯಿಂದ ಸಾಲವು ದೊರೆಯುತ್ತದೆ. ನಮಕ್ಷೇಮ ಬಂದು ಎಲ್ಲಾ ತಿಳಿದುಕೊಳ್ಳಿರಿ.

ಶಾಖೆಗಳು:— 1 ತಿಮ್ಮನಚರ್ಲ.
2 ಕೊಟ್ಟೂರು. 3 ಉರವಕೊಂಡ. 4 ಪತ್ತಿಕೊಂಡ. 5 ಹರಪನಹಳ್ಳಿ

ಹೆಚ್. ಶೇಷಾರಾಮರೆಡ್ಡಿ, ಬಿ. ಎ. ಬಿ. ಎಲ್ (ಎಂ. ಎಲ್. ಎ.)
ಡೈರೆಕ್ಟರುಗಳ ಬೋರ್ಡು ಅಧ್ಯಕ್ಷರು.
ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ಸ್ಪೇನು ತಟಸ್ಥವಾಗಿಯೇ ಉಳಿದಿದೆ. ಅದರಿಂದಾಗಿಯೇ ಜನರಲ್ ಫ್ರ್ಯಾಂಕೊ ನಿಗೆ ರಿಪಬ್ಲಿಕ್ ಗುಂಪುಗಳಿಂದ ಅಷ್ಟೊಂದು ಸಹಾನುಭೂತಿ ದೊರೆತಿದೆ.

ಹಸ್ತಗತ ರಾಷ್ಟ್ರಗಳಾದ ಫ್ರಾನ್ಸ್ ಅಥವಾ ನೆದರಲ್ಯಾಂಡಗಳ ಜನತೆಯು ನೊಡಲೇ ನೈರಿಗಳ ದಾಳಿಯಿಂದ ಹಣ್ಣಾಗಿಹೋಗಿರುವುದರಿಂದ ಅವರು ಮಿತ್ರ ನುಂಡಲಿಯವರ ದಾಳಿಗಳನ್ನು ಸ್ವಾಗತಿಸುವದು ಅಸಂಭವನೀಯವೇ ಆಗಿದೆ. ಮಿತ್ರಮಂಡಲಿಯ ಜಯದ ಬಗ್ಗೆ ಅವರಿಗೆ ಸಹಾನುಭೂತಿಯಿದ್ದರೂ ಅವರು ಮತ್ತೆ ಎರಡನೆಯ ಸಲ ದಾಳಿಯನ್ನು ಸ್ವಾಗತಿಸಲಾರರು. ಹಸ್ತಗತ ದೇಶಗಳಲ್ಲಿ ಮಿತ್ರಮಂಡಲಿಯವರು ಸಂಚನು ಹಳೆದ ಮುಖಾಂತರ ತಮ್ಮ ಚಟುವಟಿಕೆಗಳನ್ನು ನಡೆಸಬಹುದೆಂದೂ ಹೇಳುವರು ಕೇಳಿಬಹುದಾಗಿದೆ. ಆದರೆ ಅಲ್ಲಿಯ ಜನತೆಯ ಹೊಟ್ಟೆ-ಬಟ್ಟೆಯಾನ್ನು ನೋಡಲು ಸಹಾರವೂ ಮಿತ್ರರನೇಲೆಯೇ ಬೀಳುವದು. ಇದು ಅಚ್ಚಿನ ರಾಷ್ಟ್ರದವರಿಗೆ ನೊತ್ತಾದರೆ ಅವರಿಗೆ ಒಂದು ತೃಣುಳು ರೊಟ್ಟಿಯೂ ಹೊರೆಯದಂತೆ ನೋಡಿಕೊಳ್ಳುವರು.

ಜಪಾನಿಗೇಕೆ ಸಾಧ್ಯ ?

ಜಪಾನು ಇದೇ ಬಗೆಯ ಗಂಡಾಂತರಗಳನ್ನು ಎದುರಿಸಿಯೂ ಫಿಲಿಪಾಯಿನ್, ಡಚ್ ಈಸ್ಟ್ ಇಂಡೀಜ್ ಹಾಗು ಮಲಯಗಳ ಮೇಲೆ ದಾಳಿಮಾಡಿತಲ್ಲ ಎಂದೂ ಕೇಳಬಹುದಾಗಿದೆ. ಮಿತ್ರ ಮಂಡಲಿಯವರಿಂದ ಸನುಯೋಚಿತವಾಗಿ ನೈಮಾನಿಕ ಹಾಗು ಸೌಕಾದಳಗಳನ್ನು ಕಳಿಸಿದ್ದರೆ ಜಪಾನಿಗೆ ಅವುಗಳ ಮೇಲೆ ದಾಳಿಮಾಡುವದು ಕಷ್ಟ ಸಾಧ್ಯ ವಿದ್ದಿತು. ಆದರೆ ಜಪಾನು ಫಿಲಿಪಾಯಿನ್ ಡಚ್ ಈಸ್ಟ್ ಇಂಡೀಜ್, ಮತ್ತು ಮಲಯಗಳ ಮೇಲೆ ದಾಳಿಮಾಡುವ ಪರಿಸ್ಥಿತಿಗೂ ಮಿತ್ರಮಂಡಲಿಗಳು ಯುರೋಪಿನಮೇಲೆ ದಾಳಿಮಾಡುವ ಪರಿಸ್ಥಿತಿಗೂ ತೀರ ಅಭ್ಯಂತರವಿದೆ. ಜರ್ಮನಿಯು ತನ್ನ ಶಕ್ತಿಯೆನ್ನು ರಶಿಯದ ರಣಂಗದಲ್ಲಿ ಉಪಯೋಗಿಸುತ್ತಿದ್ದರೂ, ಮಿತ್ರಮಂಡಲಿಯವರನ್ನು ಎದುರಿಸಲು ಆಕ್ಷಣವೇ ಬೇಕಾದಷ್ಟು ಶಕ್ತಿಯನ್ನು ಸಂಗ್ರಹಿಸಬಲ್ಲದು. ಆಗ ಜರ್ಮನಿಯನ್ನು ಎದುರಿಸಲು ಕಷ್ಟ ಸಾಧ್ಯವಾಗಬಹುದು.

ಜರ್ಮನಿ ಅದೆಷ್ಟು ಲಾಗಹೊಡೆದರೂ ಈ ವರ್ಷ ರಶಿಯವು ಫ್ರಾನ್ಸ್, ಈಸ್ಟ್ ಇಂಡೀಜಗಳಂತೆ ಜರ್ಮನಿಗೆ ಮಣಿಯಲಾರದೆಂದು ಹೇಳಬಹುದು. ಮಿತ್ರಮಂಡಲಿಯವರು ಇನ್ನೂ ತಮ್ಮ ಶಕ್ತಿಯನ್ನು ಬಲಪಡಿಸಿಕೊಳ್ಳಬೇಕು. ಈಗ ನಡೆಯುತ್ತಿರುವ ಎಲ್ಲ ಯುದ್ಧ ಮುಖಗಳನ್ನೂ ಯಶಸ್ಸಿನಿಂದ ನಡೆಸಿಕೊಂಡು ಹೋಗಬೇಕು. ಭಾರತವು ರಶಿಯ-ಚೀನಗಳಿಗೆ ಬೇಕಾಗುವ ಮದ್ದು ಗುಂಡು ತೋಪು ತುಬಾಕಿಗಳನ್ನು ಪೂರಯಿಸುವ ಕೇಂದ್ರವಾಗಬೇಕು. ಆಂದರೇನೆ ಮಿತ್ರಮಂಡಲಿಯವರಿಗೆ ಜಯವು ಸಿದ್ಧ.

ಸರ್. ಶಿ. ಪಿ. ಯವರ ರಾಜೀನಾಮೆ.

ನೈಸ್ರಾಯರ ಎಕ್ಸಿಕ್ಯೂಟಿವ್ ಕೌನ್ಸಿಲ ಸದಸ್ಯರಾದ ಸರ್. ಶಿ. ಪಿ. ರಾಮಸ್ವಾಮಿ ಅಯ್ಯರ್ ರವರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿರುವರು. ಕಾಂಗ್ರೆಸ್‌ನವರು ಸಂಸ್ಥಾನಗಳ ವಿಷಯದಲ್ಲಿ ತೋರಿದ ನೀತಿಯಿಂದ ಅವರ ಪ್ರೀತಿಪಾತ್ರಾ ಗಾಂಧಿಯವರು ಹಿಂದೂಸ್ಥಾನವನ್ನು ಮುಸ್ಲಿಂ ಲೀಗಿಗೆ ಒಪ್ಪಿಸಬೇಕೆಂಬ ತೋರಿದ ಧೋರಣದಿಂದ ಅವರಿಗೆ ಕಳವಳವಾಗಿದೆಯಂತೆ ಸಂಸ್ಥಾನಗಳ ವಿಕ್ಯಕ್ತಾಗಿ ವರ್ತಿಸಿ ಅವುಗಳ ಅಸ್ತಿತ್ವವನ್ನು ಕಾಪಾಡಲು ತಮಗೆ ಹೆಚ್ಚಿಗೆ ಸ್ವಾತಂತ್ರ್ಯಬೇಕೆಂದು ರಾಜೀನಾಮೆ ಕೊಡಲಾಮ್ಮೆಂದೂ ಅದನ್ನು ನೈಸ್ರಾಯರು ಅಂಗೀಕರಿಸಿದ್ದಾರೆಂದೂ ಸರಕಾರೀ ಪ್ರಕಟನೆಯಲ್ಲಿ ಹೇಳಲಾಗಿದೆ. ಸರಕಾರವನ್ನು ಕಾಂಗ್ರೆಸ್ ವಿರುದ್ಧ ಕೈಕೊಂತ ದಬ್ಬಾಳಿಕೆಯ ಧೋರಣೆಯನ್ನು ಶಿ. ಪಿ. ಯವರು ಒಪ್ಪುತ್ತಾರೆ.

ಈಗ ಶಿಲೋನಿಗೆ ಭಾರತೀಯರು ಬೇಕು.

ಹಿಂದೂಸ್ತಾನ - ಶಿಲೋನ್ ಸರಕಾರಗಳಲ್ಲಿ ಒಪ್ಪಂದವಾಗುವಂತೆ ಮಾಡಿ ಎರಡು ದೇಶಗಳವರಲ್ಲೂ ಸ್ನೇಹಸಂಬಂಧ ವಿರುವಂತೆ ಮಾಡಲು ಕಾಂಗ್ರೆಸ್‌ನ ಸರನಾಗಿ ಪಂಡಿತ ಜವಹರಲಾಲ ನೆಹರೂರವರು ಹೋಗಿ ವಿಫಲರಾಗಿದ್ದರು. ಅಲ್ಲಿಂದೀಚೆಗೆ ಶಿಲೋನ ಸರಕಾರದವರು ಭಾರತ ವಿರೋಧ ಶಾಸನಗಳನ್ನುಮಾಡಿ ನಮ್ಮ ಸೌಕರ್ಯಕ್ಕೆ ಕುಂದು ಮಾಡಿದ್ದರು. ಈಗಿನ ಯುದ್ಧ ಪರಿಸ್ಥಿತಿಯಲ್ಲಿ ಅವರಿಗೆ ಸಂಕಟ ಬಂದಿರುವಕಾರಣ ಇಂಡಿಯಾ ಸರಕಾರಕ್ಕೆ ಬೇಡಿಕೊಂಡು ಭಾರತ ಕೂಲಿಕಾರರು ಶಿಲೋನಿಗೆ ಹೋಗಬಾರದೆಂಬ ಇಂಡಿಯಾ ಸರ್ಕಾರದ ಶಾಸನವನ್ನು ರದ್ದುಮಾಡಿಸಿರುವರು ಅಲ್ಲದೆ ಶಿಲೋನ ಸರಕಾರದವರು ಭಾರತ ವಿರೋಧ ಶಾಸನಗಳನ್ನು ಹಿಂದೆ ಗೆದುಕೊಂಡಿರುವರು. ಯುದ್ಧವಾದನಂತರ ಭಾರತ ಶಿಲೋನ್ ಒಪ್ಪಂದವಾಗಲಿರುವಂತೆ ಅಲ್ಲಿ ಅಕ್ಕಿಯೂ ಸಾಲದು ಬಂದಿದೆ ಈಗ ಭಾರತದಿಂದ ಅಕ್ಕಿಯನ್ನು ಕಳುಹಿಸಬೇಕಾಗಿದೆ.

Visit ROYAL CAFE
NEAR ROYAL PICTURE PALACE
Royal is Royal

ಕಾಲರಾಕ್ಕೆ

ಪ್ರೇಸ್ಯ ಮತ್ತು ಶೀಘ್ರ ಗುಣಕಾರಿ.

ಕಾಶ್ಮೀರುಅರುಕ್

(ಮನೆಯ ವೈದ್ಯ.)

(ವಾಂತಿ)

ಎಲ್ಲರೂ "ಕಾಶ್ಮೀರು ಅರುಕ್" ನ್ನು ಪ್ರತಿನಿತ್ಯ ಎರಡುಸಲ ಸೇವನೆ ಮಾಡುವದರಿಂದ ಕಾಲರಾ ಕ್ರಿಮಿಗಳನ್ನು ನಿರ್ಮೂಲಮಾಡಿ ಕಾಲರಾ ಬಾರದಂತೆ ಕಾಪಾಡುವುದು. ವಾಂತಿ ಭೇದಿಗಳನ್ನು ತಕ್ಷಣ ನಿಲ್ಲಿಸಿ ಜೀರ್ಣಶಕ್ತಿಯನ್ನು ಹೆಚ್ಚಿಸುವುದು.

ಎಲ್ಲಾ ಷಾಪುಗಳಲ್ಲಿ ದೊರೆಯುತ್ತದೆ.

ಹೆಚ್. ಯಸ್. ಅಂಡ್ ಸನ್ಸ್., ಬಳ್ಳಾರಿ.

4-10

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸು ಕಂಪೆನಿ, ಲಿಮಿಟೆಡ್

ಸ್ಥಾಪನೆ : 1897.

45 ನೇ ವಾರ್ಷಿಕ ವರದಿಯ ಕೆಲವು ಮುಖ್ಯ ಅಂಶಗಳು

ಒಟ್ಟು ಆದಾಯ	ರೂ. 85,61,000	ಮೀರಿದೆ.
ಜಾಲ್ತಿಯಲ್ಲಿರುವ ನಿಮಾ ಪಾಲಿಸಿಗಳು	ರೂ 14,84,44,000	,,
ಆಸ್ತಿ	ರೂ 5,80,86,000	,,

ಕಂಪೆನಿ ಸ್ಥಾರಂಭವಾದ ಆಗಾಯ್ತು ಪಾವತಿ ನೂಡಿರುವ ಕ್ಲೈಂಗಳು ರೂ 7,46,66,000 ,,

ಏಜನ್ಸಿಗಳಿಗೆ ದರಖಾಸ್ತುಗಳನ್ನು ಕಳುಹಿಸುವುದು.

ಮುಖ್ಯ ಕಛೇರಿ :
ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬೆಂಗಳೂರು ಬ್ರಾಂಚ್
ಡಿಸ್ಟಿಕ್ಟ್ ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ.

S. V. SETTY & BROS, BELLARY.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾವ ನುತ್ತು ಬಲ್ಲಿಯ ವಸ್ತುಗಳು ನಮ್ಮಲ್ಲಿ ದೊರಯುತ್ತವೆ ನಮ್ಮ ಹಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ ನಮ್ಮ ಪರಿರುವ ಹಳಯ ನಮ್ಮಗಳನ್ನು ಕೊಳ್ಳು ರಾಡಿದಕಾಲಿ ವೇನ್ಸೀಮು ಕಂಪ್ಟಿರ ಹೊವಸ್ತುಗಳನ್ನು ಕೊಮುತ್ತೇವೆ ಸಸ್ಟಾಎಂದ ವಾಚುಗಳೂ ದೂಡ್ಡ ಗಂಯಾರಗಳೂ ನಮ್ಮಲ್ಲಿ ದೂರಿಯತ್ತವ ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ಹಿಂದಿ-ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು
- ಮಾತಾಡುವ್ದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ ?

ಹಾಗಾದರೆ ಕೂಡಲೇ ಕೆಳಗಿನವರ್ಲ
ವರಗಳನ್ನು ತಿಳಿಯಿರಿ

ನಮ್ಮಲ್ಲಿಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು ಪರೀಕ್ಷೆಯ ಪಾಠ್ಯ ಪುಸ್ತಕಗಳು, ಕಥೆ, ಕಾದಂಬರಿ ಪಗ್ಗರೆ ಮೊರೆಯುನ್ನವಲ್ಲದೆ ನಿಮಗೆ ಎಲ್ಲಾ ವಿಧವಾದ ಸಾಮಾಯವೂ, ಪ್ರಚಿತವಾಗಿ ಹೇಳಲಾಗುವುದು

ಟಿ. ಬಿ. ಕೇಶವರಾವ್,
ಕೃಷ್ಣಮಾಚಾರಿ ಕಾಂಪೌಂಡು, ಬಳ್ಳಾರಿ

NAVA BHARAT, BELLARY.

With which is incorporated Congress Bulletin

THE LEADING NATIONAL WEEKLY.

ನವಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.

The Rates of Subscription

Annual

Local	2—0—0
Moffusil	3—0—0

6 Months

Local	2—0—0
Moffusil	2—0—0

ಚಂದಾ ವಿವರ.

ವರ್ಷಕ್ಕೆ

ಬಳ್ಳಾರಿಯವರಿಗೆ	2-0-0
ಹೊರಗಿನವರಿಗೆ	3-0-0

೬ ತಿಂಗಳಿಗೆ

ಬಳ್ಳಾರಿಯವರಿಗ	1-4-0
ಹೊರಗಿನವರಿಗೆ	2-0-0

NAVA BHARAT BELLARY.

Reg. No. M. 3937.

Sri

Printed at Krishna Press, Bellary Edited & Published by T. B. Keshava Rao, Bellary

Reg. No. M. 3937 ಸಂಯೋ ಮಾತರಂ

ನವಭಾರತ

ಉತ್ತಿಷ್ಠತ! ಜಾಗ್ರತ!! ಸ್ವಾಸ್ಥ್ಯ ವಕ್ಷ್ಯಾಮಿಭೋಧತ.

ಸರ್ಪ ೪ | ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. | ಸಂಪಾದಕ:—

ಸಂಚಿಕೆ ೪೮ | ಬಳ್ಳಾರಿ ೬ ನೇ ಸೆಪ್ಟಂಬರು ಭಾನುವಾರ ೧೯೪೨. | ಟಿ. ಬಿ. ಕೇಶವರಾವ್

ಮಹಾತ್ಮರಿಗೆ ೨೦ ಸಾವಿರ ರುಪಾಯಿ ಮನಿಯಾರ್ಡರ

ಕನಸಿನಲ್ಲಿ ಹಣ ಕೇಳಿದ ವಿಚಿತ್ರ ಘಟನೆ.

ಮಹಾತ್ಮರು ಮುಂಬಯಿಗೆ ಎ. ಆಯ ೫. ಸಿ. ಗೆ ಹೊರಡುವದಕ್ಕೆ ಕೆಲವು ದಿನ ಮುಂಚೆ ಒಂದೆರಡು ವಿಚಿತ್ರ ಘಟನೆಗಳು ಸಂಭವಿಸಿದವು. ಇದ್ದಕ್ಕಿದ್ದಂತೆಯೇ ಮಹಾತ್ಮರಿಗೆ ತಂತಿ ಮೂಲಕ 20 ಸಾವಿರ ರೂಪಾಯಿಗಳ ಮನಿಯಾರ್ಡರು ಬಂದಿತಂತೆ. ಈ ಕಿಡಿ ಪಸ್ಸು ಶೀಘ್ರದಲ್ಲಿಯೇ ಕಳುಹಿಸುವೆನೆಂದು ತಂತಿಯಲ್ಲಿ ತಿಳಿಸಲಾಗಿದ್ದಿತು. ಹಣವನ್ನು ಕಳುಹಿಸಿರೆಂದು ಅವರು ಯಾರನ್ನೂ ಕೇಳದೇ ಇದ್ದಿದ್ದರೂ, ಅನಿರೀಕ್ಷಿತವಾಗಿ ಹಣಬಂದುದನ್ನು ನೋಡಿ ಅವರೂ ಆಶ್ಚರ್ಯಚಕಿತರಾದರು. ವಿಚಾರಿಸಿ ನೋಡಲಾಗಿ ಆ ಹಿಂದಿನ ರಾತ್ರಿ ಸುಪ್ತಾವಸ್ಥೆಯಲ್ಲಿದ್ದ ವ್ಯಾಪಾರಿಗಳಾದ ಶ್ರೀ ಘನಶ್ಯಾಮದಾಸ ಬಿರ್ಲಾ ಅವರಿಗೆ ಬಂದು ಕನಸು ಬಿದ್ದಿತಂತೆ. ಆ ಸ್ವಪ್ನದಲ್ಲಿ ಮಹಾತ್ಮರು ಅವರಿಗೆ ಕಾಣಿಸಿಕೊಂಡು 30 ಸಾವಿರ ರೂಪಾಯಿಗಳನ್ನು ಕೇಳಿದಂತಾಯಿತಂತೆ. ಅದ್ದರಿಂದ ಬೆಳಗಾದೊಡನೆಯೇ ಅವರು ತಂತೀ ಮೂಲಕ 20 ಸಾವಿರ ರೂ. ಗಳನ್ನು ಕಳುಹಿಸಿದ್ದರಂತೆ.

ಹಿಂದುಸ್ತಾನ ಟೈಮ್ಸ್ ಪತ್ರಿಕೆಯ ಸಂಪಾದಕರಾದ ಶ್ರೀ ದೇವದಾಸ ಗಾಂಧಿಯವರು ಮಹಾತ್ಮ ಗಾಂಧಿಯವರ ಮಕ್ಕಳಲ್ಲೊಬ್ಬರು. ಅವರು ಗಾಂಧಿಯವರಿಗೆ ಮುಂಚಿತವಾಗಿ ತಿಳಿಸದೆ ಒಮ್ಮಿಂದೊಮ್ಮೆಲೆ ಹಾಗೇ ವರ್ಧಾಕ್ಕೆ ಹೊರಟು ಬಂದರಂತೆ. ಅವರ ಬರವಿನ ಕಾರಣವೇನೆಂದು ವಿಚಾರಿಸಲಾಗಿ 'ಮಹಾತ್ಮರ ಬಂಧನವಾದುದನ್ನು ಕನಸಿನಲ್ಲಿ ಕಂಡೆ. ಆದ್ದರಿಂದ ಅವರನ್ನು ಮೊದಲು ನೋಡ ಬೇಕೆಂದೆನಿಸಿ ಹೊರಟು ಬಂದೆನೆಂದರಂತೆ. ಹಿಂದೊಮ್ಮೆ ಮಹಾತ್ಮರು ಸೆರೆಮನೆಯಿಂದ ಒಂದೆರಡು ದಿನ ಮುಂದೆ ದೇವದಾಸ ಗಾಂಧಿಯವರಿಗೆ ಇದೇ ತರಹದ ಸ್ವಪ್ನವಾಗಿದ್ದಿತಂತೆ. ಸ್ವಪ್ನವು ಸತ್ಯವಾಗದೆ ಮೋಗಲಿಲ್ಲ.

ಮಹಾತ್ಮ ಗಾಂಧಿಯವರು ಆರೋಗ್ಯವಾಗಿದ್ದಾರೆ.

ವರ್ಕಿಂಗ್‌ಕಮಿಟಿ ಸದಸ್ಯರು.

ಬೊಂಬಾಯಿ ಸರಕಾರ ಪ್ರಕಟನೆಯು ಗಾಂಧೀಜಿ ಮತ್ತು ಇತರ ವರ್ಕಿಂಗ ಕಮಿಟೀ ಸದಸ್ಯರ ನಿಷಯವಾಗಿ ಪ್ರಕಟಿಸಿದೆ. ಮಹಾತ್ಮ ಗಾಂಧಿಯವರು ಬಂದು ಬಾವನಗೀ ಮನೆಯಲ್ಲಿರುವರು. ಅವರಿಗೆ ಬೇಕಾದ ಆಹಾರ ಮತ್ತು ಇತರ ಸೌಕರ್ಯಗಳನ್ನೊದಗಿಸಲಾಗಿದೆ. ಅವರ ಸತ್ಕಾರ್ಯನಿರತರಾದ ಕಸ್ತೂರಿ ಬಾಯಿಯವರೂ, ಅವರ ವೈದ್ಯಕೀಯ ಸಲಹೆಗಾದರೂ, ಮತ್ತು ಕೆಲ ಸಂಗಡಿಗರೂ, ಅವರೊಡನೆ ಇರುವರು.

ವರ್ಕಿಂಗ್‌ಕಮಿಟೀ ಸದಸ್ಯರೂ ಕೂಡ ಸರಿಯಾದ ಸ್ಥಳಗಳಲ್ಲಿದ್ದು ಅವರಿಗೆ ಅಗತ್ಯವಾದ ಸೌಕರ್ಯಗಳೆಲ್ಲಾ ಒದಗಿಸುತ್ತಿರುವಾಗಿದೆ. ಇಂಡಿಯನ್ ಮೆಡಿಕಲ್ ಸರ್ವಿಸಿನ ಒಬ್ಬ ಅಧಿಕಾರಿಗಳ ಪೀಲ್ಬಿಚಾರಣೆಯಲ್ಲಿದ್ದಾರೆ. ತಮ್ಮ ಕುಟುಂಬೀಕರೊಡನೆ ಸ್ವಂತ ವಿಷಯಗಳಬಗ್ಗೆ ಇನಿಬೆಲ್ಲಾ ಪತ್ರ ವ್ಯವಹಾರ ನಡಿಬಹುದು.

ಎಲ್ಲರ ಆರೋಗ್ಯವೂ ಚೆನ್ನಾಗಿದೆ.

ಸಾಮೂಹಿಕ ಚಳವಳಿ.

ಒರಿಸ್ಸಾ :— ಬಾರಿ ಎಂಬ ಊರಿನಲ್ಲಿದ್ದ ಸೇವಾಸಂಘಾಶ್ರಮವನ್ನು ಸರಕಾರದವರು ವಶಪಡಿಸಿಕೊಂಡಿರುವರು. ಗವರ್ನರರು ಬಾಲಸೂರು ಜಿಲ್ಲೆಯಲ್ಲಿ 12 ಹಳ್ಳಿಗಳಿಗೆ 6000 ರೂ. ಕಟಕ್ ಜಿಲ್ಲೆಯ 4 ಹಳ್ಳಿಗಳಿಗೆ 5000 ರೂ. ಪೈಸುಗಂದಾಯ ವಿಧಿಸಿರುವರು.

ಸರಹದ್ದ ಪ್ರಾಂತ್ಯ :— ಕೋಪ್ಟು ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳು ಸತ್ಯಾಗ್ರಹಕರ ಪತ್ರಗಳನ್ನು ಹಂಚಿದರೆಂಬ ಅಪರಾಧದ ಮೇಲೆ ಸೆರೆಯಾಗಿರುತ್ತಾರೆ.

ಬೊಂಬಾಯಿ :— ಕಾಲೇಜು ಮತ್ತು ಶಾಲೆಗಳಿಗೆ ಹೋಗದೆ ಗೈರ ಹಾಜರು ಇರುವ ವಿದ್ಯಾರ್ಥಿಗಳ ಹೆಸರನ್ನು ಸೆಪ್ಟಂಬರ್ 1 ನೆಯ ತಾರೀಖಿಂದ ಹೊಡೆದುಹಾಕಬೇಕೆಂದು ಬೊಂಬಾಯಿ ಸರಕಾರದವರು ಆಜ್ಞಾಪಿಸಿರುತ್ತಾರೆ.

ರಾಯಲ್‌ನಲ್ಲಿ
'ಮಾಸೂಂ'
(3-9-42 ಗುರುವಾರದಿಂದ)
ಇದಾನಪೇಲೆ ರಣಜಿತ ಚಿತ್ರ
'ಪರದೇಶಿ' – ಸಚ್ಚಿದ 'ಸ್ವಾಮಿ'
ಪ್ರದರ್ಶಿತವಾಗಲಿದೆ.



412

ಕಾಂಗ್ರೆಸ್ ಕಾರ್ಯಕ್ರಮ

ಮದ್ರಾಸ್ ಸರಕಾರದ ಪ್ರಕಟನೆ.

ಮದ್ರಾಸ್ ಆಗಸ್ಟ್ 28.

ಮದ್ರಾಸ್ ಸರಕಾರದವರು ಈ ಕೆಳಗಿನ ಪ್ರಕಟನೆಯನ್ನು ಪತ್ರಿಕೆಗಳಿಗೆ ಕೊಟ್ಟಿರುವರು. ರೈಲ್ವೆ ಮತ್ತು ಸರಕಾರದ ಆಸ್ತಿಪಾಸ್ತಿಗಳನ್ನು ಲೂಟಿ ಮತ್ತು ಅಗ್ನಿ ಕಾಂಡಗಳ ಮೂಲಕ ನಷ್ಟಪಡಿಸುವ ಕಾರ್ಯವು ಸ್ಥಾನಿಕ ತುಂಟರಿಂದ ನಡೆದ ಕಾರ್ಯವೇ ಹೊರತು ಕಾಂಗ್ರೆಸ್ ಮುಖಂಡರಿಂದ ಪುಂಜೂರಾಗಿಲ್ಲವೆಂದು ಅನೇಕಸಲ ಹೇಳಲಾಗಿದೆ. ಸರಕಾದ ನರ ವಶದಲ್ಲಿರುವ ಪತ್ರಗಳಿಂದ ಈ ವಿಷಯಗಳು ಸ್ಪಷ್ಟವಾಗುತ್ತವೆ.

(1) ಆಂಧ್ರ ಪ್ರಾಂತೀಕ ಕಾಂಗ್ರೆಸ್ ಸಮಿತಿಯವರು ಎಲ್ಲಾ ತೆಲುಗು ಜಿಲ್ಲಾ ಕಾಂಗ್ರೆಸ್ ಸಮಿತಿಗಳವರಿಗೆ ಕಾಯ್ದೆ ಭಂಗ ಚಳವಳಿಯನ್ನು ನಡೆಸುವ ಸಲುವಾಗಿ ಕೊಟ್ಟ ಸೂಚನೆಗಳಲ್ಲಿ ಈ ಕೆಳಗಿನ ಚಟುವಟಿಕೆಗಳೂ ಅಡಕವಾಗಿವೆ.

(a) ಟೆಲಿಫೋನ್ ಮತ್ತು ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸುವದು (d) ರೈಲುಕಂಬಿಗಳನ್ನು ಕೆಡೆಯುವುದು ಮತ್ತು ಸೇತುವೆಗಳನ್ನು ನಾಶ ಪಡಿಸುವುದು, (c) ಟ್ರೇಸುಗಳಲ್ಲಿ ಅಲಾರಂಚೈನು ಎಳೆಯುವುದು ಮತ್ತು ಟಿಕೆಟ್ ಇಲ್ಲದೆ ರೈಲುಗಳಲ್ಲಿ ಪ್ರಯಾಣ ಮಾಡುವುದು, (b) ಪೋಲೀಸ್ ಮತ್ತು ಸರಕಾರೀ ಕಾರ್ಯಾಲಯಗಳಿಗೆ ಹೋಗಿ ಸರಕಾರೀ ನವಕರರಿಗೆ ರಾಜೀನಾಮೆ ಕೊಡಲು ಒತ್ತಾಯ ಪಡಿಸುವುದು, (e) ಹರತಾಳಗಳಿಗೇರ್ಪಡಿಸುವುದು, (f) ಮದ್ಯಸಾನದಂಗಡಿಗಳ ಪಿಕೆಟಿಂಗ್ ಏರ್ಪಡಿಸುವುದು, (g) ಸರಕಾರದ ಯುದ್ಧ ಯತ್ನಕ್ಕೆ ಅಡ್ಡಿ ಮಾಡುವುದು,

(2) ಇಂಥಾ ಸೂಚನೆಗಳು ತಮಿಳ ನಾಡು ಮತ್ತು ಕೇರಳ ಪ್ರಾಂತೀಕ ಕಾಂಗ್ರೆಸ್ ಸಮಿತಿಯನರಿಂದಲೂ ಸೂಚಿತ ಸಾಗಿವೆ.

(3) ಜೂಲೈತಿಂಗಳ ಕೊನೆಯಭಾಗದಲ್ಲಿ ಆಂಧ್ರ ಪ್ರಾಂತೀಕ ಕಾಂಗ್ರೆಸ್ ಸಮಿತಿಯನರೂ, ಆಗಸ್ಟ್ 6ನೆಯ ತಾರೀಖಿನ ಪೂರ್ವದಲ್ಲಿ ತಮಿಳು ಪ್ರಾಂತೀಯ ಕಾಂಗ್ರೆಸ್ ಸಮಿತಿಯನರೂ, ಈ ಸೂಚನೆಗಳನ್ನು ತಯಾರಿಸಿದರು. ಎರಡೂ ಸಂದರ್ಭಗಳಲ್ಲೂ, ಬೊಂಬಾಯಿಯಲ್ಲಿ ಆಗಸ್ಟ್ 7ನೆಯ ತಾರೀಖಿನ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಕೂಡುವ ಮುಂಚೆಯೇ ಇವು ನಡೆದವು.

"ರೈಲ್ವೆ ಆಸ್ತಿಗಳನ್ನು ನಷ್ಟಪಡಿಸಬೇಕು. ಟೆಲಿಫೋನು ಮತ್ತು ಟೆಲಿಗ್ರಾಫ್ ತಂತಿಗಳನ್ನು ಹರಿಯಬೇಕು. ಸರಕಾರದ ಇತರ ಆಸ್ತಿಯನ್ನು ನಾಶಪಡಿಸಬೇಕು" ಎಂಬಂತಗಳನ್ನು ಸಮರ್ಥಿಸುವ ಭಾಷಣಗಳು ಕಾಂಗ್ರೆಸ್ ಸಮಿತೀ ಅಧಿಕಾರಿಗಳಿಂದ ಕೊಡಲ್ಪಟ್ಟುದನ್ನು ಸರಕಾರದವರು ವರದಿಗಳಿಂದ ಗಮನಿಸಿರುವರು. ತಮ್ಮಲ್ಲಿರುವ ಸಾಹಿತ್ಯದಿಂದ ಈ ಸೂಚನೆಗಳು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರಿಂದ ಹುಟ್ಟಿದವೆಂಬುದಕ್ಕೆ ಸರಕಾರದವರಿಗೆ ಸಂದೇಹವೇ ಇಲ್ಲ.

ದೆಹಲಿ :— ಶ್ರೀ ದೇವದಾಸ ಗಾಂಧಿಯವರನ್ನು ಬಂಧಿಸಿದುದು ಅನ್ಯಾಯವೆಂತ ತೀರ್ಪು ಕೊಟ್ಟಿದ್ದರಿಂದ ಅವರನ್ನು ಬಿಡುಗಡೆ ಮಾಡಲಾಗಿದೆ. ಶ್ರೀಮತಿ ಅಸಫ ಅಲಿಯವರು ತಿಂಗಳೊಳಗೆ ಹಾಜರಾಗಬೇಕೆಂದು ಆಜ್ಞೆ ಹೊರಟಿದೆ. ಚಾಂದುಲಾಲರ ಆಸ್ತಿಯನ್ನು ಜಪ್ತಿ ಮಾಡಿ ಅವರೂ ತಿಂಗಳೊಳಗೇ ಹಾಜರಾಗಲು ಆಜ್ಞೆಯಾಗಿದೆ. ಇಲ್ಲಿಯ ಸುಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ದೇಶಬಂಧುಗುಪ್ತರವರು ಬಂಧಿಸಲ್ಪಟ್ಟಿರುವರು. ನೂತನ ನಿಯಮಗಳು ಜಾರಿಗೆ ಬಂದಕಾರಣ ಅರ್ಜುನ ಮತ್ತು ತೇಜ್ ಎಂಬೆರಡು ದಿನ ಪತ್ರಿಕೆಗಳು ಪ್ರಕಟನೆ ನಿಲ್ಲಿಸಿವೆ.

ಬೊಂಬಾಯಿ :— ಇಲ್ಲಿ ಶಾಂತತೆ ಇರುವುದೆಂದು ಹೇಳಲಾಗಿದೆ. ಮಿಲ್ ಭಾಗದಲ್ಲಿ ಗಲಾಟೆ ಇಲ್ಲ. ಸ್ಕೂಲ್ ಕಾಲೇಜುಗಳು ತೆರೆದರೂ ಹಾಜರಿಯು ತೃಪ್ತಿಕರವಾಗಿರುವದಿಲ್ಲ.

ಅಹಮ್ಮದಾಬಾದ :— ಕರ್ಫ್ಯೂ ಆರ್ಡರ ಮತ್ತೊಂದು ವಾರದನರೆಗೆ ಹೆಚ್ಚಿಸಲಾಗಿದೆ.

ಇಂದೂರು :— ರಾಜ್ಯದ ಪ್ರಜಾಮಂಡಲವು ಶಾಸನವಿರುದ್ಧವೆಂದು ಸಾರಲಾಗಿದೆ. ಪ್ರಜಾಮಂಡಲದ 400 ಕಾರ್ಯಕರ್ತರು ಬಂಧಿಸಲ್ಪಟ್ಟಿರುವರು.

ಬಂಗಾಳ :— ತಿರಾಂಪುರದ 3 ಕಾರ್ಟ್ ಮಿಲ್‌ಗಳು ಮುಚ್ಚಲ್ಪಟ್ಟಿವೆ. ಆ ಭಾಗದಲ್ಲಿ ಶಾಸನಸಭ್ಯರೆನ್ನೊಳಗೊಂಡು 6 ಜನರ ಬಂಧನವಾಗಿದೆ. ಭಾರಿಸಾಲದಲ್ಲಿ ಕೆಲವರ ಬಂಧನವಾಗಿದೆ. ಢಾಕಾದಲ್ಲಿ ಮಿಲಿಟರಿಯವರೂ, ಸೆಟ್ರೋಲಿನವರೂ ಕಾವಲು ಮಾಡುತ್ತಿರುವರು.

ಯು. ಪಿ. :— ಗೋರಖಪುರ ಜಿಲ್ಲೆಯಲ್ಲಿ ಸಣ್ಣ ನೇಕುನೆಯನ್ನು ಮುರಿಯುತ್ತಿವ್ವ ಗುಂಪಿನವೇಳೆ ಗುಂಡು ಹಾರಿಸಲಾಯ್ತೆಂದೂ, ಒಬ್ಬನು ಸತ್ತನೆಂದೂ. ಮತ್ತೊಬ್ಬನಿಗೆ ಘಾಯವಾಯ್ತೆಂದೂ. ಒಂದು ಪ್ರಕಟನೆಯು ಹೇಳುತ್ತದೆ. ಮತ್ತೊಂದು ಕಡೆಯಲ್ಲಿಯೂ ಗುಂಡು ಹಾರಿಸಲಾಗಿ ಒಬ್ಬನು ಸತ್ತನು. ಮದುರಾ, ಅಲ್ಮೋರಾ, ಬಾಲಿಯಾಗಳಲ್ಲೂ ಗಲಭೆಗಳಾಗಿವೆ. ಗೋರಖಪುರ ಜಿಲ್ಲೆಯ ಮ್ಯಾಜಿಸ್ಟ್ರೇಟರು ಪ್ರಕಟನೆ ಹೊರಡಿಸಿ ತಮ್ಮ ಜಿಲ್ಲೆಯಲ್ಲಿ ನಡೆದ ಗುಂಡಿನ ಪ್ರಕರಣ ವಿವರಿಸಿರುವರು.

ಮರಳಿನ ಚೀಲಗಳು ಮತ್ತು ಇಟ್ಟಿಗೆ ಗೋಡೆಗಳು

ನಿಮ್ಮ ಪ್ರಾಣಸಂರಕ್ಷಣೆ ಮಾಡಬಹುದು.

ಅವು ನಿಮ್ಮನ್ನು ರಕ್ಷಿಸಬಲ್ಲವು

ನೀವು ನಮ್ಮಲ್ಲಿ ಜೀವವಿಮೆ ಮಾಡಿಸಿದರೆ ನಾವು ನಿಮ್ಮ ಬಂಧುಗಳನ್ನು ರಕ್ಷಿಸುವೆವು.

ಯುದ್ಧಕಾಲದ ಅಪಾಯವನ್ನು ಸೈಪ್ಯಿಯಲ್ಲಿಟ್ಟೂ ಸಹ ಪ್ರತ್ಯೇಕ ಪಾಲ್ಸಿಯಿಲ್ಲದೆ ನಾಗರೀಕರ ಜೀವವಿಮೆಯನ್ನು ಭದ್ರಗೊಳಿಸಲಾಗಿದೆ.

ಇಲ್ಲಿಯನರಿನಿಗೆ ಸಲ್ಲಿಸಿರುವ ಹಕ್ಕುಗಳ ಹಣ ರು. 26,00,00,000
ಜಾರಿಯಲ್ಲಿರುವ ವಿಮಾಪತ್ರಗಳ ಮೊತ್ತ ರು. 85,50,00,000
ವಾರ್ಷಿಕ ಆದಾಯ 1941 ರಲ್ಲಿ ಸುಮಾರು ರು. 5,00,00,000
ನಿಧಿಯ ಪ್ರಮಾಣ ಸುಮಾರು ರು. 30,00,00,000

ಓರಿಯಂಟಲ್

ಗವರ್ನಮೆಂಟು ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ ೧೮೭೪. ಮುಖ್ಯ ಕಛೇರಿ ಬೊಂಬಾಯಿ

ಶಾಖೆ :—

ಓರಿಯಂಟಲ್ ಬಿಲ್ಡಿಂಗ್ಸ್ ಆರ್ಮೀನಿಯನ್ ಬೀದಿ, ಜಿ. ಟಿ. ಮದ್ರಾಸು.

ಇನ್ಸ್‌ಪೆಕ್ಟರರ ಆಫೀಸು:- **೩೧೨ ರೂಪರ್ಟಸ್ ಗೇಟ್ ಬ್ರಾಸಪೇಟೆ ಬಳ್ಳಾರಿ.**

ಶ್ರೀಮತಿ ರಂಗಮ್ಮನವರ ನಿಧನ.

[ಶ್ರೀಮಾನ್ ವಿಠಲಶೇಷಪ್ಪನವರ ಧರ್ಮಪತ್ನಿ]

ಬಳ್ಳಾರಿಯ ಸುಪ್ರಸಿದ್ಧ ಸರ್ರಾಫರೂ, ಸನಾತನಧರ್ಮ ಪೋಷಕರೂ, ನಿಗರ್ವಿ ಮಾನುಷ್ಯಾಸನ ಪ್ರಮುಖಿತರೂ, ದಾನಶೂರರೂ, ದಯಾಸಾಗರರೂ, ಆದ **ಶ್ರೀಮಾನ್ ವಿಠಲ ಶೇಷಪ್ಪಶ್ರೇಷ್ಠಿಯವರ** ಧರ್ಮಪತ್ನಿಯವರಾದ **ಶ್ರೀಮತಿ ರಂಗಮ್ಮನವರು** ತಮ್ಮ ೭೦ನೆಯ ವಯಸ್ಸಿನಲ್ಲಿ ಸ್ವರ್ಗಾನುವನ್ನೈದಿದರೆಂದು ತಿಳಿಸಲು ವಿಷಾದವಾಗುತ್ತದೆ. ಶ್ರೀಮತಿಯವರು ದೈವಭಕ್ತಿಪರಾಯಣರಾಗಿ ಸಕಲಸದ್ಗುಣಗಳಿಂದೊಡಗೂಡಿ ಸದಾ ಪತಿ ಸೇವೆಯಲ್ಲಿ ನಿಮಗ್ನರಾಗಿ ಅವರ ದಾರ್ಮಿಕ ಕಾರ್ಯಗಳಿಗೆ ಆಧಾರ ಸ್ತಂಭವಂತಿದ್ದರು. ಇವರಿಗೆ ಒಬ್ಬ ಮಗನೂ, ಮಗಳೂ, ಮೊಮ್ಮಕ್ಕಳೂ, ಮರಿಮಕ್ಕಳೂ ಇದ್ದಾರೆ. ಶ್ರೀ ಶೇಷಪ್ಪನವರ ಅಪಾರ ದುಃಖದಲ್ಲಿ ಅವರ ಮಿತ್ರರಾದ ನಾವೆಲ್ಲಾ ಭಾಗಿಗಳಾಗಿದ್ದೇವೆ.

ಶ್ರೀಮತಿ ರಂಗಮ್ಮನವರ ಆತ್ಮಕ್ಕೆ ಶಾಂತಿ ಇರಲಿ.

ಸರಲ್ಸಂಖ್ಯಾಸ್ಥೂಲ ಲಂಬ ಶಂಖ್ಯ ಶ್ರೀಪತಿಸಖ ।
ಧರ್ಮಪತ್ನೀ ವಿಠಲಶೇಷಾಖ್ಯ ಸ್ವರ್ಗಯೋಷೇ ಮುಖೀಮಜೇ ॥ ೧ ॥
ಭಕ್ತಾನಾಂದಾಯ ಮಾಯಿಷ್ಯೈ ಸಾಧ್ವೀಸದ್ಧರ್ಮಕರ್ಮಣಿ ।
ಕೃಷ್ಣಾಂಘ್ರಿಸೇವನೇನಸ್ಯ ತವಾಸಾ ಶಾಂತಯೇ ಸ್ವಧಾ ॥ ೨ ॥ [ಸರಲಾಂಕನಿ]

ಬಳ್ಳಾರಿ ಜಿಲ್ಲಾ ವಾರ್ತೆಗಳು

ಹೊಸಪೇಟೆ.— ಪುರಸಭೆಯವರು ಕಾಂಗ್ರೆಸ್ ಮುಖಂಡರನ್ನು ಹಿಡಿದ ನಿಷೇಧವನ್ನು ವ್ಯಕ್ತಪಡಿಸಲು ಕಲಸಿಮ ನಗಳು ಸಭೆಯನ್ನು ಸ್ಥಗಿತವಾಗಿ ದೇಶದಲ್ಲಿ ನಡೆದಿರುವ ಹಿಂಸಾಕೃತ್ಯಗಳನ್ನು ಖಂಡಿಸಿದರು

ಬಳ್ಳಾರಿ.— ಸೂರಾರನಯ ಯುದ್ಧ ನಾರ್ಷಿಕೋತ್ಸವವು ವಾರ್ಡಲಾ ಹೈ ಸ್ಕೂಲಿನಲ್ಲಿ ಜಿಲ್ಲಾಕಲೆಕ್ಟರವರ ಅಧ್ಯಕ್ಷತೆಯಲ್ಲಿ 3ನೆಯ ತಾರೀಖು ನೇರವೆತ್ತು. ಶ್ರೀ ಚಂದ್ರಶೇಖರ ಶಾಸ್ತ್ರಿ ಮಿಸೆಸ್ ಭಾಸ್ಕರನರು ಭಾಷಣಗೈದರು.

ಶಿರುಗುಪ್ಪ ತಾಲೂಕು

ಉಪಾಧ್ಯಾಯರ ಸಂಘ.

30-8-42 ನೆಯ ತಾರೀಖು ಕರೂರಲ್ಲಿ ಸಭೆಯಿದೆ ಎಂದು ನೈಕಟವಾಗಿದ್ದರೂ ಸಹ ಸಂಘದ ಸದಸ್ಯರಾಗಲಿ ಇತರ ಕಾರ್ಯದರ್ಶಿಗಳಾಗಲಿ ಯಾರೂ ಹಾಜರಾಗದೆ, ನಿರುತ್ಸಾಹಪಡಿಸಿದರು. ಹೀಗಾಗಿ ಮೊದಲಿದ್ದ ಸಂಘವು ಕ್ಷೀಣಸ್ಥಿತಿಗೆ ಬರುವುದು. ಈ ಸಭೆಯನ್ನು 27-9-42 ಭಾನುವಾರ ರಾಮವಾಸವೂರಿದಲ್ಲಿ ಕೂಡಿಸಲು ನಿಶ್ಚಯವಾಗಿದೆ. ಎಲ್ಲರೂ ಬರಲು ಸಂಘಾಧ್ಯಕ್ಷರಾದ ಶ್ರೀ ಮುಕ್ಕಣ್ಣಯ್ಯನವರು ಕೋರುತ್ತಾರೆ

ನೇಮಕಲ್ಲು.

ಇಲ್ಲಿನ ಕಾಂಗ್ರೆಸ್ ಕಾರ್ಯಕರ್ತರು ಕಾಂಗ್ರೆಸ್ ನಾಯಕರ ಬಂಧನದನಂತರ ಅಂದರೆ 10 ನೆಯ ತಾರೀ ನಿಂದ 24 ನೆಯ ತಾರೀ ವರೆವಿಗೂ ಕಾಂಗ್ರೆಸ್ ಕಾರ್ಯಕ್ರಮಗಳನ್ನೆಲ್ಲಾ ಭಾಗವಹಿಸಿ ನಗರಜೋಣ ತಿಮ್ಮಾಪುರಂ ಕುಂದನಗುರ್ತಿ ಸಂಗಾಲ ಬಲ್ಲೂಣಿ ಗ್ರಾಮಗಳಲ್ಲಿ ಪ್ರಚಾರಮಾಡಿ ಬಂದರು

ಜಿಲ್ಲಾಬೋರ್ಡು ಸಭೆ — ಶ್ರೀ ಮಹದೇವ ದೇಶಾಯಿಯವರ ನಿಧನದ ಬಗ್ಗೆ ದುಃಖಸೂಚಕ ನಿರ್ಣಯವಾಗಿ ಕಾಂಗ್ರೆಸ್ ಮುಖಂತರಸ್ಥ ಹಿಡಿದು ವಕ್ಕ ನಿಷೇಧವನ್ನು ತೀರ್ಮಾನವಾಗಿ ಸಭೆಯು ೧೦ನೆಯ ತಾರೀಗೆ ಮುಂದೂಡಿಯಿತು.

144 ನೆಯ — ಸೆಕ್ಷನ್ ಬಳ್ಳಾರಿ ಜಿಲ್ಲೆಯಲ್ಲಾ ಸಾಮೂಹಿಕ ಚಳವಳಿಗೆ ಸಂಬಂಧಿಸಿದ ಪೆರವಣಿಗೆ ಸಭೆಗಳಿಗೆ ಎರಡು ತಿಂಗಳುಕಾಲ ಅನ್ವಯಿಸಲ್ಪಟ್ಟಿದೆ.

ಆದವಾನಿ—ಶ್ರೀ ವಾಸುದೇವಾಚಾರ್ಯುಲುಸಿಂಗ, ನೋಸುಯೋಜ್ಞ, ಬಂರ್ಲಿ, ತಿಮ್ಮಪ್ಪ ಮತ್ತಿರೀ ಕಾಂಗ್ರೆಸ್ ಕಾರ್ಯಕರ್ತರು ಬಂಧಿಸಲ್ಪಟ್ಟಿರುವರೆಂದು ಗೊತ್ತಾಗಿದೆ ಕಾರಣ ಗೊತ್ತಿಲ್ಲ.

ಬಳ್ಳಾರಿ ನಗರದಲ್ಲಿ ಬಂಧನ.

ಶ್ರೀ ಟಿ. ಸುಬ್ರಮಣ್ಯಂ ಶ್ರೀ ಡಿ. ಯಜ್. ವೆಂಕೋಬರಾಯರು 2ನೆ ತಾ॥ ಸಂರಕ್ಷಣೆ ಕಾಯ್ದೆಯನ್ವಯ ಸೆರೆ ಹಿಡಿಯಲ್ಪಟ್ಟು ವೆಲ್ಲೂರು ಜೈಲಿಗೆ ಕರೆದೊಯ್ದರು.



ಕಾಶ್ಮೀರು ಅರುಕ್

(ಮನೆಯ ವೈದ್ಯ)

ನೆಗಡಿ, ಕೆಮ್ಮು, ಪುಬ್ಬಸ, ಶೀತಭೇದಿ. ಭಳಿಜ್ವರ, ಆಜೀರ್ಣ ಮೊದಲಾದ ವ್ಯಾಧಿಗಳಿಗೆ ದಿವ್ಯಾಮೃತ ಎಲ್ಲಾ ನೋವುಗಳಿಗೆ ಚೇಳು, ಹಾವು ಕಚ್ಚಿದುದಕ್ಕೆ ದಿವ್ಯೌಷಧ.

ಎಲ್ಲಾ ಷಾಪುಗಳಲ್ಲಿ ದೊರೆಯುತ್ತದೆ.

ಪಿ.ಬಿ. ಯಸ್. ಅಂಡ್ ಸನ್ಸು, ಬಳ್ಳಾರಿ.

ಮಹಾತ್ಮರ ಜನ್ಮದಿನೋತ್ಸವ

ಚರಖಾ ಜಯಂತಿ.

[ಅ. ಭಾ. ಚ. ಸಂಘ ಕರ್ನಾಟಕ ಶಾಖೆಯಿಂದ] ಮಹಾತ್ಮ ಗಾಂಧಿಯವರ ಸಲಹೆಯಂತೆ ಈ ವರ್ಷದಿಂದ 'ಗಾಂಧೀ ಜಯಂತಿ'ಯನ್ನು 'ಚರಖಾ ಜಯಂತಿ'ಯೆಂದು ಆಚರಿಸತಕ್ಕದ್ದೆಂದು ಅ. ಭಾ. ಚರಖಾಸಂಘದ ಕಾರ್ಯಕಾರಿ ಮಂಡಲದವರು ಕಳೆದ ತಿಂಗಳ ವರ್ಧಾ ಅಧಿವೇಶನದಲ್ಲಿ ನಿಶ್ಚಯಿಸಿ ಈ ವರ್ಷ ಜೂಲೈ 26ನೆ ತಾರೀಖಿನಿಂದ ಅಕ್ಟೋಬರ್ 7-ನೆ ತಾರೀಖಿನವರೆಗೆ 74 ದಿನಗಳವರೆಗೆ ಅದನ್ನು ಆಚರಿಸಬೇಕೆಂದು ಸೂಚಿಸಿರುವರು. ಈ ವಿಷಯವಾಗಿ ಈ ಮೊದಲೇ ಒಂದು ಪ್ರಕಟನೆಯನ್ನು ಹೊರಡಿಸಿರುವೆವು.

ಸೂತ್ರವಡಿಸಿದ ಕಾರ್ಯಕ್ರಮವನ್ನು ಸಂಘಟಿತ ರೀತಿಯಿಂದ ಕರ್ನಾಟಕ ಎಲ್ಲ ಸ್ಥಳಗಳಲ್ಲಿಯೂ ನೆರವೇರಿಸಬೇಕೆಂದು ನಮ್ಮ ಶಾಖೆಯ ಕಾರ್ಯಕರ್ತರ ಅಭಿಪ್ರಾಯವಿದ್ದಿತು. ಆದರೆ ಸದ್ಯದ ಅಸಾಮಾನ್ಯ ಪರಿಸ್ಥಿತಿಯಲ್ಲಿ ಹಾಗೆ ಮಾಡಲು ಸಾಧ್ಯವಿಲ್ಲವಾಗಿದ ಎಂಬದು ವಿಷಾದಕರವಾದ ಸಂಗತಿಯು. ಕಾರಣ ಇಂಥ ವಿಷಮ ಪರಿಸ್ಥಿತಿಯಲ್ಲಿಯೂ, ನಾವು ನಿಧಾಯಕ ಕಾರ್ಯವನ್ನು ಉತ್ಸಾಹದಿಂದ ಕೈಕೊಂಡು ನೆರವೇರಿಸಬಲ್ಲೆವೆಂಬದನ್ನು ಕಾರ್ಯತಃ ತೋರಿಸುವ ಸಂಧಿಯು ನಮಗೆ ದೊರೆತಿರುವದೆಂದು ಬಗೆದು ಎಲ್ಲರೂ ಪ್ರೇಮದಿಂದ ತಮ್ಮ ತಮ್ಮ ಕಾಣಿಕೆಯನ್ನು ಚರಖಾ ಸಂಘಕ್ಕೆ ಸಲ್ಲಿಸಬೇಕೆಂದು ವ್ಯಾರ್ಥನೆ. ಕಾಣಿಕೆಗಳನ್ನು ಹಳೇಹುಬ್ಬಳ್ಳಿಯ ನಮ್ಮ ಪ್ರಾಂತಿಕ ಕಛೇರಿಗಾಗಲಿ, ನಮ್ಮ ಖಾಧೀ ಭಾಂಡಾರ ಅಥವಾ ಹುಬ್ಬಳ್ಳಿ ಕೇಂದ್ರಗಳಿಗಾಗಲಿ ಕೊಟ್ಟು ಪಾವತಿ ಪಡೆಯಬಹುದು. ಭಾಂಡಾರಗಳಲ್ಲಿ ಅಥವಾ ಕೇಂದ್ರಗಳಲ್ಲಿ ಹಣ ಕೊಟ್ಟವರಿಗೆ ಸ್ಥಳಸ್ಥಾಪಕರು ತಾತ್ಪುರ್ತಿಕ ಪಾವತಿಗಳನ್ನು ಕೊಡುವರು. ಈ ವಿಷಯವಾಗಿ ಏರ್ಪಡ್ಪಗೊಳಿಸಿದ ಮುದ್ರಿತ ಪಾವತಿಗಳನ್ನು ನಮ್ಮ ಕಛೇರಿಯಿಂದ ಹಿಂದುಗಡೆ ಕಳಿಸುವೆವು. ಕಾಣಿಕೆಯನ್ನು ಯಾವ ರೂಪದಲ್ಲಿ ಕೊಡಬಹುದೆಂಬದನ್ನು ಇಸ್ಕೊಮ್ಮೆ ಈ ಕೆಳಗೆ ಕೊಡುವೆವು.

೧. ನಿಯಮವಿಂದ ನೂಲುವವರು ಒಂದು ಲಡಿ, ಅಂದರೆ ೬೪೦ ತಾರು (೮೫೫ ಗಜ) ನೂಲು ಕೊಡಬೇಕು

೨. ಮಹಾತ್ಮಾ ಗಾಂಧಿಯವರಿಗೆ ಅವರ ೭೪ ನೇ ಜನ್ಮದಿನ ನಿಮಿತ್ತವಾಗಿ ಸಲ್ಲಿಸತಕ್ಕ ನಿಧಿಗೆ ಅನುಪಮ ಭೋಗ್ಯತೆಯ ಮೇರೆಗೆ.

೭೪ ಡಜ್ಜು (ಮೂರು ಕಾಸು)
೭೪ ಆಣೆ
೭೪ ಪಾವಲಿ (ಸಾಲ್ವಾಣೆ)
೭೪ ರೂಪಾಯಿ

ಕಾರ್ಯದ ಮಹತ್ವವನ್ನರಿತು ನಮ್ಮ ಕರ್ನಾಟಕಿಕ್ಕರು ಈ ನಿಧಿಗೆ ತುಂಬಾ ಸಹಾಯವಾಹುನರೆಂದು ನಮ್ಮ ನಂಬಿಕೆ ಇದೆ.

ಕರಾಚಿ: 3 ಕಾಂಗ್ರೆಸ್ ಕಾರ್ಯಕರ್ತರೂ, 2 ಸ್ತ್ರೀಯರೂ, ಬಂಧಿತರಾಗಿ ಜೈಲಿಗೆ ಗುರಿಯಾದರು

ಲಾಹೋರ್:— ಅಲ್ಲಿಯ ನರ್ತಕರು ಒಂದು ನಿರ್ಣಯಮಾಡಿ ದಬ್ಬಾಳಿಕೆಯಿಂದ ಉಪಯೋಗವಾಗುವದಿಲ್ಲವೆಂತಲೂ ಸರ್ಕಾರದವರು ಶಾಂತಿಯ ಯತ್ನಗಳಿಗೆ ಕೈಹಾಕಬೇಕೆಂತಲೂ ಹೇಳಿದ್ದಾರೆ.

ಬಡೋದ:— ಕಳೆದವಾರ ಎಂಟು ಪೋಲೀಸರಿಗೆ ಬೆಂಕಿಹಚ್ಚಿ ಸುಟ್ಟಕಾರಣ ಸರಕಾರದವರು 14 ಹಳ್ಳಿಗಳಮೇಲೆ 45 ಸಾವಿರ ದಂಡವನ್ನು ವಿಧಿಸಿರುವರು.

ಮಧ್ಯಪ್ರಾಂತ:— ಜೀಮೂರು ಭಾಗವಲ್ಲಿ ವಿಧಿಸಿದ ದಂಡದಲ್ಲಿಕೆ 22 ಸಾವಿರ ರೂ. ವಸೂಲಾಗಿದೆ. ಬೀಟಲ್ ಹಳ್ಳಿಯಲ್ಲಿ ಪೋಲೀಸರು ಗುಂಡು ಹಾರಿಸಿದರು. ಜಬ್ಬಲಪೂರ ಭಾಗದ ಘನಕೋಟದಲ್ಲಿ ಪೋಲೀಸ್ ಸ್ಟೇಷನ್ನಿಗೆ ದಾಳಿಯಾದಕಾರಣ 40 ಜನರನ್ನು ಬಂಧಿಸಿದ್ದಾರೆ.

ಬೊಂಬಾಯಿ:— ಸರಕಾರದ ಪ್ರಕಟನೆಯ ಪ್ರಕಾರ ಮೂವರು ಹಿಂದೂ ಯುವತಿಯರ ಅತ್ಯಾಚಾರವು ಮೂವರು ಸಿಪಾಯಿಗಳಿಂದ ನಡೆದ ಪ್ರಕರಣಕ್ಕೆ ವಿಷಾದಿಸುತ್ತಾ ಮುಂದೆ ಇಂಥಾ ಘಟನೆಗಳು ಆಗದಂತೆ ನೋಡಲಾಗುವುದೆಂದು ಹೇಳಲಾಗಿದೆ.

ಬಳ್ಳಾರಿ ಪೇಟೆ ಧಾರಣೆ.

4 -9- 42 ಶುಕ್ರವಾರ.

ಭಂಗಾರ ತೊಲೆ 1-ಕ್ಕೆ ರೂ.		55-0-0
ಸಾವರಿನ್		42-0-0
ಬೆಳ್ಳಿ 100 ತೊಲೆ ರೂ.		84-0-0
ಅರಳೆ ಭಾರಂ ...	ರೇಟು ಇಲ್ಲಾ.	
ಅರಳೆ ಮುಂಗಾರಿ 12 ಮಣಕ್ಕೆ	,,	
ಅಕ್ಕಿ 1 ರೂ. ಗೆ	4 ಇಂದ 5	ಸೇರು
ಬೇಳೆ ,, ...	3½	,,
ಗೋಧಿ ,, ...	3	,,
ಜೋಳ ,, ...	10½	,,
ನವಣೆ ,, ...	14¼	,,
ಸಜ್ಜೆ ,, ...	10½	,,
ನೆಲಗಡಲೆ .	ರೇಟುಯಿಲ್ಲ.	
ಸಕ್ಕರೆ ವೀಸ	0—8-6	
ಬೆಲ್ಲ	20-0-0	
ಚಿಮ್ಮಿ ಎಣ್ಣೆ	4-12-6	

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ:— **ಬಳ್ಳಾರಿ.**

ಒಟ್ಟು ವ್ಯವಹಾರದ ಸೊತ್ತ.

31—7—41	31—7—42
ರು. 1,60,292-13-4	ರು. 2,71,722-10-10

ನಮ್ಮಲ್ಲಿ ಸರ್ವ ವಿಧವಾದ ಬ್ಯಾಂಕಿಂಗ್ ವ್ಯವಹಾರವು ನಡೆಯುತ್ತದೆ. ಹಿಂದೂದೇಶದ ಯಾವ ಭಾಗದಲ್ಲಾದರೂ ನಿಮಗೆ ವ್ಯಾಪಾರೀ ಸೌಕರ್ಯವನ್ನೊದಗಿಸಿಕೊಡುತ್ತೇವೆ. ಭಂಗಾರ ನುತ್ತು ಇತರ ಉಪಯುಕ್ತ ಮಾಲಿನ ಮೇಲೆ ಅಲ್ಪದರದ ಬಡ್ಡಿಯಿಂದ ಸಾಲವು ದೊರೆಯುತ್ತದೆ. ಸಮಕ್ಷಮ ಬಂದು ಎಲ್ಲಾ ತಿಳಿದುಕೊಳ್ಳಿರಿ.

ಶಾಖೆಗಳು:— **1 ತಿಮ್ಮಸಚರ್ಲ.**

2 ಕೊಟ್ಟೂರು. 3 ಉರವಕೊಂಡ. 4 ಪತ್ತಿಕೊಂಡ. 5 ಹರಪನಹಳ್ಳಿ

ಹೆಚ್. ಶೇಷಾರಾಪುರೆಡ್ಡಿ, ಬಿ. ಎ. ಬಿ. ಎಲ್ (ಎಂ. ಎಲ್. ಎ.)
ಡೈರೆಕ್ಟರುಗಳ ಬೋರ್ಡು ಅಧ್ಯಕ್ಷರು.

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ಯುದ್ಧ ವಾರ್ತೆಗಳು.

ರಷ್ಯಾ :— ಸ್ಟಾಲಿನ್‌ಗ್ರಾಡ ಭಾಗದಲ್ಲಿ ಜರ್ಮನರ ಉಗ್ರತೆಯ ಸ್ವಲ್ಪವಾದರೂ ಕಡಮೆಯಾಗಿಲ್ಲ. ಕೋಟೆಲಿಂಕೋ ಭಾಗದಲ್ಲಿ ಜರ್ಮನರು ರಷ್ಯನರ ವ್ಯೂಹವನ್ನು ಛೇದಿಸಿರುವರೆಂದು ರಷ್ಯನರ ವ್ರಕಟನೆಯು ಹೇಳುತ್ತಿದೆ. ಪಶ್ಚಿಮ ಕಾಕಸಸ್ ಭಾಗದಲ್ಲಿ ಜರ್ಮನರು ಕಾಕಸಸ್ ಸರ್ವತವನ್ನು ದಾಟಿ ಸೊವಾರಿಸಿನ್ಸ್ಕ ಟುವಾಪ್ಸೆಗಳನ್ನು ಆಕ್ರಮಿಸಲು ಸಾಹಸಪಡುತ್ತಿರುವರು. ಬಂದುಕಡೆ ಟೆರಾಕ ಸಮಿಯ ಮಾರ್ಗವಾಗಿ ಗ್ರೋಜ್ನಿ ಎಣ್ಣೆ ಗಣಿಗಳ ಕಡೆಗೆ ಹೋಗುತ್ತಿರುವರು.

ನ್ಯೂಗಿನಿ — ಆಸ್ಟ್ರೇಲಿಯಾದ ಉತ್ತರದಲ್ಲಿ ಮಿಲ್ನೆ ಜಲಸಾಗರದಲ್ಲಿ ಜಪಾನರಿಗೆ ಜಯವಾಗಿದ್ದು. ಈ ಕಾರಣ ಕಾಕೊಡಾ ಭಾಗದಲ್ಲಿ ಪ್ರಬಲಸೈನ್ಯ ದೊಡನೆ ಹೊಸದಾಳಯನ್ನು ಪ್ರಾರಂಭಿಸಿದ್ದಾರೆ. ಸಮುಕ್ಕೆ ಅನರ ಕೈಯೇ ಮೇಲಿದ್ದು ದಿನದಿನಕ್ಕೂ ವಾತಾವರಣವು ಬದಲಾಗುತ್ತಿದೆ. ಜಪಾನು ಸೈನ್ಯವು ನ್ಯೂಗಿನಿಯ ಈತಾನ್ಯದಲ್ಲಿ ಭದ್ರವಾಗಿ ತಳವೂರಿರುವುದು.

ಚೀನಾ - ಜಪಾನು :— ಚೀನ ಸೈನ್ಯಗಳು ಜಪಾನರ ವಶದಲ್ಲಿದ್ದ ಚಿಕಿಯಾಂಗ ನಸ್ಕೈರೇ ಪ್ರಾಂತ್ಯಗಳಿಂದ 20 ಪಟ್ಟಣಗಳನ್ನು ಹಿಂದೆಗೆದುಕೊಂಡಿರುವರು ಮತ್ತು ಕೀನಾ ಬಂದರದಮೇಲೆ ಅಮೆರಿಕಾ ವಿಮಾನಗಳು ದಾಳಿಮಾಡಿವೆ. ಚೀನಾ ಯುದ್ಧದಲ್ಲಿ ಜಪಾನರು 1,20,000 ಸೈನಿಕರನ್ನು ಉಪಯೋಗಿಸುತ್ತಿರುವರೆಂದು ಚುಂಕಿಂಗ್ ವಾರ್ತೆಯು ತಿಳಿಸುತ್ತದೆ.

ಹಿಟ್ಲರನ ಭಿನ್ನಹ :— ಮುಂದಿನ ಛಳಿಗಾಲದ ಯುದ್ಧಕ್ಕೆ ತಯಾರಿರಬೇಕೆಂದೂ ಇನ್ನೂ ಹೆಚ್ಚಿನ ತ್ಯಾಗಗಳಿಗೆ ತಯಾರಿರಬೇಕೆಂದೂ ಹಿಟ್ಲರನು ಜರ್ಮನ ಜನರಿಗೆ ಬಿನ್ನವಪ ಮಾಡಿರುತ್ತಾನೆ.

ಈಜಿಪ್ಟಿನಲ್ಲಿ ಜರ್ಮನರ ದಾಳಿ — ಜನರಲ್ ರೊಮೆಲ್ಲನು ಎಲಅಲಮೀನ ಕ್ಕೆ 30 ಮೈಲಿದೂರದಲ್ಲಿ ಎಲಅಲಮೂಟ ಎಂಬ ಸ್ಥಳದಲ್ಲಿ ಬ್ರಿಟಿಷರಮೇಲೆ ದೊಡ್ಡ ದಾಳಿಯನ್ನಾರಂಭಿಸಿದ್ದಾನೆ. ಎಲಅಲಮೂನ ಭಾಗದಲ್ಲಿ ದೊಡ್ಡ ವಾಯು ಯುದ್ಧವಾರಂಭವಾಗಿದೆ.

ಜನರಲ್ ಟೋಗೋರವರ ರಾಜೀನಾಮೆ ಜಪಾನಿನ ಪರರಾಷ್ಟ್ರಮಂತ್ರಿಗಳಾದ ಜನರಲ್ ಟೋಗೋರವರು ತಮ್ಮ ಕೆಲಸದಿಂದ ನಿವೃತ್ತರಾದರೆಂದು ಟೋಕಿಯೋ ವಾರ್ತೆಯು ತಿಳಿಸುತ್ತದೆ

ಚಿಮಣಿಎಣ್ಣೆ ಬದಲು ಮತ್ತೊಂದು ಎಣ್ಣೆ

ಹೊಸ ಶೋಧ :— ಮುಂಬಯಿ ತಾ|| 1 —ಹೈದರಬಾದ ಸಂಸ್ಥಾನದಲ್ಲಿಯ ಓರ್ವ ರಸಾಯನ್ಶಾನು ದೀನಗಳ ಸಲುವಾಗಿ ಚಿಮಣಿಎಣ್ಣೆ ಬದಲಾಗಿ ಬಂದು ಸಮ್ಮಿಶ್ರ ಎಣ್ಣೆ ತಯಾರಿಸಿರುವನು. ಈ ಸಮ್ಮಿಶ್ರ ಎಣ್ಣೆಯಲ್ಲಿ 100ಕ್ಕೆ 30ರಷ್ಟು ಹುಣಿಣೆ ಎಣ್ಣೆ, 69ರಷ್ಟು ಶೇಂಗಾ ಎಣ್ಣೆ ಮತ್ತು 1ರಷ್ಟು ಸಲ್ಫುರೇಟೆಡ್ ಬಿತಲ ಎಣ್ಣೆ ಇರುವುದು ಈ ಪ್ರಯೋಗವು ಯಶಸ್ವಿಯಾಯಿತೆಂದರೆ ಸರಕಾರದವರು ದೀನಗಳ ಸಲುವಾಗಿ ಅದನ್ನು ಜನಪ್ರಿಯಗೊಳಿಸಲು ಸಾರ್ವಜನಿಕರಿಗೆ ತಿಳಿಸ್ಸುವರು.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಜಗದ್ಗುರುಗಳು	೦-೮-೦
ಕನ್ನಡ ಮಹಾಪುರುಷರು	೦-೮-೦
ಶಿವಾಸುಭಾಷ ಮೋಸ	೦-೪-೦
ಸುಮತಿ ಶತಕ	೦-೧-೬

ಅಂಚೆ ವೆಚ್ಚ ಗಾತಿ. ಪುಸ್ತಕ ಕಾವಶ್ಯಾಗಳಿಗೆ ಹೆಚ್ಚು ಪುಸ್ತಕ ಕಮಿಶನ್ ಬೇಕಾಗುವ ಕಮೀಸನ್

ಕಾಲವ ಸುಬ್ಬಣ್ಣ ಸುರ್ಚೆಂಟು, ಬಳ್ಳಾರಿ.

ಬಳ್ಳಾರಿ ಜಿಲ್ಲಾ ವಾರ್ತೆಗಳು

ಹೊಸಪೇಟೆ :- ಪುರಸಭೆಯಸರು ಕಾಂಗ್ರೆಸ್ ಮುಖಂಡರನ್ನು ಹಿಡಿದ ನಿಷೇಧವನ್ನು ವ್ಯಕ್ತಪಡಿಸಲು ಕೆಲವು ಪಗಳು ಸಭೆಯನ್ನು ಸ್ಥಗಿತಮಾಡಿ ದೇಶದಲ್ಲಿ ನಡೆದಿರುವ ಹಿಂಸಾಕೃತ್ಯಗಳನ್ನು ಖಂಡಿಸಿದರು.

ಬಳ್ಳಾರಿ :— ಮಾರನೆಯ ಯುದ್ಧ ನಾರ್ಮಿಕೋತ್ಸವವು ವಾರ್ಡಲಾ ಹೈ ಸ್ಕೂಲಿನಲ್ಲಿ ಜಿಲ್ಲಾಕಲೆಕ್ಟರವರ ಅಧ್ಯಕ್ಷತೆಯಲ್ಲಿ 3ನೆಯ ತಾ|| ಸೇರಿತ್ತು. ಶ್ರೀ ಚಂದ್ರಶೇಖರ ಶಾಸ್ತ್ರಿ ಮಿಸೆಸ್ ಭಾಸ್ಕರ್‌ರವರು ಭಾಷಣಕೊಟ್ಟರು.

ತಿರುಗುಪ್ಪ ತಾಲೂಕು

ಉಪಾಧ್ಯಾಯರ ಸಂಘ.

30-8-42 ನೆಯ ತಾ|| ಕರೂರಲ್ಲಿ ಸಭೆಯಿದೆ ಎಂಬ ವ್ರಕಟವಾಗಿದ್ದರೂ ಸಹ ಸಂಘದ ಸದಸ್ಯರಾಗಲಿ ಇತರ ಕಾರ್ಯದರ್ಶಿಗಳಾಗಲಿ ಯಾರೂ ಹಾಜರಾಗದೆ, ನಿರುತ್ಸಾಹಪಡಿಸಿದರು. ಹೀಗೆ ಮಾಡಿದಲ್ಲಿ ಸಂಘವು ಕ್ಷೀಣಸ್ಥಿತಿಗೆ ಬರುವುದು. ಈ ಸಭೆಯನ್ನು 27-9-42 ಭಾನುವಾರ ಶಾಸವಾಸಪುರದಲ್ಲಿ ಕೂಡಿಸಲು ನಿಶ್ಚಯವಾಗಿದೆ. ಎಲ್ಲರೂ ಬರಲು ಸಂಘಾಧ್ಯಕ್ಷರಾದ ಶ್ರೀ ಮುಕ್ಕಣ್ಣಯ್ಯನವರು ಕೋರುತ್ತಾರೆ.

ನೇಮಕಲ್ಲು.

ಇಲ್ಲಿನ ಕಾಂಗ್ರೆಸ್ ಕಾರ್ಯಕರ್ತರು ಕಾಂಗ್ರೆಸ್ ನಾಯಕರ ಬಂಧನದನಂತರ ಅಂದರೆ 10 ನೆಯ ತಾ|| ನಂದ 24 ನೆಯ ತಾ|| ವರೆಗೂ ಕಾಂಗ್ರೆಸ್ ಕಾರ್ಯಕ್ರಮಗಳಲ್ಲೆಲ್ಲಾ ಭಾಗವಹಿಸಿ ನಗರಮೋಣ ತಿಮ್ಮಾಪುರಂ ಕುಂದನ ಗುರ್ತಿ ನಂಗಾಲ ಬೆಲ್ಲೋಣ ಗ್ರಾಮಗಳಲ್ಲಿ ಪ್ರಚಾರಮಾಡಿ ಬಂದರು.

ಜಿಲ್ಲಾ ಜೋರ್ಡು ಸಭೆ :— ಶ್ರೀ ಮಾಡೇನ ದೇಶಾಯಿಯವರ ಸಿದನದ ಒಕ್ಕೆ ದುಃಖಸೂಚಕ ನಿರ್ಣಯವಾಗಿ ಕಾಂಗ್ರೆಸ್ ಮುಖಂಡರನ್ನು ಹಿಡಿದು ಪಕ್ಕೆ ನಿಷೇಧವರ ತೀರ್ಮಾನವಾಗಿ ಸಭೆಯು 5 ನೆಯ ತಾ|| ಗೆ ಮುಂದುವರಿಯಿತು.

144 ನೆಯ — ನೆಕ್ಕ ಬಳ್ಳಾರಿ ಜಿಲ್ಲೆಯಲ್ಲಾ ಸಾರ್ವಜನಿಕ ಛಳವಳಿಗ ಸಂಬಂಧಿಸಿದ ಸುದ್ದಿಗಳಿಗೆ ಸಜಗಳಿಗ ಎರಡು ತಿಂಗಳುಕಾಲ ಅನ್ವಯಿಸಲ್ಪಟ್ಟಿದೆ

ಆದವಾನಿ-ಶ್ರೀ ಜಾಲಾರಾಮುಸಿಂಗ, ನೋಮಯ್ಯಾಜ್ಜ, ಬುರ್ಲಿ, ತಿಮ್ಮಯ್ಯ ವಸ್ಯೆರೇ ಕಾಂಗ್ರೆಸ್ ಕಾರ್ಯಕರ್ತರು ಒಂಥಿನಲ್ಲಬಿಟ್ಟಿರುವರೆಂದು ಗೂತ್ತಾಗಿದೆ. ಕಾರಣ ಗೂತ್ತಿಲ್ಲ.

ಬಳ್ಳಾರಿ ನಗರದಲ್ಲಿ ಬಂಧನ.

ಶ್ರೀ ಟಿ. ಸುಬ್ರಮಣ್ಯಂ ಶ್ರೀ ಡಿ. ಯಜ್. ವೆಂಕೋಬರಾಯರು 2ನೆ ತಾ|| ಸಂರಕ್ಷಣೆ ಕಾಯ್ದೆಯನ್ವಯ ಸೆರೆ ಹಿಡಿಯಲ್ಪಟ್ಟು ವೆಲ್ಲೂರು ಜೈಲಿಗೆ ಕರೆದೊಯ್ದರು.



ಕಾಶ್ಮೀರು ಅರುಕ್

(ಮನೆಯ ವೈದ)

ನೆಗಡಿ, ಕೆಮ್ಮು, ನೈಬ್ಬಸ, ಶೀತಭೇದಿ, ಛಳಿಜ್ವರ, ಅಜೀರ್ಣ ಮೊದಲಾದ ವ್ಯಾಧಿಗಳಿಗೆ ದಿವ್ಯಾಮೃತ ಎಲ್ಲಾ ನೋವುಗಳಿಗೆ ಚೇಳು, ಹಾವು ಕಚ್ಚಿದುದಕ್ಕೆ ದಿವೌಷಧ.

ಎಲ್ಲಾ ಷಾಪುಗಳಲ್ಲಿ ದೊರೆಯುತ್ತದೆ.

ಜೆಜ್. ಯಸ್. ಅಂಡ್ ಸನ್ಸು, ಬಳ್ಳಾರಿ.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸು ಕಂಪೆನಿ, ಲಿಮಿಟೆಡ್

ಸ್ಥಾಪನೆ : 1897.

45 ನೇ ವಾರ್ಷಿಕ ವರದಿಯ ಕೆಲವು ಮುಖ್ಯ ಅಂಶಗಳು

ಒಟ್ಟು ಆದಾಯ	ರೂ. 85,61,000 ಮೀರಿದೆ.
ಜಾಮೀನಿನಲ್ಲಿರುವ ವಿಮಾ ಪಾಲಿಸಿಗಳು	ರೂ. 14,84,44,000 ,,
ಆಸ್ತಿ	ರೂ. 5,89,86,000 ,,

ಕಂಪೆನಿ ಪ್ರಾರಂಭವಾದ ಲಾಗಾಯ್ತು ಪಾವತಿ ಮಾಡಿರುವ ಕ್ಲೈಂಗಳು ರೂ. 7,46,66,000 ,,

ಏಜನ್ಸಿಗಳಿಗೆ ದರಖಾಸ್ತುಗಳನ್ನು ಕಳುಹಿಸುವುದು.

ಮುಖ್ಯ ಕಛೇರಿ :
ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬೆಂಗಳೂರು ಬ್ರಾಂಚ್ :
ಡಿಸ್ಪೆಕ್ಟ್ ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ.

S. V. SETTY & BROS, BELLARY.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಪೂರಿಡಿಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ವೆಸ್ಟ್‌ಎಂಡ್ ವಾಚುಗಳೂ ಜೊತ್ತೆ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ ಒಂದು ಸಲ ದಯಮಾಡಿ ಬಂದು ಪರೀಕ್ಷಿಸಿರಿ

ಹಿಂದಿ-ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು
- ಮಾತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ ?

ಹಾಗಾದರೆ ಕೂಡಲೇ ಕೆಳಗಿನವರಲ್ಲಿ ನಿವರಿಗೆಳನ್ನು ತಿಳಿಯಿರಿ

ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು. ಪರೀಕ್ಷೆಯ ಪಾಠ್ಯ ಪುಸ್ತಕಗಳು, ಕಛೇರಿ, ಕಾದಂಬರಿ ಪತ್ರಿಕೆ ದೊರೆಯುವುದಲ್ಲದೆ ನಿಮಗೆ ಎಲ್ಲಾ ವಿಧವಾದ ಮಾಹಿತಿಯೂ, ಶ್ರಮವಿಲ್ಲದೆ ಹೇಳಲಾಗುವುದು

ಟಿ. ಬಿ. ಕೇಶವರಾವ್,
ಕೃಷ್ಣ ಸೂಚನಾ ಕಾಂಪೌಂಡು, ಬಳ್ಳಾರಿ.

It PAYS you to

ADVERTISE IN NAVA BHARAT.

Visit ROYAL CAFE

NEAR ROYAL PICTURE PALACE

Royal is Royal

NAVA BHARAT, BELLARY.

With which is incorporated Congress Bulletin

THE LEADING NATIONAL WEEKLY.

ನವಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.

The Rates of Subscription

Annual

Local	2—0—0
Moffusil	3—0—0

6 Months

Local	2—0—0
Moffusil	2—0—0

ಚಂದಾ ವಿವರ.

ವರ್ಷಕ್ಕೆ

ಬಳ್ಳಾರಿಯವರಿಗೆ	2-0-0
ಹೊರಗಿನವರಿಗೆ	3-0-0

೬ ತಿಂಗಳಿಗೆ

ಬಳ್ಳಾರಿಯವರಿಗೆ	1-4-0
ಹೊರಗಿನವರಿಗೆ	2-0-0

NAVA BHARAT BELLARY.

Reg. No. M. 3937.

Sri. _____

_____

_____

Printed at Krishna Press, Bellary. Edited & Published by T. B. Kashava Rao, Bellary.

Reg. No M. 3937 ವಂದೇ ಮಾತರಂ

ನವಭಾರತ

ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯ ವರಾನ್ನಿಬೋಧತ.

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ —

ಸಂಚಿಕೆ ೪೯ ಬಳ್ಳಾರಿ ೧೩ ನೇ ಸೆಪ್ಟಂಬರು ಭಾನುವಾರ ೧೯೪೨. ಟಿ. ಬಿ. ಕೇತವರಾವ್

ಸಾಮೂಹಿಕ ಚಳವಳಿ.

ಮದ್ರಾಸ್ ಪ್ರಾಂತ — ಮದ್ರಾಸ್ ಪ್ರೆಸಿಡೆಂಸಿಯ ಮೆಡಿಕಲ್ ಮತ್ತು ಇತರ ಕಾಲೇಜುಗಳಲ್ಲಿ ಹಾಜರಿಯು ಇನ್ನೂ ಕಡಿಮೆ ಇದೆ ಸರಕಾರದ ಅರ್ಜಿಯ ಪ್ರಕಾರ ಎಲ್ಲಾ ಕಾಲೇಜುಗಳ ಪ್ರಿನ್ಸಿಪಾಲರವರು ವಿದ್ಯಾರ್ಥಿಗಳಿಗೆ ಎಚ್ಚರಿಕೆ ಇತ್ತು ತಾವು ಶಾಲೆಗಳಿಗೆ ಬರದಿದ್ದರೆ ಶಿಕ್ಷೆಕೊಡಲ್ಪಡುವರೆಂದು ಎಚ್ಚರಿಕೆ ಇತ್ತಿರುವರು

ತಿನ್ನವೆಲ್ಲಿ — ಈ ಜಿಲ್ಲೆಯಲ್ಲಿ ಹೆಂಡದಂಗಡಿಯೊಂದನ್ನು ಸುಟ್ಟಿರುವರು.

ಈಸ್ಟ್ ಗೋದಾವರಿ — ಜಿಲ್ಲೆಯಲ್ಲಿ ಉಪ್ಪಿನ ಭಟ್ಟಿ ಸಿಕಪಿಂಗ್ ಅದಾಗ ವಾಥಿ ಚಾರ್ಜು ಆಯಿತು

ಸಿಡದವೊಲ್, ಚಿತ್ತೂರು, ಗುಂಟೂರು, ಕ್ಯಾಲಿಕೆಟ್, ಪಾಲಘಾಟ್, ತಿರುಚಿಂಗಾ, ಧೇನಿ ಕನ್ಯಾಕೂಮರಿ, ಅರಕೋಣಂ, ಟ್ರಿಚಿ ವಗೈರೇ ಸ್ಥಳಗಳಲ್ಲಿ ಈ ವಾರ ನೂರಾರು ಜನರ ಬಂಧನವಾಗಿದೆ.

ಇತರ ಪ್ರಾಂತಗಳು ಮಧ್ಯ ಪ್ರಾಂತದ 4-5 ಜಿಲ್ಲೆಗಳ ಅನೇಕ ಹಳ್ಳಿಗಳಲ್ಲಿ ಒಂದುಲಕ್ಷ ರೂ ಗಿಂತ ಹೆಚ್ಚಿನ ದಂಡವನ್ನು ಸರಕಾರದವರು ವಿಧಿಸಿದುವರು ಆ ಹಳ್ಳಿಗಳು ಸರಕಾರದ ಮೆತ್ತು ರೈಲ್ವೆ ಆಸ್ತಿಗಳನ್ನು ನಷ್ಟ ಪಡಿಸಿದರೆಂದೂ ಪ್ರೋತ್ಸಾಹ ಕೊಟ್ಟರೆಂದೂ ಸರಕಾರೀ ಪ್ರಕಟನೆಯಲ್ಲಿ ಹೇಳಲಾಗಿದೆ

ಬೀಹಾರ — 9 ಹಳ್ಳಿಗಳಿಗೆ 40 ಸಾವಿರರೂ. ದಂಡ ವಿಧಿಸಿದ್ದಾರೆ.

ಲಾಖಸರಾಯದಲ್ಲಿ — ಸೈನಿಕರು ಗುಂಡು ಹಾರಿಸಿ 3ನ್ನು ಕೊಂದರು ಬೆಲ್ಸಂಡದಲ್ಲಿ ಆಯುಧ ಪಾಣಿಗಳಾದ ಚಳವಳಿಗಾರರನ್ನು ಸರಕಾರದವರು ಎದುರಿಸಬೇಕಾಯಿತು ಆರ್ರ ಎಂಬ ಸ್ಥಳದಲ್ಲಿ 6 ಜನರು ಗುಂಡಿನೇಟುಗಳಿಂದ ಸತ್ತರು ಸಾಟ್ಸ ಜಿಲ್ಲೆಯ ಪಾಂಡ್ರೆಕ್‌ದಲ್ಲಿ ಪೋಲೀಸ್ ಬಸ್ ಸುಡಲು ಯತ್ನಿಸಿದರು

ಅಸ್ಸಾಂ ಶಿಲಾಂಗದಲ್ಲಿ — ಸೈನಿಕರು ಗುಂಡು ಹಾರಿಸಿ ಇಬ್ಬರನ್ನು ಕೊಂದರು ನೌಗಾಂಗ್ ಕಾಂಗ್ರೆಸ್ ಕಾರ್ಯಾಲಯವು ಶಾಸನ ವಿರುದ್ಧ ವೆಂದು ಸೀಲಾಗಿದೆ

ಯು. ಪಿ. — ಟಿಲಿಗ್ರಾಫ್ ಟೆಲಿಫೋನ್ ತಂತಿಗಳು ಕತ್ತರಿಸಲ್ಪಡುವುದು ಲಕ್ನೋದಲ್ಲಿ ಇನ್ನೂ ನಡೆದಿರುವುದರಿಂದ ಜಿಲ್ಲಾ ಮ್ಯಾಜಿಸ್ಟ್ರೇಟರು ಒಂದು ಪ್ರಕಟನೆ ಹೊರಡಿಸಿ ಆಯಾ ಸ್ಥಳಗಳಲ್ಲಿ ದಂಡ ವಿಧಿಸಲಾಗುವುದೆಂದು ಜ್ಞಾಪಿಸಿದ್ದಾರೆ

ಮದ್ರಾಸ ಗವರ್ನರರಿಗೆ ಹೆಚ್ಚಿನ ಪ್ರಯಾಣಭತ್ತಾ — ಮದ್ರಾಸ್ ಗವರ್ನರರಿಗೆ ಒಂದು ವರ್ಷಕ್ಕೆ 1,13,000 ರೂ ಗಳನ್ನು ಪ್ರಯಾಣ ಖರ್ಚಿಗಾಗಿ ಕೊಡಲಾಗುತ್ತಿದ್ದರು ಆದರೆ ಅದು ಸಾಲದೆಂದು ಅದನ್ನು 1,23,000 ರೂ ಗಳಿಗೆ ಹೆಚ್ಚಿಸಿರುವರು ಈ ಹತ್ತು ಸಾವಿರ ರೂ ಗಳನ್ನು ಒಂದು ವರ್ಷದಲ್ಲಿ ಹೆಚ್ಚಿಸುವ ಈ ಅರ್ಜಿಯು ಇಂಡಿಯಾ ಗವರ್ನಮೆಂಟು ಗೆಜೆಟಿದಲ್ಲಿ ಪ್ರಕಟವಾಗಿದೆ ಅಂದರೆ ಮದ್ರಾಸ್ ಗವರ್ನರ್ ಸಾಹೇಬರು ತಿಂಗಳೊಂದಕ್ಕೆ ಸಂಬಳವಲ್ಲದೆ 10,250 ರೂ ಗಳವರೆಗೂ ಪ್ರಯಾಣದ ಖರ್ಚು ಮಾಡಬಹುದು. ಈ ಹೆಚ್ಚು ಪ್ರಾಂತದ ರೆವಿನ್ಯೂ ಆದಾಯದ ಖರ್ಚಿಗೆ ಬೀಳುವದು.

ಶಿಲೋನಿಗೆ ಅಕ್ಕ — ಸಿಲೋನ್ ಗೃಹ ಖಾತೆಯ ಮಂತ್ರಿಗಳಾದ ಬ್ಯಾರ್ಜಯತಿಲಕರು ಕೆಲಸತ್ತಾಕ್ಕೆ ಬಂದು ಬಂಗಾಳಿ ಸರಕಾರದ ಮಂತ್ರಿಗಳೊಡನೆಯೂ, ಮತ್ತು ಇತರ ನರ್ತಕರೊಡನೆಯೂ ಚರ್ಚಿಸಿ ಅವರು ಎಷ್ಟರ ಮಟ್ಟಿಗೆ ಸಹಾಯ ಮಾಡಬಹುದೆಂಬ ಅಂಶವನ್ನು ತಿಳಿದರು.

ಶಾಸ್ತ್ರಿಗಳಿಗೆ ರಾಜಕೀಯ ಜ್ಞಾನೋದಯ

ಕೊಯಂಬತ್ತೂರಿನಲ್ಲಿ ನಿನ್ನೆ ಜಿಲ್ಲಾ ಜದ್ದರಧ್ಯಕ್ಷತೆಯಲ್ಲಿ ದೈನಿಕ ಆನರಬಲ್ ಶ್ರೀನಿವಾಸ ಶಾಸ್ತ್ರಿಯವರು ಭಾಷಣ ಕೊಡುತ್ತಾ ಹೀಗೆ ಹೇಳಿದರು. 'ನನಗೆರಡು ಸಲ ಜ್ಞಾನೋದಯವಾಯಿತು 1921 ರಲ್ಲಿ ಪರ್ಸೆಲ್ಸ ಒಪ್ಪಂದದ ನಂತರ ಪ್ರಪಂಚ ಶಾಂತಿಯಾಗುವುದೆಂದು ಬಯಿಸಿದ್ದೆ. ಅದರ ಆಸೆಯು ಬಯಲಾಯಿತು ಎರಡನೆಯ ಸಲವೆಂದರೆ ಮಹಾತ್ಮ ಗಾಂಧಿಯವರು ದುಂಡು ಮೇಜಿನ ಪರಿಷತ್ತಿಗೆ ಹೋದಾಗ ಆಗ ಹಿಂದೂಸ್ತಾನಕ್ಕೆ ಸ್ವಾತಂತ್ರ್ಯ ಬರುವುದೆಂದೆಣಿಸಿದ್ದೆ. ಅದರ ಆಶೆಯೂ ಇಲ್ಲದಂತಾಯಿತು. ನನಗೆ ಎಷ್ಟೇ ನಿರುತ್ಸಾಹವಾದರೂ ಮುಂದಿನ ಭವಿಷ್ಯವು ಸುಖದಾಯಕವಿರಲಿಕ್ಕೆ ಸಾಕೆಂದು ತೋರುತ್ತದೆ"

ಶ್ರೀ ವಿಠಲ್ ಶೇಷಪ್ಪನವರು

'ನವಭಾರತ'ದ ಪಾಯಂಪೋಷಕರು

ಬಳ್ಳಾರಿಯ ಸುಪ್ರಸಿದ್ಧ ವರ್ತಕರೂ, ಸನಾತನ ಧರ್ಮಾಭಿಮಾನಿಗಳೂ ಆದ ಶ್ರೀ ವಿಠಲಶೇಷಪ್ಪನವರು 'ನವಭಾರತ' ಕ್ಕೆ ಪಾಯಂ ಪೋಷಕರಾಗಿರಲೊಪ್ಪಿ 3 ವರ್ಷಗಳ ಪೋಷಕ ದ್ರವ್ಯವನ್ನು ಒಂದೇಸಲ ಕೊಟ್ಟಿರುತ್ತಾರೆ. ಬಳ್ಳಾರಿಯ ಒಂದೇ ವಂದಾದ ರಾಷ್ಟ್ರೀಯ ಪತ್ರಿಕೆಗೆ ಈ ಸಹಾಯವು ಅತಿ ಅಮೂಲ್ಯವಾದುದು. ನಾವು ಶ್ರೀಮಾನ್ ಶೇಷಪ್ಪನವರನ್ನು ಹೃತ್ಪೂರ್ವಕವಾಗಿ ವಂದಿಸಿ ಭಗವಂತನು ಅವರಿಗೆ ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕೊಡಲೆಂದು ಕೋರಿ ಇತರ ಶ್ರೀಮಂತರಿಗೆ ಇದು ಮಾರ್ಗದರ್ಶಿಯಾಗಲೆಂದು ಆಶಿಸುತ್ತೇವೆ.

ವ್ಯವಸ್ಥಾಪಕ

'ನವಭಾರತ' ಬಳ್ಳಾರಿ.

ಜಪಾನ ಯುದ್ಧ ಯಂತ್ರದ ★ ರಹಸ್ಯ ★

ಮಾನಸಿಕ, ದೈಹಿಕ ಮತ್ತು ಪಾರಿಶ್ರಾಮಿಕ ಶಿಕ್ಷಣ.

ಇಂದು ಜಪಾನು ಮಂಚೂರಿಯಾದಿಂದ ಉತ್ತರಕ್ಕೆ ಹಬ್ಬಿರುವ ಸುಲಯಾದಿಂದ, ದಕ್ಷಿಣದಲ್ಲಿರುವ ರಂಗೂನ್, ಹಿಂದೂಸಾಗರ, ಮಾರ್ಷಲ್ ದ್ವೀಪಗಳ ಸ್ವಿಟ್ಜರ್ಲ್ಯಾಂಡ್ ಪ್ರದೇಶ, ಬಹುದೂರ ಸೈಬೀರಿಯಾ ಸಲ್ಲಿರುವ ಪೂರ್ವ ಪ್ರದೇಶ ಇಷ್ಟನ್ನು ತನ್ನ ಸ್ವಾಧೀನಮಾಡಿಕೊಂಡಿದೆ. ಇಂದು ಜಪಾನೀಯರ ಸೇನಾಬಲವು ೨೦ ಲಕ್ಷ ಜನರಿಂದ ಕೂಡಿದೆ. ಪಾಶ್ಚಾತ್ಯ ರೀತಿಯಲ್ಲಿಯೇ ಸೇನೆಗಳೆಲ್ಲವೂ ಶಿಕ್ಷಣಪಡೆದಿವೆ ಮತ್ತು ಸುಸಜ್ಜಿತವಾಗಿವೆ. ೩೬ ಟನ್ ಬೃಹದಾಕಾರದ ಟ್ಯಾಂಕ್ ಹಿಡಿದು ಚಿಕ್ಕ ಟಾಮೀಗನ್‌ವರೆಗೆ ಎಲ್ಲವೂ ಜಪಾನೀಯರ ಬಳಿಯಲ್ಲಿವೆ ಆದರೆ ಕೇವಲ ೭೦ ವರ್ಷಗಳ ಕೆಳಗೆ ಜಪಾನಿಗೆ ಯಾವ ವಸಾಹತುವೂ ಇರಲಿಲ್ಲ, ಅದು ಯಾವ ದೇಶವನ್ನೂ ಗೆದ್ದಿರಲಿಲ್ಲ, ಅದಕ್ಕೆ ಯಾವ ರಾಷ್ಟ್ರೀಯ ಸೈನ್ಯವೂ ಇರಲಿಲ್ಲ. ಅದರ ಪಾಳೆಯ ಪಟ್ಟಣಯೋಧರು ಬಿಲ್ಲುಬಾಣಗಳಿಂದಲೂ ಕತ್ತಿ ಕಠಾರಿಗಳಿಂದಲೂ ಯುದ್ಧಮಾಡುತ್ತಿದ್ದರು. ಇಂತಹ ಪಾಳೆಯ ಪಟ್ಟಣ ಸೇನೆಯನ್ನು ೧೮೬೦ ರಿಂದ ಅದು ಮಾರ್ಪಾಡು ಮಾಡತೊಡಗಿ ಇಂದು ಜಗತ್ತಿನ ಅತ್ಯಾಧುನಿಕ ಸೈನಿಕರನ್ನು ತರಬಿಯತ್ತುಮಾಡಿದೆ, ನಾವು ಏನು ನೆಸಗಳನ್ನೇ ಒಡ್ಡಲಿ, ರಷ್ಯಾ, ಚೀನ, ಅಮೆರಿಕ ಮತ್ತು ಬ್ರಿಟನ್ ಈ ದೇಶಗಳೊಡನೆ ಹೋರಾಡಿದ ಜಪಾನು ದೊಡ್ಡ ಯುದ್ಧದಲ್ಲಿ ಸೋಲನ್ನು ಕಂಡೇಇಲ್ಲ. ಜಪಾನಿನ ಇತಿಹಾಸದಲ್ಲಿ ಈ ಅಂಶವು ಬಹಳ ಗಣನೀಯವಾದುದು. ಎಂತಹ ಆಯುಧ ಪರಿಕರಗಳುಳ್ಳ ಸೇನೆಯೇ ಆಗಲಿ, ಎಂತಹ ಉತ್ತಮ ಶಿಕ್ಷಣ ಪಡೆದ ಸೇನೆಯೇ ಆಗಲಿ ಈ ಪ್ರಶಸ್ತಿಯನ್ನು ಪಡೆಯುವುದು ದುರ್ಲಭವೇ ಸರಿ.

ಹಾಗಾದರೆ ಈ ಅವಿಚ್ಛಿನ್ನ ಜಯಗಳಿಗೆ ಕಾರಣವೇನು? ಜಪಾನಿ ಯೋಧರು ಪಡೆಯುವ ದೈಹಿಕ, ಮಾನಸಿಕ ಪಾರಿಶ್ರಾಮಿಕ ಶಿಕ್ಷಣವೇ ಇದಕ್ಕೆ ಕಾರಣವೆಂದು ಹೇಳಬಹುದು. ಜಪಾನಿಯರ ಪರಿಕರಗಳು ಸರಳವಾಗಿರುವದರಿಂದ ಅವುಗಳನ್ನು ಬಹಳ ಚುರುಕಾಗಿ ಪ್ರಯೋಗಿಸಲು ಹೆಚ್ಚು ಅವಕಾಶವಿರುತ್ತದೆ. ಪಾಶ್ಚಾತ್ಯರ ಅನೇಕ ಆಯುಧಗಳು ತೊಡಕಾಗಿರುವುದರಿಂದ ಜಪಾನಿಯರ ಆಯುಧಗಳಷ್ಟು ಪರಿಣಾಮಕಾರಿಯಾಗಿ ಅವು ಕೆಲಸ ಮಾಡಲಾರವು. ಅವರ ಆಯುಧಗಳು ಹೆಚ್ಚು ಸರಳವಾಗಿರುವದರಿಂದಲೇ ಹೆಚ್ಚು ಅಪಾಯಕಾರಿಯಾಗಿವೆ. ಚೀನಿಯರ ಮೇಲೆ ಅವರು ಸಾಧಿಸಿರುವ ಜಯಗಳೆಲ್ಲಾ ಅವರ ಪರಿಣಾಮಕಾರಿಯಾದ ಆಯುಧಗಳಿಂದಲೇ ಎಂದು ನಿಸ್ಸಂಶಯವಾಗಿ ಹೇಳಬಹುದು.

ಜಪಾನಿನಲ್ಲಿಯೂ ಜರ್ಮನಿಯಲ್ಲಿಯೂ ಶಿಕ್ಷಣ ಪಡೆದ ಜಪಾನಿ ಸೇನಾಧಿಕಾರಿಯೊಬ್ಬನು ಹೇಳಿದ ಮಾತುಗಳು ಗಣನಾರ್ಹವಾಗಿವೆ "ಪಾಶ್ಚಾತ್ಯರು ಯಂತ್ರ ಮತ್ತು ಆಯುಧೋತ್ಪಾದನೆಗಳ ಬಗ್ಗೆ ಹೆಚ್ಚು ಗಮನ ಕೊಡುತ್ತಾರೆ. ಆದರೆ ಹೋರಾಡುವ ಸೈನಿಕನ ಕಡೆ ಅವರು ಅಷ್ಟು ಗಮನವನ್ನು ಕೊಡುವುದಿಲ್ಲ. ಯೋಧನು ಸರಿಯಾಗಿ ಶಿಕ್ಷಣ ಹೊಂದದಿದ್ದರೆ ಯಾವ ಯಂತ್ರವೇ ಆಗಲಿ ಜಯತಂದುಕೊಡುವುದು ಸಾಧ್ಯವಿಲ್ಲ. ಜಪಾನು ಇದನ್ನೇ ತನ್ನ ಆದರ್ಶವಾಗಿಟ್ಟುಕೊಂಡು ತನ್ನ ಯೋಧರಿಗೆ ಶಿಕ್ಷಣವನ್ನು ಕೊಡುತ್ತೆ. ಯಾವ ಮನುಷ್ಯನು ಕ್ರೂರಿಯಾಗಿರುತ್ತಾನೋ, ಎಲ್ಲಾ ಸಂದರ್ಭದಲ್ಲಿಯೂ ಯುದ್ಧ ಮಾಡಲು ಕುತೂಹಲ ವುಳ್ಳವನಾಗಿರುತ್ತಾನೆಯೋ ಸ್ವಲ್ಪ ಆಹಾರವನ್ನು ತಿಂದು ಎಷ್ಟು ದುಡಿದರೂ ದೈಹಿಕ ಆಯಾಸವನ್ನು ಪಟ್ಟುಕೊಳ್ಳುವವನಿಲ್ಲವೋ ದೇಹಕ್ರಮವನ್ನು ಯಾವನು ಲೆಕ್ಕಿಸುವುದಿಲ್ಲವೋ, ಸೋಲು ಅಥವ ಶತ್ರುವಿನ ಕೈಸೆರೆಯಾಗುವ ಯೋಚನೆಯಿಲ್ಲದೆ ಹೊಡೆದಾಡುವನೋ, ಯಾವ ಆಯುಧವನ್ನು ಕೊಟ್ಟರೆ ಅದರಿಂದಲೇ ಯಶಸ್ವಿಯಾಗಿ ಹೋರಾಡುವನೋ, ಅವನೇ ನಿಜವಾದ ಸೈನಿಕನೆಂದು ಜಪಾನಿಯರು ಹೇಳುತ್ತಾರೆ ಪರಿಣಾಮವಾಗಿ ೨ ಯೋಧರು ದಕ್ಷಿಣಯುಳ್ಳವರಾಗಿದ್ದಾರೆ. ನರರಾಕ್ಷಸರಾಗಿ ಬಿಟ್ಟಿದ್ದಾರೆ. ಅವರು ಗೆದ್ದಿರುವ ಪ್ರದೇಶಗಳಲ್ಲಿ ಹೀನಾಯವಾಗಿ ವರ್ತಿಸುತ್ತಿರುವದಕ್ಕೆ ಇದೇ ಸಾಕ್ಷಿಯಾಗಿದೆ.

ಜಪಾನಿ ಯುವಕನು ಸೈನ್ಯಕ್ಕೆ ಸೇರುವಮುಂಚೆ ಸರಳಜೀವಿತದ ವಾರವನ್ನು ಮನೆಯಲ್ಲಿಯೂ ಸೈನ್ಯಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಮಿಲಿಟರಿ ಶಿಕ್ಷಣ ಶಾಲೆಯಲ್ಲಿಯೂ ಕಲಿತಿರುತ್ತಾನೆ. ಬ್ಯಾರಕ್ಕಿಗೆಬಂದ ದಿನದಿಂದ ಜರಂಭಗೊಂಡು ಸೈನ್ಯದಿಂದ ನಿವೃತ್ತನಾಗುವನರೆಗೆ ಅಧಾವಾಯುದ್ಧದಲ್ಲಿ ಸಾಯುವನರೆಗೆ ಜಪಾನಿ ಯೋಧನಿಗೆ ಶಿಕ್ಷಣವು ಕೊಡಲ್ಪಡುತ್ತಿರುತ್ತದೆ.

ಮುರಳಿನ ಚೀಲಗಳು ಮತ್ತು ಇಟ್ಟಿಗೆ ಗೋಡೆಗಳು

ನಿಮ್ಮ ಪ್ರಾಣಸಂರಕ್ಷಣೆ ಮಾಡಬಹುದು

ಅವು ನಿಮ್ಮನ್ನು ರಕ್ಷಿಸಬಹುದು

ನೀವು ನಮ್ಮಲ್ಲಿ ಜೀವವಿಮೆ ಮಾಡಿಸಿದರೆ ನಾವು ನಿಮ್ಮ ಬಂಧುಗಳನ್ನು ರಕ್ಷಿಸುವೆವು.

ಯುದ್ಧಕಾಲದ ಅಪಾಯವನ್ನು ದೃಷ್ಟಿಯಲ್ಲಿಟ್ಟು ಸಹ ಪ್ರತ್ಯೇಕ ಶುಲ್ಕವಿಲ್ಲದೆ ನಾಗರೀಕರ ಜೀವವಿಮೆಯನ್ನು ಭದ್ರಗೊಳಿಸಲಾಗಿದೆ.

ಇಲ್ಲಿಯವರವಿಗೆ ಸಲ್ಲಿಸಿರುವ ಹಕ್ಕುಗಳ ಹಣ ರು. 26,00,00,000

ಜಾರಿಯಲ್ಲಿರುವ ವಿಮಾಪತ್ರಗಳ ಸೊತ್ತು ರು 85,50,00,000

ವಾರ್ಷಿಕ ಆದಾಯ 1941 ರಲ್ಲಿ ಸುಮಾರು ರು. 5,00,00,000

ನಿಧಿಯ ದ್ರವ್ಯ ಸುಮಾರು ರು. 30,00,00,000

ಓರಿಯಂಟಲ್

ಗವರ್ನಮೆಂಟು ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ ೧೮೭೪. ಮುಖ್ಯ ಕಛೇರಿ ಬೊಂಬಾಯಿ

ಶಾಖೆ :—

ಓರಿಯಂಟಲ್ ಬಿಲ್ಡಿಂಗ್ಸ್ ಆರ್ಮೀನಿಯನ್ ಬೀದಿ, ಜಿ. ಟಿ. ಮದ್ರಾಸು.

ಇನ್ಸ್ಪೆಕ್ಟರರವ ಆಫೀಸು:- **೩೦೩ ರೂಪರ್ಟ್‌ಸ್ ಗೇಟ್ ಬ್ಯೂಶಪೇಟೆ ಬಳ್ಳಾರಿ.**

ಜಪಾನಿಯರಿಗೆ ರಕ್ಷಣಾ ವಿಧಾನಕ್ಕಿಂತ ಮುನ್ನುಗ್ಗಿ ದೋರಾಡುವದನ್ನೇ ಹೇಳಿಕೊಡುತ್ತಾರೆ. ಇಪ್ಪತ್ತು ತರಹೆಫಾಳಿ ಯುದ್ಧವನ್ನು ಬೇಳಿ ಕೊಟ್ಟಾಗ ಒಂದು ರಕ್ಷಣಾ ವಿಧಾನವನ್ನು ಮಾತ್ರ ಹೇಳಿ ಕೊಡುತ್ತಾರೆ ಇದರಿಂದ ರಕ್ಷಣಾ ಯುದ್ಧವನ್ನು ಮಾಡಲು ಜಪಾನಿಯರಿಗೆ ಬರುವದಿಲ್ಲವೆಂದು ಊಹಿಸಕೂಡದು ಯಾವ ಪಕ್ಷವು ಎಷ್ಟು ಸಾವು ನೋವುಗಳನ್ನು ಅನುಭವಿಸಿದ್ದರೂ, ಒಂದೇ ಸಮನಾಗಿ ಶತ್ರುವಿನ ಮೇಲೆ ಮುನ್ನುಗ್ಗಿ ಹೋಗುತ್ತಿದ್ದರೆ ಆ ಪಕ್ಷಕ್ಕೆ ಜಯದೊರೆಯುವದೆಂಬ ನಂಬಿಕೆಯನ್ನು ಜಪಾನಿಯರು ಇಟ್ಟುಕೊಂಡಿದ್ದಾರೆ

ಶಾಂತಿಸಮಯಗಳಲ್ಲಿ ಜಪಾನಿಯರ ಹಾಗೆ ವ್ಯಾಯಾಮವನ್ನು ಶಿಕ್ಷಣವನ್ನೂ ತೆಗೆದುಕೊಳ್ಳುವವರು ಜಗತ್ತಿನಲ್ಲಿ ಬೇರೆ ಇನ್ನಾವ ದೇಶದಲ್ಲಿಯೂ ಇಲ್ಲವೆಂದು ಧಾರಾಳವಾಗಿ ಹೇಳಬಹುದು. ಬ್ಯಾರಕ್‌ನಲ್ಲಿ ಹೇಗೆ ವಿಷಯ ಸುಖಗಳಿಗೆ ಅವಕಾಶವಿರುವದಿಲ್ಲವೋ ಮನೆಯಲ್ಲಿ ಕೂಡ ಅಂತಹ ಜೀವನವನ್ನೇ ಸಾಗಿಸುತ್ತಾರೆ. ರುಚಿರುಚಿಯಾದ ಆಹಾರ, ವಿಶ್ರಾಂತಿ ಇವು ಇಲ್ಲವೇ ಇಲ್ಲ ಸಂಬಳವು ತಿಂಗಳಿಗೆ ಒಂದು ಡಾಲರ್‌ಗಿಂತ ಹೆಚ್ಚಾಗಿರುವದಿಲ್ಲ ಯುದ್ಧವು ಎಂತಹ ವಿಷಮ ಸ್ಥಿತಿಯಲ್ಲಾಗಲೀ ಜಪಾನಿಯೋಧನು ಕಾಡಲು ಸಿದ್ಧನಾಗಿರಲು ಇಂತಹ ಉಗ್ರನಿಯಮನುಗಳನ್ನು ಇಟ್ಟಿದ್ದಾರೆ. ಜಪಾನಿ ಯೋಧರು ಪೂರ್ವ ವಿಷ್ಯಾದಲ್ಲಿಯೇ ಹೆಚ್ಚಾಗಿ ಯುದ್ಧನಾಡಬೇಕಾಗಿರುವದರಿಂದ ಅಲ್ಲಿನ ಸ್ಥಾನೀಕ ಶಿಕ ಸ್ಥಿತಿಗನುಗುಣವಾಗಿ ಯುದ್ಧ ನೂತನ ಶಿಕ್ಷಣ ಕೊಡಲ್ಪಟ್ಟಿರುತ್ತಾರೆ

ನೋಂ ಹೇಳಿದ ಅಂಶಗಳನ್ನೆಲ್ಲ ಓದಿದ ಮೇಲೆ ಜಪಾನಿಯರ ವಿಜಯದ ರಹಸ್ಯ ನೇನೆಂಬುದನ್ನು ತಿಳಿದುಕೊಂಡಿರುವಿರಿ ಆದರೆ ಅವರ ಸೋಲದೋಷಗಳೇನೆಂಬದನ್ನು ನೋಡೋಣ ಅನಿರೀಕ್ಷಿತವಾಗಿ ಒದಗುವ ಸಂದರ್ಭಗಳಿಗೂ ಸೋಲುಗಳಿಗೂ ಅವರು ಧೃತಿಗೆಡುತ್ತಾರೆ. ನಾಗರಿಕರು ಸಹ ಇದೇ ರೀತಿಯ ಮನೋವೈಕ್ಲವ್ಯಕ್ಕೆ ಒಳಗಾಗಿದ್ದಾರೆ

ಬಳ್ಳಾರಿ ಜಿಲ್ಲೆಯಲ್ಲಿ ಬಂಧನ

ಆದವಾನಿ — 144 ನೆಯ ಕಲಂ ಉಲ್ಲಂಘನೆ ಮಾಡಿದರೆಂದು ಇಲ್ಲಿಯ 6 ಕಾಂಗ್ರೆಸ್ ಕಾರ್ಯಕರ್ತರನ್ನು ಕಳೆದ ವಾರ ಬಂಧಿಸಲಾಗಿತ್ತು ಅವರ ವಿಚಾರಣೆಯಾಗಿ 6 ತಿಂಗಳು 141 ನೆಯ ಕಲಂ ಉಲ್ಲಂಘಿಸಿದ್ದಕ್ಕೂ, ಸಂರಕ್ಷಣೆ ಕಾಯ್ದೆಯನ್ವಯ 6 ತಿಂಗಳು ಮತ್ತು 200 ರೂ ಜುಲ್ಮಾನೆ ಶಿಕ್ಷೆಯನ್ನೆಲ್ಲಾ ಕೂಡಿ ಅನುಭವಿಸಬೇಕು ಕೊಡತಪ್ಪಿದರೆ ಮತ್ತೆ 3 ತಿಂಗಳ ಶಿಕ್ಷ ವಿಧಿಸಲಾಗಿತ್ತು ಆದವಾನಿಯಲ್ಲಿ ಬಾಧಿಭಾರ್ಜು ಆಗಿ ಕೆಲವರಿಗೆ ಸಾಮಾನ್ಯವಾದ ಘಾಯಗಳಾಗಿವೆ ಶ್ರೀಗಳಾದ ಬಲರಾಮಸಿಂಗ್ ನೋಮುಜಾಜುಲು, ಸತ್ಯನಾರಾಯಣ ರಾವ್, ಅಪ್ಪಾಕೇಟ್, ಎಸ್. ವಿ ಬುಲ್ಲಿ, ಟಿ ಜಿ. ತಿಮ್ಮಯ್ಯಶೆಟ್ಟಿ, ರಂಗಯ್ಯ ಈ ಆರು ಜನ ಕಾಂಗ್ರೆಸ್‌ನವರು 7-9-42 ನೋಮುವಾರ ಸ್ಪೆಷಲ್ ಟ್ರೈನ್‌ನಲ್ಲಿ ಅಲ್ಲಿಪುರ ಜೈಲಿಗೆ ಕರೆತರಲ್ಪಟ್ಟರು

ಹರಪನಹಳ್ಳಿ — ಶ್ರೀಗಳಾದ ಇಬಾರಿ ಶಿರಸನ್ನು, ನೆಲ್ಲೂರಿ ಮುಕ್ಕಣ್ಣ, ಹೊನ್ನಪ್ಪ ಬಣಗಾರ, ನಂಕಬರಡ್ಡಿ ಇವರು ಬಲಿಗ್ರಾಮ ತಂತಿಗಳನ್ನು ಕತ್ತರಿಸಿರಿ ಬಹುದೆಂಬ ಸಂದೇಹದ ಮೇಲೆ ಸಂರಕ್ಷಣೆ ಕಾಯ್ದೆಯನ್ವಯ ಬಂಧಿಸಲ್ಪಟ್ಟು ಹೊಸಪೇಟಗೆ ತರಲ್ಪಟ್ಟರು, ರಿಮಾಂಡಿ ಸಲ್ಲಿರುವರು ಏಜೆನ್ಸಿಯವರಿಂದ ನಿಶ್ಚಿತವಾಗಿಲ್ಲ

ಹೊಸಪೇಟೆ - ಬಳ್ಳಿ ಕರ್ನಾಟಕ ಮುನಿಸಿಪಲ್ ಸಂಸದ ವಾಚನಾಲಯದ ಜಡ್ತಿಯಾಯಿತು ಪೋಲೀಸರಿಗೆ ಅನಧಿಕೃತ ಸಾಹಿತ್ಯವು ದೊರಯಲಿಲ್ಲ ಹೊಸಪೇಟೆ ಬಾಂಬ್ ಅನೋಪಿಯೇರ್ಷನವರು 144 ನೇ ಕಲಂ ಜಾರಿಯಾದ ಕೃತ್ಯ ವನ್ನು ಖಂಡಿಸಿ ತೀರ್ಮಾನಮಾಡಿ ಅದನ್ನು ಹಿಂದೆಗೆದುಕೊಳ್ಳಲು ಸೂಚಿಸಿರುತ್ತಾರೆ. ಇಂಪೀರಿಯಲ್ ಬ್ಯಾಂಕ್‌ನ ರಿಟೈರ್ಡ ಕ್ಯಾಷಿಯರ್ ಆದ ಶ್ರೀ ಕೇಶವಕೃಷ್ಣ ಎಂಬುವರು ಸಂಯುಕ್ತ ರಾಷ್ಟ್ರಗಳ ವ್ಯಾರ್ದನಾದಿನ "ರಾಷ್ಟ್ರೀಯ ಮುಖಂಡರು ಸೆರೆಮನೆಯಲ್ಲಿರಬೇಕಾದರೆ ಮಿತ್ರಮಂಡಲಿಯ ಜಯಕ್ಕೆ ಪ್ರಾರ್ಥಿಸಬಾರದು" ಎಂಬುದಾಗಿ ಹೇಳಿದೆಂದೂ ಅವರಿಗೂ ಪಟ್ಟಣದ ಕಲೆಕ್ಟರವರಿಗೂ ಅನಿಷ್ಟ ಭಾಷೆಯಲ್ಲಿ ವಾಗ್ವಾದ ವಾಯ್ತೆಂತಲೂ ಅವರನ್ನು ಸಂರಕ್ಷಣೆ ಕಾಯ್ದೆಯನ್ವಯ ಸೆರೆ ಹಿಡಿಯಲಾಯ್ತೆಂದೂ ಗೊತ್ತಾಗಿದೆ ಇನ್ನೂ ವಿಚಾರಣೆಯಾಗಿಲ್ಲ.

ಕುರುಗೋಡಿನಲ್ಲಿ — ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳಾದ ಶ್ರೀ ಕೆ. ರಾಮಚಂದ್ರಗುಪ್ತರು 10 ನೆಯ ತಾರೀ ಬಂಧಿಸಲ್ಪಟ್ಟು ಆ ದಿನವೇ ಬಳ್ಳಾರಿ ಸೆಷ್ ಡಿವಿಜನಲ್ ಮ್ಯಾಜಸ್ಟ್ರೇಟರಿಂದ ವಿಚಾರಿಸಲ್ಪಟ್ಟು ಸಂರಕ್ಷಣೆಕಾಯ್ದೆಯ ೪ಯ 18 ತಿಂಗಳು ಕಠಿಣಶಿಕ್ಷೆ 144 ನೇ ಸೆಕ್ಷ್ ಉಲ್ಲಂಘನೆ ಮಾಡಿದುದಕ್ಕೆ 1 ತಿಂಗಳು ಸಾದಾ ಶಿಕ್ಷೆ ಮತ್ತು ಎರಡು ಶಿಕ್ಷೆಗಳನ್ನೂ ಒಂದೇಸಲ ಅನುಭವಿಸಬೇಕೆಂದು ವಿಧಿಸಲ್ಪಟ್ಟರು. ಅವರಿಗೆ 'ಬಿ' ತರಗತಿ ಕೊಡಲಾಯ್ತು

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ — ಬಳ್ಳಾರಿ.

ಒಟ್ಟು ವ್ಯವಹಾರದ ಮೊತ್ತ.

31—7—41	31—7—42
ರು. 1,60,292-13-4	ರು. 2,71,722-10-10

ನಮ್ಮಲ್ಲಿ ಸರ್ವ ವಿಧವಾದ ಬ್ಯಾಂಕಿಂಗ್ ವ್ಯವಹಾರವು ನಡೆಯುತ್ತದೆ. ಹಿಂದೂದೇಶದ ಯಾವ ಭಾಗದಲ್ಲಾದರೂ ನಿಮಗೆ ವ್ಯಾಪಾರೀ ಸೌಕರ್ಯವನ್ನೊದಗಿಸಿಕೊಡುತ್ತೇವೆ. ಭಂಗಾರ ಮತ್ತು ಇತರ ಉಪಯುಕ್ತ ಮಾಲಿನ ಮೇಲೆ ಅಲ್ಪದರದ ಬಡ್ಡಿಯಿಂದ ಸಾಲವು ದೊರೆಯುತ್ತದೆ. ನಮಗೆ ನ ಬಂದು ಎಲ್ಲಾ ತಿಳಿಮಾಡಿಕೊಳ್ಳಿರಿ.

ಶಾಖೆಗಳು — 1 ತಿಮ್ಮನೆಚರ್ಲ.

2 ಕೊಟ್ಟೂರು. 3 ಉರವಕೊಂಡ. 4 ಪತ್ತಿಕೊಂಡ. 5 ಹರಪನಹಳ್ಳಿ

ಹೆಚ್. ಶೇಕಾರಾಮರೆಡ್ಡಿ, ಬಿ. ಎ. ಬಿ. ಎಲ್ (ಎಂ. ಎಲ್. ಎ.)
ಡೈರೆಕ್ಟರುಗಳ ಬೋರ್ಡು ಅಧ್ಯಕ್ಷರು.

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ಹಿಂದೂ ಮಹಾಸಭಾ ಮುಖಂಡರ ಶಾಂತಿಸಂಧಾನ ಪ್ರಯತ್ನ.

ಬಂಗಾಳ ಸರಕಾರದ ಮಂತ್ರಿಗಳೂ, ಹಿಂದೂ ಮಹಾಸಭಾ ಮುಖಂಡರೆಲ್ಲೂ ಬ್ಯಾರಿ ಡಾಕ್ಟರ್ ಶಾಮಪ್ರಸಾದ ಮುಖರ್ಜಿಯವರು ದೇಶದಲ್ಲಿ ಶಾಂತಿಯನ್ನು ಸ್ಥಾಪಿಸಲು ಕಾಂಗ್ರೆಸ್ಸೇತರ ಮುಖಂಡರೊಡನೆ ದೆಹಲಿಯಲ್ಲಿ ಚರ್ಚಿಸುತ್ತಲಿರುವರು. ಬ್ರಿಟಿಷ ಸರಕಾರಕ್ಕೆ ವಿಕಮುಖವಾದ ಬೇಡಿಕೆಯನ್ನು ಕೊಟ್ಟು ಅವರು ತಿರಸ್ಕರಿಸದಂತೆ ಮಾಡಲು ತಕ್ಕ ತಳಹದಿಯನ್ನೇರ್ಪಡಿಸಲು ಆಲೋಚಿಸುತ್ತಿರುವರು. ಡಾ. ಮುಖರ್ಜಿಯವರು ಇತರರೊಡನೆ ವಿಚಾರ ನಿನಿಮಯಮಾಡಿ ಕೆಲವೊಂದು ಅಂಶಗಳನ್ನು ಬೇಡಿಕೆಗಾಗಿ ಸಿದ್ಧಪಡಿಸಿರುವರು ಅವು ಹೀಗಿವೆ.

1) ಹಿಂದೂಸ್ಥಾನವು ಸ್ವಾತಂತ್ರ್ಯವಾಗುವುದೆಂದು ಸಾರಬೇಕು.

2) ಬ್ರಿಟಿಷ್ ಸರಕಾರವು ಹಿಂದೂಸ್ಥಾನದ ರಾಷ್ಟ್ರೀಯ ಸರಕಾರದ ಸ್ಥಾಪನೆಗೆ ಪ್ರಯತ್ನಿಸಿ ಅಧಿಕಾರವನ್ನು ಬಿಟ್ಟು ಕೊಡಬೇಕು.

3) ರಾಷ್ಟ್ರೀಯ ಸರಕಾರವು ಎಲ್ಲಾ ಪಾರ್ಟಿಗಳ ಪ್ರತಿನಿಧಿಗಳನ್ನೊಳಗೊಂಡಿರಬೇಕು.

4) ಅಂಥಾ ಅಧಿಕಾರವನ್ನು ಬಿಟ್ಟುಗೊಡುವ ಪೂರ್ವ ಲಂಡನದಲ್ಲಿಯ ಇಂಡಿಯಾ ಆಫೀಸನ್ನು ತೆಗೆದು ಹಾಕಬೇಕು.

5) ಪ್ರಾಂತಗಳಲ್ಲೂ ಕೂಡ ಎಲ್ಲಾ ಪಾರ್ಟಿಗಳನ್ನೊಳಗೊಂಡ ಸರಕಾರಗಳು ನಿರ್ಮಿತವಾಗಬೇಕು.

6) ಹಿಂದೂಸ್ಥಾನದ ರಾಷ್ಟ್ರೀಯ ಸರ್ಕಾರವು ಅಚ್ಚಿನರಾಷ್ಟ್ರಗಳ ವಿರುದ್ಧ ಯುದ್ಧ ಹೂಡಲು ನಿರ್ಣಯಿಸಿ ಅವರೊಡನೆ ಪ್ರತ್ಯೇಕ ಸಂಧಿ ಮಾಡಿಕೊಳ್ಳಬಾರದು.

7) ರಾಷ್ಟ್ರೀಯ ಸರಕಾರವು ಸಂಯುಕ್ತ ರಾಷ್ಟ್ರಗಳೊಡನೆ ಒಂದೇ ವಿಧವಾದ ಯುದ್ಧ ನೀತಿಯನ್ನು ಅನುಸರಿಸಬೇಕು.

8) ಭಾರತದ ದಂಡ ನಾಯಕರು (ಕಮಾಂಡರ್ ಇನ್ ಚೀಫ್) ಯುದ್ಧ ನಡೆಸಲು ಬದ್ಧರಾಗಿರಬೇಕು.

9) ಭಾರತವನ್ನು ಯುದ್ಧ ಮುಖವಲ್ಲಿ ನಡೆಸಿ ದೇಶದಲ್ಲಿ ಇಂಡಸ್ಟ್ರೀಗಳ ಉದ್ಯಮವನ್ನು ಹೆಚ್ಚಿಸಬೇಕು.

10) ಭಾರತದ ರಾಜ್ಯ ಘಟನೆಯು ಯುದ್ಧಾನಂತರ ಕಾಂಸ್ಟಿಟ್ಯೂಟ್ ಅಸೆಂಬ್ಲಿ ಅಂದರೆ ಪ್ರಜಾಪ್ರತಿನಿಧಿ ಸಭೆಯ ಮೂಲಕ ನಿಶ್ಚಿತವಾಗಬೇಕು. ಅಲ್ಪ ಸಂಖ್ಯಾಕರ ತೊಡಕನ್ನು ಅಂತರರಾಷ್ಟ್ರೀಯ ಸಮಿತಿಗೊಪ್ಪಿಸಿ ತೀರ್ಮಾನಿಸಿಕೊಳ್ಳಬೇಕು.

ಯುದ್ಧ ವಾರ್ತೆಗಳು.

ಚರ್ಚಿಲರ ಭಾಷಣ :— ಬ್ರಿಟನ ಪ್ರಧಾನ ಮಂತ್ರಿಗಳಾದ ಚರ್ಚಿಲರವರು ಹೌಸ್ ಆಫ್ ಕಾಮನ್ಸ್‌ದಲ್ಲಿ 4ನೆ ತಾರೀ ಭಾಷಣ ಕೊಟ್ಟರು. ಯುದ್ಧ ಸಂಬಂಧವಾಗಿ ಸಂಕ್ಷಿಪ್ತವರದಿಯನ್ನು ಕೊಟ್ಟರು. ಮೆಡಿಟೇರಿನಿಯನ್ ಸಮುದ್ರದ ದ್ವೀಪವಾದ ಮಾಲ್ಟಾಕ್ಕೆ ಸಹಾಯವನ್ನೊದಗಿಸುವಾಗ ಸಫಲವಾದರೂ ಆದ್ವೀಪದವರಿಗೆ ಇನ್ನೂ ಕೆಲ ತಿಂಗಳು ಕಾಲ ವಿರೋಧಿಸುವ ಶಕ್ತಿಯನ್ನು ಪ್ರದಾನ ಮಾಡಲಾಯ್ತೆಂದರು. ಫ್ರಾನ್ಸ್ ತೀರದ ದಿಪ್ಪೆ ಬಂದರ ಮೇಲಾದ ದಾಳಿಯಲ್ಲಿ ಇಬ್ಬಾಗದವರಿಗೂ ಒಳಿತು ಸಫಲವಾಯ್ತೆಂದರು ರಷ್ಯಾದ ಸ್ಥಿತಿ ಬ್ರಿಟಿಷ್ ಅಮೆರಿಕಾದವರ ಸಹಾಯದಿಂದ ರಷ್ಯನರಿಗೆ ಸಮಾಧಾನವಾಗಿಲ್ಲವೆಂತಲೂ, ಆದರೂ, ಮಿತ್ರ ರಾಷ್ಟ್ರಗಳ ಸಹಾಯದಿಂದಲೇ ಅವರು ಗೆಲ್ಲುವುದು ಸಾಧ್ಯವೆಂಬುದನ್ನು ಅವರಿಗೆ ಮನದಟ್ಟುಮಾಡಿ ಬಂದಿರುವರೆಂತಲೂ ಹೇಳಿದರು. ರಷ್ಯನರು ನಾಜಿಗಳನ್ನು ಮೂಲೋತ್ಪಾಟನ ಮಾಡಲು ಕೃತನಿಶ್ಚಯರಾಗಿರುತ್ತಾರೆ.

ಈಜಿಪ್ಟ್ :— ಜರ್ಮನ ಸೈನ್ಯವು ಜನರಲ್ ರೊಮೆಲ್ಲರ ಆಧಿಪತ್ಯದಲ್ಲಿ ಎಲ್ ಅಲಮೀನ ಭಾಗದಿಂದ ಹಿಂದೆಗೆಯತೊಡಗಿದೆಯೆಂದು ತಿಳಿದು ಬಂದಿದೆ. ಅವರು ಕ್ರಮವಾಗಿ ಒಳ್ಳೆಯ ರೀತಿಯಿಂದ ಹಿಂದೆ ಹೋಗಿರುವ ಕಾರಣ ಯುದ್ಧವು ಇನ್ನೂ ಮುಗಿದಂತಾಗಿಲ್ಲವೆಂದು ಹೇಳಲಾಗಿದೆ.

ಸ್ಟಾಲಿನಗ್ರಾಡ :- ರಷ್ಯಾದ ಪ್ರಬಲ ಟ್ಯಾಂಕ್ ನಗರವಾದ ಇದನ್ನು ಸ್ವಾಧೀನ ಪಡಿಸಿಕೊಳ್ಳಲು ಭಯಂಕರ ಯುದ್ಧವು ನಡೆದಿದ್ದು ಜರ್ಮನರು ಉಪನಗರದಲ್ಲಿ ಪ್ರವೇಶಿಸಿರುವರೆಂದು ಒಂದು ಸುದ್ದಿ ಇದೆ. ಈ ಭದ್ರನಗರದ ಪತನವು ಕೆಲ ಘಂಟೆಗಳಲ್ಲಾಗಲಿರುವರೆಂದು ಕೆಲ ಮಿಲಿಟರಿ ತಜ್ಞರ ತರ್ಕವುಂಟು

ನೋವಾರಿಸ್ಕ್ :— ಕಪ್ಪು ಸಮುದ್ರದ ಬಂದರಾದ ಈ ನಗರವು ತಮ್ಮ ವಶವಾಯ್ತೆಂದು ಜರ್ಮನರು ಹೇಳಿಕೊಳ್ಳುತ್ತಾರೆ. ಆದರೆ ಲಂಡನ್ನಿನಲ್ಲಿ ಇದು ಧೃಡಪಟ್ಟಿಲ್ಲ. ಈ ಎರಡು ನಗರಗಳ ಭಾಗದಲ್ಲೂ ಜರ್ಮನರಿಗೆ ಅತಿಶಯ ನಷ್ಟವಾಗುತ್ತಲಿದೆ

ಲಕ್ಸೆಂಬರ್ಗ :— ಪ್ರಪಂಚದಲ್ಲಿ ಅಧಿಕವಾಗಿ ಉಪ್ಪು ತಯಾರು ಮಾಡುವ ಕೇಂದ್ರಗಳಲ್ಲೊಂದಾದ ಜರ್ಮನಿಯ ಆಧೀನದಲ್ಲಿರುವ ಲಕ್ಸೆಂಬರ್ಗ ಕಾರ್ಖಾನೆಗಳ ಕೆಲಸಗಾರರೆಲ್ಲಾ ಮುಷ್ಕರ ಹೂಡಿರುವರು. ರಷ್ಯಾದ 4 ತಿಂಗಳ ಯುದ್ಧದಲ್ಲಿ ಜರ್ಮನಿಯ 73 ವಿಭಾಗ ಸೈನ್ಯಗಳು ನಾಶವಾಗಿವೆಯೆಂದು ಮಾಸ್ಕೋ ಪ್ರಕಟನೆಯು ತಿಳಿಸುತ್ತದೆ

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦ ೮—೦
ಕನ್ನಡ ಉಪೋಪನಿಷತ್ತುಗಳು	೦—೯—೦
ವಿಶಾನುಭವ ಜ್ಯೋತಿ	೦—೮—೦
ಸುಮತಿ ಶತಕ	೦—೧—೬

ಅಂಚೆ ವೆಚ್ಚ ಬೇರೆ. ಪುಸ್ತಕ ವ್ಯಾಪಾರಿಗಳಿಗೆ ಹೆಚ್ಚು ಪುಸ್ತಕ ಕೊಳ್ಳುವರಿಗೆ ಧಾರಾಳವಾದ ಕಮೀಷನ್.

ಶಾಲಿವ ಸುಬ್ಬಣ್ಣ ಮರ್ಚೆಂಟ್ಸ್, ಬಳ್ಳಾರಿ.

ಬಳ್ಳಾರಿ ಪೇಟೆ ಧಾರಣೆ.

11—9 -42 ಶುಕ್ರವಾರ.

ಭಂಗಾರ ತೊಲೆ 1-ಕ್ಕೆ ರೂ		57-0-0
ಸಾವರಿನ್		43-0-0
ಬೆಳ್ಳಿ 100 ತೊಲೆ ರೂ		89-0-0
ಅರಳೆ ಭಾರಂ		ಕೇಟು ಇಲ್ಲಾ.
ಅರಳೆ ಮುಂಗಾರಿ 12 ಮಣಕ್ಕೆ		,,
ಅಕ್ಕಿ 1 ರೂ. ಗೆ	4 ರಿಂದ 5	ಸೇರು
ಜೋಳ	,, ...	3½ ,,
ಗೋಧಿ	,, ...	— ,,
ಜೋಳ	,, ...	10½ ,,
ನವಣೆ	,, ...	14¼ ,,
ಸಜ್ಜೆ	,, ...	10½ ,,
ನೆಲಗಡಲೆ	...	ಕೇಟುಯಿಲ್ಲ.
ಸಕ್ಕರೆ	ವೀಸ	0—8-6
ಬೆಲ್ಲ	....	20-0-0
ಹಿಪ್ಪು ಎಣ್ಣೆ	...	5 -0-0

ರಾಜಕೀಯ ಬಿಕ್ಕಟ್ಟು. ರಾಜಾಜಿಯವರ ಸಲಹೆ

ಸಂಯುಕ್ತ ರಾಷ್ಟ್ರಗಳು ಘೋಷಣೆ ಮಾಡಬೇಕು.

ಮದ್ರಾಸಿನ ಹಿಂದಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಶ್ರೀ ರಾಜಗೋಪಾಲಾಚಾರಿಯವರು ಆಗಷ್ಟ್ 22 ನೆಯ ತಾ॥ ದಿನ ಪಟೇರಗಳ ಸೃತ್ತ ಪತ್ರಿಕೆಗಳಿಗೆ ಒಂದು ಪತ್ರ ಬರೆಯುತ್ತಾ ಈಗ ಹಿಂದೂಸ್ತಾನದಲ್ಲಿ ಪ್ರಕಟವಾಗಿದೆ "ಹಿಂದೂಸ್ತಾನದ ಪರಿಸ್ಥಿಯು ಬಹಳ ಭಯಂಕರವಾದ. ಯಾವ ರಾಷ್ಟ್ರೀಯ ಸರಕಾರದಲ್ಲೂ ಇಷ್ಟದ ಅನುಭವಸ್ಥರಾದ ವ್ಯಕ್ತಿಗಳು ವೈಸ್ರಾಯರ ಕೌನ್ಸಿಲದಲ್ಲಿದ್ದಾರೆಂದು ಹೇಳಲಾಗಿದೆ. ಇದು ಬಂದು ನಿಜ. ರಾಷ್ಟ್ರೀಯ ಸರಕಾರದಲ್ಲೂ ಸಹ ಅನುಭವೀ ವ್ಯಕ್ತಿಗಳನ್ನು ಕಿತ್ತುಹಾಕುವದಿಲ್ಲ. ಎಂಥಾ ಅನುಭವಿಗಳೇ ಇರಲಿ ಜನತೆಯ ಉತ್ಪಾಹವನ್ನುಬ್ಬಿಸಿ ಮೋರಾಣುವ ಯೋಧರಿಗೆ ಪುಷ್ಟಿಯನ್ನೂ ಸಹಕಾರವನ್ನೂ ಕೊಡಲು ಸಾಧ್ಯವಿಲ್ಲ ಜನರು ತ್ಯಾಗ ಮಾಡಲು ಈಗಿನ ಪರಿಸ್ಥಿತಿಯಲ್ಲಿ ಶಕ್ಯವಿಲ್ಲ ಕಾಂಗ್ರೆಸ್ ಜನರನ್ನು ಬಂಧಿಸಿ ಜೈಲುಗಳಲ್ಲಿಟ್ಟಿದ್ದಾರೆ. ಮುಸ್ಲಿಂ ಲೀಗು ಸದ್ಯದ ವಾತಾವರಣಕ್ಕನುಸರಿಸಿ ನರ್ತಿಸಲಿಲ್ಲ. ಹಳೆಯ ಸಮಸ್ಯೆಯೇ ಅದು ಮತ್ತೆ ಸಮರ್ಥಿಸಿದೆ.

ಬ್ರಿಟಿಷ್ ಸರಕಾರವು ಈಗ ಶಾಂತಿಯಿಂದಿದ್ದರೆ ಭಾರತದ ಭದ್ರತೆಯೂ, ಮಿತ್ರಪಕ್ಷಗಳ ಉದ್ದೇಶವೂ ಅಪಾಯಕ್ಕೆ ಸಿಕ್ಕಂತಾಗುವುದು. ಪ್ರಯತ್ನದಲ್ಲಿ ತೊಂದರೆಯುಂಟು. ಆದರೆ ಸುಮ್ಮನೆ ಕೂತರೆಮಾತ್ರ ಹೆಚ್ಚಿನ ಅಪಾಯವಿದೆ.

ಭಾರತ ಸಮಸ್ಯೆಯ ನಿರ್ಣಯಕ್ಕೆ ಮುಸ್ಲೀಂ ಲೀಗಿನವರು ತಂದೊಡ್ಡಿರುವ ವಿಘ್ನವೆಂದರೆ ಉತ್ತರದ ಪ್ರಾಂತ್ಯಗಳಲ್ಲಿ ಸ್ವತಂತ್ರ ಸಂಸ್ಥಾನಗಳನ್ನು ನಿರ್ಮಿಸುವುದು. ಈ ಬೇಡಿಕೆಯು ಯುದ್ಧಮುಗಿದನಂತರ ಸ್ವತಂತ್ರ ಹಿಂದೂಸ್ತಾನದ ರಚನೆಯಾಗುವಾಗ ವಿಮರ್ಶಿಸಲ್ಪಡಬಹುದು. ಮುಸ್ಲಿಂಲೀಗು ಈಗಲೇ ಬೇರೆಯಾಗಬೇಕೆಂದು ಕೇಳುವುದಿಲ್ಲ. ಭಾರತದ ಸಾರ್ವಭೌಮತ್ವವನ್ನು ಮುಂಜೂಮಾಡುವ ಸಂಯುಕ್ತರಾಷ್ಟ್ರಗಳು ಮುಸ್ಲಾನರ ಈ ಬೇಡಿಕೆಯನ್ನು ಇತ್ಯರ್ಥಾಡುವ ಹೊರಯನ್ನು ಹೊತ್ತುಕೊಳ್ಳಬೇಕು. ಕಾಂಗ್ರೆಸ್‌ನವರು ಯಾವಾಗಲೂ ಪಂಚರ ನಿರ್ಣಯದ ತತ್ವಕ್ಕೆ ಒಪ್ಪಿರುವರು. ಹಿಂದೂಸ್ತಾನದ ರಕ್ಷಣೆಯಲ್ಲಿ ಬಹಳ ಆಸಕ್ತಿ ಇರುವ ಸಂಯುಕ್ತ ರಾಷ್ಟ್ರದವರು ಈ ಸಮಸ್ಯೆಯನ್ನು ಬಗೆಹರಿಸಬೇಕು.

ಹಿಂದೂಸ್ತಾನ.

ಅಣ್ಣಾಮಲೆ ವಿಶ್ವವಿದ್ಯಾಲಯದ ಸೈಸಭಾಸಲರಾಗಿದ್ದ ಸರ್. ಕೆ ವಿ. ರೆಡ್ಡಿಯವರು ಮದ್ರಾಸಿನಲ್ಲಿ ತಮ್ಮ 67 ನೆಯ ವಯಸ್ಸಿನಲ್ಲಿ ಮರಣಹೊಂದಿದರು.

ಯು. ಪಿ. ಗವರ್ನರರಯ ಬೇರಿ ಜಿಲ್ಲೆಯಲ್ಲಿ ಈವಾರ 30 ಸಾವಿರ ಸಾಮೂಹಿಕ ದಂಡವನ್ನು ವಿಧಿಸಿರುವರು. ಲಕ್ನೋ ಗೊಂಡಾಫೈಜ್ಹೆ ಲೈನಿನಲ್ಲಿ ಎರಡು ಸ್ಪೆಷಲ್ ರೈಲುಗಳು ಸುಡಲಾಗಿವೆ

ಕಲ್ಕತ್ತಾನಗರದಲ್ಲಿ ಟ್ರಾಂವೇ ಲೈನಿಗೆ ದಕ್ಕೆ ಬಾಗುತ್ತಲೇ ಇದೆ ರಹಮ್ಮ ಜೂರು ಪೋಸ್ಟಾಫೀಸಿನಲ್ಲಿ 750 ರೂ. ಕಳುವಾಗಿದೆ.

ನಾರ್ಥಾದಲ್ಲಿ 144 ನೇ ಕಲಂ ಮುರಿಯಲ್ಪಟ್ಟಿತು ಇವರಲ್ಲಿ 7 ಜನ ಸ್ತ್ರೀಯರಿರುತ್ತಾರೆ.

ಬಾಪೂಜಿಯವರ ಸಂದಾನ ಯತ್ನಕ್ಕೆ ಸಹಾಯ ಮಾಡಲು ಹಿಂದೂಮಹಾಸಭಾಧ್ಯಕ್ಷರಾದ ಶ್ರೀ ಸಾವರ್ಕರರವರು ನಿರಂತಿ ಮಾಡಿರುವರು.

ಭಾಗಲ್ಪುರದ ಜೈಲಿನಲ್ಲಿದಂಗೆ

28 ಕೈದಿಗಳು ಸತ್ತರು. 87 ಜನರಿಗೆ ಘಾಯ.

ಭಾಗಲ್ಪುರ ಜೈಲಿನಿಂದ 600 ಕೈದಿಗಳು ಹೊರಗೆ ಹೋಗಲು ಯತ್ನಿಸಿದಾಗ ಜೈಲಿನ 3 ನೌಕರರು ಸತ್ತರು. ಡೆಪ್ಯುಟಿ ಸೂಪರಿಂಟೆಂಡೆಂಟರನ್ನೊಳಗೊಂಡು ಇಬ್ಬರು ಅಧಿಕಾರಿಗಳು ಜೀವ ಸಹಿತವಾಗಿ ಸುಡಲ್ಪಟ್ಟರು. ಎಂಬುದಾಗಿ ಬೀಹಾರ ಸರಕಾರದ ಪ್ರಕಟಣೆಯು ಹೇಳುತ್ತದೆ. ಒಳಗಿನ ಗಲಾಟೆಯನ್ನಡಗಿಸಲು ಬ್ರಿಟಿಷ್ ಸೈನ್ಯವೂ ತಸ್ತ್ರಪಾಣಿ ಪೋಲೀಸರೂ ಹೋಗಿದ್ದರಂತೆ.

ಬೊಂಬಾಯಿಯಲ್ಲಿ:— ಪೋಲೀಸರು 9 ನೆಯ ತಾ॥ 4 ಸಲ ಗುಂಡು ಹಾರಿಸಿದರು 150 ಜನ ಸ್ತ್ರೀಯರೂ, 200 ಜನ ಪುರುಷರೂ ಅದಿನ ಎಂಥಿಸಲ್ಪಟ್ಟರು.

ಸೂರತ್ — ನಲ್ಲಿ 9 ಜನರೂ, ಅಹಮ್ಮದಾಬಾದಿನಲ್ಲಿ 3 ಸ್ತ್ರೀಯರೂ ಬಂಧಿಸಿದ್ದಾರೆ.

ಮದ್ರಾಸಿನಲ್ಲಿ ಬಂಧಿಸಲ್ಪಟ್ಟ ಖೈದಿ ನಾಯಕರಾದ ಶ್ರೀ ರಂಗಾರವರು ಬಿಡುಗಡೆ ಮಾಡಲ್ಪಟ್ಟರು.

ಸರಹದ್ — ಪ್ರಾಂತ್ಯದ ಬನ್ನೂ ನಗರದಲ್ಲಿ ಶಾಲೆಗಳನ್ನು ಪಿಕೆಟ್‌ಮಾಡಿ 63 ಜನರು ಬಂಧಿಸಲ್ಪಟ್ಟರುವರು.

ಅಣ್ಣಾಮಲೆ ವಿಶ್ವವಿದ್ಯಾಲಯವು ಸಿಕೆಟ್ ಆಗುತ್ತಲಿದೆ

ಚಿಂಗಲ್‌ಪಟ್ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಶ್ರೀ ವೇಣುಗೋಪಾಲ ರೆಡ್ಡಿಯವರು ಬಂಧಿಸಲ್ಪಟ್ಟರು.

ಹೊಸಪೇಟೆ ಮ್ಯುನಿಸಿಪಲ್ ಹೈಸ್ಕೂಲ್‌ನ ಒಂದು ಭಾಗವನ್ನು ಸುಟ್ಟಿರುವುದಾಗಿ ಸುದ್ದಿ ಬಂದಿದೆ.

ಚರ್ಚಿಲ್ಲರ ಭಾಷಣದ ಸಾರಾಂಶ

"ಹಿಂದೂಸ್ತಾನದಲ್ಲಿ ಪರಿಸ್ಥಿತಿಯು ಸುಧಾರಿಸುತ್ತಲಿದೆ. ಬ್ರಿಟಿಷ ಸರಕಾರದ ನೀತಿಯೆಂದರೆ ಸರ್ ಸ್ಟಾಫರ್ಡ ಕ್ರಿಪ್ಸರು ಹಿಂದೂಸ್ತಾನಕ್ಕೆ ತೆಗೆದುಕೊಂಡು ಹೋದ ಸೂಚನೆಗಳೇ ! ಬ್ರಿಟಿಷ್ ಸರಕಾರದ ನಿಶ್ಚಿತವಾದ ನೀತಿಯೇ ಅದು. ಕಾಂಗ್ರೆಸ್ ಸಂಸ್ಥೆಯು ಹಿಂದೂಸ್ತಾನದ ಪ್ರತಿನಿಧಿಯಲ್ಲ ಕಾಂಗ್ರೆಸ್‌ನವರು ನಡಿಸುತ್ತಿರುವ ಕಾರ್ಯಗಳಿಗೆ ಜವಾಬಿ ವಂಚನೆಯದಳದ ಸಹಾಯವಿದೆ. ಅಸ್ಸಾಂ ಬಂಗಾಳ ಭಾಗಗಳಲ್ಲಿರುವ ಮಾರ್ಗ ಸೌಕರ್ಯಗಳನ್ನು ನಾಶಪಡಿಸುತ್ತಿರುವದನ್ನು ನೋಡಿದರೆ ಇದು ವ್ಯಕ್ತಪಡುತ್ತಲಿದೆ. ಈಗ ಸುಮಾರು 500 ಜನರು ನತ್ತಿರುವರು ಹಿಂದೂಸ್ತಾನದ ನಮ್ಮ ಸಂಬಂಧದಲ್ಲಿ ಯಾವಾಗಲೂ ಇಲ್ಲದಿದ್ದ ಪ್ಪು ಬ್ರಿಟಿಷ್ ಬಿಳಿಯಸೈನ್ಯವನ್ನು ಈಗ ಅಲ್ಲಿಟ್ಟಿದ್ದೇವೆ ಈಗ ನಿರಾಶೆಯ ಕಾರಣ ವೇನಿಲ್ಲ".

ಬ್ರಿಟಿಷರು ಮೆಡಿಟರೇನಿಯನ್ ಪ್ರದೇಶವನ್ನೆಲ್ಲಾ ಆಕ್ರಮಿಸಿಕೊಳ್ಳಲಿರುವರು. ಇದಕ್ಕೆ ಅಮೆರಿಕಾದ ಒಪ್ಪಿಗೆಯುಂಟು.

ಒಂದು ವರ್ಷದ ಹಿಂದೆ ಇದ್ದುದಕ್ಕಿಂತ ಈಗ ಜರ್ಮನಿಯ ಅಧೀನದಲ್ಲಿ ಹೆಚ್ಚು ಜಲಾಂತರ್ಗಾಮಿಗಳಿರುವವೆ. ಮಿತ್ರಪಕ್ಷದ ಹಡಗುಗಳ ನಾಶವು ಇನ್ನೂ ಭಯಂಕರ ವಿರುವುದರಿಂದ ಮುಳುಗಿಸಲ್ಪಟ್ಟ ಹಡಗುಗಳ ಬದಲು ಬೇರೆ ಕಟ್ಟಬೇಕು. ಅಲ್ಲದೆ ಜರ್ಮನ್ ಜಲಾಂತರ್ಗಾಮಿಗಳನ್ನೂ ನಾಶಪಡಿಸಲು ಪ್ಲಾನುಗಳಾಗಬೇಕು. ಎಂದು ಲಂಡನ್ನಿನ ಅಧಿಕೃತ ವಾರ್ತೆಯು ತಿಳಿಸುತ್ತದೆ'

Nava Bharat Patron
Sri. Vittal Seshappa,
Merchant & Banker,
BELLARY.

ಭಾನುವಾರ 13—9—42.

ಕ್ಷಾಮ ಕೆಲಸಗಳನ್ನು ಮುಂದುವರಿಸಿರಿ

ಅದವಾನಿ ತಾಲೂಕಿನ 4 ಕೇಂದ್ರಗಳು ಆಲೂರು ತಾಲೂಕಿನ ಹೆಬ್ಬಟ್ಟಿ ಸಿರುಗುಪ್ಪೆ ತಾಲೂಕಿನ ರಾವಿಹಾಳು ಮತ್ತು ಮುರವಣಿ ಕೇಂದ್ರಗಳಲ್ಲಿ ಸುಮಾರು ನಲವತ್ತು ಸಾವಿರ ಜನರು ಸಹಾಯ ಹೊಂದುತ್ತಿರುವರು ಈ ಕ್ಷಾಮ ಪ್ರದೇಶಗಳ ಕೆಲ ಭಾಗಗಳಲ್ಲಿ ಮಳೆಯಾಗಿದ್ದರೂ, ಅದು ಸಾಕಷ್ಟಿರುವದಿಲ್ಲ. ಪೈರುಗಳು ಕಟಾವಿಗೆ ಬರುವುದು. ಇನ್ನೂ ಒಂದೆರಡು ತಿಂಗಳಾಗುವುದು. ಹೊಲಗಳಲ್ಲಿ ಈಗ ಕೂಲಿ ಕೆಲಸವಿಲ್ಲ. ಕೊನೆಯಪಕ್ಷ ಅಕ್ಟೋಬರ್ ತಿಂಗಳ ಅತ್ಯಂದವರಿಗಾದರೂ ಕೆಲಸ ಸಾಗಿಸುವುದು ಅತಿ ಅವಶ್ಯಕವಾಗಿದೆ. ಕ್ಷಾಮ ಕೇಂದ್ರಗಳಿಗೆ ಕೂಲಿ ಕೆಲಸಕ್ಕಾಗಿ ಬರುತ್ತಿರುವವರ ಸಂಖ್ಯೆಯು ಹೆಚ್ಚುತ್ತಲಿದೆಯಾಗಲಿ ಕಡಿಮೆಯಾಗಿಲ್ಲ. ಇದರಿಂದ ಆ ಭಾಗಗಳಲ್ಲಿರುವ ತೊಂದರೆಯು ಚನ್ನಾಗಿ ವ್ಯಕ್ತಪಡುತ್ತದೆ. ಈ ಕಾರಣ ಜಿಲ್ಲಾ ಕಲೆಕ್ಟರ್‌ರವರು ಈ ಅಂಶವನ್ನು ಗಮನಿಸಿ ಅಕ್ಟೋಬರ್ ಅಂತ್ಯದವರಿಗೆ ಕೆಲಸವನ್ನು ಮುಂದುವರಿಸುವರೆಂದು ನಂಬಿರುತ್ತೇವೆ.

ಕ್ಷಾಮ ಕೇಂದ್ರಗಳಲ್ಲಿ ಕೆಲಸ ಮುಗಿಯಿತೆಂದರೆ ಗ್ರಾಮಗಳ ಸ್ವಚ್ಛತೆ, ಗುಂಡಿಗಳನ್ನು ಮುಚ್ಚುವದು ಮೊದಲಾದ ಕಾರ್ಯಗಳನ್ನು ಕೈಕೊಳ್ಳಲು ಶ್ರೀ ಹೆಚ್. ಶೀತಾರಾಮರೆಡ್ಡಿ ಯವರು ಕಲೆಕ್ಟರವರಿಗೆ ಸೂಚಿಸಿದ್ದರು. ಕಲೆಕ್ಟರವರೂ ಕೂಡ ಒಪ್ಪಿದ್ದರು. ಗ್ರಾಮಗಳಲ್ಲಿ ನೂರಾರು ಕಾದ ಕೆಲಸವಿದ್ದೇ ಇದೆ. ಈ ಗ್ರಾಮಗಳ ಕಾರ್ಯವಾಗಿದ್ದರೂ ಬರುವ ಕ್ಷಾಮ ಪೀಡಿತರಿಗೆ ಬೇರೆ ಕೆಲಸ ಹೊದಗಿಸ ಬೇಕಾಗುತ್ತದೆ. ಬೇರೆ ರಸ್ತೆಯ ಕಾರ್ಯವನ್ನಾದರೂ ಕೈಕೊಳ್ಳುವುದುತ್ತಮ. ಸಿರುಗುಪ್ಪೆ ತಾಲೂಕಿನ ರಾವಿಹಾಳು ಮತ್ತು ಮುರವಣಿ ರಸ್ತೆಯ ಕಾರ್ಯವು ಮುಗಿದಿರುವದರಿಂದ ಹಡ್ಡೊಳ್ಳಿ ಸಿರುಗುಪ್ಪೆ ರಸ್ತೆಯನ್ನು ಕೈಗೊಳ್ಳಬೇಕು. ಜಿಲ್ಲಾ ಬೋರ್ಡಿನಲ್ಲಿ ಸಿರುಗುಪ್ಪೆ - ಬಾಗುವಾಡಿ ರಸ್ತೆಯು ಮುಂಜೂರಾಗಿ ಎಷ್ಟೋ ವರ್ಷಗಳಾಯಿತು. ಹಣವಿಲ್ಲದ ಕಾರಣ ಬಿಟ್ಟಿರುವರು. ಸರಕಾರದವರು ರಸ್ತೆಯನ್ನೇರ್ಪಡಿಸಿ ಅದನ್ನು ಸರಿಯಾಗಿಡಲು ಜಿಲ್ಲಾ ಬೋರ್ಡಿಗೆ ಒಪ್ಪಿಸಬೇಕು. ಕಲೆಕ್ಟರವರು ಇವುಗಳನ್ನೆಲ್ಲಾ ಗಮನಿಸಬೇಕೆಂದು ನಮ್ಮ ಸೂಚನೆ.

ಬಳ್ಳಾರಿ ಜಿಲ್ಲೆಯ ಅಕೋಗ್ಯ.

[5-9-42] ಜಿಲ್ಲೆಯ 25 ಹಳ್ಳಿಗಳಲ್ಲಿ 79 ಜನರಿಗೆ ಕಾಲರಾ ತಗಲಿ 46 ಜನರು ಸತ್ತಿರುವರು. 5 ಹಳ್ಳಿಗಳಲ್ಲಿ 24ಜನರಿಗೆ ಪ್ಲೇಗು ತಗಲಿ 11 ಜನರು ಸತ್ತರು. ಮೈಲಿ ಬೇನೆಯು 2 ಹಳ್ಳಿಗಳಲ್ಲಿ ಮಾತ್ರವಿದೆ 6 ಜನರಿಗೆ ತಗಲಿ ಒಬ್ಬನು ಮಾತ್ರ ಸತ್ತಿರುವನು.

ಬಳ್ಳಾರಿ ಜಿಲ್ಲೆಯಲ್ಲಿ ಕ್ಷಾಮ.

[5-9-42ನೆ ವಾರ ಅದವಾನಿ ಎಮ್ಮಿಗನೂರು ಭಾಗದ 4 ಕೇಂದ್ರಗಳಲ್ಲಿ 27836 ಜನರು, ಕಳೆದವಾರ ಸಹಾಯ ಹೊಂದಿದರು ಕೂಲಿ ಕೆಲಸವಿಲ್ಲದೆ 6590 ಜನರು ಸಹಾಯ ಹೊಂದಿದರು. ಆಲೂರು ತಾ ಹೆಬ್ಬಟದಲ್ಲಿ 6451 ಜನರೂ, ಸಿರುಗುಪ್ಪೆ ತಾ. ವತ್ತು ಮುರವಣಿಯಲ್ಲಿ 5422 ಜನರೂ, ಸಹಾಯ ಹೊಂದಿದರು ಇದೂ ಜಿಲ್ಲದೆ ಅದವಾನಿ ಆಲೂರು ಎಮ್ಮಿಗನೂರು ಸಿರುಗುಪ್ಪೆ ಭಾಗದ ಹಳ್ಳಿಗಳಲ್ಲಿ 2587 ಜನರಿಗೆ ಹಣದ ಸಹಾಯ (Cash Doles) ಕೊಡಲಾಯಿತು ರಾಯದುರ್ಗ ಅದವಾನಿ ತಾಲೂಕುಗಳಲ್ಲಿ 3612 ನೆಯ್ಕಾರರಿಗೆ ಸಹಾಯ ಒದಗಿಸಲಾಯಿತು

ಶ್ರೀಮತಿ ವಿಠಲ್ ರಂಗಮ್ಮನವರ ನಿಧನ.

ಬಳ್ಳಾರಿಯ ಸುಪ್ರಸಿದ್ಧ ವ್ಯಾಪಾರಿಗಳೂ, ಸನಾತನ ಧರ್ಮಾಭಿಮಾನಿಗಳೂ, ನೇವಾಂತಿಗಳೂ ಆದ ಶ್ರೀ ವಿಠಲ ಶೇಷಪ್ಪನವರ ಧರ್ಮಪತ್ನಿ ಶ್ರೀಮತಿ ರಂಗಮ್ಮನವರು ತಮ್ಮ 70 ನೆಯ ವಯಸ್ಸಿನಲ್ಲಿ ಫರಂಧಾಮವನ್ನೈದಿದರೆಂದು ತಿಳುಹಿಸಲು ವಿಷಾದಿಸುತ್ತೇವೆ. ಶ್ರೀಮತಿಯವರು ದೈವಭಕ್ತಿ ಪರಾಯಣರಾಗಿ ಧಾರ್ಮಿಕ ಕಾರ್ಯಗಳಲ್ಲೂ, ಅತಿಥಿ ಸತ್ಕಾರದಲ್ಲೂ, ಸದಾ ನಿರತರಾಗಿ ತಮ್ಮ ಪತಿಗೆ ಆಧಾರ ಸ್ತಂಭವಂತಿದ್ದರು. ಅವರಿಗೊಬ್ಬ ಮಗ, ಮಗಳು, ಸೊಮ್ಮಕ್ಕಳೂ, ಮರಿಮಕ್ಕಳಿದ್ದಾರೆ.

ಭಗವಂತನು ಅವರ ಆತ್ಮಕ್ಕೆ ಶಾಂತಿ ಕೊಡಲಿ.

ಕೀರ್ತಿಶೇಷರಾದ ವಿಠಲ್ ರಂಗಮ್ಮನವರ ಸ್ಮರಣೆಯ ಚರಮ ಶ್ಲೋಕಗಳು.

1. ವಿಠ್ಠಲ ವಂಶಾಬ್ಧಿಸೂರ್ಲೋಂದು । ಶೇಷಪ್ಪಶ್ರೇಷ್ಠಿನಸ್ಸತೀ ।
ಧರ್ಮಪತ್ನೀ ರಂಗಮಾಂಬಾ । ಸ್ವರ್ಲೋಕೇ ಮುಮೋಯತೇ ॥
2. ವ್ಯಾಧಿನಾ ಬಹುಧಾ ಪೀಡ್ಯಾ ಮಾನಾಪಿ ಹೃದಿನಿತ್ಯಯಾ ।
ಕಾಂತ್ಯಾ ಸೀತಾಪತಿಂ ಚಿಂತಯಂತೀ । ಯಾತನಾಮತ್ಯಜತ್ ॥
3. ಸದ್ಭೌಷಧಿ ರಿವಾರ್ಧ್ಯಾಯಾ । ಕೀಳಿಕಾಲೇಜಯಾಸಖೀ ।
ಸತ್ಕ್ರಿಯಾಕರಣೇ ಶಿಷ್ಯಾ । ಪತ್ನೀಸದ್ಮೆರ್ಮ ಸಂಗ್ರಹೀ ॥
4. ಬಂಧುರಾಕ್ತಾ ಪತಿಂಯಾವ । ಚ್ಛಕ್ಯಂ ಸತ್ಪಥಾ ।
ನಿರ್ಗತಾಂ ರಂಗಮಾಂಬಾಂತಾಂ । ವಿಷ್ಮರ್ತುಶಕ್ಯತೇ ಕಥಂ ॥
5 ಯದ್ದಿಯೋಗಾತ್ಪತಿರ್ಧೀಮಾ । ಧೀರೋವಿಷ್ಣುಮಮುರ್ಮಾ ।
ತಸ್ಮಾತ್ಸಾಸ್ಸಾಧ್ವೀ ವರಿಷ್ಯತ್ತೇ । ಸಂಶೀತಃ ಕಸ್ಯಸಂಪತೇಶ್ ॥
6. ಅಷ್ಟಾವಿಂಶತ್ಯಂಬ । ಪಶ್ಯಾಂಸಮಾಹಿತಾ ।
ಸ್ವರ್ಗೇಪಿ ಎಂಧರ್ಯಯಸ್ಯೇಕಂ । ತಾಂತೇಸ್ತು ತದಧೀನತಾ ।
7 ಭರ್ತುರೌದಾತ್ಯ ಭೂಯಿಷ್ಠ್ಯೈ । ಜಹ್ಯಾಮೈ ಧರ್ಮಳಕ್ಷಣಃ ।
ಕೃಪ್ತಶ್ಚಾದೇವದೇವಸ್ಯ । ತಮಾಸಾ ಕಾಂತಿಮುಚ್ಛತು ॥ [ನರಸಿಂಹ ಕವಿ]

ಜಪಾನೀಯರು:— ಮೋರ್ಸಬಿ ಬಂದರಕ್ಕೆ 44 ಮೈಲಿ ದೂರ ವಿರುವದೆಂದೂ ಆಸ್ಟ್ರೇಲಿಯಾಕ್ಕೆ ಅಪಾಯವು ಹೆಚ್ಚುತ್ತಿರುವದೆಂದೂ ಲಂಡ್ ವಾರ್ತೆಯು ತಿಳಿಸುತ್ತದೆ.

ಬ್ರಿಟಿಷರು ಮಾಡಿದ ಬಾಂಬು ದಾಳಿಯಿಂದ ಜರ್ಮನಿಯಲ್ಲಿ 15 ಲಕ್ಷ ಜನರು ನಿರಾಶ್ರಿತರಾಗಿರುವರಂತೆ

ಬಳ್ಳಾರಿ ಜಿಲ್ಲೆಯಲ್ಲಿ ಬಂಧನ

[೩ನೇ ಪುಟದಿಂದ]

ಬಳ್ಳಾರಿ ನಗರ:— ವಿದ್ಯಾರ್ಥಿ ನು ಖಂಡರಾದ ಶ್ರೀ ರಾಮಮೂರ್ತಿಯವರೂ, ಆಯುರ್ವೇದ ವೈದ್ಯರಾದ ಶ್ರೀ ವೆಂಕಟರಮಣರವರೂ 10 ನೆಯ ತಾ॥ ಬಂಧಿಸಲ್ಪಟ್ಟರು, ಸಾಂಬಮೂರ್ತಿ ಮೈದಾನದಲ್ಲಿ ನೆರೆದ ಸಾವಿರಾರು ಜನರನ್ನು ರಿಸರ್ವ್ ಪೋಲೀಸರು ಲಾಠಿಗಳ ಸಹಾಯದಿಂದ ಚದುರಿಸಿದರು. ಡಿ. ಯಸ್. ಪಿ. ಮನರು ಬಂಧನದ ಕಾಲಕ್ಕೂ, ಗುಂಪುಗಳನ್ನು ಚದುರಿಸುವ ಕಾಲಕ್ಕೂ ಇದ್ದರು.

ಆಲೂರಿನಲ್ಲಿ ಬಂಧನ:— 8 ನೆಯ ತಾ॥ ಹೆಂಡದಂಗಡಿಗಳ ಮುಖಂಡ್ರನ್ನು ತಡೆಮಾಡಲು ವಿವಿಧ ಊರುಗಳಿಂದ ಬಂದ ಕಾಂಗ್ರೆಸ್ ಕಾರ್ಯಕರ್ತರು ಪಿಕೆಟಿಂಗ್ ಮಾಡಿದ ಕಾರಣ ಬಂಧಿತರಾಗಿ ಆದವಾನಿ ರೆವಿನ್ಯೂ ಡಿವಿಜನಲ್ ಆಫೀಸರ್‌ರವರಿಂದ ಪ್ರತಿಯೊಬ್ಬರೂ 3 ತಿಂಗಳು ಕಠಿಣ ಶಿಕ್ಷೆ, 50 ರೂ. ದಂಡ, ದಂಡ ಕೊಡದಿದ್ದರೆ ಇನ್ನು 1 ತಿಂಗಳು ಶಿಕ್ಷೆಗೆ ಗುರಿಯಾದರೆಂದು ತಿಳಿದಿದೆ. ಹತ್ತಿಬೆಳಗಲು ವೆಂಕಟೇಶ್ವರರಾಯರೂ ಬಂಧಿತರಾಗಿದ್ದಾರೆ. ಶಿಕ್ಷೆಯ ವಿವರ ಗೊತ್ತಾಗಿಲ್ಲ.

1) ಶ್ರೀ ಬಿ. ಸಿದ್ದರಾಮಪ್ಪ ನಗರಹೋಬ.
2) ಪಿ. ಅಯ್ಯಪ್ಪರೆಡ್ಡಿ ,,
3) ವೆಂಕಟಲಕ್ಷ್ಮಿರೆಡ್ಡಿ ,,
4) ನರಸಿಂಹರೆಡ್ಡಿ ,,
5) ಪಿ. ರಾಮಣ್ಣ ಸೇಮಕಲ್ಲು
6) ಎಂ. ಅಕ್ಬರ್‌ಅಲಿ ,,
7) ಎಲ್. ಸಂಜೀವರೆಡ್ಡಿ ,,
8) ಎಲ್. ಸೀತಾರಾಮರೆಡ್ಡಿ ,,
9) ಎ. ಪಾಪಯ್ಯಶೆಟ್ಟಿ ರಾಮದುರ್ಗ
10) ಬಸವನಗೌಡ ,,
11) ಬಿ. ಬಾಲಯ್ಯ ,,
12) ಎಂ. ವೀರಭದ್ರಯ್ಯ ಮೊಳಗನೇಲಿ

ಹರಪನಹಳ್ಳಿಯಲ್ಲಿ:— 144 ನ್ನು ಉಲ್ಲಂಘನೆಮಾಡಿದ ಶ್ರೀ ಕಟ್ಟಿ ಸೇತೂ ರಾಮಜಾಯ್ಯರೂ, ಮುದ್ದಲ್ ನಾಗಪ್ಪನವರೂ ಬಂಧಿಸಲ್ಪಟ್ಟರೆಂದು ಸುದ್ದಿ ಬಂದಿದೆ.

ಶ್ರೀ ಭೀಮಸೇನಾಚಾರ್ಯ - ಬಾಪುರದ ಜಿಲ್ಲಾ ಬೋರ್ಡು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಭೀಮಸೇನಾಚಾರ್ಯರು ರಾಜಕೀಯದಲ್ಲಿ ಭಾಗ ತೆಗೆದುಕೊಳ್ಳಲು ತಮ್ಮ ಪದವಿಗೆ ರಾಜೀನಾಮೆ ಇತ್ತರು.

ಶ್ರೀ ರಾಮಮೂರ್ತಿ — ಯವರು ವಾರ್ಡಲಾ ಹೈಸ್ಕೂಲಿನ ಫಿಸಿಕಲ್ ಇನ್‌ಸ್ಟ್ರಕ್ಟರ್ ಕೆಲಸಕ್ಕೆ ರಾಜೀನಾಮೆ ಕೊಟ್ಟನಂತರ ವಾರಂಟು ಹುಟ್ಟಿ ಬಂಧನವಾಯ್ತೆಂದು ತಿಳಿದುಬಂದಿದೆ.

ಬಳ್ಳಾರಿ ಜಿಲ್ಲಾ ಬೋರ್ಡು ರದ್ದಾಗುವುದೇ ?

ಶೀಘ್ರವಾಗಿ ಆಡಳಿತಾಧಿಕಾರಿಯ ಇನ್‌ಕ್ವಿಸಿಟ್ ಕೊಡಿರಿ.

ಬಳ್ಳಾರಿ ಜಿಲ್ಲಾ ಬೋರ್ಡಿನ ಸಭೆಯಲ್ಲಿ ಸರಕಾರದ **'ಕ್ರೂರ ಮತ್ತು ಅನಾವಶ್ಯಕವಾದ ದಬ್ಬಾಳಿಕೆ'** ಯನ್ನು ಖಂಡಿಸುವ ತೀರ್ಮಾನವನ್ನು ಮಾಡಿದ ಮೇಲೆ ಬೋರ್ಡಿನ ಭವಿಷ್ಯದ ವಿಷಯಕ್ಕೆ ಕೆಲವರಿಗೆ ಆಲೋಚನೆಯಾಗಿದೆ. ಜಿಲ್ಲಾ ಕಲೆಕ್ಟರವರು ಸಂರಕ್ಷಣೆ ಶಾಸನದ ಪ್ರಕಾರ ನಿರ್ಣಯವನ್ನು ರದ್ದು ಮಾಡಬಹುದು. ಅವರ ಜೊತೆಯಲ್ಲಿ ಬೋರ್ಡನ್ನೂ ರದ್ದುಮಾಡಲು ಸರಕಾರಕ್ಕೆ ಸಿಫಾರ್ಸು ಮಾಡಬಹುದು. ಇಷ್ಟು ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ಇರದಿದ್ದ ವಿರುದ್ಧ ವೇಕೆಗಳು ಇಂದು. ಎಂಥಾ ಸಂಸ್ಥೆಯಾಗಲಿ, ವ್ಯಕ್ತಿಯಾಗಲಿ ಪೂರ್ಣತೆಯನ್ನು ಹೊಂದಿ ನಿತ್ಯಶ್ರೇಷ್ಠಂಪ್ರನ ಮಾರ್ಗದಲ್ಲಿ ಸಡಿದಿರುವ ಉದಾಹರಣೆಗಳು ಅತಿ ವಿರಳ ಇದ್ದಿರಬೇಕಾದರೆ. ಜಿಲ್ಲಾ ಬೋರ್ಡಿನ ಅತಿ ಮುಖ್ಯವಾದ ಭಾಗವೆಂದರೆ ಪ್ರಾಥಮಿಕ ವಿದ್ಯಾಭ್ಯಾಸ ಮತ್ತು ಅವರ ಅಭಿವೃದ್ಧಿಗೆ ಕಾರಣರಾದ ಪ್ರಾಥಮಿಕ ಶಾಲೋಪಾಧ್ಯಾಯರು, ಧಾರಣೆವಾಸಿಗಳು ಅತಿಮಾನಿ ಎಂಬುವುದ ಸುಸ್ಥಿತಿಯಿಂದ ಒಳಸಾತಿನ ಗಲಾಟೆಗಳಿಂದ ಅವರು ತಪ್ಪರಾಗಿದ್ದಾರೆ. ಕುಟುಂಬ ಭರಣದ ಚಿಂತೆಯು ಅವರನ್ನು ಚಿಂತೆಯಂತೆ ಮುಕ್ತಗೊಳಿಸಿ ಜಿಲ್ಲಾ ಬೋರ್ಡು ನವರು ಈ 4-5 ವರ್ಷಗಳಲ್ಲಿ ಇಕ್ರಿ ಸಿಂಪಿನ ನ್ಯಾಯವನ್ನು ಬಗೆಹರಿಸಿಲ್ಲಿ ಕೊಡಲೂ ಇಲ್ಲ. ಇವನ್ನು ಸಾಧ್ಯವಾದಷ್ಟು ಶೀಘ್ರವಾಗಿ ಕೊಡಬೇಕು.

ಅಲ್ಲದೆ ಈಬೆಗೆ ಅನ್ಯಾಯವನ್ನು ವರ್ಗಾವರ್ಗಿಗಳು ಒಳಳಗಾಗಿ ಆಗಿವೆ ಇವುಗಳಿಗೆ ಕಾರಣವೆಂದರೆ ಜಿಲ್ಲಾ ಬೋರ್ಡು ಸದಸ್ಯರು ಅಧ್ಯಕ್ಷರನ್ನು ಒತ್ತಾಯಮಾಡಿದುದೇ ಮುಖ್ಯವಿಗ. ಇವುಗಳನ್ನು ತಪ್ಪಿಲ್ಲದೆ ಸರಿಪಡಿಸಬೇಕು. ಅಂತೂ ಕಾಂಗ್ರೆಸ್, ಅಧ್ಯಕ್ಷರು ಈ ಅಕ್ರಮಗಳನ್ನೆಲ್ಲಾ ಸರಿಪಡಿಸಿ ಇಕ್ರಿಮೆಂಟ್ ದಯಪಾಲಿಸಿ ಸಂಸ್ಥೆಯ ಕೀರ್ತಿಯನ್ನೂ ಬೋರ್ಡಿನ ಘನತೆಯನ್ನೂ ಕಾಪಾಡುವರೆಂದು ನಂಬಿರುತ್ತೇನೆ.

"ನಿಷ್ಪಕ್ಷಪಾತಿ"

ಸಂಪಾದಕರ ದಸ್ತಗಿರಿ:— ಡೈಲಿ ನ್ಯೂಸ್, ತಾಯಿನಾಡು, ವಿಶ್ವಕರ್ಣಾಟಕ ಮತ್ತು ಜನವಾಣಿ ಎಂಬ ಪತ್ರಿಕೆಗಳ ಸಂಪಾದಕರಾದ ಶ್ರೀ ಪಿ. ಶ್ರೀನಿವಾಸ್, ಸಿದ್ದವ್ವನಹಳ್ಳಿ ಕ್ರಿಷ್ಣಶರ್ಮ ಮತ್ತು ಗುಪ್ತರನ್ನು ಬಂಧಿಸಲಾಗಿದೆ.

ಶ್ರೀ ಮಹದೇವ ದೇಸಾಯಿ ಯವರ ನಿಧನ:— ಮಹಾತ್ಮ ಗಾಂಧಿಯವರು ತಮ್ಮ ಆಪ್ತ ಕಾರ್ಯದರ್ಶಿಗಳಾಗಿ ಮಹದೇವ ದೇಸಾಯಿಯವರ ನಿಧನದ ಬಗ್ಗೆ ಸೇವಾಗ್ರಾಶ್ರಮಕ್ಕೆ ಕೊಟ್ಟ ಕಂತಿಯು ಈ ಪ್ರಕಾರವಿದೆ.

"ಮಹದೇವನು ಆಕಸ್ಮಿಕವಾಗಿ ವರಂ ಧಾಮನೈದಿದನು. ಸೂಚನೆಯನ್ನೇ ಕೊಡಲಿಲ್ಲ. ಕಳೆದ ರಾತ್ರಿ ಸುಖವಾಗಿ ನಿದ್ರಿಸಿದನು. ವ್ಯಾತಃಕಾಲ ಫಲಹಾರ ಮಾಡಿ ನನ್ನೊಡನೆ ಗಾಳಿ ಸಂಚಾರಕ್ಕೆ ಬಂದಿದ್ದನು. ಡಾ. ಸುಶೀಲಾ ನೇತ್ತು ಜೈಲು ಡಾಕ್ಟರರು ತಮಗೆ ಸಾಧ್ಯವಿದ್ದು ದನ್ನೆಲ್ಲಾ ಮಾಡಿದರು. ಆದರೆ ನೇವರ ಇಚ್ಛೆಯು ಬೇರೆ ಇದ್ದಿತು. ಸುಶೀಲಾ ಮತ್ತು ನಾನು ಮಹದೇವನಿಗೆ ಸ್ನಾನ ಮಾಡಿಸಿ ಪುಷ್ಪಗಳಿಂದ ಅಚ್ಚಾರಿಸಿದ್ದೇವೆ. ಶಾಂತವಾಗಿ ಮಲಗಿರುವನು. ಸುಗಂಧ ದ್ರವ್ಯಗಳುರಿಯುತ್ತಲಿವೆ. ಸುಶೀಲಾ ಮತ್ತು ನಾನು ಗೀತಾ ಪಠನ ಮಾಡುತ್ತಲಿದ್ದೇವೆ ಮಹದೇವನ ಪತ್ನಿಯಾದ ದುರ್ಗಾ, ಮಗ ಬಾಬಲಾ, ತನ್ನುನ ಮಗಳಾದ ಸುಶೀಲಾ ರೆ ದುಃಖಿಸದಿರಲು ಹೇಳಿರಿ. ಶವಸಂಸ್ಕಾರವು ನನ್ನೆದುರಿಗೆ ನಡೆಯಲಿದೆ. ಅಂತ್ಯೇಷ್ಟಿ ಭಾಗವನ್ನು ಕಾದಿರುವೆನು. ದುರ್ಗಾ ಆಶ್ರಮದಲ್ಲೇ ಇರಲಿ ತಮ್ಮೂರಿಗೆ ಹೋಗಲೇ ಬೇಕೆಂದರೆ ಹೋಗಲಿ ಬಾಬಲಾನಿಗೆ ಧೈರ್ಯ ಹೇಳಿ ಸ್ವೀಸುದೊಂದಿಗೆ — **ಬಾಪು**"



ಕಾಶ್ಮೀರ ಅರುಕ್

(ಮನೆಯ ವೈದ್ಯ)

ನೆಗಡಿ, ಕೆಮ್ಮು, ಪುಬ್ಬಸ, ಶೀತಭೇದಿ, ಜ್ವರ, ಅಜೀರ್ಣ ಮೊದಲಾದ ವ್ಯಾಧಿಗಳಿಗೆ ದಿವ್ಯೌಷಧ ಎಲ್ಲಾ ನೋವುಗಳಿಗೆ ಚೇಳು, ಹಾವು ಕಚ್ಚಿದುದಕ್ಕೆ ದಿವ್ಯೌಷಧ.

ಎಲ್ಲಾ ಔಷಧಿಗಳಲ್ಲಿ ದೊರೆಯುತ್ತದೆ.

ಜೆಚ್. ಯಸ್. ಅಂಡ್ ಸನ್ಸು, ಬಳ್ಳಾರಿ.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ : 1897.

45 ನೇ ವಾರ್ಷಿಕ ವರದಿಯ ಕೆಲವು ಮುಖ್ಯ ಅಂಶಗಳು

ಒಟ್ಟು ಆದಾಯ	ರೂ. 85,61,000	ಮೀರಿದೆ.
ಜಾರ್ತಿಯಲ್ಲಿರುವ ವಿಮಾ ಪಾಲಿಸಿಗಳು	ರೂ. 14,84,44,000	,,
ಆಸ್ತಿ	ರೂ. 5,80,86,000	,,

ಕಂಪೆನಿ ಪ್ರಾರಂಭವಾದ ಲಾಗಾಯ್ತು, ಸಾವತಿ ಮಾಡಿರುವ ಕ್ಲೈಂಗಳು ರೂ. 7,48,66,000 ,,

ಏಜನ್ಸಿಗಳಿಗೆ ದರಖಾಸ್ತುಗಳನ್ನು ಕಳುಹಿಸುವುದು.

ಮುಖ್ಯ ಕಛೇರಿ :
ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬೆಂಗಳೂರು ಬ್ರಾಂಚ್ :
ಡಿಸ್ಟ್ರಿಕ್ಟ್ ಜೋಡ್ಸ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ.

S. V. SETTY & BROS, BELLARY.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ವೆಸ್ಟ್‌ಎಂಡ್ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ.

ಹಿಂದಿ-ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು
- ಮಾತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ ?

ಹಾಗಾದರೆ ಕೂಡಲೇ ಕೆಳಗಿನವರಲ್ಲಿ ವಿಚಾರಿಸಿರಿ.

ನಿಮಗನುಕೂಲವಾದ ಶಿಕ್ಷಣಕ್ಕೆ ವಿಷಯಗಳು ಪುಸ್ತಕಗಳು, ಕಥೆ, ಕಾದಂಬರಿ ನಮ್ಮಲ್ಲಿ ದೊರೆಯುವುದಲ್ಲದೆ ನಿಮಗೆ ಎಲ್ಲಾ ವಿಧವಾದ ಮಾಹಿತಿಯೂ, ಪ್ರಚಿತವಾಗಿ ಹೇಳಲಾಗುವುದು.

ಟಿ. ಬಿ. ಕೇಶವರಾವ್,
ಕೃಷ್ಣ ಪ್ರೆಸ್ ಕಾಂಪೌಂಡು, ಬಳ್ಳಾರಿ.

It PAYS you to

ADVERTISE IN

NAVA BHARAT.

Visit ROYAL CAFE

NEAR ROYAL PICTURE PALACE

Royal is Royal

NAVA BHARAT, BELLARY.

With which is incorporated Congress Bulletin

THE LEADING NATIONAL WEEKLY.

ನವಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.

The Rates of Subscription

Annual

Local .. 2—0—0
Moffusil 3—0—0

6 Months

Local . 2—0—0
Moffusil 2—0—0

ಚಂದಾ ವಿವರ.

ವರ್ಷಕ್ಕೆ

ಬಳ್ಳಾರಿಯವರಿಗೆ 2-0-0
ಹೊರಗಿನವರಿಗೆ 3-0-0

೬ ತಿಂಗಳಿಗೆ

ಬಳ್ಳಾರಿಯವರಿಗೆ 1-4-0
ಹೊರಗಿನವರಿಗೆ 2-0-0

NAVA BHARAT BELLARY.

Reg. No. M. 3937.

Sri. ———

———

———

Printed at Krishna Press, Bellary. Edited & Published by T B. Keshava Rao, Bellary

Reg No. M 3937 ಕಂದೇ ಮಾತರಂ

ಸ್ವರಾಜ್ಯ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯ ವರಾನ್ನಿಬೋಧತ.

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—

ಸಂಚಿಕೆ ೫೦ ಬಳ್ಳಾರಿ ೨೦ ನೇ ಸೆಪ್ಟೆಂಬರು ಭಾನುವಾರ ೧೯೪೨. ಟಿ. ಪಿ. ಕೇಶವರಾವ್

ಭಾರತ ಸರ್ಕಾರದವರು ಕ್ಷಮೆ ಬೇಡಿದರು.

ಗಾಂಧೀಜಿಯವರ ತಾರು ಕಳಿಸುವ ದರಲ್ಲಿ ಸಾವಕಾಶ.

ಮಹಾತ್ಮ ಗಾಂಧಿಯವರು ಶ್ರೀ ಮಹದೇವ ದೇಶಾಯಿಯವರ ಅಂತ್ಯ ಸಂಸ್ಕಾರದ ನುಂಚೆ ಸೇವಾಗ್ರಾಮಾಶ್ರಮಕ್ಕೆ ಒಂದು ತಾರನ್ನು ಕಳುಹಿಸಲು ಹೇಳಿ ಬರೆಸಿದರು ಆದರೆ ದೇಶಾಯಿಯವರು ಸತ್ತ ಬಹಳ ದಿನಗಳ ನಂತರ ಅಂದರೆ ಸೆಪ್ಟೆಂಬರ್ 4 ನೆಯ ತಾರಿ ಕಳುಹಿಸಲಾಯಿತು.

ಇಂತಿಯೂ ಸರಕಾರದ ಅಡಿಷನಲ್ ಸರ್ಕಾರದ ಕಾರ್ಯದರ್ಶಿಗಳಾದ ಸರ್ ರಿಚರ್ಡ್ ಟೊಟೆನಹಾಂರವರು ಸೇವಾಗ್ರಮಾಶ್ರಮದ ಮ್ಯಾನೇಜರವರಿಗೆ ಹೀಗೆ ಬರೆದಿರುತ್ತಾರೆ. "ಇದರೊಂದಿಗೆ ಗಾಂಧೀಜಿಯವರು ಶ್ರೀ ದೇಶಾಯಿಯವರ ಪತ್ನಿಗೆ ಬರೆದ ಕಾಗದವನ್ನು ಕಳುಹಿಸುತ್ತಾ ತಡವಾದುದಕ್ಕೆ ಹಾರ್ದಿಕ ವಿಷಾದವನ್ನು ವ್ಯಕ್ತಪಡಿಸಲು ನನಗೆ ಆಜ್ಞೆಯಾಗಿದೆ ಬೊಂಬಾಯಿ ಸರಕಾರದವರು ಅದನ್ನು ತಕ್ಷಣವೇ ತಲಪಿಸಬೇಕೆಂದು ಆಜ್ಞಾಪಿಸಿದ್ದರು. ಗಾಂಧೀಜಿಯವರ ಪತ್ರ ವ್ಯವಹಾರದ ಪರೀಕ್ಷೆಗಾಗಿ ವಿರ್ಪಟ್ಟ ಅಧಿಕಾರಿಗಳ ತಪ್ಪು ತಿಳುವಳಿಕೆಯಿಂದ ಆ ಪತ್ರ ಕಳುಹಿಸುವುದು ಸಾವಕಾಶವಾಗಿ ಆ ವಿಷಯವು ನನಗೆ ಈಗ ತಿಳಿದಿದೆ. ಪತ್ರದ ಮೇಲೆ ಕೆಲ ಭಾಗಗಳಲ್ಲಿ ಕೆಂಪು ಪೆನ್ಸಿಲದ ಗುರುತುಗಳನ್ನು ಮಾಡಿದುದಕ್ಕಾಗಿಯೂ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ

ರಜಾ.

27-9-42 ನವಧಾರತವು ಹೊರಡುವುದಿಲ್ಲ

2-10-42 ತಾ॥ ಮಹಾತ್ಮ ಗಾಂಧಿಯವರ ಜನ್ಮದಿನ ಸಂಚಿಕೆಯೂ ನವಧಾರತದ 5-ನೆಯ ವಾರ್ಷಿಕ ಸಂಚಿಕೆಯೂ ಹೆಚ್ಚು ಪುಟಗಳಿಂದ ಹೊರಡುವುದು.

ಸಾಮೂಹಿಕ ಚಳವಳಿ.

ಅನಂತಪುರ:— ಸೆಪ್ಟೆಂಬರ್ 11 ನೆ ತಾ॥ ಪ್ರಾತಃಕಾಲ ಅನಂತಪುರ ಕಾಲೇಜಿನ ಕೆಮಿಸ್ಟ್ರಿ ಲ್ಯಾಬರೇಟರಿಯು ಸುಟ್ಟು ಬಹಳ ಲುಕ್ಸಾನಾಗಿದೆ.

ಕಾಲಿಂಗಪಟ್ಟಣದ ಪೋಸ್ಟಾಫೀಸು ಸುಟ್ಟುಬ್ಬಟ್ಟಿದೆ.

ಒರಿಸ್ಸಾ:— ವೈಷ್ಣವಪಟ್ಟನಾಯ್ಕ ರೆಂಬುವರು ಸಶಸ್ತ್ರದಳದೊಡನೆ ಲೂಟಿ ಕಾರ್ಯವನ್ನು ನಡೆಸಿರುವರೆಂದೂ ಅವರನ್ನು ಹಿಡಿದು ಕೊಟ್ಟವರಿಗೆ 2 ಸಾವಿರ ರೂ. ಬಹುಮಾನ ಕೊಡುವದಾಗಿಯೂ ಸಾರಿದ್ದಾರೆ.

ತುಮಕೂರು:— ಜಿಲ್ಲಾ ಬೋರ್ಡು ಅಧ್ಯಕ್ಷರಾದ ಚನ್ನಪ್ಪನವರು ಬಂಧಿಸಲ್ಪಟ್ಟರು. ಹಾಸನ ಮತ್ತು ಮೈಸೂರು ಪ್ರಾಂತ್ಯದ ಇತರ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳು ಬಹಳ ಭಾಗವನ್ನು ತೆಗೆದು ಕೊಳ್ಳುತ್ತಿರುವರು. ಕಾಲೇಜು ಮತ್ತು ಶಾಲೆಗಳಲ್ಲಿ ಹಾಜರಿಯು ಕಡಿಮೆ ಇದೆ.

ತ್ರಿಚೂರು:— ವಿ. ಜ. ಕಾಲೆಯ 16 ಜನ ವಿದ್ಯಾರ್ಥಿನಿಯರನ್ನು ಸಸ್ಪೆಂಡ್ ಮಾಡಿರುತ್ತಾರೆ. ಮುನಿಸಿಪಲ್ ಕೌನ್ಸಿಲ್‌ನ 10 ಸದಸ್ಯರು ರಾಜೀನಾಮೆ ಕೊಟ್ಟಿರುವರು.

ಬೆಂಗಳೂರು — 13 ಮಿಡಿಲ್ ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ.

ಶ್ರೀಮತಿ ಮತ್ತು ಶ್ರೀ ಚಂಗಲರಾಧ್ಯರವರಿಗೆ ೬ ತಿಂಗಳು ಕಠಿಣಶಿಕ್ಷೆ ವಿಧಿಸಲಾಗಿದೆ.

ಮೈಸೂರು — ಜಿಲ್ಲೆಯಲ್ಲಿ 171 ವಿದ್ಯಾರ್ಥಿಗಳು ಇದುವರೆವಿಗೆ ಬಂಧಿಸಲ್ಪಟ್ಟಿರುವರು

ಧಾರ್ವಾಡ — ಕರ್ನಾಟಕ ಕಾಲೇಜು ನಿಕಟ ವಾಸುಕ್ತವಿದ್ದ 32 ವಿದ್ಯಾರ್ಥಿಗಳು ಬಂಧಿಸಲ್ಪಟ್ಟಿರುವರು.

ಪೂನಾ —ದಲ್ಲಿ 33 ವಿದ್ಯಾರ್ಥಿಗಳೂ, 3 ಸ್ತ್ರೀಯರೂ ಬಂಧಿಸಲ್ಪಟ್ಟರು.

ಸಿಲ್ಲಿಗುರಿ — ಬಂಗಾಳ ಪ್ರಾಂತದ ಈಶಹರದಲ್ಲಿ ಪೋಲೀಸರ ಗುಂಡಿನ ಹೊಡೆತದಿಂದ 3 ಮಂದಿ ಸತ್ತಿರುವರು

ಕಲ್ಕತ್ತ — ಬಂಗಾಳ ಸರಕಾರದವರು ಒಂದು ಪ್ರಕಟಣೆ ಹೊರಡಿಸಿ, ವಿದ್ಯಾರ್ಥಿಗಳು ಶಾಲೆಗೆ ಹೋಗದಿದ್ದರೆ ಅವರಿಗಿರುವ ವೇತನ ಸೌಕರ್ಯಗಳನ್ನು ತೆಗೆದುಬಿಡುವುದಾಗಿ ಎಚ್ಚರಿಸಿದ್ದಾರೆ. ಒಕಾರಗಂಜ, ಅಬೂಗಂಜ ಭಾಗದ ಹದ್ದಗಳಿಗೆ ಸರಕಾರದವರು 10 ಸಾವಿರ ರೂ ದಂಡ ವಿಧಿಸಿದ್ದಾರೆ.

ಪೂಜಾ ಹಬ್ಬಗಳಾಗುವವರೆಗೂ ಎಲ್ಲಾ ಶಾಲೆ ಕಾಲೇಜುಗಳನ್ನು ಮುಚ್ಚಲಾಗಿದೆ

ಬೀಹಾರ:— ದಲ್ಲಿ ಅಲ್ಲಲ್ಲಿ ದಂಗೆಗಳಾಗುತ್ತಿರುವದಾದರೂ ಜನರು ಸಹಾಯಕ್ಕೆ ಬರುತ್ತಿರುವರೆಂದು ಸರಕಾರದ ವರು ತಿಳುಸುತ್ತಾರೆ.

ಕಾರ್ವಾರ:— ಕಲೆಕ್ಟರ್ ಗಂಜಿ ಶೈಲೈಷ್ಟರದಲ್ಲಿ ಒಂದು ಬಾಂಬಿನ ಸ್ಫೋಟವಾಯಿತು. ಒಬ್ಬನನ್ನು ಒಂಭಿಸಿ ಅವನಿಂದ ಎರಡು ಬಾಂಬುಗಳನ್ನು ಹಿಡಿದಿರುವರು.

ಮದ್ರಾಸ್ ಪ್ರಾಂತ್ಯದಲ್ಲಿ ಸಾಮೂಹಿಕ ದಂಡ.

ಚಳವಳಿಯಲ್ಲಿ ಭಾಗವಹಿಸಿದುಕೊಂಡು ರೈಲ್ವೆ ಮತ್ತು ಸರಕಾರದ ಆಸ್ತಿ ನಾಸ್ತಿಗಳ ಮೇಲೆ ನಷ್ಟವುಂಟುಮಾಡಿರುವರೆಂಬ ಕಾರಣದ ಮೇಲೆ ಮದ್ರಾಸ್ ಸರ್ಕಾರದವರು ಈ ಕೆಳಗಿನ ಹದ್ದಗಳವರಿಗೆ 2,35,000 ರೂ. ದಂಡ ವಿಧಿಸಿರುವರು. ಗುಂಟೂರು ಜಿಲ್ಲೆಯ ಚೀರಾಲ ಪೇರಾಲ ಬೋದಿಪಾಲೆಂ ವಗೈರೆ 75 ಸಾವಿರ ರೂ. ನಿಡುಬ್ರೋಲು ಪೊನ್ನೂರು 20 ಸಾವಿರ, ಒಂಗೋಲ 5 ಸಾವಿರ, ಬಾಪಟ್ಲ ವಗೈರೆ 5 ಸಾವಿರ, ಅನಂತಪುರಜಿಲ್ಲೆಯ ಕಮ್ಮಕೋಟ್ಲ 20 ಸಾವಿರ, ದಂಡೂರು 2500, ಮನ್ನಾರಗುಡಿ 30 ಸಾವಿರ, ತ್ರಿವಾಡಿ 2500, ಕರಾಯಿಕುಡಿ 30 ಸಾವಿರ, ರಾಮನಾಡು ಜಿಲ್ಲೆಯ ಪುಲಾಂಕುರಿಚಿ 5 ಸಾವಿರ. ಬಹುಮಟ್ಟಿಗೆ ಮುಸಲ್ಮಾನರು ಈ ದಂಡಕೊಡಬೇಕಾಗಿಲ್ಲ. ವೆಟ್ಟುಪಾಳಯದಲ್ಲಿ ಒಂದು ಗುಂಪು ಪೋಲೀಸರ ಮೇಲೆ ದಾಳಿಮಾಡಿದರು.

ಕಪ್ಪು ಸಮುದ್ರದ ನೌಕಾ ಕೇಂದ್ರಗಳು.

ಸೆಬಾಸ್ಟಪೋಲ್ ಜರ್ಮನರ ಧಶವಾದನಂತರ ರಷ್ಯನರ ಕಪ್ಪುಸಮುದ್ರದ ಹಡಗುಗಳು ನೊವಾರಿಸ್ಕ್ - ಬಾಟುಮ ಕಡೆಗೆ ಹೋದವು. ಈಗ ನೊವಾರಿಸ್ಕ್‌ದ ವತನವಾಗಿ ರಷ್ಯಾದ ಹಡಗುಗಳಿಗೆ ಆಸರೆತ್ಯಾಲಯೊದಗಿದೆ, ನೊವಾರಿಸ್ಕ್ ಬಂದರವು ಕರ್ಚದ ಸಮೀಪದಲ್ಲಿದ್ದು ಅಲ್ಲಿ ಎಲ್ಲಾ ರೈಲ್ವೇಗಳೂ ಕೂಡುತ್ತವೆ. ಸಿಮೆಂಟ್, ಕಲ್ಲಿದ್ದಲು, ಪೋಟಾಶ, ತಂಬಾಕು ಮುಮ್ಮಡವ್ಯಾವಾರ ಬಹಳ ಆದರೂ ಸೆಬಾಸ್ಟಪೋಲದ ಶ್ರೇಷ್ಠತೆಯು ಯಾವುದಕ್ಕೂ ಬರುವುದಿಲ್ಲ.

ಆದರೆ ಬಾತುಮದ ಪರಿಸ್ಥಿತಿ ಮಾತ್ರ ಸ್ವಲ್ಪ ಬೇರೆಯಾಗಿದೆ. ಬಾತಾಮವು ಕಪ್ಪು ಸಮುದ್ರದ ಪೂರ್ವ ಡಂತೆಯಲ್ಲಿರುವದು. ಒಂದು ಕಾಲಕ್ಕೆ ಸೆಬಾಸ್ಟಪೋಲದ ತಥ್ಯಸ್ಥಾಯ ಇದೇ ಮಹತ್ವದ ಬಂದರವಾಗಿತ್ತು. ಈಗ ಕೆಲವು ದಿನಗಳಿಂದ ಕೇವಲ ಎಣ್ಣೆಯ ಬಗ್ಗೆಯೇ ನಾವು ಈ ಬಂದರಕ್ಕೆ ಮಹತ್ವ ಕೊಡುತ್ತಿದ್ದೆವು ಈಗಿದ್ದಲ್ಲಿ ಹಿಂದೆ ಬಿದ್ದಿದ್ದಿತು ಆದರೆ ಟರ್ಕಿಯು ಅದನ್ನು ರಶಿಯಕ್ಕೆ ಕೊಟ್ಟಂದಿನಿಂದ ಜರ್ಮನ್‌ರು ಅಬಗ್ಗೆ ಹೆಚ್ಚು ದಕ್ಷರಾಗಿ ಅದು ಕೇವಲ ವ್ಯಾಪಾರಿ ಕೇಂದ್ರವೇ ಆಗಬೇಕು ನೌಕಾ ರಾಣೆಯಾಗಬಾರದೆಂಬದಾಗಿ ವಿಧಿಸಲಾಯಿತು. ಆದರೆ ರಶಿಯನರು ಈ ನಿಯಮದ ಕಡೆಗೆ ಅಷ್ಟು ಗಮನ ಕೊಡಲಿಲ್ಲ. ಸಂಧಿಯು ಮೊರೆತ ಕೂಡಲೆ ಬಾತುಮವನ್ನು ನೌಕಾ ತಾಣೆಯನ್ನಾಗಿ ಪರಿವರ್ತಿಸಿ ಬಿಟ್ಟರು. ಅದರ ಸುತ್ತಲಿನ ಪ್ರದೇಶವನ್ನೆಲ್ಲ ಸುಧಾರಿಸಿದ್ದು ಬಾತುಮವೀಗ ಒಳ್ಳೇ ಫಲವತ್ತಾದ ಪ್ರದೇಶವಾಗಿ ಬಿಟ್ಟಿದೆ. ಬಾಕುವಿಂದ ಇಲ್ಲಿಗೆ ಬಂದ ಎಣ್ಣೆ ನಳಿಗೆಯ ಮಹತ್ವವು ಹೆಚ್ಚಿದ್ದು ಇಲ್ಲಿಂದ ಅನೇಕ ವದಾರ್ಥಗಳು ಬೇರೆ ಬೇರೆ ಕಡಗೆ ಹೋಗುತ್ತಿದ್ದವು. ವಿಶೇಷವಾಗಿ ಉಣ್ಣೆ, ಧಾನ್ಯ, ಮ್ಯಾಂಗ್ಯಾನಿಜ, ತಾಮ್ರ, ಕಚ್ಚಾ ರೇಶಿಮೆ. ಜಮಖಾನೆ ಮೊದಲಾದವುಗಳು ನಿರ್ಯಾತವಾಗುತ್ತಿದ್ದವು. ಈ ಬಂದರವು ಕಪ್ಪು ಸಮುದ್ರದ ಪೂರ್ವ ಕರಾವಳಿಯಲ್ಲಿರುವ ಬಂದರಗಳಲ್ಲಿ ಮಹತ್ವದ್ದಾದ ಒಂದು ಬಂದರವು. ಆದರೆ ಬಿರುಗಾಳಿ ಬೀಸುತ್ತಿರುವಾಗ ಇಲ್ಲಿ ಹಡಗುಗಳು ತಳ ಮೂರುವದು ಅಷ್ಟೊಂದು ಸುರಕ್ಷಿತವಲ್ಲ ಕಪ್ಪು ಸಮುದ್ರದಲ್ಲಿ ತೆರೆಗಳು ಅಷ್ಟೊಂದು ಹೆಚ್ಚಿಗೇಳದಿದ್ದರೂ ಬರ್ಫವು ಕರಗಿ ನದಿಗಳಿಗೆಲ್ಲ ಮಹಾಪುರ ಬಂದಕಾಲಕ್ಕೆ ಈ ಸಮುದ್ರದಲ್ಲಿ ಹಡಗಗಳ ಸಂಚಾರಕ್ಕೆ ಸ್ವಲ್ಪ ಗಂಡಾಂತರವೆಂಬುದನ್ನು ಮರೆಯಲಾಗದು.

ಸೆಬಾಸ್ಟಪೋಲದಂಥ ಮಹತ್ವದ ಬಂದರ ರಶಿಯನ್‌ರ ಕೈಯಿಂದ ಹೋದುದೇನು ಸಾಮಾನ್ಯ ಹಾನಿಯಲ್ಲ ಸೆಬಾಸ್ಟಪೋಲ ಬಂದರವು ಸರ್ವರೀತಿಯಿಂದಲೂ ಅನುಕೂಲವಿದ್ದಿತು ಅಲ್ಲದೆ ನೌಕಾ ತಾಣೆಯೆಂದೂ ಇದು ಬಹಳ ದಿನಗಳಿಂದ ಪ್ರಸಿದ್ಧವಿರುವದು ಇಲ್ಲಿನ ವ್ಯಾಪಾರವು ಬಹಳಮಟ್ಟಿಗೆ ಬೇರೆಡೆ ಹೋಗಿರುವದು ಗಿಲಜಲ ರಲ್ಲಿ ಸೆಬಾಸ್ಟಪೋಲವು ೧೧ ತಿಂಗಳ ವರೆಗೆ ವರದಾಯಿನ್ನೆ ದುರಿಸಿತು ಆದರೆ ಯುದ್ಧನಿದ್ಧ ತಿಗಳೀಗ ಬದಲಾಗಿವ ಈ ಕಾಲಕ್ಕೆ ಕ್ರಿಮಿಯನನ್ನು ರಕ್ಷಿಸಿದ್ದ ನೈಸಿಕರೀಗ ವೈಮಾನಿಕ ದಾಳಿಯನ್ನು ಸಹಿಸರು ಸೊಪ್ಪೊಪೊಸಿಸ್ಕ್ ವತನಾನಂತರ ಬಾತುಮವಲ್ಲಿ ಕಪ್ಪುಸಮುದ್ರದ ನೌಕಾ ದಳವು ಅಷ್ಟೊಂದು ಸುರಕ್ಷಿತವುಳಿಯಲಾರದು. ಆದರೆ ರಶಿಯನ್ ನೈಸಿಕರು ಅಷ್ಟು ಬೇಗ ಧೈರ್ಯಕಳೆದುಕೊಳ್ಳುವವರಲ್ಲೆಂಬುದನ್ನು ನಾವು ಈ ಮೊದಲು ತಿಳಿದುಕೊಂಡಿದ್ದೇವೆ ಕಪ್ಪುಸಮುದ್ರದಲ್ಲಿಯ ನೌಕಾದಳವೂ ತನ್ನೀವರಂಪರೆಯನ್ನು ಕಳೆದುಕೊಳ್ಳಲಕ್ಕಿಲ್ಲವೆಂದು ಭಾವಿಸಲಾಗಿದೆ.

ಎರಡು ಲಕ್ಷ ಬಾಲ ಹಡಗುಗಳು ತಮಗೆ ಬೇಕೆಂದು ಜರ್ಮನರು ಫ್ರೆಂಚರನ್ನು ಕೇಳಿರುವರಂತೆ.

ನೋವಾರಿಸ್ಕ್ ನಗರದ ಪತನ.

ಈ ಸುದ್ದಿಯು ಶುಕ್ರವಾರ ಮಧ್ಯರಾತ್ರಿಯ ಪ್ರಕಟನೆಯಿಂದ ಪ್ರಸಂಚಕ್ಕೆ ತಿಳಿಯಿತು.

ಸ್ಟಾಲಿನಗ್ರಾಡ — ಭಾಗದಲ್ಲಿ ರಷ್ಯನರ ಬಲವಾದ ಪ್ರತಿಭಟನೆ ಇದ್ದರೂ ಜರ್ಮನರ ಒತ್ತಡವು ಹೆಚ್ಚಾದ ಕಾರಣ ಜನರಿಂದ ತುಂಬಿದ ಭಾಗಗಳನ್ನು ಅವರು ಬಿಟ್ಟು ಕೊಡಬೇಕಾಯಿತು ಜರ್ಮನರು ನೂರಾರು ವಿಮಾನಗಳಿಂದ ಬಾಂಬುಗಳನ್ನು ಸುರಿಸುತ್ತಿರುವರು. ಅನೇಕ ಆಸ್ಪತ್ರೆಗಳೂ, ಕಟ್ಟಡಗಳು ನಾಶವಾಗಿವೆ. ಪಟ್ಟಣವೆಲ್ಲಾ ಉರಿಯುತ್ತಲಿದೆ. ಯುದ್ಧವು ರಾಕ್ಷಸೀ ಸ್ವರೂಪವನ್ನು ತಾಳುತ್ತಲಿದೆ. ರಕ್ತದ ಕಾಲುಬೆಯು ಹರಿಯುತ್ತಲಿದೆ ಮುಖ್ಯವಾದ ಕಾರ್ಖಾನೆಗಳನ್ನೆಲ್ಲಾ ಬೇರೆಡೆ ಸಾಗಿಸಿರುವರೆಂದು ಪ್ರಕಟವಾಗಿದೆ

ಬ್ರಿಟಿಷರು ನೊಜಗಾಸ್ಕರ್ ದ್ವೀಪವನ್ನು ಆಕ್ರಮಿಸಿಕೊಳ್ಳಲು ಅಮೆರಿಕಾ ಸರಕಾರವೂಕೂಡ ಪೂರ್ಣ ಜವಾಬ್ದಾರಿ ಇರುವನೆಂದು ಫ್ರಾನ್ಸ್ ನುಂತ್ರಿಗಳಾದ ಲಾವಲ್‌ರು ಹೇಳಿದರು

ಜರ್ಮನ ಸೈನ್ಯಗಳು ಈಜಿಪ್ಟದಿಂದ ಹಿಂದಿಗಯಬಾರದೆಂದು ಜನರಲ್ ಮೋಸೆಲರವರು ತಮ್ಮ ನೈಸಿಕರಿಗೆ ಆಜ್ಞಾಪಿಸಿದ್ದಾರೆ

ಜಪಾನಿನವರು ಹಾಂಕಾಂಗಿನಲ್ಲಿ ಮೊತ್ತ ವಿಮಾನ ನಿಲ್ದಾಣವನ್ನು ಕಟ್ಟಲಿರುವರು ಪೂರ್ವ ವಿರೋಧದಲ್ಲೇ ಇದು ದೊಡ್ಡದಾಗಿರುವೆಂತಲೂ, 11 ಸಾವಿರ ಯುದ್ಧ ಕೈದಿಗಳು ಈ ಕಾರ್ಯದಲ್ಲಿ ತೊಡಗುವರಂತಲೂ ಲಂಡನ್ ಸುದ್ದಿ ಇದೆ.

ಮುರಳಿನ ಚೀಲಗಳು ಮತ್ತು ಇಟ್ಟಿಗೆ ಗೋಡೆಗಳು

ನಿಮ್ಮ ವ್ಯಾಣಸಂರಕ್ಷಣೆ ಮಾಡಬಹುದು

ಅವು ನಿಮ್ಮನ್ನು ರಕ್ಷಿಸಬಲ್ಲವು

ನೀವು ನಮ್ಮಲ್ಲಿ ಜೀವವಿಮೆ ಮಾಡಿಸಿದರೆ ನಾವು ನಿಮ್ಮ ಬಂಧುಗಳನ್ನು ರಕ್ಷಿಸುವೆವು

ಯುದ್ಧಕಾಲದ ಅಪಾಯವನ್ನು ಸೃಷ್ಟಿಯಲ್ಲಿಟ್ಟು ನಮ್ಮ ಪ್ರತ್ಯೇಕ ಜವಾಬ್ದಾರಿಯಿಲ್ಲದೆ ನಾಗರೀಕರ ಜೀವನಮಯನ್ನು ಭದ್ರಪಡಿಸಲಾಗಿದೆ

ಇಲ್ಲಿಯವರೆವಿಗೆ ನಲ್ಲಿಸಿರುವ ಹಕ್ಕುಗಳ ಪಣ ರು 26,00,00,000

ಬಾಂಬೆಯಲ್ಲಿರುವ ವಿಮಾನಪತ್ರಗಳ ಮೊತ್ತ ರೂ. 85,50,00,000

ವಾರ್ಷಿಕ ವರದಾಯ 1941 ರಲ್ಲಿ ಸುಮಾರು ರು 0,00,00050,

ಸಿಥಿಯ ದ್ರವ್ಯ ಸುಮಾರು ರೂ. 30,00,00,000

ಓರಿಯಂಟಲ್

ಗವರ್ನಮೆಂಟು ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪನಿ, ಲಿಮಿಟೆಡ್.

ಸ್ಥಾಪನೆ ೧೮೭೪. ಮುಖ್ಯ ಕಛೇರಿ ಬೊಂಬಾಯಿ

ಶಾಖೆ :—

ಓರಿಯಂಟಲ್ ಬಿಲ್ಡಿಂಗ್ಸ್ ಆರ್ಮೀನಿಯನ್ ಬೀದಿ, ಜಿ. ಟಿ ಮದ್ರಾಸು.

ಇನ್ಸ್‌ಪೆಕ್ಟರರವ ಅಫೀಸು:- **೩೧೨ ರೂಪರ್ಟಸ್ ಗೇಟ್ ಬ್ರೂಸಪೇಟೆ ಬಳ್ಳಾರಿ.**

ಅಡಿಗೆಯವಳ ವೇಷದಲ್ಲಿ ಜಪಾನೀ ದಂಡನಾಯಕ

ಬ್ರಹ್ಮಿಯಲದಲ್ಲಿ ಹೆಣ್ಣು ವೇಷದಿಂದ ಸಂಚಮದಳದ ಕಾರ್ಯವನ್ನು ನಾಡುತ್ತಿರುವ ಜಪಾನಿಗಳ ಸತ್ತೆ ಬಗುತ್ತಿದೆ. ಬ್ರಹ್ಮಿಯಲದಲ್ಲಿ ಅವರ ಸತ್ತೆ ಹಬ್ಬುವ ಕೆಲಸ ಬಹಳ ಜೋರಿನಿಂದ ನಡೆದಿದೆ. ಬ್ರಹ್ಮಿಯಲದ ಕರಾವಳಿಯಲ್ಲಿದ್ದ ಒಂದು ಮನೆಯನ್ನು ಸಂತೋಷವಾಗಿ 4,00,000 ರುಪ್ಪು ಗುಂಡುಗಳಿಂದ ನೊದಲುಗೊಂಡು ಸುಸ್ಸು ಹೊಡೆಯುವ ರೇಡಿಯೋ ಯಂತ್ರಗಳು ಸಹ ಸಿಕ್ಕಿದೆಯಂತೆ.

ಬ್ರಹ್ಮಿಯ ದೇಶದವರಂತೆ ವೇಷಹಾಕಿಕೊಂಡು ಒಳಸಂಚನ್ನು ನಡೆಸುತ್ತಿರುವ ಜಪಾನಿಗಳ ಸಂಚೆ ಅಪಾರವಾಗಿದೆಯೆಂತೆ ಜಪಾನೀ ಸೈನ್ಯಾಧಿಕಾರಿಯೊಬ್ಬನು ಗವರ್ನರಗಳಿಂದ ಅತಿಗೆಯವನ ವೇಷಾಂತರದಲ್ಲಿ ಕಾಲಕಳೆಯುತ್ತಿದ್ದನಂತೆ. ಮತ್ತೊಬ್ಬ ಜಪಾನೀ ಬ್ರಹ್ಮಿಯದ ಅಧಿಕಾರಿಯಂತೆಯೇ ವೇಷಭೂಷಣವನ್ನು ಹಾಕಿಕೊಂಡು ಪೋಲೀಸರ ಕೈಗೆಸಿಗದೆ ತಪ್ಪಿಸಿಕೊಳ್ಳುತ್ತಿದ್ದನಂತೆ.

ರಷ್ಯಾದಲ್ಲಿ ಸ್ಟಾಲಿನಗ್ರಾಡ ನಗರದ ವರಿಸ್ಥಿತಿಯು ಭಯಾನಕವಾಗಿರುವದೆಂದೂ ಜರ್ಮನರು ಹೊಸಹೊಸ ದಳಗಳನ್ನು ತರುತ್ತಿರುವದಾಗಿಯೂ ಗೊತ್ತಾಗಿದೆ.

ಕೆಸ್ಯ ದ್ವೀಪದಲ್ಲಿ ಎರಡು ಜಪಾನೀ ಹಡಗುಗಳು ಅಮೆರಿಕಾದವರಿಂದ ಮುಳುಗಿಸಲ್ಪಟ್ಟವೆಂದು ಪ್ರಕಟವಾಗಿದೆ.

ಜಪಾನೀಯರು ಪೋರ್ಟ್ ಮೋರ್ಸಬೀ ಬಂದರದಕಡೆ ಹೋಗುತ್ತಿರುವರೆಂದು ಆಸ್ಟ್ರೇಲಿಯಾ ಸೈನ್ಯಕೇಂದ್ರದಿಂದ ಸುದ್ದಿ ಬಂದಿದೆ.

ಮೆಡಗಾಸ್ಕರ ದ್ವೀಪದ ಸ್ರೆಂಚ ಗವರ್ನರರು ದಾಳಿ ನಡೆಸಿರುವ ಬ್ರಿಟಿಷ ಸೈನ್ಯಾಧಿಕಾರಿಗೆ ಯುದ್ಧ ನಿಲ್ಲಿಸಬೇಕೆಂದು ಕೋರಿ ಶಾಂತಿ ಪರತ್ತುಗಳನ್ನು ಕಳುಹಿಸಬೇಕೆಂದು ತಿಳಿಸಿದ್ದಾರೆ.

ಗಾಂಧೀಜೀಯವರಮೇಲೆ ಅಪಪ್ರಚಾರ –ರಾಜಾಜಿಯವರ ಖಂಡನೆ – ಕ್ರಿಪ್ಸರ ಸೂಚನೆಗಳನ್ನು ಸ್ವೀಕರಿಸಲು ಕಾಂಗ್ರೆಸ್ ವರ್ಕಿಂಗ ಕಮಿಟಿಯವರು ತೀರ್ಮಾನಿಸಿದ್ದರೆಂದೂ, ಆದರೆ ಗಾಂಧೀಜೀಯವರು ಅಡ್ಡಬಂದು ಅದನ್ನು ನಿಲ್ಲಿಸಿದರೆಂದೂ ಕ್ರಿಪ್ಸರು ಪಾರ್ಲಿಮೆಂಟ ಸಭೆಯಲ್ಲಿ ತಿಳಿಸಿದರು. ಮದ್ರಾಸಿನ ಹಿಂದಿನ ಗವರ್ನರರಾದ ಲಾರ್ಡ ಎರ್ಸಕಿನ್‌ರು ಒಂದು ಹೇಳಿಕೆಯಿತ್ತು 1937 ರಲ್ಲಿ ಗಾಂಧೀಜಿಯವರು ಮದ್ರಾಸಿಗೆ ಬಂದು ಸಲಹೆ ಕೊಡದಿದ್ದರೆ ರಾಜಗೋಪಾಚಾರ್ಯರು ಮಂತ್ರಿ ಪದವನ್ನು ಅ ನರ್ಹವೇ ಸ್ವೀಕರಿಸುತ್ತಿದ್ದರೆಂದು ಹೇಳಿದರು ಇನ್ನೆರಡರಲ್ಲಿಯೂ ತಥ್ಯಾಂಶವಿಲ್ಲವೆಂದೂ ಇದೆಲ್ಲಾ ಸುಳ್ಳಿನ ಕಂತೆಯೆಂದೂ ಮಹಾತ್ಮರು ಜೈಲಲ್ಲಿರಬೇಕಾದರೆ ಇಂಥಾ ಅಪಪ್ರಚಾರವನ್ನು ಕೈಗೊಂಡದ್ದು ಹೇನಕಾರನೆಂದೂ ರಾಜಾಜಿಯವರು ಖಂಡಿಸಿದ್ದಾರೆ.

ಆರ್ಥರ ಮೂರರ ಸಲಹೆ :- ಕಲ್ಕತ್ತೆಯ ಅನಧಿಕಾರೀ ಯೂರೋಪಿಯನ್ ಜನರು ಹಿಂದೂಸ್ಥಾನಕ್ಕೆ ರಾಷ್ಟ್ರೀಯ ಸರಕಾರವನ್ನು ದಯಪಾಲಿಸಿ ತಕ್ಕ ಅಧಿಕಾರಗಳನ್ನು ಕೊಡಬೇಕೆಂದು ಸೂಚಿಸಿರುತ್ತಾರೆ. ಇತರ ಯೂರೋಪಿಯನ್ ನಿರೋಧಿಗಳಿಗೆ ತಕ್ಕ ಸಮಾಧಾನ ಹೇಳಿರುವರು.

ಪಂಡಿತ ಜವಹರಲಾಲರ ಹಣದಲ್ಕ್ಯನನ್ನು ಕೊಡಬೇಕೆಂದು ಬೊಂಬಾಯಿ ವಜರಾಜ ಕಂಪೆನಿಯವರನ್ನು ಸರಕಾರವು ಕೇಳಿದೆ.

ಹಿಂದೂ ಮಹಾಸಭೆಯ ಡಾ. ಶಾಮುಪ್ರಸಾದ ಮುಖರ್ಜಿಯವರು ಗಾಂಧೀಜಿಯವರನ್ನು ಕಾಣಲು ವೈಸ್ರಾಯರ ಅನುಜ್ಞೆ ಕೇಳಿದ್ದರು. ವೈಸ್ರಾಯರು ಅದನ್ನು ನಿರಾಕರಿಸಿರುವರು.

ಹೊಸಪೇಟೆಯ 10 ಕಾಂಗ್ರೆಸ್ ಪುರಸರು ಸ್ವಾನಬದ್ಧರಾಗಿ ಬೆಲ್ಲಾರಿಗೆ ಸಾಗಿಸಲ್ಪಟ್ಟರು.

ಮತ್ತೆರಡು ಜಿಲ್ಲಾ ಬೋರ್ಡುಗಳ ಆಹುತಿ,

ಸರಕಾರ ಪಬ್ಲಾಳಿಕೆಯನ್ನು ಕಾಂಗ್ರೆಸ್ ಮುಂಬಡರ ಬಂಧನವನ್ನೂ ಖಂಡಿಸಿದ ಚಿಂಗಲ್‌ಪುಟ್ ಮತ್ತು ಚಿತ್ತೂರು ಜಿಲ್ಲಾ ಬೋರ್ಡುಗಳನ್ನು ಮದ್ರಾಸ್ ಸರಕಾರದವರು 6 ತಿಂಗಳವರೆಗೆ ರದ್ದು ಮಾಡಿದ್ದಾರೆ.

ಹರಪನಹಳ್ಳಿ.

14-9-42 ರ ದಿನ ಬಾಲಕಿಯರ ಶಾಲೆಯಲ್ಲಿ ವಿಶ್ವೇಶ್ವರನ ಪೂಜೆಯು ಶ್ರೀಮತಿ ಮೈಸೂರು S. N. ಸಾವಿತ್ರಮ್ಮನವರ ಅಧ್ಯಕ್ಷತೆಯಲ್ಲಿ ನರ್ತನ, ವಾದ್ಯ, ಸಂಗೀತ, ನಾಟಕಗಳಿಂದ ಬಹಳ ಸಮೃದ್ಧಿಯಾಗಿ ಜರಿಗಿತು. ಶಾಲೆಯ ಪ್ರಧಾನೋಪಾಧ್ಯಾಯರಾದ ಜಿ. ನಂ ಕೋಬಾಚಾರ್ಯರು ಶಾಲೆಯ ಏಳ್ಗೆಯ ವಿಷಯವಾಗಿಯು ಮತ್ತು ಎಂಟನೆಯ ತರಗತಿಗೆ ಸಂಖ್ಯೆ ಹೆಚ್ಚಾಗುವದಕ್ಕೆ ಮಹಿಳೆಯರು ಸಹಾಯಮಾಡಬೇಕೆಂದು ಭಾಷಣ ಮಾಡುತ್ತ ಅಧ್ಯಕ್ಷರಿಗೂ, ಮಹಿಳೆಯರಿಗೂ ವಂದನೆಗಳನ್ನು ಅರ್ಪಿಸಿದರು.

ಬಳ್ಳಾರಿ ಜಿಲ್ಲೆಯಲ್ಲಿ ಬರಗಾಲ.

ಸೈರುಗಳು ಸಕ್ಕಕ್ಕೆ ಬಂದಾಗಲೇ ಮಳೆಯುನಿಂತು ಸೈರುಗಳೆಲ್ಲಾ ಒಣಗುತ್ತಲಿವೆ. ಕ್ವಾನು ಪ್ರದೇಶಗಳಲ್ಲಿ ಕೂಲಿಗಾಗಿ ಬರುತ್ತಿರುವವರ ಸಂಖೆಯು ಸಾವಿರಗಟ್ಟಲೆ ಹೆಚ್ಚುತ್ತಲಿದೆ. ಮತ್ತೆ ಭೀಷಣ ಬರಗಾಲದ ಚಿಹ್ನೆಗಳು ತೋರಿಬರುತ್ತಲಿವೆ.

ಬಳ್ಳಾರಿ ಪೇಟೆ ಧಾರಣೆ.

18—9—42 ಶುಕ್ರವಾರ.

ಭಂಗಾರ ತೊಲೆ 1-ಕ್ಕೆ ರೂ.		57-0-0
ಸಾವರಿನ್		42-8-0
ಬೆಳ್ಳಿ 100 ತೊಲೆ ರೂ.		90-0-0
ಅರಳೆ ಫಾರಂ		120-0-0
ಅರಳೆ ನುಂಗಾರಿ 12ಮಣಕ್ಕೆ		85-0-0
ಅಕ್ಕಿ 1 ರೂ. ಗೆ	4 ರಿಂದ 5	ಸೇರು
ಬೇಳೆ ,, ...	3½	,,
ಗೋಧಿ ,, ...	–	,,
ಜೋಳ ,, ...	9½	,,
ನವಣೆ ,, ...	13	,,
ಸಜ್ಜೆ ,, ...	10½	,,
ಸೆಲಗಡಲೆ		1-10-6
ಸಕ್ಕರೆ ಬೀಸ		0—8-6
ಬೆಲ್ಲ		20-0-0
ಚಿಮ್ಮಿ ಎಣ್ಣೆ		4-13-3



ಕಾಶ್ಮೀರು ಅಿರುಕ್

(ಮನೆಯ ವೈದ್ಯ)

ನೆಗಡಿ, ಕೆಮ್ಮು, ವುಬ್ಬಸ, ಶೀತಭೇದಿ, ಭಳಿಜ್ವರ, ಅಜೀರ್ಣ ಮೊದಲಾದ ವ್ಯಾಧಿಗಳಿಗೆ ದಿವ್ಯಾಮೃತ ಎಲ್ಲಾ ನೋವುಗಳಿಗೆ ಚೇಳು, ಹಾವು ಕಚ್ಚಿದುದಕ್ಕೆ ದಿವ್ಯೌಷಧ.

ಎಲ್ಲಾ ಸಾಪುಗಳಲ್ಲಿ ದೊರೆಯುತ್ತದೆ.

ಹೆಚ್. ಯಸ್. ಅಂಡ್ ಸನ್ಸು, ಬಳ್ಳಾರಿ.

20-9-42 ಭಾನುವಾರ.

ಸರಕಾರದ ಜೊಳ್ಳು ಸಮರ್ಥನೆ.

ಬ್ರಿಟಿಷ್ ವಾರ್ಮಿಮೆಂಟಿನಲ್ಲಿ ಪ್ರಧಾನ ಮಂತ್ರಿಗಳಾದ ಚರ್ಚಿಲರವರೂ ಇಂಡಿಯಾ ಕಾರ್ಯದರ್ಶಿ ಅಮೆರಿಯವರು ಭಾರತ ವರಿಸ್ಥಿತಿಯನ್ನು ಕುರಿತು ಹೇಳಿಕೆ ಕೊಟ್ಟು ಪ್ರಶ್ನೆಗಳಿಗೆ ಉತ್ತರವಿತ್ತರು

"ಕಾಂಗ್ರೆಸ್-ಭಾರತ ಪ್ರತಿನಿಧಿ ಸಂಸ್ಥೆಯಲ್ಲಿ. ಗಾಂಧಿಯವರ ಕೃತ್ಯಗಳಿಗೆ ಬೆಂಬಲವಿಲ್ಲ ಕಾಂಗ್ರೆಸ್ ಚಳವಳಿಯನ್ನು ಟನ್ನು ಬಿಡಿಯಲು ಸರಕಾರವು ಯತ್ನಿಸಿ ಯಶಸ್ವಿಯಾಗಿದೆ ಹಿಂದೂ ದೇಶದಲ್ಲಿ ಬಿಳಿಯ ಸೈನಿಕರು ಹೆಚ್ಚಾಗಿದ್ದಾರೆ. ಭಯಪಡುವ ಅಗತ್ಯವಿಲ್ಲ." ಎಂಬುದೇ ಸಾರ, ಸಾರಾಂಶ.

ಹಿಂದೂದೇಶಕ್ಕೆ ಸ್ವಾತಂತ್ರ್ಯವು ಬೇಡವೆಂದೂ, ರಾಷ್ಟ್ರೀಯ ಸರಕಾರವು ಬೇಡವೆಂದೂ ಇತರ ಯಾವ ಪಕ್ಷಗಳು ಹೇಳಿವೆ? ಇತರ ಪಕ್ಷ ಸಂಘಟನೆಗಳ ನಿರ್ಣಯಗಳಿಗೆ ಬ್ರಿಟಿಷ್ ಸರಕಾರವು ಕೊಟ್ಟ ಮಹತ್ವವಾದರೂ ಏನೂ? ಭಾರತೀಯರಲ್ಲಿ ಅನೈಕಮತ್ಯವಿದೆ ಯೆಂಬುದನ್ನು ಒತ್ತಿ ಹೇಳುವ ಧೋರಣೆಯೇ ಬ್ರಿಟಿಷ್ ಮುತ್ಸದ್ದಿಗಳಿಂದ ಸೂಚಿತವಾಗುತ್ತಲಿದ್ದು ಅವರು ಯಾವ ರೀತಿಯಲ್ಲೂ ತಮ್ಮ ಅಧಿಕಾರವನ್ನು ಬಿಟ್ಟು ಕೊಡುವಂತಿಲ್ಲವೆಂಬುದೂ, ಕಿರಿಮುಷ್ಟಿಯನ್ನು ಸಡಲಿಸುವಂತಿಲ್ಲವೆಂಬುದೂ ಸೂರ್ಯ ಪ್ರಕಾಶದಷ್ಟು ಸ್ಪಷ್ಟವಾಗುತ್ತಲಿದೆ.

ಕಾಂಗ್ರೆಸ್ಸಿಗೆ ಜನತೆಯ ಬೆಂಬಲವಿಲ್ಲ ದಿದ್ದರೆ 11 ಪ್ರಾಂತ್ಯಗಳಲ್ಲಿ 8 ರಲ್ಲಿ ಸರಕಾರವನ್ನು ಹೇಗೆ ನಡಿಸಿತು? ಯಾವ ಸಂಸ್ಥೆಯ ಶಕ್ತಿಯನ್ನಾಗಲಿ ಅದರ ಸದಸ್ಯತ್ವದ ಲೆಕ್ಕದಿಂದ ಅಂದಾಜು ಮಾಡುವದು ವಿವೇಕವಾದುದಲ್ಲ. ಕಾಂಗ್ರೆಸ್ಸಿನಲ್ಲಿ ಅತ್ಯಧಿಕ ಸಂಖ್ಯಾಕರಾಗಿ ತ್ಯಾಗಿಗಳೂ, ದೇಶಸೇವಾಧುರೀಣರೂ ಇದ್ದುದರಿಂದಲೇ ಅದು ಪ್ರಪಂಚದ ಗೌರವಕ್ಕೆ ಯೋಗ್ಯವಾಯಿತು

ಶತ್ರುವು ಹಿಂದೂಸ್ಥಾನದ ಬಾಗಿಲಲ್ಲಿರಬೇಕಾದರೆ ದೇಶದಲ್ಲಿನ ಅಶಾಂತಿವಾತಾವರಣದಿಂದ ಯಾರಿಗೂ ಸಮಾಧಾನವಲ್ಲ. ಇದು ಬಹಳ ಅಪಾಯಕರವಾದುದು ಈ ಕಾರಣ ಬ್ರಿಟಿಷ್ ಸರಕಾರದವರು ಬರಿಯ ದಬ್ಬಾಳಿಕೆಯ ಧೋರಣೆಯುಕ್ತರೇ ಅನುಸರಿಸದೆ ದೇಶದ ನಿಜವಾದ ಧುರೀಣರೊಂದಿಗೆ ಸಂಧಿಯನ್ನು ಮಾಡಿಕೊಂಡು ದೇಶದಲ್ಲಿ ಶಾಂತಿಯನ್ನು ಸ್ವಾತಂತ್ರ್ಯವನ್ನೂ ಸ್ಥಾಪಿಸಲು ಸಹಾಯ ಮಾಡುವರೆಂದು ಆಶಿಸುತ್ತೇನೆ.

ಸಕ್ಕರೆ ಚಿನುಣಿ ಎಣ್ಣೆಗಳ ಅಭಾವ

ಕೆಲ ವರ್ತಕರು ಲಾಭ ಬಡಕತನದಿಂದ ಸಕ್ಕರೆ ಜನುಣಿ ಎಣ್ಣೆಗಳನ್ನು ಸಂಗ್ರಹಿಸಿ ಹೆಚ್ಚಿನ ದರಗಳಿಗೆ ಮಾರುತ್ತಿರುವುದು ಗೊತ್ತಾಗುತ್ತಲಿದೆ ಇದರಿಂದ ಸಾರ್ವಜನಿಕರಿಗೆ ಬಹಳ ಕಷ್ಟ ಒದಗುತ್ತಲಿದೆ ಕಳೆದವಾರ ಒಬ್ಬ ವರ್ತಕರಿಗೆ 45 ಚೀಲ ಸಕ್ಕರೆ ಬಂದು 30 ಚೀಲಗಳನ್ನು ಹೋಟೆಲುಗಳಿಗೂ ಕೊಟ್ಟು ಕೋಆಪರೇಟಿವ್ ಸ್ಟೋರ್ಸಿಗೆ ಬಂದು ಚೀಲ ನಿಗದೇಕೆಂದರೆ ಕೃತಾನಸ್ಥಯಾಯಿತು. ಸರಕಾರದ ಸರಬರಾಜಿನ ಧೋರಣೆ ಪಾಸಿಗಳ ನಿಗದೀ ಮೂಲಕವಾದರೂ ಅದನ್ನು ಜಾರಿಗೆ ತರಲು ಸರಿಯಾದ ಏರ್ಪಾಟು ಮಾಡಿಲ್ಲ

ಸಾರ್ವಜನಿಕರಿಗೆ ಉಪಯುಕ್ತವಾದ ಕೋಆಪರೇಟಿವ್ ಸ್ಟೋರ್ಸ್‌ಗಳಿಗೆ ನೋಡಲು ಆಹಾರಸಚಿವ ಮತ್ತು ಆಪತ್ಕಾಲಸ್ಥಿತಿಗಳ ಸಂಗ್ರಹಕ್ಕೆ ಅನುಕೂಲ ಮಾಡಿಕೊಟ್ಟರೆ ಜನತೆಗೆ ತೊಂದರೆಯೇ ಆಗಲಾರದು. **ಜಿಲ್ಲಾ ಕಲೆಕ್ಟರವರು ತಮ್ಮ ಧ್ಯಾನವನ್ನು ಇತ್ತಕಡೆ ಹರಿಸಿ ತಕ್ಕ ನಿರ್ಣಾಟು ಮಾಡುವರೆಂದು ಆಶಿಸುತ್ತೇನೆ.**

ಚಳವಳಿಯ ಅನಾಹುತ.

ದೆಹಲೀ :— ಅಸೆಂಬ್ಲಿಯಲ್ಲಿ ಗೃಹ ಸದಸ್ಯರಾದ ಸರ್ ರೆಜಿನಾಲ್ಡ್ ಮಾಕ್ಸ್‌ವೆಲರು ಹೇಳಿಕೆ ಕೊಡುತ್ತ ದೇಶದ ಅಶಾಂತಿಗೂ ಈಗಾಗುತ್ತಿರುವ ನಷ್ಟಕ್ಕೂ ಕಾಂಗ್ರೆಸ್ಸೇ ಕಾರಣವೆಂದು ಹೇಳಿದರು ದಂಗೆಗಳನ್ನಡಗಿಸಲು ಸೈನಿಕರನ್ನು ಹೆಚ್ಚಾಗಿ ಬಳಸಬೇಕಾಯ್ತೆಂದರು.

31 ಪೋಲೀಸರೂ. 11 ಬ್ರಿಟಿಷ್ ಸೈನಿಕರೂ ಕೊಲ್ಲಲ್ಪಟ್ಟರುವರೆಂದೂ ಇಲ್ಲಿಯವರೆವಿಗೆ 318 ಜನರು ಗುಂಪುಗಳಿಂದ ಸತ್ತಿರುವರೆಂದೂ ಸರಿಸುಮಾರಿಗೆ ಲೆಕ್ಕ ಸಿಕ್ಕಿದೆಯೆಂದೂ ಹೇಳಿದರು 2ನೆ ಸಾವಿರ ಜನ ಸತ್ತಿರುವರೆಂಬುದು ಸುಳ್ಳೆಂದರು.

ಕುರುಗೋಡು — ಪಂಚಾಯ್ತಿ ಬೋರ್ಡಿನ ಸಭೆಯು 11 ನೆಯ ತಾರೀಖು ಕೂಡಿ ದಿವಂಗತ ಮಹದೇವ ದೇಶಾಯಿಯವರ ನಿಧನದ ಬಗ್ಗೆ ದುಃಖ ಪ್ರದರ್ಶನ ರಾಷ್ಟ್ರೀಯ ಸರಕಾರವ ಬೇಡಿಕೆಗೆ ಬ್ರಿಟಿಷ್‌ರು ನಿರಾಕರಣೆ ಮಾತಿದುದರ ನಿಷೇಧ, ಕಾಂಗ್ರೆಸ್ ಮುಖಂಡರನ್ನು ಬಂಧಿಸಿದುದರ ಸಲುವಾಗಿ ಮತ್ತು ಬಳ್ಳಾರಿ ಜಿಲ್ಲೆಯ ಹಳ್ಳಿ ಪ್ರದೇಶಗಳಲ್ಲೂ 144 ನೆಯ ಕಲಂ ಜಾರಿಗೆ ತಂದುದರ ಪ್ರತಿಭಟನೆಯ ನಿರ್ಣಯವಾಯಿತು.

ಕೊಟ್ಟೂರಲ್ಲಿ ಕಾಂಗ್ರೆಸ್ ಮುಖಂಡರ ಬಂಧನ.

ಬಳ್ಳಾರಿ ಜಿಲ್ಲಾ ಬೋರ್ಡು ಕಾಂಗ್ರೆಸ್ ಸದಸ್ಯರೂ – ಪ್ರಸಿದ್ಧ ವರ್ತಕರೂ ಆದ ಶ್ರೀ ಬಿ. ಬಸ್. ಗುರಲಿಂಗಪ್ಪ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಗೂಳಿ ಶರಣಪ್ಪ, ಗೋವಿಂದರಾವ್ ಕೆ ತಮ್ಮೆಪ್ಪ ಇವರು 18 ನೆಯ ತಾರೀ ಬಂಧನಕ್ಕೊಳಪ್ಪಟ್ಟು ಹೊಸಪೇಟೆಗೆ ಕರೆದೊಯ್ಯಲ್ಪಟ್ಟರೆಂದೂ. ಅನಂತಪುರ ಕಾಲೇಜು ಸೀನಿಯರ್ ಬಿ ಎ, ವಿದ್ಯಾರ್ಥಿಗಳಾದ ಶ್ರೀ ಸಂಜೀವನರವರನ್ನು ಉಜ್ಜಿನಿಯಲ್ಲಿ ಬಂಧಿಸಿ ಕರೆತಂದರೆಂದೂ ಗೊತ್ತಾಗಿದೆ

ನಾರಾಯಣದೇವರಕೆರೆ — ಶ್ರೀ ಆಸ್ಥಾನ ಲಕ್ಷ್ಮೀನಾರಾಯಣಚಾರ್ಯರವರ್ಯರ – 4 ಜನರ ಬಂಧನವಾಗಿದೆಯೆಂಬ ಸುದ್ದಿ ಬಂದಿದೆ

ರಾಕಟ್ಟಿ — ಇಲ್ಲಿಯ ಪೋಲೀಸು ಸ್ಟೇಷನ್ನಿಂದ 2 ಬಂದೂಕ ಮದ್ದು ಇತರ ರಿಕಾರ್ಡುಗಳು ಕದಿಯಲ್ಪಟ್ಟಿವೆಯೆಂದೂ, ಅವುಗಳಲ್ಲಿ ಕೆಲವು ಭಾಗಿಯಲ್ಲಿ ಸಿಕ್ಕಿವೆಯೆಂದೂ ಗೊತ್ತಾಗಿದೆ. ಈ ಸಂಬಂಧದಲ್ಲಿ ತಿಪ್ಪಯ್ಯ ವೀರಣ್ಣ ನಾರಾಯಣ ಎಂಬುವರನ್ನು ಬಂಧಿಸಲಾಗಿದೆ.

ಆದವಾನಿ – 144 ನೇ ಸೆಕ್ಷನ್ ಜಾರೀಗೊಳಿಸಿ ತಾಲೂಕು ಆಫೀಸಿಗೆ ಮೆರವಣಿಗೆಯಲ್ಲಿ ಹೊರಟ ಶ್ರೀನುತ ಬಲ್ಲೆಕಲ್ ರಾವ್ ಕೃಷ್ಣರಾವಿಗೆ 6 ತಿಂಗಳು ಸಾದಾಶಿಕ್ಷೆ. ಹೆಚ್ ರಾಮರಾವು ಜೈಸಯ್ಯ ಕ ಅಂಜನೇಯಲು ಇವರಿಗೆ 6 ತಿಂಗಳು ಕಠಿಣ ಶಿಕ್ಷೆ ವಿಧಿಸಲಾಗಿದೆ

ಆಸ್ಟ್ರೇಲಿಯಾದ 28257 ಜನರು ಜಪಾನಿಗೆ - ಸುಳಯಾ, ಪಿಂಗಪೂರ, ಮಧ್ಯಪೂರ್ವಗಳಲ್ಲಿ ಕಣ್ಮರೆಯಾಗಿರುವರೆಂದೂ, ಬಹುಜನರು ಕೈದಿಗಳಾಗಿರುವರೆಂದೂ ಊಹಿಸಲಾಗಿದೆ

ಸಾಲೊಮನ್ ದ್ವೀಪಗಳಲ್ಲಿ — ಜಪಾನ್ ಮತ್ತು ಅಮೆರಿಕಾ ಸೈನ್ಯಗಳ ನಡುವೆ ಘೋರವಾದ ಯುದ್ಧವು ಸಾಗಿದೆ. ಜಪಾನರು ಹೊಸಹೊಸದಾಗಿ ದಳಗಳನ್ನು ತರುತ್ತಿರುವರು. ಹೊಸಹೊಸ ಭಾಗಗಳನ್ನು ಆಕ್ರಮಿಸಿಕೊಳ್ಳಬೇಕೆಂಬುದೇ ಜಪಾನರ ಉದ್ದೇಶವಿದುವಂತಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಬಂಧನ ಶಿಕ್ಷೆ.

ಹೊಸಪೇಟೆ :— ಶ್ರೀಗಳಾದ ಕಟ್ಟಿ ಶ್ರೀನಿವಾಸಾಚಾರ್ ಅಡ್ವೋಕೇಟ್ ಅಸುಂದಿ ತಿರುಮಲರಾವ್ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ. ಸಿದ್ದಪ್ಪ ಗೌಡ ಪಟೆ, ಕೆ. ಯಸ್. ಜಂಬಪ್ಪ, ಯಸ್. ವಿ. ದೇಶಾಯಿ, ಜಿ. ಭೀಮಪ್ಪ, ರಾಘಾಪುರೀರಣ್ಣ, ವಕ್ರ ಹನುಮಂತಪ್ಪ, ಮೂಲಿಮನಿ ಭೀಮಪ್ಪ ಇವರು ಕಲೆದವಾರ ಬಂಧಿಸಲ್ಪಟ್ಟರು.

ಬಳ್ಳಾರಿ ನಗರ:— ಹಿಂದೂ ಮಹಾಸಭಾ ಕಾರ್ಯ ಕಾರಿಣೀ ಸಮಿತಿಯು (ಬಳ್ಳಾರಿ) ದೆಹಲಿಯಲ್ಲಿ ಕೂಡಿದ ಅಖಿಲ ಭಾರತ ಹಿಂದೂಮಹಾಸಭೆ ವರ್ಕಿಂಗ್ ಕಮಿಟಿಯವರ ತೀರ್ಮಾನವನ್ನು ಅನುಮೋದಿಸಿದೆ. ಹಿಂದೂಸ್ತಾನದ ಸ್ವಾತಂತ್ರ್ಯವನ್ನು ಸಾರಿ ವ್ಯಮುಖ ಪಾರ್ಟಿಗಳವರೊಂದಿಗೆ ಸಂಧಾನನಡೆಸಿ ಬ್ರಿಟಿಷ್ ಸರಕಾರವು ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕು. ರಾಜಕೀಯ ಸಮಸ್ಯೆಯನ್ನು ಬಗೆಹರಿಸಿ ಕಾಂಗ್ರೆಸ್ ಮುಖಂಡರನ್ನು ಬಿಡಬೇಕು ಎಂಬುದೇ ನಿರ್ಣಯದ ಸಾರಾಂಶ.

13 ನೆಯ ತಾ|| ಭಾನುವಾರ ಶ್ರೀ ಡಿ. ವೇಣುಗೋಪಾಲಾಚಾರಿಯವರನ್ನು ನೆಯು ಶೋಧಿಸಲ್ಪಟ್ಟಿತು. ಆಕ್ಷೇಪಣೀಯವಾದ ಸಾಹಿತ್ಯವೇನೂ ದೊರೆಯಲಿಲ್ಲ.

ಚಿಕ್ಕ ಜೋಗಿಹಳ್ಳಿ– 11 ನೆಯ ತಾ. ಕೂಡ್ಲಿಗಿ ತಾಲೂಕು ಚಿಕ್ಕಜೋಗಿಹಳ್ಳಿ ತಾಂಡಾದ ಕಾಂಗ್ರೆಸ್ ಕಾರ್ಯಕರ್ತರಾದ ಸಾಕ್ರಾನಾಯ್ಕ, ಮುಸಿಯಾನಾಯ್ಕ ಇವರನ್ನು ಹೊಸಪೇಟೆ ಪೋಲೀಸ್ ಸಬ್‌ಇನ್ಸ್‌ಪೆಕ್ಟರವರು ಬಂಧಿಸಿರುತ್ತಾರೆ. ಯಾವ ಅಪರಾಧಕ್ಕಾಗಿ ಮತ್ತು ಎಷ್ಟನೇ ಕಲಂಕೆಳಿಗೆ ಎಂಬುದು ತಿಳಿದು ಬಂದಿಲ್ಲ.

ಕೊಟ್ಟೂರಲ್ಲಿ ಶ್ರಾವಣದ ಕಾರ್ಯಕ್ರಮ.

ಕಟ್ಟಿನಮನೆ ವೀರಶೈವ ಮಂಡಲಿಯವರು ನಿತ್ಯಭಜನೆ ಸಪ್ತಾಹ ರುದ್ರಾಭಿಷೇಕ ಶಿವಕೀರ್ತನೆ ಪಾರಾಯಣ ಗುರುಲಿಂಗ ಜಂಗಮವಾರಾಧನೆಗಳನ್ನು ನಡೆಸಿದರು. ಬೃಹಸ್ಪತಿಶಾಧೀಶರಾದ ಶ್ರೀ ಷ. ಬ್ರ ಗುರುಪಟ್ಟದ ಭೂತ ಭುಜಂಗ ಶಿವಾಚಾರ್ಯ ಸ್ವಾಮಿಗಳು ಕೇವಲ ಬಾಲ ವಯಸ್ಸಿನವರಾದರೂ ಕ್ಷೀರಾಹಾರಿಗಳಾಗಿ ನಿತ್ಯ ಶಿವಭಜನೆಗೇರ್ಪಡಿಸಿ ಗಚ್ಚಿನ ಮಠದಲ್ಲಿ ಶ್ರೀ ರೇಣುಕ ವಿಜಯ ಮಹಾ ಪುರಾಣವನ್ನು ವ್ಯಾರಂಭ ಮಾಡಿಸಿದ್ದರು. ಶ್ರೀ ವಿರೂ ವಾಕ್ಸ ಶಾಸ್ತ್ರಿಗಳ ಸಂಗೀತ ಪ್ರವಚನೆಯೊಂದಿಗೆ 1 ನೆಯ ತಾ|| ಭೂವಿ ಅಸ್ಸನಂತರ ಪೂರ್ಣ ಪುರಾಣ ಸಮಾಪ್ತಿಯು ಮಂಗಲ ಮಹೋತ್ಸವವಾಯಿತು. ಶ್ರೀ ಶಿವಪ್ರಸಾದ ಶಾಸ್ತ್ರಿಗಳು ಗುರುಭಕ್ತಿ ಶ್ರೀ ಗುರು ಬಸವಶಾಸ್ತ್ರಿಗಳು ಸನಾತನ ಧರ್ಮ ಶ್ರೀ ಮುಲ್ಲಸ್ವಸಮರು ಸ್ತ್ರೀನೀತಿ ವಿಷಯಗಳಲ್ಲಿ ಭಾಷಣ ಮಾಡಿದನಂತರ ಶ್ರೀ ಚನ್ನಬಸವಾರ್ಯಗವಾಯಿಗಳ ಪಟೇಲು ಮಾಡಿದಂದಿಂದ ಸಭೆಯು ಮುಗಿಯಿತು. ಶ್ರೀ ವಿರೂಪಾಕ್ಷ ಶಾಸ್ತ್ರಿಗಳಿಗೆ ಪುರವಾಸಿಗಳು ಸನ್ಮಾನಪತ್ರಿಕೆಯನ್ನು ಕೊಟ್ಟರು. ಈ ಶ್ರವಣ ಕಾರ್ಯಕ್ರಮವನ್ನು ಏರ್ಪಡಿಸಲು ಉತ್ಸಾಹದಿಂದ ನೆರವೇರಿಸಿದ ಗುರುಭಕ್ತಿ ವಾರಾಯಣರಿಗೆ ಪರಶಿವನು ಸುಂಗಳನನ್ನೀಯಲಿ.

[ರುದ್ರಮುನಿ]

ಹರಪನಹಳ್ಳಿ :— 6 ನೆಯ ತಾ|| ನಡೆದ ಬಂಧನಕ್ಕಾಗಿ 7 ನೆಯ ತಾ|| ಪೂರ್ಣವಾದ ಹರ್ತಾಳನವಾಯಿತು.

ಸಾತಾರಾ ಜಿಲ್ಲೆಯ ಕಾಟ್ಟೂವಾ ತಾಲೂಕಿನ ಹಳ್ಳಿಯಲ್ಲಿ ಪೋಲೀಸರು ಗುಂಡುಹಾರಿಸುವ ಪ್ರಸಂಗ ಬಂದು 4 ಜನರು ಸತ್ತರು, 13 ಜನರಿಗೆ ಘಾಯವಾಗಿದೆ.

ಬೊಂಬಾಯಿ ಸರಕಾರದವರು ವಿಧಿಸಿರುವ ಸಾಮೂಹಿಕ ದಂಡ ಪ್ರಕರಣವನ್ನು ಸರಕಾರ ಈಸ್ಟಇಂಡೀಶದ ಅನುಶ್ಲೇರ ನಗರಕ್ಕೆ 1,50,000 ರೂ. ಅಲ್ಲಿ ಲೈಟ್ಸ್ಟೇರ್ಸ್. ಪೋಸ್ಟಾಫೀಸು, ಶಿವಿಲ್ ಕೋರ್ಟು ನುಡಲಾಗಿದೆ. ಸೂರತ ಜಿಲ್ಲೆಯಲ್ಲಿ 20 ಸಾವಿರ ರೂ. ಥಾನಾ ಜಿಲ್ಲೆಯಲ್ಲಿ 800. ಬೆಳಗಾವ ಜಿಲ್ಲೆಯ ನಿವ್ಯಾಣಿಯಲ್ಲಿ 1 ಲಕ್ಷ ರೂ. ಬಾಗೆವಾಡಿ ಕಿತ್ತೂರು 20 ಸಾವಿರ, ಬಿಜೊಸೂರು 5 ಸಾವಿರ. ಸರಕಾರಿ ನೌಕರರು, ಮುನಸಲ್ಮಾನರು, ಸರಕಾರಕ್ಕೆ ಸಹಾಯ ನೂಡಿದವರನ್ನು ದಂಡದಿಂದ ಮುಕ್ತ ಮಾಡಿದ್ದಾರೆ.

ವಿಶಾಖಪಟ್ಟಣ ಮತ್ತು ಕಡಪಾ ಜಿಲ್ಲಾ ಬೋರ್ಡುಗಳನ್ನು ರದ್ದುಮಾಡಿರುವರು.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೪—೦
ಕನ್ನಡ ಪಶೋಪನಿಷತ್ತುಗಳು	೦—೯—೦
ವಿಜಾಮುಭವ ಬೋಧೆ	೦—೪—೦
ಸುಪ್ರಭಾತ ಶತಕ	೦—೧—೬

ಅಂಚೆ ನಿಚ್ಚ ಬೇರೆ. ಪುಸ್ತಕ ವ್ಯಾಪಾರಿಗಳಿಗೆ ಹೆಚ್ಚು ಪುಸ್ತಕ ಕೊಳ್ಳುವರಿಗೆ ಧಾರಾಳವಾದ ಕಮೀಷನ್.

ಕಾಲವ ಸುಬ್ಬಣ್ಣ ಮರ್ಚೆಂಟ್ಸು,
ಬಳ್ಳಾರಿ.

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ:— **ಬಳ್ಳಾರಿ.**

ಒಟ್ಟು ವ್ಯವಹಾರದ ಮೊತ್ತ.

31—8—41	31—8—42
ರು. 1,67,179-14-9	**ರು. 2,91,781-13-10**

ನಮ್ಮಲ್ಲಿ ಸರ್ವ ವಿಧವಾದ ಬ್ಯಾಂಕಿಂಗ್ ವ್ಯವಹಾರವು ನಡೆಯುತ್ತದೆ. ಹಿಂದೂದೇಶದ ಯಾವ ಭಾಗದಲ್ಲಾದರೂ ನಿಮಗೆ ವ್ಯಾಪಾರೀ ಸೌಕರ್ಯವನ್ನೊದಗಿಸಿಕೊಡುತ್ತೇವೆ. ಭಂಗಾರ ಮತ್ತು ಇತರ ಉಪಯುಕ್ತ ಮಾಲಿನ ಮೇಲೆ ಅಲ್ಪದರದ ಬಡ್ಡಿಯಿಂದ ಸಾಲವು ದೊರೆಯುತ್ತದೆ. ಸಮಕ್ಷನು ಬಂದು ಎಲ್ಲಾ ತಿಳಿದುಕೊಳ್ಳಿರಿ.

ಶಾಖೆಗಳು:— **1 ತಿಮ್ಮನಚರ್ಲ. 2 ಕೊಟ್ಟೂರು. 3 ಉರವಕೊಂಡ. 4 ಪತ್ತಿಕೊಂಡ. 5 ಹರಪನಹಳ್ಳಿ**

ಹೆಚ್. ಶೇಷಾರಾಮರೆಡ್ಡಿ, ಬಿ. ಎ. ಬಿ. ಎಲ್ (ಎಂ. ಎಲ್. ಎ.)
ಡೈರೆಕ್ಟರುಗಳ ಬೋರ್ಡ ಅಧ್ಯಕ್ಷರು.
ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ : 1897.

45 ನೇ ವಾರ್ಷಿಕ ವರದಿಯ ಕೆಲವು ಮುಖ್ಯ ಅಂಶಗಳು

ಒಟ್ಟು ಆದಾಯ	ರೂ. 85,61,000	ಮೀರಿದೆ.
ಜಾಲ್ತಿಯಲ್ಲಿರುವ ವಿಮಾ ಪಾಲಿಸಿಗಳು	ರೂ. 14,84,44,000	,,
ಆಸ್ತಿ	ರೂ. 5,89,56,000	,,

ಕಂಪೆನಿ ಪ್ರಾರಂಭವಾದ ಲಾಗಾಯ್ತು ಪಾವತಿ ಮಾಡಿರುವ ಕ್ಲೈಂಗಳು ರೂ. 7,46,66,000 ,,

ವಿಜನ್ನಿಗಳಿಗೆ ದರಖಾಸ್ತುಗಳನ್ನು ಕಳುಹಿಸುವುದು.

ಮುಖ್ಯ ಕಛೇರಿ :
ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬೆಂಗಳೂರು ಬ್ರಾಂಚ್ :
ಡಿಸ್ಪೆನ್ಸ್ ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ.

S. V. SETTY & BROS, BELLARY.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಜೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಬಾಕಿದಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ವೆಸ್ಟ್ ಎಂಡ್ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ.

ಹಿಂದಿ-ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು
- ಮಾತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ ?

ಹಾಗಾದರೆ ಕೂಡಲೇ ಕೆಳಗಿನವರಲ್ಲಿ ವಿವರಗಳನ್ನು ತಿಳಿಯಿರಿ

ನಮಗನುಕೂಲವಾದ ಶಿಕ್ಷಣಕ್ಕೆ ವರ್ಗವಿಸಲಾಗುವುದು. ಪರೀಕ್ಷೆಯ ಪಾಠ ಪುಸ್ತಕಗಳು, ಕಛೇರಿ, ಕಾಮಂಬರಿ ವಗೈರೆ ದೊರೆಯುವುವಲ್ಲದೆ ನಮಗೆ ಎಲ್ಲಾ ವಿಧವಾದ ಸೂಚನೆಯೂ, ಪುಟಿಕವಾಗಿ ಹೇಳಲಾಗುವುದು.

ಟಿ. ಬಿ. ಕೇಶವರಾವ್,
ಕೃಷ್ಣ ಸಾಹುಕಾರ ಕಾಂಪೌಂಡು, ಬಳ್ಳಾರಿ.

It PAYS you to
ADVERTISE IN
NAVA BHARAT.

Visit ROYAL CAFE
NEAR ROYAL PICTURE PALACE
Royal is Royal

NAVA BHARAT, BELLARY.

With which is incorporated Congress Bulletin
THE LEADING NATIONAL WEEKLY.

ನವಭಾರತ ಬಳ್ಳಾರಿ.

ಉತ್ತಮ ರಾಷ್ಟ್ರೀಯ ವಾರಪತ್ರಿಕೆ.

The Rates of Subscription	ಚಂದಾ ವಿವರ.
Annual	ವರ್ಷಕ್ಕೆ
Local ... 2—0—0	ಬಳ್ಳಾರಿಯವರಿಗೆ 2-0-0
Moffusil 3—0—0	ಹೊರಗಿನವರಿಗೆ 3-0-0
6 Months	೬ ತಿಂಗಳಿಗೆ
Local ... 2—0—0	ಬಳ್ಳಾರಿಯವರಿಗೆ 1-4-0
Moffusil 2—0—0	ಹೊರಗಿನವರಿಗೆ 2-0-0

NAVA BHARAT BELLARY.

Reg. No. M. 3937.

Sri. _____

_____

_____

Printed at Krishna Press, Bellary. Edited & Published by T. B. Keshava Rao, Bellary.

27-9-1942

to

17-8-1946

(weekly)

Volumes are missing